Kannada/ಕನ್ನಡ

ರಾಷ್ಟ್ರೀಯ ಶಿಕ್ಷಣ ನೀತಿ 2020

ಶಿಕ್ಷಣ ಸಚಿವಾಲಯ

ಭಾರತ ಸರ್ಕಾರ

ಅಧ್ಯಾಯ	ವಿಷಯಾನುಕ್ರಮಣಿಕೆ	ಪುಟ ಸಂ.
	ಪರಿಚಯ	3
	ಭಾಗ I: ಶಾಲಾ ಶಿಕ್ಷಣ	
1.	ಬಾಲ್ಯಪೂರ್ವ ಆರೈಕೆ ಅಥವಾ ಕಾಳಜಿ ಮತ್ತು ಶಿಕ್ಷಣ ಕಲಿಕೆ ತಳಹದಿ	8
2.	ಮೂಲಭೂತ ಸಾಕ್ಷರತೆ ಮತ್ತು ಅಂಕಿ ಪರಿಜ್ಞಾನ: ಕಲಿಕೆಗಾಗಿ ತುರ್ತಾಗಿ ಮತ್ತು ಅಗತ್ಯವಾಗಿ ಪೂರ್ವಭಾವಿಯಾಗಿರಬೇಕಾದ ಸಂಗತಿಗಳು	11
3.	ಶಾಲೆ ಬಿಟ್ಟು ಹೋಗುವವರ (Dropouts) ಸಂಖ್ಯೆ ಕಡಿಮೆ ಮಾಡುವುದು ಹಾಗೂ ಎಲ್ಲ ಹಂತಗಳಲ್ಲಿ ಸಾರ್ವತ್ರಿಕ ಶಿಕ್ಷಣ ದೊರೆಯುವಂತೆ ಖಾತರಿಪಡಿಸಿಕೊಳ್ಳುವುದು	13
4.	ಶಾಲೆಗಳಲ್ಲಿ ಪಠ್ಯಕ್ರಮ ಮತ್ತು ಬೋಧನಕ್ರಮ: ಕಲಿಕೆ ಒಂದು ಸಮಗ್ರವಾದ, ಸಂಕಲಿತವಾದ, ಆನಂದದಾಯಕವಾದ ಮತ್ತು ಕ್ರಿಯಾಶೀಲವಾದ ಚಟುವಟಿಕೆಯಾಗಿರಬೇಕು	15
5.	ಅಧ್ಯಾಪಕರು	28
6.	ಸಮಾನತೆ ಆಧಾರಿತ ಮತ್ತು ಸಮಾವರ್ತನೆಯಿಂದ ಕೂಡಿದ ಶಿಕ್ಷಣ: ಎಲ್ಲರಿಗಾಗಿ ಕಲಿಕೆ	35
7.	ಶಾಲಾ ಸಂಕೀರ್ಣಗಳ/ಸಮುಚ್ಚಯಗಳ ಮೂಲಕ ಸಮರ್ಥವಾದ ಸಂಪನ್ಮೂಲ ಯೋಜನೆ ಮತ್ತು ಸಮರ್ಥ ಆಡಳಿತ ನಿರ್ವಹಣೆ	41
8.	ಶಾಲಾ ಶಿಕ್ಷಣಕ್ಕಾಗಿ ಮಾನಕಗಳನ್ನು ರೂಪಿಸುವುದು ಮತ್ತು ಮೌಲ್ಯಾಂಕನ ವ್ಯವಸ್ಥೆ	44
	ಭಾಗ II: ಉನ್ನತಶಿಕ್ಷಣ	
9.	ಗುಣಮಟ್ಟದ ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳು: ಭಾರತದ ಉನ್ನತ ಶಿಕ್ಷಣ ವ್ಯವಸ್ಥೆಗೆ ಹೊಸ ಹಾಗೂಪ್ರ ಗತಿಪರ ದೃಷ್ಟಿಕೋನ.	48
10.	ಸಾಂಸ್ಥಿಕ ಪುನಾರಚನೆ ಮತ್ತು ಬಲವರ್ಧನೆ	50
11.	ಸಮಗ್ರ ದೃಷ್ಟಿಕೋನ ಮತ್ತು ಬಹುಶಿಸ್ತೀಯ ಶಿಕ್ಷಣದತ್ತ ಹೆಜ್ಜೆ	53
12.	ಅತ್ಯುತ್ತಮ ಕಲಿಕಾ ವ್ಯವಸ್ಥೆ ಮತ್ತು ವಿದ್ಯಾರ್ಥಿಗಳಿಗೆ ಬೆಂಬಲ	55
13.	ಸ್ಫೂರ್ತಿದಾಯಕ, ಶಕ್ತಿದಾಯಕ ಹಾಗೂ ಸಮರ್ಥ ಸಿಬ್ಬಂದಿ	58
14.	ಉನ್ನತ ಶಿಕ್ಷಣಕ್ಕೆ ಸೇರ್ಪಡೆ	59
15.	ಬೋಧಕ ಶಿಕ್ಷಣ	60
16.	ಔದ್ಯೋಗಿಕ ಶಿಕ್ಷಣದ ಮರುಕಲ್ಪನೆ	62
17.	ಹೊಸ ರಾಷ್ಟ್ರೀಯ ಸಂಶೋಧನಾ ಪ್ರತಿಷ್ಠಾನದ ಮೂಲಕ ಎಲ್ಲ ಕ್ಷೇತ್ರಗಳಲ್ಲಿ ಗುಣಾತ್ಮಕ ಶೈಕ್ಷಣಿಕ ಸಂಶೋಧನೆಯ ವೇಗವೃದ್ಧಿ.	64
18.	ಉನ್ನತ ಶಿಕ್ಷಣದ ನಿಯಂತ್ರಕ ವ್ಯವಸ್ಥೆಯಲ್ಲಿ ರೂಪಾಂತರ	66
19.	ಉನ್ನತ ಶಿಕ್ಷಣ ಸಂಸ್ಥೆಗಳಿಗಾಗಿ ಪರಿಣಾಮಕಾರಿಯಾದ ಆಡಳಿತ ಮತ್ತು ನಾಯಕತ್ವ	70

	ಭಾಗ III: ಆದ್ಯತೆ ನೀಡಬೇಕಾದ ಇತರ ಪ್ರಮುಖ ವಿಷಯಗಳು	
20.	ವೃತ್ತಿಪರ ಶಿಕ್ಷಣ	71
21.	ವಯಸ್ಕ ಶಿಕ್ಷಣ ಹಾಗೂ ಜೀವಾವಧಿ ಕಲಿಕೆ	72
22.	ಭಾರತೀಯ ಭಾಷೆಗಳು, ಕಲೆ ಮತ್ತು ಸಂಸ್ಕೃತಿ	74
23.	ತಂತ್ರಜ್ಞಾನ ಬಳಕೆ ಮತ್ತು ಸಂಯೋಜನೆ	79
24.	ಆನ್ಲೈನ್ ಮತ್ತು ಡಿಜಿಟಲ್ ಶಿಕ್ಷಣ: ತಂತ್ರಜ್ಞಾನದ ಸಮಾನ ಬಳಕೆಯ ಭರವಸೆ	82
	ಭಾಗ IV: ಇದನ್ನು ಸಾಧ್ಯವಾಗಿಸುವುದು	
25.	ಕೇಂದ್ರೀಯ ಶಿಕ್ಷಣ ಸಲಹಾ ಮಂಡಳಿಯನ್ನು ಬಲಪಡಿಸುವುದು	84
26.	ಹಣಕಾಸು: ಸರ್ವರಿಗೂ ಕೈಗೆಟುಕಬಲ್ಲ ಮತ್ತು ಗುಣಮಟ್ಟದ ಶಿಕ್ಷಣ	85
27.	ಅನುಷ್ಠಾನ	86
	ಸಂಕ್ಷೇಪಣಾರ್ಥಗಳು	88

ಪರಿಚಯ

ಮನುಷ್ಯ ತನ್ನ ಪೂರ್ಣ ಮಾನವ ಸಾಮರ್ಥ್ಯಗಳಿಸಿಕೊಳ್ಳಲು, ಸಮಾನತೆಯುಳ್ಳ ಮತ್ತು ನ್ಯಾಯಸಂಗತವಾದ ಸಮಾಜವೊಂದನ್ನು ಅಭಿವೃದ್ಧಿಪಡಿಸಲು ಹಾಗೂ ರಾಷ್ಟ್ರದ ಏಳಿಗೆಯನ್ನು ಸಾಧಿಸಲು ಮೂಲಭೂತವಾಗಿ ಶಿಕ್ಷಣ ಆವಶ್ಯಕವಾಗಿದೆ. ಗುಣಾತ್ಮಕವಾದ ಶಿಕ್ಷಣಕ್ಕೆ ಸಾರ್ವತ್ರಿಕ ನೆಲೆಗಟ್ಟಿನಲ್ಲಿ ಅವಕಾಶಗಳ ಬಾಗಿಲು ತೆರೆಯುವುದು ಹಾಗೂ ಆರ್ಥಿಕ ಪ್ರಗತಿ, ಸಾಮಾಜಿಕ ನ್ಯಾಯ ಮತ್ತು ಸಮಾನತೆ, ವೈಜ್ಞಾನಿಕ ಮುನ್ನಡೆ, ರಾಷ್ಟ್ರೀಯ ಏಕತೆ ಹಾಗೂ ಸಾಂಸ್ಕೃತಿಕ ಸಂರಕ್ಷಣೆ ಇವುಗಳ ಮೂಲಕ ಜಾಗತಿಕ ಮುಂದಾಳುತನವನ್ನು ಸಾಧಿಸುವುದು ಭಾರತದ ನಿರಂತರ ಮುನ್ನಡೆಯ ಕೀಲಿಕೈ ಆಗಿದೆ. ವ್ಯಕ್ತಿಯ, ಸಮಾಜದ, ದೇಶದ ಹಾಗೂ ಸಮಸ್ತ ಪ್ರಪಂಚದ ಒಳಿತನ್ನು ಸಾಧಿಸಬೇಕಾದರೆ ಸಾರ್ವತ್ರಿಕ ಉನ್ನತ ಶಿಕ್ಷಣದ ಮೂಲಕ ನಮ್ಮ ದೇಶದ ಶ್ರೀಮಂತವಾದ ಕೌಶಲಗಳನ್ನು ಮತ್ತು ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸಿ ಗರಿಷ್ಠ ಪ್ರಮಾಣದಲ್ಲಿ ಬಳಕೆ ಮಾಡಿಕೊಳ್ಳುವುದು ಅತ್ಯುತ್ತಮ ಮಾರ್ಗವಾಗಿದೆ. ಮುಂದಿನ ದಶಕದ ವೇಳೆಗೆ ಇಡೀ ಪ್ರಪಂಚದಲ್ಲೇ ಗರಿಷ್ಠ ಪ್ರಮಾಣದಲ್ಲಿ ಯುವಜನಾಂಗವನ್ನು ಭಾರತ ಹೊಂದಲಿದ್ದು ಅವರಿಗೆ ಅತ್ಯುನ್ನತವಾದ ಶಿಕ್ಷಣ ಸೌಲಭ್ಯಗಳನ್ನು ನಾವು ಎಷ್ಟರಮಟ್ಟಿಗೆ ಒದಗಿಸಿ ಕೊಡಬಲ್ಲೆವು ಎಂಬುದರ ಮೇಲೆ ನಾಡಿನ ಭವಿಷ್ಯ ತೀರ್ಮಾನವಾಗಲಿದೆ.

ಸುಸ್ಥಿರ ಬೆಳೆವಣಿಗೆ ಕಾರ್ಯಸೂಚಿ 2030 (Agenda for Sustainable Development) ಇದರ ಗುರಿ 4ರಲ್ಲಿ (ಎಸ್.ಡಿ.ಜಿ.4) ಪ್ರಸ್ತಾಪಿಸಲಾಗಿರುವ ಜಾಗತಿಕ ಶಿಕ್ಷಣ ಬೆಳೆವಣಿಗೆ ಕಾರ್ಯಸೂಚಿಯನ್ನು ಭಾರತ 2015 ರಲ್ಲಿ ಅಳವಡಿಸಿಕೊಂಡಿದ್ದು ಇದು 2030ರ ವೇಳೆಗೆ "ಪ್ರತಿಯೊಬ್ಬರಿಗೂ ಸಮಾವಿಷ್ಟವಾದ ಮತ್ತು ಸಮಾನವಾದ ಉತ್ತಮ ಗುಣಮಟ್ಟದ ಶಿಕ್ಷಣವನ್ನು ಒದಗಿಸುವ ಹಾಗೂ ಜೀವನಪರ್ಯಂತ ಕಲಿಕೆಯ ಸದವಕಾಶಗಳನ್ನು ಖಾತರಿಯಾಗಿ ಒದಗಿಸಿಕೊಡುವ" ಉದ್ದೇಶವನ್ನು ಹೊಂದಿದೆ. ಇಂಥ ಉನ್ನತವಾದ ಗುರಿಸಾಧನೆ ಮಾಡಬೇಕಾದರೆ 2030ರ ಸುಸ್ಥಿರ ಬೆಳೆವಣಿಗೆ ಕಾರ್ಯಸೂಚಿಯ ಎಲ್ಲ ಮಹತ್ವಪೂರ್ಣವಾದ ಉದ್ದೇಶಗಳನ್ನು ಮತ್ತು ಗುರಿಗಳನ್ನು (ಎಸ್.ಡಿ.ಜಿ.ಗಳು) ಸಾಧಿಸಲು ಸಾಧ್ಯವಾಗುವಂತೆ ಕಲಿಕೆಯನ್ನು ಪೋಷಿಸಿ ಅದಕ್ಕೆ ಬೆಂಬಲ ನೀಡಲು ಸಮರ್ಥವಾಗುವಂತೆ ನಮ್ಮ ಇಡೀ ಶಿಕ್ಷಣ ವ್ಯವಸ್ಥೆಯನ್ನು ಮರುವಿನ್ಯಾಸ ಮಾಡಬೇಕಾಗಿದೆ.

ಜ್ಞಾನಕ್ಷೇತ್ರದಲ್ಲಿ ಪ್ರಪಂಚ ಇಂದು ಅಪಾರ ಬದಲಾವಣೆಗಳಿಗೆ ಒಳಗಾಗುತ್ತಿದೆ. ಕಲ್ಪನೆಗೂ ಎಟುಕದ ರೀತಿಯ ವೈಜ್ಞಾನಿಕ ಹಾಗೂ ತಾಂತ್ರಿಕ ಮುನ್ನಡೆಗಳ ಕಾರಣದಿಂದಾಗಿ - ಉದಾಹರಣೆಗೆ ಬೃಹತ್ ಗಾತ್ರದ ದತ್ತಾಂಶ ಸಂಕಲನ, ಕಂಪ್ಯೂಟರ್ ಕಲಿಕಾ ವಿಧಾನಗಳು ಹಾಗೂ ಕೃತಕ ಬುದ್ಧಿಶಕ್ತಿಯ ಬಳಕೆ ಇಂಥವುಗಳು -ಪ್ರಪಂಚಾದ್ಯಂತ ಕೌಶಲ ಬೇಕಾಗಿರದೆ ಇರುವಂತಹ ಹಲವಾರು ಬಗೆಯ ಉದ್ಯೋಗಗಳನ್ನು ಯಂತ್ರಗಳು ಕಸಿದುಕೊಳ್ಳತೊಡಗಿವೆ. ಇಂತೆಡೆಗಳಲ್ಲಿ ಕೌಶಲವನ್ನು ಬಳಕೆ ಮಾಡುವಂತಹ, ಅದರಲ್ಲೂ ವಿಶೇಷವಾಗಿ ಗಣಿತಶಾಸ್ತ್ರ, ಕಂಪ್ಯೂಟರ್ ವಿಜ್ಞಾನ ಹಾಗೂ ದತ್ತಾಂಶ ವಿಜ್ಞಾನಗಳು ಇವುಗಳಿಗೆ ಹೆಚ್ಚು ಬೇಡಿಕೆ ಉಂಟಾಗುತ್ತಿದೆ. ಅಂತೆಯೇ ಇವುಗಳೊಂದಿಗೆ ವಿಜ್ಞಾನಗಳು, ಸಮಾಜ ವಿಜ್ಞಾನಗಳು ಹಾಗೂ ಮಾನವಿಕಗಳು ಇವು ಸಹ ಸೇರಿದಂತೆ ಬಹುಶಿಸ್ತೀಯ ಸಾಮರ್ಥ್ಯಗಳಿಗೆ ಸಹ ಹೆಚ್ಚಿನ ಮನ್ನಣೆ ಹಾಗೂ ಬೇಡಿಕೆಗಳು ಬರುತ್ತಿವೆ. ಹವಾಮಾನದಲ್ಲಿ ಉಂಟಾಗುತ್ತಿರುವ ಬದಲಾವಣೆ, ಹೆಚ್ಚುತ್ತಿರುವ ಪರಿಸರ ಮಾಲಿನ್ಯ, ಇಳಿಮುಖವಾಗುತ್ತಿರುವ ನೈಸರ್ಗಿಕ ಸಂಪನ್ಮೂಲಗಳು ಇವುಗಳ ಕಾರಣದಿಂದಾಗಿ ಇನ್ನುಮುಂದೆ ಪ್ರಪಂಚಕ್ಕೆ ಬೇಕಾದ ವಿದ್ಯುಚ್ಛಕ್ತಿ, ನೀರು, ಆಹಾರ ಹಾಗೂ ನೈರ್ಮಲ್ಯ ಇಂಥ ಅಗತ್ಯಗಳನ್ನು ಪೂರೈಸಲು ಹೊಸ ಬಗೆಯ ಕೌಶಲ ಆಧಾರಿತ ದುಡಿಮೆಯ ಅಗತ್ಯ ಕಂಡುಬರುತ್ತಿದೆ. ಅದರಲ್ಲೂ ವಿಶೇಷವಾಗಿ ಜೀವವಿಜ್ಞಾನ, ರಸಾಯನವಿಜ್ಞಾನ, ಭೌತವಿಜ್ಞಾನ, ಕೃಷಿ, ಪರಿಸರ ವಿಜ್ಞಾನ ಮತ್ತು ಸಮಾಜ ವಿಜ್ಞಾನ ಕ್ಷೇತ್ರಗಳಲ್ಲಿ ಇಂಥ ಆವಶ್ಯಕತೆಗಳು ಹೆಚ್ಚಾಗಿ ತಲೆದೋರುತ್ತಿವೆ. ಈಚಿನ ದಿನಗಳಲ್ಲಿ ಹೆಚ್ಚು ಹೆಚ್ಚಾಗಿ ಕಾಣಿಸಿಕೊಳ್ಳುತ್ತಿರುವ ಸಾಂಕ್ರಾಮಿಕ ರೋಗಗಳು, ವಿಶ್ವಾದ್ಯಂತ ಪಸರಿಸುತ್ತಿರುವ ಇತರ ಸಾಂಕ್ರಾಮಿಕ ರೋಗರುಜಿನಗಳು ಇವುಗಳ ಕಾರಣದಿಂದಾಗಿ ಸೋಂಕಿನಿಂದ ಹರಡುವ ರೋಗಗಳ ನಿರ್ವಹಣೆ, ಅವುಗಳಿಗಾಗಿ ಸಿದ್ಧಪಡಿಸಬೇಕಾಗಿರುವ ವ್ಯಾಕ್ಸೀನುಗಳು ಹಾಗೂ ಇವುಗಳಿಂದೆಲ್ಲ ಉಂಟಾಗುವ ಸಾಮಾಜಿಕ ಕಳಕಳಿ ಮತ್ತು ಆತಂಕ ಇಂಥವು ಸಹಯೋಗ ಆಧಾರಿತ ಸಂಶೋಧನೆಗಳಿಗೆ, ಬಹುಶಿಸ್ತೀಯ ಅಧ್ಯಯನ ಅನುಸಂಧಾನಗಳಿಗೆ ದಾರಿ ಮಾಡಿಕೊಡುತ್ತಿವೆ. ಭಾರತ ಅಭಿವೃದ್ಧಿ ಹೊಂದಿದ ದೇಶವಾಗಿ ಬೆಳೆಯುವತ್ತ, ಪ್ರಪಂಚದ ಅತ್ಯಂತ ಮೂರು ಬೃಹತ್ ಆರ್ಥಿಕ ಶಕ್ತಿಗಳಲ್ಲಿ ಒಂದಾಗಿ ವಿಕಾಸಗೊಳ್ಳುವಂತೆ ದಾಪುಹೆಜ್ಜೆಗಳನ್ನು ಇಡುತ್ತ ಇರುವ ಈ ಸನ್ನಿವೇಶದಲ್ಲಿ ಕಲೆ ಮತ್ತು ಮಾನವಿಕಗಳನ್ನು ಕುರಿತ ಅಧ್ಯಯನಗಳಿಗೂ ವಿಶೇಷವಾದ ಬೇಡಿಕೆ ಲಭ್ಯವಾಗಲಿದೆ.

ವಾಸ್ತವವಾಗಿ, ವೇಗವಾಗಿ ಬದಲಾಗುತ್ತಿರುವ ಉದ್ಯೋಗಾವಕಾಶಗಳ ಸ್ಥಿತಿಗತಿಗಳು ಮತ್ತು ಜಾಗತಿಕ ಪರಿಸರ ವ್ಯವಸ್ಥೆ (Ecosystem) ಈ ಸನ್ನಿವೇಶಗಳಲ್ಲಿ, ಮಕ್ಕಳು ಇಂದು ಕಲಿಯಬೇಕಾಗಿರುವುದು ಮಾತ್ರವಲ್ಲ, ಅದಕ್ಕಿಂತಲೂ ಮಿಗಿಲಾಗಿ ಕಲಿಯುವುದು ಹೇಗೆಂದು ಕಲಿಯುವುದಕ್ಕೆ ಹೆಚ್ಚು ಮಹತ್ವ ಬರುತ್ತಿದೆ. ಹೀಗಾಗಿ, ಇಂದು ಶಿಕ್ಷಣ ಎಂಬುದು ಪಠ್ಯಕ್ರಮಗಳಲ್ಲಿ ಪಡೆಯುವ ಜ್ಞಾನಸಂಚಯಕ್ಕಿಂತ ಮಿಗಿಲಾಗಿ ತಾರ್ಕಿಕವಾಗಿ ಇಲ್ಲವೇ ವಿಮರ್ಶಾತ್ಮಕವಾಗಿ ಹೇಗೆ ಆಲೋಚನೆ ಮಾಡಿ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವುದು, ಯಾವ ರೀತಿಯಲ್ಲಿ ಸೃಜನಾತ್ಮಕವಾಗಿ ಮತ್ತು ಬಹುಶಿಸ್ತೀಯ ರೀತಿಯಲ್ಲಿ ಚಿಂತನೆ ನಡೆಸುವುದು, ಹೊಸ ಸಂಗತಿಗಳನ್ನು ಆವಿಷ್ಕರಿಸುವುದು, ಅಳವಡಿಸಿಕೊಳ್ಳುವುದು ಮತ್ತು ದಕ್ಕಿಸಿಕೊಳ್ಳುವುದು ಹೇಗೆ, ಜ್ಞಾನಕ್ಷೇತ್ರಗಳಲ್ಲಿ ಹಾಗೂ ಬದಲಾಗುತ್ತಿರುವ ವಿಷಯವ್ಯಾಪ್ತಿಯಲ್ಲಿ ಹೊಸದನ್ನು

ಮೈಗೂಡಿಸಿಕೊಳ್ಳುವುದು ಹೇಗೆ ಇಂಥ ವಿಚಾರಗಳತ್ತ ಚಿಂತನೆ ನಡೆಸುತ್ತಿದೆ. ಇವತ್ತಿನ ಕಲಿಕೆಯ ಕ್ರಮ ಶಿಕ್ಷಣವನ್ನು ಇನ್ನೂ ಹೆಚ್ಚು ಪ್ರಾಯೋಗಿಕವಾಗಿ, ಸಮಗ್ರವಾಗಿ, ಸರ್ವವ್ಯಾಪಿಯಾಗಿ, ಪ್ರಶ್ನೆ ಮೂಲವಾಗಿ ಮಾಡುವ ನಿಟ್ಟಿನಲ್ಲಿ ಬದಲಾಗುತ್ತಾ ಹೋಗಬೇಕು; ಅಂತೆಯೇ ಅದು ಕಲಿಯುವವರನ್ನು ಕೇಂದ್ರವಾಗಿಟ್ಟುಕೊಳ್ಳಬೇಕು, ಚರ್ಚೆಯನ್ನು ಆಧಾರವಾಗಿಟ್ಟುಕೊಳ್ಳಬೇಕು, ಸುಲಭವಾಗಿ ಬದಲಾವಣೆಗೆ ಹೊಂದಿಕೊಳ್ಳುವಂತಿರಬೇಕು; ಇವುಗಳೊಟ್ಟಿಗೆ ಅದು ಆನಂದಪ್ರದಾಯಕವಾಗಿ ಕೂಡ ಇರಬೇಕು ಎಂಬುದನ್ನು ಒತ್ತಿ ಹೇಳಬೇಕಾಗಿಲ್ಲ. ಪಠ್ಯಕ್ರಮದಲ್ಲಿ ವಿಜ್ಞಾನ ಮತ್ತು ಗಣಿತಗಳ ಜೊತೆಯಲ್ಲಿ ಮೂಲ ಕಲಾವಿಷಯಗಳು, ಮಾನವಿಕಗಳು, ಆಟಗಳು, ಕ್ರೀಡೆಗಳು, ದೈಹಿಕ ದಾರ್ಢ್ಯ, ಭಾಷೆಗಳು, ಸಾಹಿತ್ಯ, ಸಂಸ್ಕೃತಿ ಇವೆಲ್ಲ ಸೇರಿರಬೇಕು. ಒಟ್ಟಿನಲ್ಲಿ ಕಲಿಯುವವರಲ್ಲಿ ಕಲಿಕೆಯ ಎಲ್ಲ ಮುಖಗಳನ್ನು ಮತ್ತು ಸಾಮರ್ಥ್ಯಗಳನ್ನು ಪಡಿಮೂಡಿಸುವಂತಿರಬೇಕು; ಕಲಿಯುವವರ ಪಾಲಿಗೆ ಕಲಿಕೆ ಸಮಗ್ರವಾಗಿ, ಉಪಯುಕ್ತವಾಗಿ ಹಾಗೂ ಜ್ಞಾನತೃಷೆಯನ್ನು ತಣಿಸುವಂತಹದಾಗಿ ಇರಬೇಕು. ಶಿಕ್ಷಣ ಚಾರಿತ್ರ್ಯವನ್ನು ನಿರ್ಮಾಣ ಮಾಡಬೇಕು. ಕಲಿಯುವವವರ ಪಾಲಿಗೆ ಅದು ಸನ್ಮಾರ್ಗಬೋಧಕವಾಗಿ, ತಾರ್ಕಿಕವಾಗಿ, ಸಹಾನುಭೂತಿಸಂಪನ್ನವಾಗಿ, ಹಿತಕರವಾಗಿ ಇರಬೇಕಾದುದು ಅಲ್ಲದೆ ಅವರಿಗೆ ಉಪಯುಕ್ತವಾಗಿರುವ, ಲಾಭಪ್ರದವಾಗಿರುವ ಉದ್ಯೋಗಾವಕಾಶಗಳನ್ನು ಒದಗಿಸುವಂತಿರಬೇಕು.

ಕಲಿಯುವುದರಿಂದ ಇಂದು ಏನೇನು ಲಭ್ಯವಾಗುತ್ತದೆ ಹಾಗೂ ಅದರಿಂದ ಏನೇನು ಸಾಧಿಸಬೇಕು ಇವೆರಡರ ನಡುವಣ ಅಂತರವನ್ನು ಪ್ರಮುಖವಾದ ಸುಧಾರಣೆಗಳನ್ನು ಜಾರಿಗೆ ತರುವುದರ ಮೂಲಕ ನಿವಾರಿಸಬೇಕು. ಕಲಿಕೆಯ ಫಲಿತಗಳು (Learning outcomes) ಹಾಗೂ ಕಲಿಕೆಯ ಉದ್ದೇಶಿತ ಸಾಧನೆ ಇವೆರಡರ ನಡುವೆ ಸೇತುವೆ ನಿರ್ಮಾಣವಾಗಬೇಕು. ಇದಕ್ಕಾಗಿ ಅತ್ಯುತ್ತಮ ಗುಣವುಳ್ಳ, ಸಮಾನತೆಯುಳ್ಳ, ಸಮಗ್ರವಾದ ಸುಧಾರಣೆಗಳು ಜಾರಿಯಾಗಬೇಕು. ಚಿಕ್ಕಂದಿನಿಂದ ಮೊದಲುಗೊಂಡು ಉನ್ನತ ಶಿಕ್ಷಣ ಪಡೆಯುವವರೆಗೆ ಈ ಅಂಶಗಳನ್ನು ಅಳವಡಿಸಿಕೊಂಡು ಬರಬೇಕು.

ಇದಕ್ಕಾಗಿ 2040ರ ಒಳಗಾದರೂ ಭಾರತ ಪ್ರಪಂಚದಲ್ಲಿ ಯಾವ ದೇಶಕ್ಕೂ ಕಡಿಮೆಯಿಲ್ಲದಂತೆ ತನ್ನ ಶಿಕ್ಷಣ ಪದ್ಧತಿಯನ್ನು ಅಗ್ರಮಾನ್ಯವಾಗಿ ಇರುವಂತೆ ರಚಿಸಿಕೊಳ್ಳಬೇಕು. ಸಾಮಾಜಿಕ ಅಥವಾ ಆರ್ಥಿಕ ಹಿನ್ನೆಲೆ ಯಾವುದೇ ಆಗಿದ್ದರೂ ವಿದ್ಯಾರ್ಥಿಗಳು ಭೇದಭಾವವಿಲ್ಲದೆ ಅತ್ಯುನ್ನತ ಗುಣಮಟ್ಟದ ಶಿಕ್ಷಣ ಸೌಲಭ್ಯವನ್ನು ಸಮಸ್ಕಂದವಾಗಿ ಪಡೆದುಕೊಳ್ಳಲು ಸಾಧ್ಯವಾಗಬೇಕು.

ರಾಷ್ಟ್ರೀಯ ಶಿಕ್ಷಣ ನೀತಿ 2020 ವಾಸ್ತವವಾಗಿ ಈ 21ನೆಯ ಶತಮಾನದ ಮೊದಲನೆಯ ಶಿಕ್ಷಣ ನೀತಿಯಾಗಿದೆ. ನಮ್ಮ ದೇಶದಲ್ಲಿ ದಿನೇದಿನೇ ಹೆಚ್ಚಾಗುತ್ತಿರುವ ಅಭಿವೃದ್ಧಿ ಸಂಬಂಧವಾದ ಬೇಡಿಕೆಗಳನ್ನು ಈಡೇರಿಸುವುದು ಇದರ ಉದ್ದೇಶವಾಗಿದೆ. ನಮ್ಮ ಶಿಕ್ಷಣ ವಿನ್ಯಾಸದ ಎಲ್ಲ ಮುಖಗಳನ್ನು ಪರಿಷ್ಕರಿಸುವ ಹಾಗೂ ಮರುನಿರ್ಮಾಣ ಮಾಡುವ ಉದ್ದೇಶ ಈ ನೀತಿಯದಾಗಿದೆ. ಅವ್ಯವಸ್ಥೆಯ ನಿಯಂತ್ರಣ ಹಾಗೂ ಮೇಲ್ವಿಚಾರಣೆ ಈ ನೀತಿಗೆ ಸೇರಿದ್ದು. 21ನೆಯ ಶತಮಾನದ ಶಿಕ್ಷಣದ ಆಶೋತ್ತರಗಳನ್ನು ಕೈಗೂಡಿಸುವಂತೆ ಮಾಡುವ ಹೊಸ ವ್ಯವಸ್ಥೆಯನ್ನು ಸಹ ಇದಕ್ಕೆ ಸರಿಸಾಟಿಯಾಗಿ ರೂಪುಗೊಳಿಸುವುದು ಈ ನೀತಿಯ ಗುರಿಯಾಗಿದೆ. ಭಾರತೀಯ ಪರಂಪರೆ ಹಾಗೂ ಮೌಲ್ಯವ್ಯವಸ್ಥೆಯ ಆಧಾರದ ಮೇಲೆ ಇದನ್ನು ನಿರ್ಮಾಣ ಮಾಡುವುದಷ್ಟೇ ಅಲ್ಲ, ಎಸ್.ಡಿ.ಜಿ. 4 ಕೂಡ ಇದರಲ್ಲಿ ಸೇರಿದೆ. ಪ್ರತಿಯೊಬ್ಬ ವ್ಯಕ್ತಿಯ ಸೃಜನಾತ್ಮಕ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸುವುದಕ್ಕಾಗಿ ಈ ರಾಷ್ಟ್ರೀಯ ಶಿಕ್ಷಣ ನೀತಿ ಒತ್ತನ್ನು ನೀಡುತ್ತದೆ. ಶಿಕ್ಷಣ ಕೇವಲ ನಮ್ಮ ಸಂಜ್ಞಾನಾತ್ಮಕ ಸಾಮರ್ಥ್ಯಗಳನ್ನು ಹೆಚ್ಚಿಸುವುದು ಮಾತ್ರವಲ್ಲ, ಅದು ನಮ್ಮ ಸಾಮಾಜಿಕ, ನೈತಿಕ ಮತ್ತು ಭಾವನಾತ್ಮಕ ಸಾಮರ್ಥ್ಯಗಳು ಮತ್ತು ನಿಲುವುಗಳು ಗಟ್ಟಿಯಾಗುವಂತೆ ಮಾಡಬೇಕು. ಇಲ್ಲಿ ಮೂಲಭೂತ ಸಂಜ್ಞಾನಾತ್ಮಕ ಸಾಮರ್ಥ್ಯಗಳೆಂದರೆ ಪ್ರಾಥಮಿಕ ಹಂತಗಳಲ್ಲಿ ಸಾಕ್ಷರರಾಗುವುದು ಮತ್ತು ಅಂಕಿ ಸಂಖ್ಯೆಗಳ ಪರಿಜ್ಞಾನವನ್ನು ಪಡೆಯುವುದು ಹಾಗೂ ಉನ್ನತ ಮಟ್ಟದ ಸಂಜ್ಞಾನಾತ್ಮಕ ಸಾಮರ್ಥ್ಯಗಳೆಂದರೆ ತಾರ್ಕಿಕವಾಗಿ ಅಥವಾ ವಿಮರ್ಶಾತ್ಮಕವಾಗಿ ಆಲೋಚನೆ ಮಾಡುವುದು ಹಾಗೂ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವುದು ಎಂದಾಗುತ್ತದೆ.

ನಮ್ಮ ನಾಡಿನ ಪ್ರಾಚೀನ ಪರಂಪರೆ ಹಾಗೂ ಸನಾತನವೆನಿಸಿದ ಭಾರತೀಯ ಜ್ಞಾನಸಂಪತ್ತು ಮತ್ತು ಚಿಂತನಶೀಲತೆ ಈ ಶಿಕ್ಷಣ ವ್ಯವಸ್ಥೆಯ ದಾರಿದೀಪವಾಗಿದೆ. ಜ್ಞಾನ, ವಿವೇಕ ಅಥವಾ ಪ್ರಜ್ಞೆ ಹಾಗೂ ಸತ್ಯ ಇವು ಭಾರತೀಯ ದಾರ್ಶನಿಕ ಚಿಂತನೆಯ ಅತ್ಯುನ್ನತ ಸಾಧನೆಯ ಗುರಿಗಳಾಗಿದ್ದವು. ಪ್ರಾಚೀನ ಭಾರತದಲ್ಲಿ ಶಿಕ್ಷಣದ ಗುರಿ ಪ್ರಪಂಚದಲ್ಲಿ ಬದುಕು ಸಾಗಿಸುವುದಕ್ಕಾಗಿ ಕೇವಲ ಜ್ಞಾನವನ್ನು ಸಂಪಾದನೆ ಮಾಡುವುದು ಮಾತ್ರವಾಗಿರಲಿಲ್ಲ, ಅಥವಾ ಶಾಲೆಯಿಂದ ಆಚೆಯ ಬದುಕನ್ನು ಕಂಡುಕೊಳ್ಳುವ ಸಾಧನ ಮಾತ್ರವೇ ಆಗಿರಲಿಲ್ಲ; ಅವುಗಳಿಗಿಂತ ಮಿಗಿಲಾಗಿ ಆತ್ಮಸಾಕ್ಷಾತ್ಕಾರ ಹಾಗೂ ಆತ್ಮವಿಮೋಚನೆ ಶಿಕ್ಷಣದ ಗುರಿಯಾಗಿತ್ತು. ತಕ್ಷಶಿಲಾ, ನಳಂದಾ, ವಿಕ್ರಮಶಿಲಾ, ವಲ್ಲಭಿ ಇಂಥ ವಿದ್ಯಾನಿಲಯಗಳು ವಿಶ್ವಮಾನ್ಯವೆನಿಸಿದ್ದು ಇವುಗಳಲ್ಲಿ ಅತ್ಯುನ್ನತ ಮಟ್ಟದ ಬಹುಶಿಸ್ತೀಯ ಅಧ್ಯಯನಗಳು, ಬೋಧನಾ ಹಾಗೂ ಸಂಶೋಧನಾ ಕಾರ್ಯಗಳು ನಡೆಯುತ್ತಿದ್ದವು. ಇಲ್ಲಿಯ ಶಿಕ್ಷಣ ವ್ಯವಸ್ಥೆ ವ್ಯಾಪಕ ಹಿನ್ನೆಲೆಯನ್ನು ಪಡೆದುಕೊಂಡಿದ್ದ ದೇಶವಿದೇಶಗಳ ವಿದ್ಯಾರ್ಥಿಗಳ ಪಾಲಿಗೆ ಜ್ಞಾನದೇಗುಲಗಳೆನಿಸಿಕೊಂಡಿದ್ದವು. ಭಾರತೀಯ ಶಿಕ್ಷಣ ವ್ಯವಸ್ಥೆ ಚರಕ, ಸುಶ್ರುತ, ಆರ್ಯಭಟ, ವರಾಹಮಿಹಿರ, ಭಾಸ್ಕರಾಚಾರ್ಯ, ಬ್ರಹ್ಮಗುಪ್ತ, ಚಾಣಕ್ಯ, ಚಕ್ರಪಾಣಿದತ್ತ, ಮಾಧವ, ಪಾಣಿನಿ, ಪತಂಜಲಿ, ನಾಗಾರ್ಜುನ, ಗೌತಮ, ಪಿಂಗಳ, ಶಂಕರದೇವ, ಮೈತ್ರೇಯಿ, ಗಾರ್ಗಿ, ತಿರುವಳ್ಳುವರ್ ಇಂಥ ಅಸಂಖ್ಯಾತ ಮೇಧಾವಿ ವಿದ್ವಾಂಸರಿಗೆ ತವರೂರೆನಿಸಿತ್ತು. ಈ

ಪ್ರಕಾಂಡ ವಿದ್ವಾಂಸರು ಗಣಿತ, ಖಗೋಳವಿಜ್ಞಾನ, ಲೋಹವಿದ್ಯೆ, ವೈದ್ಯವಿಜ್ಞಾನ, ಶಸ್ತ್ರಚಿಕಿತ್ಸೆ, ವಾಸ್ತುಶಿಲ್ಪ, ಶಿಲ್ಪವಿಜ್ಞಾನ, ಹಡಗು ನಿರ್ಮಾಣ, ನೌಕಾವಿದ್ಯೆ, ಯೋಗ, ಲಲಿತಕಲೆಗಳು, ಚದುರಂಗ ಇಂಥ ಹಲವಾರು ವಿಜ್ಞಾನ ಕ್ಷೇತ್ರಗಳಿಗೆ ತಮ್ಮ ಅಭೂತಪೂರ್ವವಾದ ಹಾಗೂ ಮುಂದಿನ ಬೆಳೆವಣಿಗೆಗಳಿಗೆ ತಳಹದಿ ಹಾಕಿಕೊಡಬಲ್ಲ ಕೊಡುಗೆಗಳನ್ನು ಅರ್ಪಿಸಿದ್ದರು. ಭಾರತೀಯ ಸಂಸ್ಕೃತಿ ಮತ್ತು ದರ್ಶನಶಾಸ್ತ್ರ ಇಡೀ ವಿಶ್ವದ ಮೇಲೆ ತನ್ನ ದಟ್ಟವಾದ ಪ್ರಭಾವವನ್ನು ಬೀರಿತ್ತು. ನಮ್ಮ ಪ್ರಾಚೀನ ಮನೀಷಿಗಳಿಂದ ಪ್ರಪಂಚಕ್ಕೆ ಕೊಡುಗೆಯಾಗಿ ಬಂದ ಇಂಥ ಬಳುವಳಿಯನ್ನು - ಇಂದು ನಾವು ಉಳಿಸಿಕೊಳ್ಳಬೇಕಾದ್ದು ಮಾತ್ರವೇ ಅಲ್ಲ, ಮುಂದಿನ ತಲೆಮಾರುಗಳಿಗೆ ಕೊಡುಗೆಯಾಗಿ ನೀಡುವುದು ಮಾತ್ರವೇ ಅಲ್ಲ, ಹೆಚ್ಚಿನ ಸಂಶೋಧನೆಗಳ ಮೂಲಕ ಅವುಗಳ ಆಳ ವ್ಯಾಪ್ತಿಗಳನ್ನು ವಿಸ್ತರಿಸಿ ನಮ್ಮ ಶಿಕ್ಷಣ ವ್ಯವಸ್ಥೆಯ ಮೂಲಕ ಹೊಸ ಬಳಕೆಯ ದಿಕ್ಕುಗಳನ್ನು ಕಂಡುಕೊಳ್ಳಬೇಕು.

ಶಿಕ್ಷಣ ವ್ಯವಸ್ಥೆಯ ಮೂಲಭೂತ ಸುಧಾರಣೆಗಳ ಕೇಂದ್ರದಲ್ಲಿ ಅಧ್ಯಾಪಕ ಅಗತ್ಯವಾಗಿ ಇರಲೇಬೇಕು. ಹೊಸ ಶಿಕ್ಷಣ ನೀತಿ ಎಲ್ಲ ಹಂತಗಳಲ್ಲೂ ಸಮಾಜದಲ್ಲಿ ಅತ್ಯಂತ ಗೌರವಾನ್ವಿತರಾದ ಹಾಗೂ ಅತ್ಯಗತ್ಯರೆನಿಸಿದ ಸದಸ್ಯರಾಗಿ ಅಧ್ಯಾಪಕರನ್ನು ಮರುಸ್ಥಾಪನೆ ಮಾಡಬೇಕು. ಏಕೆಂದರೆ ಭಾವೀ ಜನಾಂಗದ ಪ್ರಜೆಗಳನ್ನು ನಿಜವಾದ ಅರ್ಥದಲ್ಲಿ ರೂಪಿಸುವವರು ಅಧ್ಯಾಪಕರೇ. ಅಧ್ಯಾಪಕರು ತಮ್ಮ ಕೆಲಸಕಾರ್ಯಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಪರಿಣಾಮಕಾರಿಯಾಗಿ ನಿರ್ವಹಿಸಿಕೊಂಡು ಹೋಗಲು ಸಾಧ್ಯವಾಗುವಂತೆ ಅದು ಅವರನ್ನು ಸಬಲೀಕರಣಗೊಳಿಸಬೇಕು ಹಾಗೂ ಅವರಿಗೆ ನೆರವಾಗಬೇಕು. ಎಲ್ಲ ಹಂತಗಳಲ್ಲೂ ಅಧ್ಯಾಪಕ ವೃತ್ತಿಗೆ ಅತ್ಯುತ್ತಮವೆನಿಸಿದ, ಪ್ರತಿಭಾಸಂಪನ್ನರಾದ ಅಭ್ಯರ್ಥಿಗಳೇ ಪ್ರವೇಶ ಮಾಡುವಂತೆ ನೇಮಕಾತಿ ಪ್ರಕ್ರಿಯೆಯಲ್ಲಿ ಹೊಸ ಶಿಕ್ಷಣ ನೀತಿ ಸುಧಾರಣೆ ತರಬೇಕು. ಅಧ್ಯಾಪಕ ವೃತ್ತಿಯಲ್ಲಿ ಇರುವವರಿಗೆ ಜೀವನೋಪಾಯ, ಗೌರವ, ಆತ್ಮಾಭಿಮಾನ, ಸ್ವಾಯತ್ತತೆ ಇವು ಸೂಕ್ತವಾಗಿ ದೊರೆಯುವಂತೆ ನೋಡಿಕೊಳ್ಳಬೇಕು. ಜೊತೆಗೆ ಶಿಕ್ಷಣ ವ್ಯವಸ್ಥೆಯಲ್ಲಿ ಮೂಲಭೂತವಾದ ಗುಣ ನಿಯಂತ್ರಣ ಮತ್ತು ಜವಾಬ್ದಾರಿತನ ನೆಲೆಯಾಗುವಂತೆ ವ್ಯವಸ್ಥೆ ಮಾಡಬೇಕು.

ಹೊಸ ಶಿಕ್ಷಣ ನೀತಿ ಎಲ್ಲ ವಿದ್ಯಾರ್ಥಿಗಳಿಗೆ, ಅವರ ವಾಸಸ್ಥಾನ ಯಾವುದೇ ಆಗಿರಲಿ ಅದನ್ನು ಪರಿಗಣನೆಗೆ ತೆಗೆದುಕೊಳ್ಳದೆ, ಗುಣಾತ್ಮಕವಾದ ಶಿಕ್ಷಣ ವ್ಯವಸ್ಥೆಯನ್ನು ಕಲ್ಪಿಸಿಕೊಡಬೇಕು. ಐತಿಹಾಸಿಕವಾಗಿ ಅಂಚಿನಲ್ಲಿ ಉಳಿದುಬಿಟ್ಟಿರುವ ಅವಕಾಶವಂಚಿತರ ಹಾಗೂ ಹೆಚ್ಚು ಪ್ರಾತಿನಿಧ್ಯ ಸೌಲಭ್ಯವಿಲ್ಲದ ಸಮುದಾಯಗಳನ್ನು ಇಲ್ಲಿ ವಿಶೇಷವಾಗಿ ದೃಷ್ಟಿಯಲ್ಲಿ ಇಟ್ಟುಕೊಳ್ಳಬೇಕು. ಆರ್ಥಿಕ ಮತ್ತು ಸಾಮಾಜಿಕ ಚಲನಶೀಲತೆಯನ್ನು ಸಾಧಿಸಲು, ಸಮಾವಿಷ್ಟತೆ ಮತ್ತು ಸಮಾನತೆಗಳನ್ನು ರೂಢಿಸಲು ಶಿಕ್ಷಣ ಎಂಬುದು ಮಹಾನ್ ಏಕತಾ ಸಾಧಕವಾಗಿ, ಅತ್ಯುತ್ತಮವಾದ ಉಪಕರಣವಾಗಿ ಕಾರ್ಯ ನಿರ್ವಹಿಸುತ್ತದೆ. ಇಂಥ ಸಮುದಾಯಗಳಿಂದ ಬರುವ ವಿದ್ಯಾರ್ಥಿಗಳು, ಪ್ರಾರಂಭದಿಂದಲೇ ಅವರು ಯಾವುದೇ ಬಗೆಯ ಅಡಚಣೆಗಳಿಗೆ ಒಳಗಾದರೂ ಪರವಾಗಿಲ್ಲ, ಶಿಕ್ಷಣ ವ್ಯವಸ್ಥೆಯನ್ನು ಪ್ರವೇಶಿಸಿ ಅದರಲ್ಲಿ ಅತ್ಯುತ್ತಮ ಸಾಧನೆಯನ್ನು ಮಾಡಲು ಸಾಧ್ಯವಾಗುವಂತೆ, ಅವರಿಗೆಂದು ಗೊತ್ತುಪಡಿಸಲಾಗಿರುವ ಎಲ್ಲ ಅವಕಾಶಗಳನ್ನು ಬಳಸಿಕೊಳ್ಳುವಂತೆ ಅನುವು ಮಾಡಿಕೊಡಬೇಕು.

ನಮ್ಮ ದೇಶದ ಪ್ರಾದೇಶಿಕ ಹಾಗೂ ಜಾಗತಿಕ ಅಗತ್ಯಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಎಲ್ಲ ಅಂಶಗಳನ್ನು ಅಳವಡಿಸಿಕೊಳ್ಳುವುದು ಅಗತ್ಯ. ಅಂತೆಯೇ ನಾಡಿನ ಶ್ರೀಮಂತವಾದ ವೈವಿಧ್ಯ ಮತ್ತು ಸಂಸ್ಕೃತಿಯನ್ನು ಕೂಡ ಇಲ್ಲಿ ಗಮನದಲ್ಲಿಟ್ಟುಕೊಂಡು ಇವುಗಳನ್ನು ರೂಢಿಸಿಕೊಳ್ಳಬೇಕಾಗಿದೆ. ಯುವಜನಾಂಗಕ್ಕೆ ಭಾರತದ ಬಗ್ಗೆ ತಿಳಿವಳಿಕೆಯನ್ನು ಮೂಡಿಸುವುದು ಹಾಗೂ ಅದರ ವಿಭಿನ್ನ ಸ್ವರೂಪದ ಸಾಮಾಜಿಕ, ಸಾಂಸ್ಕೃತಿಕ ಹಾಗೂ ತಂತ್ರಜ್ಞಾನಗಳಿಗೆ ಸಂಬಂಧಿಸಿದ, ಅದರ ಅನನುಕರಣೀಯವಾದ ಕಲೆಗಳು, ಭಾಷೆಗಳು ಮತ್ತು ಜ್ಞಾನ ಪರಂಪರೆಗಳು ಇವುಗಳ ಬಗೆಗೆ ಅರಿವು ಮೂಡಿಸುವುದು ತುಂಬಾ ಆವಶ್ಯಕ. ಅಂತೆಯೇ ರಾಷ್ಟ್ರೀಯ ಹೆಮ್ಮೆ, ಗೌರವಗಳು, ಆತ್ಮವಿಶ್ವಾಸ, ಆತ್ಮಜ್ಞಾನ, ಸಹಕಾರ ಮತ್ತು ಏಕತಾ ಭಾವನೆಗಳನ್ನು ರೂಢಿಸುವ ಸಲುವಾಗಿ ನಮ್ಮ ಯುವಜನಾಂಗಕ್ಕೆ ಭದ್ರವಾದ ನೈತಿಕ ನೆಲೆಗಟ್ಟನ್ನು ಒದಗಿಸಿಕೊಡುವುದು ಕೂಡ ಅಷ್ಟೇ ಆವಶ್ಯಕ.

ಹಿಂದಿನ ನೀತಿಗಳು

ಶಿಕ್ಷಣವನ್ನು ಕುರಿತಂತೆ ಹಿಂದಿನ ನೀತಿಗಳು ಹೆಚ್ಚಾಗಿ ಶಿಕ್ಷಣವನ್ನು ಪಡೆದುಕೊಳ್ಳುವ ಅವಕಾಶ ಮತ್ತು ಸಮಾನತೆ ಇವುಗಳ ಕಡೆಗೆ ಗಮನ ಹರಿಸಿವೆ. 1986ರ ರಾಷ್ಟ್ರೀಯ ಶಿಕ್ಷಣ ನೀತಿಯನ್ನು 1992ರಲ್ಲಿ ಪರಿಷ್ಕರಿಸಲಾಗಿದ್ದು (ಎನ್.ಪಿ.ಇ. 1986/92) ಅದರಲ್ಲಿ ಅಪೂರ್ಣವಾಗಿದ್ದ ಕಾರ್ಯಸೂಚಿಯನ್ನು ಈ ಪ್ರಸಕ್ತ ನೀತಿಯಲ್ಲಿ ಸೂಕ್ತವಾಗಿ ನಿರ್ವಹಿಸಲಾಗಿದೆ. 1986/92ರ ಹಿಂದಿನ ನೀತಿಗೆ ಹೋಲಿಸಿದಂತೆ ಇದರಲ್ಲಿ ಕಂಡುಬರುವ ಮುಖ್ಯವಾದ ಬದಲಾವಣೆ ಏನೆಂದರೆ ಇದರಲ್ಲಿ ಮಕ್ಕಳ ಉಚಿತ ಹಾಗೂ ಕಡ್ಡಾಯ ಶಿಕ್ಷಣ ಹಕ್ಕು ಕಾಯಿದೆ 2009 ಸೇರ್ಪಡೆಯಾಗಿದ್ದು ಇದು ಸಾರ್ವತ್ರಿಕ ಮೂಲಭೂತ ಶಿಕ್ಷಣವನ್ನು ಸಾಕಾರಗೊಳಿಸುವುದರಲ್ಲಿದ್ದ ಅಡಚಣೆಗಳನ್ನು ನಿವಾರಿಸಿದೆ.

ಈ ನೀತಿಯ ಆಧಾರ ಸಿದ್ಧಾಂತ

ಶಿಕ್ಷಣ ವ್ಯವಸ್ಥೆಯ ಉದ್ದೇಶ ಒಳ್ಳೆಯ ಮನುಷ್ಯರನ್ನು ವಿಕಸಿತರನ್ನಾಗಿ ಮಾಡುವುದು. ಈ ಮನುಷ್ಯರು ಸತರ್ಕವಾಗಿ ಆಲೋಚನೆ ಮಾಡಬಲ್ಲವರಾಗಿರಬೇಕು ಹಾಗೂ ಕ್ರಿಯಾಶೀಲರಾಗಿರಬೇಕು. ಅವರಲ್ಲಿ ಮಾನವೀಯತೆ ಮತ್ತು ಸಹಾನುಭೂತಿ, ಧೈರ್ಯ ಸ್ಥೈರ್ಯಗಳು, ವೈಜ್ಞಾನಿಕ ಮನೋಭಾವ ಮತ್ತು ಸೃಜನಾತ್ಮಕ ಶಕ್ತಿ ವಿಪುಲವಾಗಿರಬೇಕು. ನೈತಿಕ ಚಿಂತನೆ ಮತ್ತು ಮೌಲ್ಯಗಳು ಅವರಲ್ಲಿ ಸಮೃದ್ಧವಾಗಿರಬೇಕು. ನಮ್ಮ ಸಂವಿಧಾನದಲ್ಲಿ ನಮೂದಿಸಲಾಗಿರುವಂತೆ ಸಮಾನವಾದ, ಸಮಾವಿಷ್ಟವಾದ ಹಾಗೂ ಬಹುಳತಾವಾದ ಇವುಗಳನ್ನು ನೆಲೆಗಟ್ಟಾಗಿ ಹೊಂದಿರುವ ತತ್ಪರರಾದ, ಉತ್ಪಾದಕರಾದ ಹಾಗೂ ಕೊಡುಗೆ ನೀಡಬಲ್ಲಂತಹ ಪ್ರಜೆಗಳನ್ನು ಸಜ್ಜುಗೊಳಿಸುವುದು ನಮ್ಮ ಶಿಕ್ಷಣ ವ್ಯವಸ್ಥೆಯ ಉದ್ದೇಶ.

ಒಂದು ಒಳ್ಳೆಯ ವಿದ್ಯಾಸಂಸ್ಥೆಯೆಂದರೆ ಅದರಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಗೂ ಸ್ವಾಗತವಿರಬೇಕು, ಅದು ವಿದ್ಯಾರ್ಥಿಯ ಯೋಗಕ್ಷೇಮ ನೋಡಿಕೊಳ್ಳುವಂತೆ ಇರಬೇಕು, ಅದರಲ್ಲಿ ಪ್ರಚೋದಕವಾದ ಕಲಿಕೆಯ ವಾತಾವರಣ ಇರಬೇಕು, ಅದರಲ್ಲಿ ವಿಭಿನ್ನ ರೀತಿಯ ಕಲಿಕೆಯ ಅನುಭವಗಳನ್ನು ಪಡೆದುಕೊಳ್ಳುವಂತಿರಬೇಕು ಹಾಗೂ ಅಂತಹ ಸಂಸ್ಥೆಯಲ್ಲಿ ಸಮಗ್ರ ವಿದ್ಯಾರ್ಥಿವೃಂದಕ್ಕೆ ಉತ್ತಮವಾದ ಕಲಿಕೆಗೆ ಅವಕಾಶ ಮಾಡಿಕೊಡುವ ಒಳ್ಳೆಯ ಮೂಲಸೌಕರ್ಯ ಮತ್ತು ಸೂಕ್ತವಾದ ಸಂಪನ್ಮೂಲಗಳು ಲಭ್ಯವಿರಬೇಕು. ಈ ಗುಣಗಳನ್ನು ಪಡೆದುಕೊಳ್ಳುವುದು ಪ್ರತಿಯೊಂದು ಶಿಕ್ಷಣ ಸಂಸ್ಥೆಯ ಗುರಿಯಾಗಿರಬೇಕು. ಇವುಗಳೊಟ್ಟಿಗೆ ವಿವಿಧ ಬಗೆಯ ಸಂಸ್ಥೆಗಳ ನಡುವೆ ಮಾತ್ರವಲ್ಲದೆ ಒಟ್ಟಾರೆಯಾಗಿ ಶಿಕ್ಷಣದ ಎಲ್ಲ ಹಂತಗಳ ನಡುವೆ ಅವ್ಯಾಹತವಾದ ಏಕತೆ, ಸಮಗ್ರತೆ ಮತ್ತು ಸಹಕಾರ ಅತ್ಯಾವಶ್ಯಕವಾಗಿ ಏರ್ಪಡಬೇಕು

ಶಿಕ್ಷಣ ವ್ಯವಸ್ಥೆಯನ್ನು ಒಟ್ಟಾರೆಯಾಗಿ ನಿರ್ದೇಶಿಸುವ ಹಾಗೂ ಅದರೊಳಗೆ ಕಂಡುಬರುವ ಪ್ರತಿಯೊಂದು ಶಿಕ್ಷಣ ಸಂಸ್ಥೆಗೆ ಮಾರ್ಗದರ್ಶನ ನೀಡುವ ಮೂಲಭೂತ ತತ್ತ್ವಗಳು ಈ ಕೆಳಕಂಡಂತೆ ಇವೆ:

- **ಪ್ರತಿಯೊಬ್ಬ ವಿದ್ಯಾರ್ಥಿಯ ವಿಶಿಷ್ಟ ಸಾಮರ್ಥ್ಯಗಳನ್ನು ಗುರುತಿಸುವ, ಅವುಗಳಿಗೆ ಮಾನ್ಯತೆ ನೀಡುವ** ಹಾಗೂ **ಅವುಗಳನ್ನು ಅಚ್ಚುಕಟ್ಟಾಗಿ ಬೆಳೆಸುವ** ನಿಟ್ಟಿನಲ್ಲಿ ಅಧ್ಯಾಪಕರು ಮತ್ತು ತಂದೆ ತಾಯಿಗಳು ಕಾರ್ಯತತ್ಪರರಾಗಬೇಕು. ಶೈಕ್ಷಣಿಕ ಹಾಗೂ ಪಠ್ಯೇತರ ಈ ಎರಡೂ ಕ್ಷೇತ್ರಗಳಲ್ಲಿ ವಿದ್ಯಾರ್ಥಿಯ ಒಟ್ಟಾರೆ ಬೆಳೆವಣಿಗೆಯನ್ನು ಪೋಷಿಸುವ ಸಂವೇದನಶೀಲತೆಯನ್ನು ಅಧ್ಯಾಪಕರು ಮತ್ತು ತಂದೆ ತಾಯಿಗಳು ಹೊಂದಿರಬೇಕು;
- ಗ್ರೇಡ್ 3ಕ್ಕೆ ಬರುವ ವೇಳೆಗೆ ಎಲ್ಲ ವಿದ್ಯಾರ್ಥಿಗಳು **ಮೂಲಭೂತ ಸಾಕ್ಷರತೆ** ಮತ್ತು **ಅಂಕಿಸ0ಖ್ಯೆಗಳ ಪರಿಜ್ಞಾನ** ಪಡೆದುಕೊಳ್ಳುವ ವಿಷಯವಾಗಿ ಅತಿ ಹೆಚ್ಚಿನ ಆದ್ಯತೆ ನೀಡತಕ್ಕದ್ದು;
- ಕಲಿಯುವವರು ತಮ್ಮ ಕಲಿಕೆಯ ಹಾದಿಯನ್ನು ಮತ್ತು ಕಾರ್ಯಕ್ರಮಗಳನ್ನು ಆಯ್ಕೆ ಮಾಡಿಕೊಳ್ಳುವಲ್ಲಿ **ನಮ್ಯತೆ (flexibility)** ಇರಬೇಕು. ತಮ್ಮ ಕೌಶಲಗಳಿಗೆ ಮತ್ತು ಆಸಕ್ತಿಗಳಿಗೆ ತಕ್ಕಂತೆ ಮಕ್ಕಳು ತಮ್ಮದೇ ಬದುಕಿನ ಹಾದಿಗಳನ್ನು ಕಂಡುಕೊಳ್ಳಲು ಇದರಿಂದ ಸಾಧ್ಯವಾಗಬೇಕು;
- ಕಲೆ ಮತ್ತು ವಿಜ್ಞಾನಗಳ ನಡುವೆ, ಪಠ್ಯಸಂಬಂಧವಾದ ಮತ್ತು ಪಠ್ಯೇತರ ಚಟುವಟಿಕೆಗಳ ನಡುವೆ, ಶುದ್ಧ ಶೈಕ್ಷಣಿಕ ಮತ್ತು ವೃತ್ತಿಪರ ಶಿಕ್ಷಣದ ಹಾದಿಗಳ ನಡುವೆ **ಸ್ಪಷ್ಟವಾದ ಭೇದಗಳು ಇರಕೂಡದು**. ಇದರಿಂದಾಗಿ ಕಲಿಕೆಯ ವಿವಿಧ ಕ್ಷೇತ್ರಗಳಲ್ಲಿ ಕಂಡುಬರುವ ಇದು ಹೆಚ್ಚು, ಇದು ಕಡಿಮೆ ಎಂಬಂತಹ ಅಪಾಯಕಾರಿ ಭಾವನೆಗಳು ಮತ್ತು ಅಸಂಬದ್ಧತೆಗಳು ನಶಿಸಲು ನೆರವಾಗುತ್ತವೆ.
- ಎಲ್ಲಾ ಜ್ಞಾನಕ್ಷೇತ್ರಗಳ ಏಕತೆ ಮತ್ತು ಸಮಗ್ರತೆಗಳ ಸಲುವಾಗಿ ವಿಜ್ಞಾನಗಳು, ಸಮಾಜ ವಿಜ್ಞಾನಗಳು, ಕಲೆ, ಮಾನವಿಕಗಳು ಹಾಗೂ ಕ್ರೀಡೆಗಳು ಇವೆಲ್ಲವನ್ನು ಒಟ್ಟುಗೂಡಿಸಿ **ಬಹುಶಾಸ್ತ್ರೀಯ** ಹಾಗೂ **ಸಮಗ್ರತಾ ದೃಷ್ಟಿಯುಳ್ಳ ಶಿಕ್ಷಣ ವಿಧಾನಕ್ಕೆ** ಅವಕಾಶ ಮಾಡಿಕೊಡುವುದರ ಮೂಲಕ ಬಹುಶಾಸ್ತ್ರೀಯ ಪ್ರಪಂಚವನ್ನು ಪ್ರವೇಶಿಸಲು ವಿದ್ಯಾರ್ಥಿಗಳಿಗೆ ಅನುವುಮಾಡಿಕೊಡುವುದು.
- ಉರುಹಚ್ಚಿ ಕಲಿಯುವುದು ಹಾಗೂ ಪರೀಕ್ಷೆಗಳಿಗೋಸ್ಕರ ಕಲಿಯುವುದು ಇವುಗಳನ್ನು ದೂರಮಾಡಲು **ಸ0ಕಲ್ಪನಾತ್ಮಕ ಅರಿವಿಗೆ ಒತ್ತು ನೀಡುವುದು**;
- ತಾರ್ಕಿಕ ತೀರ್ಮಾನಕ್ಕೆ ಅವಕಾಶ ಮಾಡಿಕೊಡುವ ಹಾಗೂ ನಾವೀನ್ಯವನ್ನು (innovation) ಕಂಡುಕೊಳ್ಳುವ **ಸೃಜನಾತ್ಮಕತೆ ಮತ್ತು ತಾರ್ಕಿಕ ಚಿಂತನೆಗಳನ್ನು** ಪ್ರೋತ್ಸಾಹಿಸುವುದು;
- ಸಹಾನುಭೂತಿ, ಇತರರ ಬಗ್ಗೆ ಗೌರವ, ಸ್ವಚ್ಛತೆ, ಸೌಜನ್ಯ, ಪ್ರಭಾಪ್ರಭುತ್ವ ಮನೋಭಾವನೆ, ಸೇವಾಧರ್ಮ, ಸಾರ್ವಜನಿಕ ಆಸ್ತಿಪಾಸ್ತಿಗಳ ಬಗೆಗೆ ಗೌರವ, ವೈಜ್ಞಾನಿಕ ಮನೋಭಾವ, ಮುಕ್ತತೆ, ಜವಾಬ್ದಾರಿ, ಬಹುಳತಾವಾದ, ಸಮಾನತೆ, ನ್ಯಾಯ ಇಂತಹ **ನೈತಿಕ, ಮಾನವೀಯ ಹಾಗೂ ಸಂವಿಧಾನಾತ್ಮಕ ಮೌಲ್ಯಗಳಿಗೆ** ಮಹತ್ವ ನೀಡುವುದು;
- ಬೋಧನೆ ಮತ್ತು ಕಲಿಕೆ ಎರಡರಲ್ಲೂ **ಬಹುಭಾಷೀಯತೆ** ಮತ್ತು **ಭಾಷಾಶಕ್ತಿ ಇವುಗಳಿಗೆ ಪ್ರೋತ್ಸಾಹ ನೀಡುವುದು**;

- ಸಂವಹನ, ಸಹಕಾರ, ತಂಡದ ಕೆಲಸ ಹಾಗೂ ನವಚೇತನ (resilience) ಇಂಥ **ಬದುಕಿಗೆ ಅಗತ್ಯವಾದ ಕೌಶಲಗಳಿಗೆ** ಒತ್ತಾಸೆ ನೀಡುವುದು;
- ಇಂದಿನ ಕೋಚಿಂಗ್ ಸಂಸ್ಕೃತಿಯನ್ನು ಬೆಂಬಲಿಸಿ ಪೋಷಿಸುವ **ಸಂಕಲಕ ಮೌಲ್ಯಾಂಕನವನ್ನು (summative assessment) ದೂರಮಾಡಿ ರೂಪಾತ್ಮಕ ಮೌಲ್ಯಾಂಕನಕ್ಕೆ (formative assessment)** ದಾರಿ ಮಾಡಿಕೊಡುವುದು;
- ಬೋಧನೆಯಲ್ಲಿ ಮತ್ತು ಕಲಿಕೆಯಲ್ಲಿ **ವ್ಯಾಪಕವಾಗಿ ತಂತ್ರಜ್ಞಾನದ ಬಳಕೆ ಮಾಡುವುದು**. ಇದರೊಟ್ಟಿಗೆ ಭಾಷಾ ಬಂಧನಗಳನ್ನು ಬದಿಗಿರಿಸುವುದು, ದಿವ್ಯಾಂಗ ಅಥವಾ ವಿಭಿನ್ನ ಸಾಮರ್ಥ್ಯವುಳ್ಳ ಮಕ್ಕಳಿಗಾಗಿ ಸಾಧನ ಸೌಲಭ್ಯಗಳನ್ನು ಅಧಿಕಗೊಳಿಸುವುದು, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣೆಗಳನ್ನು ಅಭಿವೃದ್ಧಿಪಡಿಸುವುದು;
- ಈ ಎಲ್ಲ ಬಗೆಯ ಪಠ್ಯಕ್ರಮ, ಬೋಧನಕ್ರಮ ಮತ್ತು ನೀತಿ ಇವುಗಳಲ್ಲೆಲ್ಲ **ವೈವಿಧ್ಯ** ಮತ್ತು **ಸ್ಥಳೀಯ ಸಂದರ್ಭಗಳಿಗೆ ಗೌರವ ನೀಡುವುದು** ಅಗತ್ಯ. ಶಿಕ್ಷಣ ಎಂಬುದು ಬದುಕಿನ ಜೊತೆಯಲ್ಲಿ ಹಾಸುಹೊಕ್ಕಾಗಿರುತ್ತದೆ ಎಂಬ ಹಿನ್ನೆಲೆಯಲ್ಲಿ ಇದನ್ನು ಪರಿಗ್ರಹಿಸಬೇಕು;
- ಎಲ್ಲ ವಿದ್ಯಾರ್ಥಿಗಳು ಶಿಕ್ಷಣ ವ್ಯವಸ್ಥೆಯಲ್ಲಿ ಯಶಸ್ವಿಯಾಗಿ ಮುಂದುವರಿಯಲು ಸಾಧ್ಯವಾಗುವಂತೆ ಎಲ್ಲ ಬಗೆಯ ಶೈಕ್ಷಣಿಕ ತೀರ್ಮಾನಗಳಲ್ಲಿ **ಪೂರ್ಣ ಸಮಾನತೆ** ಮತ್ತು **ಸಮಾವರ್ತತೆಗಳನ್ನು (inclusion)** ಮೈಲುಗಲ್ಲಾಗಿ ಪರಿಗಣಿಸುವುದು;
- ಪ್ರಾರಂಭಿಕ ಬಾಲ್ಯಾವಸ್ಥೆಯ ಯೋಗಕ್ಷೇಮದಿಂದ ಮೊದಲುಗೊಂಡು ಶಾಲಾ ಶಿಕ್ಷಣದಿಂದ ಉನ್ನತ ಶಿಕ್ಷಣದವರೆಗೆ **ಶಿಕ್ಷಣದ ಎಲ್ಲ ಹಂತಗಳಲ್ಲಿ ಪಠ್ಯಕ್ರಮದಲ್ಲಿ ಸಾಂಗತ್ಯವಿರುವ0ತೆ (synergy)** ಗಮನಹರಿಸಬೇಕು;
- **ಅಧ್ಯಾಪಕರು** ಮತ್ತು **ಬೋಧಕವೃಂದ ಕಲಿಕೆ ಪ್ರಕ್ರಿಯೆಯಲ್ಲಿ ಹೃದಯಸದೃಶರಾಗಿರುತ್ತಾರೆ** - ಅವರ ನೇಮಕ, ನಿರಂತರ ವೃತ್ತಿಪರ ಏಳಿಗೆ, ಇತ್ಯಾತ್ಮಕ ಸೇವಾ ಪರಿಸರ ಹಾಗೂ ಸೇವಾನಿಬಂಧನೆಗಳು ಗಮನಾರ್ಹವಾಗಿರುತ್ತವೆ;
- ಆಡಿಟ್ ಅಥವಾ ತಪಾಸಣೆ ಹಾಗೂ ಸಾರ್ವಜನಿಕವಾಗಿ ಪ್ರಕಟಪಡಿಸುವುದರ ಮೂಲಕ ಶಿಕ್ಷಣ ವ್ಯವಸ್ಥೆಯಲ್ಲಿ **ಸಮಗ್ರತೆ, ಪಾರದರ್ಶಕತೆ** ಹಾಗೂ **ಸಂಪನ್ಮೂಲ ಸಾಮರಸ್ಯ** ಇವುಗಳನ್ನು ಖಾತರಿಪಡಿಸಿಕೊಳ್ಳುವ ಸಲುವಾಗಿ **ಒ0ದು 'ಹಗುರವಾದ ಆದರೆ ಭದ್ರವಾದ' ನಿಯಂತ್ರಕ ಚೌಕಟ್ಟೊಂದನ್ನು** ವ್ಯವಸ್ಥೆ ಮಾಡುವುದರ ಜೊತೆಗೆ **ಸ್ವಾಯತ್ತತೆ, ಉತ್ತಮ ಆಡಳಿತ** ಹಾಗೂ **ಸಬಲೀಕರಣಗಳ** ಮೂಲಕ ಹೊಸ ಬಗೆಯ ಚಿಂತನೆ ಮತ್ತು 'ಔಟ್-ಆಫ್-ದಿ-ಬಾಕ್ಸ್' ಅಥವಾ ಅಸಾಂಪ್ರದಾಯಿಕವಾದ ವಿಚಾರಗಳಿಗೆ ಪ್ರೋತ್ಸಾಹ ನೀಡುವುದು;
- ಅತ್ಯುತ್ತಮವಾದ ಶಿಕ್ಷಣ ಮತ್ತು ಬೆಳೆವಣಿಗೆಗಾಗಿ **ಅತ್ಯುತ್ತಮವಾದ ಸಂಶೋಧನೆ** ಸಹ ಜೊತೆಯಲ್ಲಿಯೆ ಸಾಗಬೇಕಾದ ಇನ್ನೊಂದು ಅಗತ್ಯ;
- ಶಿಕ್ಷಣ ತಜ್ಞರ ಮೂಲಕ ಸುಸ್ಥಿರ ಸಂಶೋಧನೆ ಹಾಗೂ ನಿಯತವಾದ ಮೌಲ್ಯಾಂಕನ ಇವುಗಳನ್ನು ಆಧರಿಸಿದ ಬೆಳೆವಣಿಗೆಯ **ನಿರಂತರ ವಿಮರ್ಶೆ** ಮತ್ತು ಪುನರವಲೋಕನ;
- ಭಾರತ ದೇಶದ ಬಗ್ಗೆ ಆಳವಾಗಿ **ಬೇರುಬಿಟ್ಟ ಅಭಿಮಾನ** ಮತ್ತು **ಹೆಮ್ಮೆಯ ಭಾವನೆ**. ನಾಡಿನ ಶ್ರೀಮಂತ, ಪ್ರಾಚೀನ ಹಾಗೂ ಆಧುನಿಕ ಸಂಸ್ಕೃತಿ, ಜ್ಞಾನಪರಂಪರೆ ಮತ್ತು ಸಂಪ್ರದಾಯಗಳ ಬಗೆಗೆ ವಿಶೇಷ ಕಾಳಜಿ;
- **ಶಿಕ್ಷಣ ಎಂಬುದು ಒ0ದು ಸಾರ್ವಜನಿಕ ಸೇವೆ**. ಹಾಗಾಗಿ ಗುಣಾತ್ಮಕವಾದ ಶಿಕ್ಷಣವನ್ನು ಪಡೆದುಕೊಳ್ಳುವುದು ಪ್ರತಿಯೊಂದು ಮಗುವಿನ ಹಕ್ಕು;
- **ಶಕ್ತವಾದ, ಸ್ಪಂದನಶೀಲವಾದ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯಲ್ಲಿ** ಮಹತ್ತರವಾದ ಸಂಪನ್ಮೂಲ ವಿನಿಯೋಗ ಮಾಡುವುದರ ಜೊತೆಗೆ ನಿಜವಾಗಿಯೂ ಜನಪರ ಕಾಳಜಿ ಹೊಂದಿರುವ, ಖಾಸಗಿಯಾಗಿ ಹಾಗೂ ಸಮುದಾಯಗಳ ಆಶ್ರಯದಲ್ಲಿ ನಡೆಯುವ ಉದಾರ ಮನಸ್ಸಿನ ವಿದ್ಯಾಸಂಸ್ಥೆಗಳಿಗೆ ಪ್ರೋತ್ಸಾಹ ನೀಡುವುದು ಮತ್ತು ಅನುಕೂಲಗಳನ್ನು ಒದಗಿಸಿಕೊಡುವುದು.

ಈ ನೀತಿಯ ದೂರದರ್ಶಿತ್ವ (Vision)

ಭಾರತ ದೇಶವನ್ನು ಸುಸ್ಥಿರವಾಗಿ ಸಮಾನತಾ ಮನೋಧರ್ಮದ ಹಾಗೂ ಸ್ಪಂದನಶೀಲ ಜ್ಞಾನಸಮಾಜವಾಗಿ ಪರಿವರ್ತಿಸುವ ನಿಟ್ಟಿನಲ್ಲಿ ಭಾರತೀಯ ಅಸ್ಮಿತೆಯ ಮೇಲೆ ಆಧಾರಗೊಂಡಿರುವ ಶಿಕ್ಷಣ ವ್ಯವಸ್ಥೆಯೊಂದನ್ನು ಸಾಕಾರಗೊಳಿಸುವುದು ಈ ರಾಷ್ಟ್ರೀಯ ಶಿಕ್ಷಣ ನೀತಿಯ ಮಹಾನ್ ಉದ್ದೇಶವಾಗಿದೆ. ಪ್ರತಿಯೊಬ್ಬರಿಗೂ ಉನ್ನತ ಮಟ್ಟದ ಶಿಕ್ಷಣ ದೊರಕಿಸಿಕೊಡುವುದರ ಮೂಲಕ ಭಾರತವನ್ನು ಜ್ಞಾನದಿಗಂತದ ಒಂದು ಮಹಾನ್ ಶಕ್ತಿಯಾಗಿ (Super Power) ಪರಿವರ್ತಿಸುವ ಮೂಲಕ ಈ ಕನಸನ್ನು ನನಸಾಗಿಸಬಹುದು. ಈ ದಿಶೆಯಲ್ಲಿ ನಮ್ಮ ಸಂಸ್ಥೆಗಳ ಶಿಕ್ಷಣಕ್ರಮ ಮತ್ತು ಬೋಧನಕ್ರಮಗಳು ವಿದ್ಯಾರ್ಥಿಗಳಲ್ಲಿ ಮೂಲಭೂತ ಕರ್ತವ್ಯಗಳು ಮತ್ತು ಸಂವಿಧಾನಾತ್ಮಕ ಮೌಲ್ಯಗಳು ಇವುಗಳ ಬಗೆಗೆ ಆಳವಾದ ಗೌರವಾದರಗಳನ್ನು ಹುಟ್ಟುಹಾಕುವಂತಾಗಬೇಕೆಂಬ ಗುರಿಯನ್ನು ಈ ಶಿಕ್ಷಣ ನೀತಿ ಹೊಂದಿದೆ. ಬದಲಾಗುತ್ತಿರುವ ಪ್ರಪಂಚದಲ್ಲಿ ರಾಷ್ಟ್ರವ್ಯಾಪಿಯಾಗಿ ಬೆಸುಗೆಗೊಂಡು ವಿದ್ಯಾರ್ಥಿಗಳು ತಮ್ಮ ಪಾತ್ರದ ಹಾಗೂ ಜವಾಬ್ದಾರಿಗಳ

ವಿಚಾರವಾಗಿ ಪ್ರಜ್ಞಾಪೂರ್ವಕವಾದ ಅರಿವನ್ನು ಪಡೆದುಕೊಂಡಿರಬೇಕೆಂಬುದು ಪ್ರಸಕ್ತ ನೀತಿಯ ಆಶಯವಾಗಿದೆ. ಈ ನೀತಿಯ ದೂರದರ್ಶಿತ್ವದ ಇನ್ನೊಂದು ಅಂಶವೆಂದರೆ ಇದು ಕೇವಲ ಆಲೋಚನೆಯಲ್ಲಿ ಮಾತ್ರವಲ್ಲದೆ ಭಾವ, ಬುದ್ಧಿ ಹಾಗೂ ಕ್ರಿಯೆಗಳಲ್ಲಿ ನಾವು ಭಾರತೀಯರು ಎಂಬ ಆಳವಾದ ಹೆಮ್ಮೆಯ ಭಾವನೆಯನ್ನು ವಿದ್ಯಾರ್ಥಿಗಳಲ್ಲಿ ಮೂಡಿಸಬೇಕಲ್ಲದೆ ಅವರಲ್ಲಿ ನಿಜವಾಗಿಯೂ ಜಾಗತಿಕ ಪ್ರಜೆಗೆ ಅಗತ್ಯವಾದ ಜ್ಞಾನ, ಕೌಶಲಗಳು, ಮೌಲ್ಯಗಳು ಹಾಗೂ ನಿಲುವುಗಳನ್ನು ರೂಢಿಸಬೇಕಾಗಿದೆ. ಈ ನಿಲುವುಗಳು ಮಾನವ ಹಕ್ಕುಗಳು, ಸುಸ್ಥಿರ ಬೆಳೆವಣಿಗೆ ಮತ್ತು ಬದುಕು ಹಾಗೂ ವಿಶ್ವಕಲ್ಯಾಣ ಇವುಗಳಿಗೆ ನಾಂದಿಹಾಡುವ ಮೂಲಕ ವಿಶ್ವಪ್ರಜೆಯ ವರ್ಚಸ್ಸನ್ನು ಮೂಡಿಸಬೇಕಾಗಿದೆ.

ಭಾಗ – I ಶಾಲಾ ಶಿಕ್ಷಣ

ಈ ನೀತಿ ಈವರೆಗೆ ಶಾಲಾ ಶಿಕ್ಷಣದಲ್ಲಿ ಜಾರಿಯಲ್ಲಿದ್ದ 10+2 ವಿನ್ಯಾಸವನ್ನು ಮಾರ್ಪಾಡು ಮಾಡಿ ಕೆಳಗಿನ ಚಿತ್ರದಲ್ಲಿ ತೋರಿಸಿರುವಂತೆ ಹಾಗೂ ಅನಂತರ ಅಧ್ಯಾಯ 4ರಲ್ಲಿ ವಿವರಿಸಿರುವಂತೆ 3-18 ವಯೋಮಾನದವರಿಗೆ 5+3+3+4 ಮಾದರಿಯಲ್ಲಿ ಬೋಧನಕ್ರಮ ಹಾಗೂ ಶಿಕ್ಷಣಕ್ರಮಗಳನ್ನು ಮರುವಿನ್ಯಾಸ ಮಾಡಲಾಗಿದೆ.

ಒಂದನೇ ತರಗತಿ (ಕ್ಲಾಸ್ 1) 6ನೇ ವರ್ಷದಿಂದ ಪ್ರಾರಂಭವಾಗುವುದರಿಂದಾಗಿ ಸದ್ಯದಲ್ಲಿ 3-6 ವಯೋಮಾನದ ಮಕ್ಕಳನ್ನು 10+2 ವಿನ್ಯಾಸದ ಅಡಿಯಲ್ಲಿ ಸೇರ್ಪಡೆ ಮಾಡಲಾಗಿಲ್ಲ. ಹೊಸ 5+3+3+4 ವಿನ್ಯಾಸದಲ್ಲಿ ಪ್ರಾರಂಭಿಕ ಬಾಲ್ಯ ಸಂರಕ್ಷಣೆ ಮತ್ತು ಶಿಕ್ಷಣಕ್ಕಾಗಿ (Early Childhood Care & Education – ECCE) ಭದ್ರವಾದ ಬುನಾದಿಯನ್ನು ಕಲ್ಪಿಸಲಾಗಿದ್ದು ಇದು ಇನ್ನೂ ಉತ್ತಮವಾದ ಒಟ್ಟಾರೆ ಕಲಿಕೆ, ಬೆಳೆವಣಿಗೆ ಹಾಗೂ ಒಳಿತನ್ನು ತನ್ನ ಉದ್ದೇಶವಾಗಿ ಇಟ್ಟುಕೊಂಡಿದೆ.



1. ಬಾಲ್ಯಪೂರ್ವ ಆರೈಕೆ ಅಥವಾ ಕಾಳಜಿ ಮತ್ತು ಶಿಕ್ಷಣ ಕಲಿಕೆ ತಳಹದಿ

1.1 ಒಂದು ಮಗುವಿನ ಒಟ್ಟಾರೆ ಮಿದುಳಿನ ಬೆಳೆವಣಿಗೆಯ ಶೇಕಡ 85ಕ್ಕಿಂತ ಹೆಚ್ಚು ಭಾಗ ಅದಕ್ಕೆ 6 ವರ್ಷ ವಯಸ್ಸಾಗುವ ಮೊದಲೇ ವಿಕಾಸಗೊಂಡಿರುತ್ತದೆ. ಹಾಗಾಗಿ ಆರೋಗ್ಯಕರವಾದ ಮಿದುಳಿನ ಬೆಳೆವಣಿಗೆಯನ್ನು ಖಾತರಿಪಡಿಸಿಕೊಳ್ಳುವ ದೃಷ್ಟಿಯಿಂದ ಪ್ರಾರಂಭಿಕ

ಹಂತದಲ್ಲೇ ಮಿದುಳಿನ ಸೂಕ್ತವಾದ ಸಂರಕ್ಷಣೆ, ಜೋಡಣೆ ಮತ್ತು ಬೆಳೆವಣಿಗೆ ಒಂದು ನಿರ್ಣಾಯಕವಾದ ಅಂಶವಾಗಿ ಕಂಡುಬರುತ್ತದೆ. ಸದ್ಯದಲ್ಲಿ ಉತ್ತಮ ಗುಣಮಟ್ಟದ ಇ.ಸಿ.ಸಿ.ಇ. ಸೌಲಭ್ಯ ಕೋಟ್ಯಂತರ ಮಂದಿ ಮಕ್ಕಳಿಗೆ, ಅದರಲ್ಲೂ ಸಾಮಾಜಿಕವಾಗಿ-ಆರ್ಥಿಕವಾಗಿ ಅನನುಕೂಲಕ್ಕೆ ಗುರಿಯಾಗಿರುವ ಹಿನ್ನೆಲೆಯುಳ್ಳ ಮಕ್ಕಳಿಗೆ ಲಭ್ಯವಾಗುತ್ತಿಲ್ಲ. ಆದ್ದರಿಂದ ಇ.ಸಿ.ಸಿ.ಇ.ಯಲ್ಲಿ ಭದ್ರವಾದ ಹೂಡಿಕೆ ಮಾಡುವುದರಿಂದ ಎಲ್ಲ ಸಣ್ಣ ವಯಸ್ಸಿನ ಮಕ್ಕಳಿಗೆ ಈ ಸೌಲಭ್ಯ ದೊರೆಯುವ ಅವಕಾಶ ಉಂಟಾಗುತ್ತದೆ. ಇದರಿಂದ ಆ ಮಕ್ಕಳು ತಮ್ಮ ಬದುಕಿನುದ್ದಕ್ಕೂ ಶಿಕ್ಷಣ ವ್ಯವಸ್ಥೆಯಲ್ಲಿ ಪಾಲುಗೊಂಡು ಅಭಿವೃದ್ಧಿ ಹೊಂದಲು ಸಾಧ್ಯವಾಗುತ್ತದೆ. ಮಕ್ಕಳಿಗೆ ಬಾಲ್ಯಾವಸ್ಥೆಯಲ್ಲಿಯೆ ಉತ್ತಮ ಗುಣಮಟ್ಟದ ಶಿಕ್ಷಣ ಸಾರ್ವತ್ರಿಕವಾಗಿ ಲಭ್ಯವಾಗುವಂತೆ ಸಾಧ್ಯವಾದಷ್ಟು ಬೇಗ ವ್ಯವಸ್ಥೆ ಮಾಡಬೇಕು. ಈ ಶಿಕ್ಷಣ ವ್ಯವಸ್ಥೆ ಕನಿಷ್ಠ 2030ಕ್ಕಿಂತ ತಡವಾಗದಂತೆ ಲಭ್ಯವಾಗುವುದಾದರೆ ಗ್ರೇಡ್ 1 ಪ್ರವೇಶಿಸುವ ಮಕ್ಕಳು ಶಾಲೆ ಸಿದ್ಧರಾದ ಹಾಗೆ ಆಗುತ್ತದೆ.

1.2. ಇ.ಸಿ.ಸಿ.ಇ. ತನ್ನ ಆದರ್ಶದ ನೆಲೆಗಟ್ಟಿನಲ್ಲಿ ನಮ್ಯತೆಯುಳ್ಳ, ಬಹುಮುಖಿಯಾದ, ಬಹುಹಂತಗಳನ್ನುಳ್ಳ, ಆಟಗಳನ್ನು ಆಧರಿಸಿದ, ಚಟುವಟಿಕೆಗಳ ಮೇಲೆ ನೆಲೆಗೊಂಡ, ಕುತೂಹಲಭರಿತವಾದ ಕಲಿಕೆಯಾಗಿದ್ದು ಇದರಲ್ಲಿ ಅಕ್ಷರಮಾಲೆ, ಭಾಷೆಗಳು, ಅಂಕಿಗಳು, ಎಣಿಕೆ, ಬಣ್ಣಗಳು, ಆಕಾರಗಳು, ಒಳಾಂಗಣ ಮತ್ತು ಹೊರಾಂಗಣ ಆಟಗಳು, ಪದಬಂಧಗಳು, ತಾರ್ಕಿಕ ಆಲೋಚನೆ, ಸಮಸ್ಯೆ ಬಿಡಿಸುವುದು, ಚಿತ್ರ ಬರೆಯುವುದು, ಪೇಂಟಿಂಗ್ ಹಾಗೂ ಇತರ ದೃಶ್ಯಕಲೆಗಳು, ಕೈಕೆಲಸ, ನಾಟಕ ಮತ್ತು ಗೊಂಬೆಯಾಟ, ಸಂಗೀತ ಮತ್ತು ಪ್ರದರ್ಶನ ಮುಂತಾದವು ಸೇರಿಕೊಂಡಿರುತ್ತವೆ. ಇಷ್ಟೇ ಅಲ್ಲದೆ ಈ ಕಲಿಕೆಯಲ್ಲಿ ಸಾಮಾಜಿಕ ಸಾಮರ್ಥ್ಯಗಳನ್ನು ಅಭಿವೃದ್ಧಿಪಡಿಸಿಕೊಳ್ಳುವುದು, ಸಂವೇದನಶೀಲತೆ, ಒಳ್ಳೆಯ ನಡೆವಳಿಕೆ, ಸೌಜನ್ಯ, ನೀತಿ, ವೈಯಕ್ತಿಕ ಹಾಗೂ ಸಾರ್ವಜನಿಕ ಶುಚಿತ್ವ, ತಂಡ ಕೆಲಸ, ಸಹಕಾರ ಇಂಥ ಗುಣಗಳನ್ನು ಬೆಳೆಸಿಕೊಳ್ಳುವುದು ಸೇರಿರುತ್ತದೆ. ಒಟ್ಟಾರೆಯಾಗಿ ಇ.ಸಿ.ಸಿ.ಇ. ಮೂಲಭೂತ ಕಲಿಕೆಯ ಉದ್ದೇಶ ದೈಹಿಕ ಮತ್ತು ಚಲನಶೀಲ ಕ್ರಿಯೆಗಳನ್ನು ಉತ್ತಮಪಡಿಸುವುದು, ಸಂಜ್ಞಾನಾತ್ಮಕ ಬೆಳೆವಣಿಗೆ, ಸಾಮಾಜಿಕ-ಭಾವನಾತ್ಮಕ-ನೈತಿಕ ಬೆಳೆವಣಿಗೆ, ಸಾಂಸ್ಕೃತಿಕ/ಕಲಾತ್ಮಕ ಬೆಳೆವಣಿಗೆ ಹಾಗೂ ಸಂವಹನಶೀಲತೆಯ ಬೆಳೆವಣಿಗೆ, ಬಾಲ್ಯದ ಹಂತದಲ್ಲೇ ಭಾಷೆ, ಸಾಕ್ಷರತೆ ಮತ್ತು ಅಂಕಿಗಳ ಕಲಿಕೆಗೆ ಒತ್ತು ನೀಡುವುದು ಇಂಥ ಅಂಶಗಳನ್ನು ಒಳಗೊಂಡಿರುತ್ತದೆ.

1.3 ಪ್ರಾರಂಭಿಕ ಬಾಲ್ಯಾವಸ್ಥೆಯ ಸುರಕ್ಷೆ ಮತ್ತು ಶಿಕ್ಷಣ (National Curricular and Pedagogical Framework for Early Child Care and Education- NCPFECCE) ಎಂಬ ರಾಷ್ಟ್ರೀಯ ಶಿಕ್ಷಣ ಚೌಕಟ್ಟನ್ನು 8ವರ್ಷದವರೆಗಿನ ವಯಸ್ಸಿನ ಮಕ್ಕಳಿಗಾಗಿ ಎನ್.ಸಿ.ಇ.ಆರ್.ಟಿ. ಎರಡು ಭಾಗಗಳಲ್ಲಿ ಅಭಿವೃದ್ಧಿಪಡಿಸಿದೆ. ಈ ಪೈಕಿ 0-3 ವರ್ಷ ವಯಸ್ಸಿನ ಮಕ್ಕಳಿಗಾಗಿ ಒಂದು ಉಪ-ಚೌಕಟ್ಟು ಹಾಗೂ 3-8ವರ್ಷ ವಯಸ್ಸಿನ ಮಕ್ಕಳಿಗಾಗಿ ಇನ್ನೊಂದು ಉಪ-ಚೌಕಟ್ಟು ರೂಪುಗೊಂಡಿದ್ದು ಇವುಗಳನ್ನು ಮೇಲೆ ಹೇಳಿದ ಮಾರ್ಗಸೂಚಿಗಳಿಗೆ ಅನುಗುಣವಾಗಿ ವಿನ್ಯಾಸ ಮಾಡಲಾಗಿದೆ. ಹಾಗೆಯೆ ಇ.ಸಿ.ಸಿ.ಇ.ಯಲ್ಲಿ ಮಾಡಿರುವ ಇತ್ತೀಚಿನ ಸಂಶೋಧನೆಗಳನ್ನು ಹಾಗೂ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಅಸ್ತಿತ್ವದಲ್ಲಿರುವ ಅತ್ಯುತ್ತಮ ಪದ್ಧತಿಗಳನ್ನು ಕೂಡ ಇದರಲ್ಲಿ ಅಳವಡಿಸಿಕೊಳ್ಳಲಾಗಿದೆ. ನಿರ್ದಿಷ್ಟವಾಗಿ ಹೇಳಬೇಕೆಂದರೆ, ಭಾರತದಲ್ಲಿ ಸಾವಿರಾರು ವರ್ಷಗಳಿಂದ ಬೆಳೆದುಬಂದಿರುವ ಅಸಂಖ್ಯಾತ ಶ್ರೀಮಂತವಾದ ಸ್ಥಳೀಯ ಪರಂಪರೆಗಳಲ್ಲಿ ಕಂಡುಬರುವ ಕಲೆ, ಕಥೆಗಳು, ಪದ್ಯಗಳು, ಆಟಗಳು, ಹಾಡುಗಳು ಮುಂತಾದುವುಗಳನ್ನೆಲ್ಲ ಇದರಲ್ಲಿ ಸೇರ್ಪಡೆ ಮಾಡಲಾಗಿದೆ. ಈ ಶಿಕ್ಷಣ ಚೌಕಟ್ಟು ಮಕ್ಕಳ ಪ್ರಾರಂಭಿಕ ಬೆಳೆವಣಿಗೆಯ ವಿಚಾರದಲ್ಲಿ ವಿಶೇಷವಾದ ಗಮನ ಹರಿಸಲು ತಂದೆತಾಯಿಗಳಿಗೆ ಮಾತ್ರವಲ್ಲದೆ ಶಿಕ್ಷಣ ಸಂಸ್ಥೆಗಳಿಗೂ ಮಾರ್ಗದರ್ಶನ ಒದಗಿಸುವ ಉದ್ದೇಶ ಹೊಂದಿದೆ.

1.4 ಇವೆಲ್ಲದರ ಒಟ್ಟಾರೆ ಉದ್ದೇಶ ದೇಶಾದ್ಯಂತ ಒಂದು ನಿರ್ದಿಷ್ಟ ಕಾಲಘಟ್ಟಗಳಲ್ಲಿ ಸಾಧ್ಯವಾಗುವಂತೆ ಉನ್ನತಮಟ್ಟದ ಸಾರ್ವತ್ರಿಕ ಸ್ವರೂಪದ ಇ.ಸಿ.ಸಿ.ಇ. ಬಗೆಯ ಸುರಕ್ಷೆ ಮತ್ತು ಶಿಕ್ಷಣವನ್ನು ನೀಡುವುದೇ ಆಗಿದೆ. ಇದರಲ್ಲಿ ಸಾಮಾಜಿಕವಾಗಿ-ಆರ್ಥಿಕವಾಗಿ ಅನನುಕೂಲಗಳ ಸುಳಿಯಲ್ಲಿ ಸಿಕ್ಕಿರುವ ಸ್ಥಳಗಳಿಗೆ ಮತ್ತು ಜಿಲ್ಲೆಗಳಿಗೆ ವಿಶೇಷ ಗಮನ ಮತ್ತು ಆದ್ಯತೆ ನೀಡಲಾಗುವುದು. ಪ್ರಾರಂಭಿಕ ಬಾಲ್ಯಾವಸ್ಥೆಯ ಕಾಲದಲ್ಲಿ ಶಿಕ್ಷಣ ನೀಡಲು ಸಜ್ಜುಗೊಂಡಿರುವ ವಿದ್ಯಾಸಂಸ್ಥೆಗಳ ಮೂಲಕ ಗಮನಾರ್ಹವಾಗಿ ಸಶಕ್ತವಾಗಿರುವ ಇ.ಸಿ.ಸಿ.ಇ. ಶಿಕ್ಷಣ ವ್ಯವಸ್ಥೆಯನ್ನು ಜಾರಿ ಮಾಡಲಾಗುವುದು. ಈ ಪೈಕಿ (ಎ) ಸ್ವತಂತ್ರವಾಗಿರುವ ಅಂಗನವಾಡಿಗಳು (ಬಿ) ಪ್ರಾಥಮಿಕ ಶಾಲೆಗಳ ಜೊತೆಯಲ್ಲಿರುವ ಅಂಗನವಾಡಿಗಳು (ಸಿ) ಹಾಲಿ ಪ್ರಾಥಮಿಕ ಶಾಲೆಗಳ ಜೊತೆ ಯಲ್ಲಿರುವ ಹಾಗೂ 5-6 ವರ್ಷಗಳ ವಯೋಮಾನದ ಮಕ್ಕಳಿಗೆ ಶಿಕ್ಷಣ ನೀಡಬಲ್ಲ ಪೂರ್ವ ಪ್ರಾಥಮಿಕ ಶಾಲೆಗಳು/ಸೆಕ್ಷನ್ ಗಳು (ಡಿ) ಸ್ವತಂತ್ರ ಪೂರ್ವ-ಶಾಲೆಗಳು ಇವು ಈ ಸಂಸ್ಥೆಗಳ ಸಾಲಿಗೆ ಸೇರುತ್ತವೆ. ಇ.ಸಿ.ಸಿ.ಇ.ಗೆ ಸಂಬಂಧಿಸಿದ ಪಠ್ಯಕ್ರಮ ಮತ್ತು ಬೋಧನೆಗಳಲ್ಲಿ ವಿಶೇಷವಾಗಿ ತರಬೇತಿ ಪಡೆದ ಉದ್ಯೋಗಿಗಳನ್ನು/ ಅಧ್ಯಾಪಕರನ್ನು ಇಂಥ ಎಲ್ಲ ಸಂಸ್ಥೆಗಳು ನೇಮಕ ಮಾಡಿಕೊಳ್ಳುವುವು.

1.5 ಇ.ಸಿ.ಸಿ.ಇ. ಅನ್ವಯ ಸಾರ್ವತ್ರಿಕ ಶಿಕ್ಷಣವನ್ನು ನೀಡುವ ಸಲುವಾಗಿ ಉನ್ನತ ದರ್ಜೆಯ ಮೂಲಭೂತ ಸೌಕರ್ಯಗಳನ್ನು ಮತ್ತು ಒಳ್ಳೆಯ ತರಬೇತಿ ಪಡೆದ ಅಂಗನವಾಡಿ ಕೆಲಸಗಾರರನ್ನು/ಅಧ್ಯಾಪಕರನ್ನು ನೇಮಕ ಮಾಡುವುದರ ಮೂಲಕ ಸಶಕ್ತಗೊಳಿಸುವುದು. ಪ್ರತಿಯೊಂದು ಅಂಗನವಾಡಿಯಲ್ಲೂ ಒಳ್ಳೆಯ ವಿನ್ಯಾಸವಿರುವ, ಉತ್ತಮವಾದ ಗಾಳಿ ಬೆಳಕುಗಳನ್ನು ಹೊಂದಿರುವ, ಮಕ್ಕಳಿಗೆ ಹಿತಕರವಾದ ಆವರಣವನ್ನು ಒದಗಿಸುವ ಉತ್ತಮ ನಿರ್ಮಾಣ ಹೊಂದಿರುವ ಕಟ್ಟಡವನ್ನು ಒದಗಿಸುವುದರ ಮೂಲಕ ಸಮೃದ್ಧವಾದ ಕಲಿಕೆ

ಪರಿಸರವನ್ನು ಸೃಷ್ಟಿಸಲಾಗುವುದು. ಅಂಗನವಾಡಿ ಕೇಂದ್ರದಲ್ಲಿರುವ ಮಕ್ಕಳು ತಮ್ಮ ಚಟುವಟಿಕೆಗಳ ಅಂಗವಾಗಿ ಸ್ಥಳೀಯ ಪ್ರಾಥಮಿಕ ಶಾಲೆಗಳಿಗೆ ಭೇಟಿ ನೀಡಿ ಅಲ್ಲಿರುವ ಅಧ್ಯಾಪಕರನ್ನು ಮತ್ತು ವಿದ್ಯಾರ್ಥಿಗಳನ್ನು ಕಂಡುಬರುವ ಮೂಲಕ ಅಂಗನವಾಡಿಯಿಂದ ಪ್ರಾಥಮಿಕ ಶಾಲೆಗಳಿಗೆ ತೆರಳುವ ಮನೋಭೂಮಿಕೆಯನ್ನು ರೂಪಿಸಿಕೊಳ್ಳುತ್ತಾರೆ. ಅಂಗನವಾಡಿ ಕೇಂದ್ರಗಳು ಪೂರ್ಣರೂಪದಲ್ಲಿ ಶಾಲಾ ಸಮುಚ್ಚಯಗಳ/ಸಂಕೀರ್ಣಗಳ ಅಂಗಭಾಗವಾಗಿ ರೂಪುಗೊಂಡಿರುತ್ತವೆ ಹಾಗೂ ಅಂಗನವಾಡಿ ಮಕ್ಕಳು, ತಂದೆತಾಯಿಗಳು ಹಾಗೂ ಅಧ್ಯಾಪಕರು ಶಾಲಾ/ ಶಾಲಾಸಂಕೀರ್ಣ ಕಾರ್ಯಕ್ರಮಗಳಲ್ಲಿ ಹಾಜರಿರುವುದೇ ಅಲ್ಲದೆ ಪಾತ್ರವಹಿಸಲು ಕೂಡ ಆಹ್ವಾನವಿರುತ್ತದೆ; ಅಂತೆಯೇ ಶಾಲಾ ಮಕ್ಕಳು, ತಂದೆತಾಯಿಗಳು ಮತ್ತು ಅಧ್ಯಾಪಕರು ಅಂಗನವಾಡಿ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವ ಅವಕಾಶಗಳೂ ಇರುತ್ತವೆ.

1.6 ಐದು ವರ್ಷ ತುಂಬುವುದಕ್ಕೆ ಮೊದಲು ಪ್ರತಿಯೊಂದು ಮಗುವೂ ಇ.ಸಿ.ಸಿ.ಇ. ಅರ್ಹತೆಯುಳ್ಳ ಅಧ್ಯಾಪಕರಿರುವ 'ಸಿದ್ಧತಾ ತರಗತಿ' (Preparatory Class) ಅಥವಾ 'ಬಾಲವಾಟಿಕಾ'ಗೆ (ಅಂದರೆ ಒಂದನೇ ತರಗತಿಗೆ ಹೋಗುವ ಮೊದಲು) ಹೋಗತಕ್ಕದ್ದೆಂದು ಭಾವಿಸಲಾಗಿದೆ. ಸಿದ್ಧತಾ ತರಗತಿಯಲ್ಲಿ ಕಲಿಯುವುದು ಸಾಮಾನ್ಯವಾಗಿ ಆಟಗಳನ್ನು ಆಧರಿಸಿದ ಕಲಿಕೆಯಾಗಿದ್ದು ಅದರಲ್ಲಿ ಮಗುವಿನ ಸಂಜ್ಞಾತ್ಮಕ, ಭಾವಾತ್ಮಕ ಹಾಗೂ ಮನೋಚಲನ ಸಾಮರ್ಥ್ಯ (Cognitive, Affective and Psychomotor abilities) ಹಾಗೂ ಪ್ರಾರಂಭಿಕ ಸಾಕ್ಷರತೆ ಮತ್ತು ಅಂಕಿಗಳ ಬಗೆಗಿನ ತಿಳಿವಳಿಕೆ ಇವುಗಳನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಕೇಂದ್ರೀಕೃತವಾಗಿರುತ್ತದೆ. ಪ್ರಾಥಮಿಕ ಶಾಲೆಗಳಲ್ಲಿ ಮಧ್ಯಾಹ್ನ ಊಟ ಒದಗಿಸುವ ಕಾರ್ಯಕ್ರಮವನ್ನು ಸಿದ್ಧತಾ ತರಗತಿಗಳಿಗೂ ವಿಸ್ತರಿಸತಕ್ಕದ್ದು. ಅಂಗನವಾಡಿ ವ್ಯವಸ್ಥೆಯಲ್ಲಿ ಲಭ್ಯವಿರುವ ಆರೋಗ್ಯ ತಪಾಸಣೆ ಮತ್ತು ಬೆಳೆವಣಿಗೆ ಬಗ್ಗೆ ಮೇಲ್ವಿಚಾರಣೆ ವಹಿಸುವ ಸೌಲಭ್ಯಗಳನ್ನು ಅಂಗನವಾಡಿಯ ಸಿದ್ಧತಾ ತರಗತಿಯ ಹಾಗೂ ಪ್ರಾಥಮಿಕ ಶಾಲೆಗಳ ವಿದ್ಯಾರ್ಥಿಗಳಿಗೂ ಒದಗಿಸತಕ್ಕದ್ದು.

1.7 ಅಂಗನವಾಡಿಗಳಲ್ಲಿ ಕೆಲಸ ಮಾಡಲು ಇ.ಸಿ.ಸಿ.ಇ. ಉನ್ನತ ಗುಣಮಟ್ಟದ ಅರ್ಹತೆಯುಳ್ಳ ಪ್ರಾರಂಭಿಕ ಶ್ರೇಣಿಯ ಅಧ್ಯಾಪಕರನ್ನು ಸಜ್ಜುಗೊಳಿಸುವ ಉದ್ದೇಶದಿಂದ, ಹಾಲಿ ಕೆಲಸ ಮಾಡುತ್ತಿರುವ ಅಂಗನವಾಡಿ ಕೆಲಸಗಾರರಿಗೆ/ಅಧ್ಯಾಪಕರಿಗೆ ಎನ್.ಸಿ.ಇ.ಆರ್.ಟಿ. ಮೂಲಕ ಸಿದ್ಧಪಡಿಸಲಾದ ಪಠ್ಯಕ್ರಮ/ಬೋಧನ ಕ್ರಮ ಹೊಂದಿರುವ ತರಬೇತಿ ಚೌಕಟ್ಟೊಂದನ್ನು ಬಳಕೆ ಮಾಡುವ ಮೂಲಕ ತರಬೇತಿ ನೀಡುವ ವ್ಯವಸ್ಥಿತ ಪ್ರಯತ್ನವನ್ನು ಮಾಡಲಾಗುವುದು. 10 + 2 ಅಥವಾ ಹೆಚ್ಚಿನ ವಿದ್ಯಾರ್ಹತೆಯನ್ನು ಹೊಂದಿರುವ ಅಂಗನವಾಡಿ ಕೆಲಸಗಾರರಿಗೆ/ ಅಧ್ಯಾಪಕರಿಗೆ ಇ.ಸಿ.ಸಿ.ಇ.ಯಲ್ಲಿ ಆರು ತಿಂಗಳ ಸರ್ಟಿಫಿಕೇಟ್ ಕಾರ್ಯಕ್ರಮದಲ್ಲಿ ಭಾಗಿಯಾಗಲು ಅವಕಾಶ ಒದಗಿಸತಕ್ಕದ್ದು; ಹಾಗೆಯೆ ಅದಕ್ಕಿಂತ ಕಡಿಮೆ ಶೈಕ್ಷಣಿಕ ಅರ್ಹತೆಯುಳ್ಳವರಿಗಾಗಿ ಒಂದು ವರ್ಷದ ಡಿಪ್ಲೊಮಾ ಕಾರ್ಯಕ್ರಮವನ್ನು ವ್ಯವಸ್ಥೆಮಾಡಿ ಇದರಲ್ಲಿ ಪ್ರಾರಂಭಿಕ ಸಾಕ್ಷರತೆ, ಅಂಕಿ ಸಂಖ್ಯೆಗಳ ಬಗ್ಗೆ ತಿಳಿವಳಿಕೆ ಹಾಗೂ ಇ.ಸಿ.ಸಿ.ಇ. ಕುರಿತ ಇತರ ಅಂಶಗಳ ವಿಚಾರವಾಗಿ ತರಬೇತಿ ನೀಡುವ ಏರ್ಪಾಟು ಮಾಡತಕ್ಕದ್ದು. ಈ ಕಾರ್ಯಕ್ರಮಗಳನ್ನು ಡಿ.ಟಿ.ಎಚ್. ಚಾನೆಲ್‌ಗಳನ್ನು ಮತ್ತು ಸ್ಮಾರ್ಟ್ ಫೋನ್ ಗಳನ್ನು ಬಳಕೆ ಮಾಡಿ ಡಿಜಿಟಲ್/ ದೂರಶಿಕ್ಷಣ ವಿಧಾನಗಳ ಮೂಲಕ ನಡೆಸತಕ್ಕದ್ದು. ಇದರಿಂದ ಅಧ್ಯಾಪಕರು ತಾವು ಹಾಲಿ ನಿರ್ವಹಿಸುತ್ತಿರುವ ಕೆಲಸ ಕಾರ್ಯಗಳಿಗೆ ಹೆಚ್ಚು ಧಕ್ಕೆ ಬಾರದಂತೆ ಇ.ಸಿ.ಸಿ.ಇ. ವಿದ್ಯಾರ್ಹತೆ ಗಳನ್ನು ಪಡೆದುಕೊಳ್ಳುವುದು ಸುಗಮವಾಗುತ್ತದೆ. ಅಂಗನವಾಡಿ ಕೆಲಸಗಾರರ/ಅಧ್ಯಾಪಕರ ತರಬೇತಿ ಕಾರ್ಯಕ್ರಮದ ಮೇಲ್ವಿಚಾರಣೆಯನ್ನು ಶಾಲಾಶಿಕ್ಷಣ ಇಲಾಖೆಯ ಕ್ಲಸ್ಟರ್ ರಿಸೋರ್ಸ್ ಸೆಂಟರ್‌ಗಳ ಮೂಲಕ ಮಾಡತಕ್ಕದ್ದಲ್ಲದೆ ಭಾಗಿಗಳ ನಿರಂತರ ಮೌಲ್ಯಾಂಕನಕ್ಕಾಗಿ ಕಡೆಯಪಕ್ಷ ತಿಂಗಳಿಗೆ ಒಂದರಂತೆ ಸಂಪರ್ಕ ಕಾರ್ಯಕ್ರಮವನ್ನು ಕೂಡ ಏರ್ಪಡಿಸತಕ್ಕದ್ದು. ಇನ್ನೂ ಮುಂದೆ ಹೋದಂತೆ ರಾಜ್ಯ ಸರ್ಕಾರಗಳು ವೃತ್ತಿಪರರಾಗಿ ಅರ್ಹತೆಗಳನ್ನು ಗಳಿಸಿಕೊಂಡಿರುವ ಶಿಕ್ಷಕರುಗಳಿಗಾಗಿ ಕೇಡರ್ ಅಥವಾ ಶ್ರೇಣಿಗಳನ್ನು ಸಿದ್ಧಪಡಿಸಿ ಪ್ರಾರಂಭಿಕ ಬಾಲ್ಯಾವಸ್ಥೆ ಸುರಕ್ಷೆ ಮತ್ತು ಶಿಕ್ಷಣ ಇವುಗಳನ್ನು ಹಂತ-ನಿರ್ದಿಷ್ಟವಾದ ವೃತ್ತಿಪರ ತರಬೇತಿ, ಮೇಲ್ವಿಚಾರಣ ತಂತ್ರೋಪಾಯಗಳು ಹಾಗೂ ಕೆರಿಯರ್ ಮ್ಯಾಪಿಂಗ್ ಮೂಲಕ ನೀಡತಕ್ಕದ್ದು. ಈ ಶಿಕ್ಷಕರ ಪ್ರಾರಂಭಿಕ ವೃತ್ತಿಪರ ಸಿದ್ಧತೆ ಮತ್ತು ಅವರ ನಿರಂತರ ವೃತ್ತಿಪರ ಬೆಳೆವಣಿಗೆಗಾಗಿ ಅಗತ್ಯವಾದ ಸೌಲಭ್ಯಗಳನ್ನು ಸೃಷ್ಟಿಸುವ ವ್ಯವಸ್ಥೆಯನ್ನು ಕೂಡ ಮಾಡತಕ್ಕದ್ದು.

1.8 ಬುಡಕಟ್ಟು ಜನರು ಹೆಚ್ಚಾಗಿ ನೆಲೆಸಿರುವ ಪ್ರದೇಶಗಳಲ್ಲಿರುವ ಆಶ್ರಮಶಾಲೆಗಳಲ್ಲಿ ಕೂಡ ಇ.ಸಿ.ಸಿ.ಇ. ಯನ್ನು ಅಳವಡಿಸಲಾಗುವುದು. ಅಂತೆಯೆ, ಎಲ್ಲ ಬಗೆಯ ಪರ್ಯಾಯ ಶಾಲಾ ವ್ಯವಸ್ಥೆಗಳಲ್ಲೂ ಹಂತ ಹಂತವಾಗಿ ಇ.ಸಿ.ಸಿ.ಇ. ಯನ್ನು ಜಾರಿಗೆ ತರಲಾಗುವುದು. ಆಶ್ರಮಶಾಲೆಗಳಲ್ಲಿ ಮತ್ತು ಪರ್ಯಾಯ ಶಾಲಾ ಪದ್ಧತಿಗಳಲ್ಲಿ ಈ ಮೇಲೆ ಹೇಳಿರುವಂತಹ ಕ್ರಮದಲ್ಲಿಯೇ ಸಮಗ್ರವಾಗಿ ಅನ್ವಯಿಸುವಂತೆ ಇ.ಸಿ.ಸಿ.ಇ. ಪ್ರಕ್ರಿಯೆಯನ್ನು ನಡೆಸಲಾಗುವುದು.

1.9 ಇ.ಸಿ.ಸಿ.ಇ. ಪಠ್ಯಕ್ರಮ ಮತ್ತು ಬೋಧನಕ್ರಮದ ಜವಾಬ್ದಾರಿ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯಕ್ಕೆ (MHRD) ಸೇರಿದ್ದು. ಅದು ಪೂರ್ವ-ಪ್ರಾಥಮಿಕ ಹಂತದಿಂದ ಮೊದಲುಗೊಂಡು ಪ್ರಾಥಮಿಕ ಶಾಲೆಯವರೆಗೆ ಇ.ಸಿ.ಸಿ.ಇ. ಯ ಜಾರಿಯ ಬಗ್ಗೆ ಖಾತರಿ ಪಡಿಸಿಕೊಳ್ಳುವುದೇ ಅಲ್ಲದೆ ಶಿಕ್ಷಣದ ಮೂಲಭೂತ ಅಂಶಗಳು ಜಾರಿಯಾಗುತ್ತಿರುವ ವಿಚಾರವಾಗಿ ಕೂಡ ಗಮನ ಹರಿಸುವುದು. ಪ್ರಾರಂಭಿಕ ಬಾಲ್ಯಾವಸ್ಥೆ ಮತ್ತು ಶಿಕ್ಷಣ ಪಠ್ಯಕ್ರಮದ ಯೋಜನೆ ಮತ್ತು ಕಾರ್ಯಾನ್ವಯ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ,

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ (WCD) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ (HFW) ಹಾಗೂ ಬುಡಕಟ್ಟುಗಳ ಯೋಗಕ್ಷೇಮ ಸಚಿವಾಲಯ ಇವುಗಳ ಜಂಟಿ ಕಾರ್ಯಾಚರಣೆಯಲ್ಲಿ ನಡೆಯುತ್ತವೆ. ಪ್ರಾರಂಭಿಕ ಬಾಲ್ಯಾವಸ್ಥೆ ಸುರಕ್ಷೆ ಮತ್ತು ಶಿಕ್ಷಣ ಹಂತದಿಂದ ಶಾಲಾ ಹಂತದವರೆಗಿನ ಶಿಕ್ಷಣ ವ್ಯವಸ್ಥೆ ಸುಗಮವಾಗಿ ಸಮನ್ವಯಗೊಂಡು ನಿರಂತರವಾಗಿ ಮಾರ್ಗದರ್ಶನ ಪಡೆದು ಸಾಗಲು ಅನುವಾಗುವ ದೃಷ್ಟಿಯಿಂದ ಒಂದು ವಿಶೇಷ ಜಂಟಿ ಕಾರ್ಯಾಚರಣೆ ತಂಡದ ರಚನೆಯನ್ನು ಕೂಡ ಮಾಡಲಾಗುವುದು.

2. ಮೂಲಭೂತ ಸಾಕ್ಷರತೆ ಮತ್ತು ಅಂಕಿ ಪರಿಜ್ಞಾನ: ಕಲಿಕೆಗಾಗಿ ತುರ್ತಾಗಿ ಮತ್ತು ಅಗತ್ಯವಾಗಿ ಪೂರ್ವಭಾವಿಯಾಗಿರಬೇಕಾದ ಸಂಗತಿಗಳು.

2.1 ಓದಲು ಮತ್ತು ಬರೆಯಲು, ಅಂಕಿಗಳ ಜೊತೆಯಲ್ಲಿ ಮೂಲಭೂತವಾದ ಲೆಕ್ಕಾಚಾರಗಳನ್ನು ಮಾಡಲು ಕಲಿಯುವುದು ಮುಂದಿನ ಶಾಲಾಜೀವನ ಮಾತ್ರವಲ್ಲ, ಬದುಕಿನುದ್ದಕ್ಕೂ ವ್ಯವಹರಿಸಲು ತುಂಬ ಆವಶ್ಯಕವಾದ ಸಂಗತಿಗಳೆನಿಸಿವೆ. ಆದರೂ ಹಲವಾರು ಸರ್ಕಾರದ ಸಂಸ್ಥೆಗಳ ಹಾಗೂ ಖಾಸಗಿ ಸಂಸ್ಥೆಗಳ ಮೂಲಕ ನಡೆಸಲಾಗಿರುವ ಸರ್ವೇಕ್ಷಣೆಗಳ ಪ್ರಕಾರ ನಾವು ಇಂದು ಇನ್ನೂ ಕಲಿಯುವ ಗಂಭೀರ ಸಮಸ್ಯೆಗೆ ಒಳಗಾಗಿದ್ದೇವೆ: ಹಾಲಿ ಪ್ರಾಥಮಿಕ ಶಾಲಾಹಂತದಲ್ಲಿ ಓದುತ್ತಿರುವ ವಿದ್ಯಾರ್ಥಿಗಳಲ್ಲಿ ಒಂದು ದೊಡ್ಡ ಪ್ರಮಾಣದಷ್ಟು ಮಕ್ಕಳು - ಇದು 5 ಕೋಟಿಗಿಂತಲೂ ಹೆಚ್ಚು ಎಂದು ಅಂದಾಜು ಮಾಡಲಾಗಿದೆ - ಮೂಲಭೂತ ಸಾಕ್ಷರತೆ ಮತ್ತು ಅಂಕಿಸಂಖ್ಯೆಗಳ ಪರಿಜ್ಞಾನವನ್ನು ಇನ್ನೂ ಹೊಂದಿಲ್ಲವೆಂದು ಹೇಳಲಾಗಿದೆ,ಅಂದರೆ ಈ ಮಕ್ಕಳಿಗೆ ಇನ್ನೂ ಓದಲು ಹಾಗೂ ಮೂಲಭೂತವಾದ ಪಠ್ಯಸಾಮಗ್ರಿಯನ್ನು ಅರ್ಥಮಾಡಿಕೊಳ್ಳಲು ಹಾಗೂ ಭಾರತೀಯ ಅಂಕಿಸಂಖ್ಯೆಗಳನ್ನು ಬಳಸಿ ಕೂಡುವುದು, ಕಳೆಯುವುದು ಇವುಗಳನ್ನು ಮಾಡಲು ಸಾಧ್ಯವಾಗುತ್ತಿಲ್ಲ.

2.2 ಹಾಗಾಗಿ ಮೂಲಭೂತವಾದ ಸಾಕ್ಷರತೆ ಮತ್ತು ಅಂಕಿಗಳ ಪರಿಜ್ಞಾನವನ್ನು ಮಕ್ಕಳು ಪಡೆದು ಕೊಳ್ಳಬೇಕಾದುದು ಒಂದು ರಾಷ್ಟ್ರೀಯ ಮಟ್ಟದ ಗುರಿಸಾಧನೆಯಾಗಿ ಕಂಡುಬರುತ್ತದೆ, ಇದಕ್ಕಾಗಿ ಹಲವಾರು ರಂಗಗಳಲ್ಲಿ ಸ್ಪಷ್ಟವಾದ ಗುರಿಯನ್ನು ಇಟ್ಟುಕೊಂಡು ಅಲ್ಪ ಕಾಲಾವಧಿಯಲ್ಲಿ ಇದನ್ನು ಸಾಧಿಸಲು ತುರ್ತಾದ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ (ಗ್ರೇಡ್ 3 ತಲುಪುವ ವೇಳೆಗೆ ಪ್ರತಿಯೊಬ್ಬ ವಿದ್ಯಾರ್ಥಿಯೂ ಮೂಲಭೂತ ಸಾಕ್ಷರತೆಯನ್ನು ಮತ್ತು ಅಂಕಿಗಳ ಜ್ಞಾನವನ್ನು ಪಡೆದುಕೊಂಡಿರಬೇಕೆಂಬುದು ಇಲ್ಲಿಯ ಆಶಯ). ಶಿಕ್ಷಣ ವ್ಯವಸ್ಥೆಯಲ್ಲಿ ಅತ್ಯಂತ ಹಿರಿದಾದ ಆದ್ಯತೆಯ ವಿಚಾರ ಏನೆಂದರೆ 2025 ವೇಳೆಗೆ ಪ್ರಾಥಮಿಕ ಶಾಲೆಗಳಲ್ಲಿ ಸಾರ್ವತ್ರಿಕವಾಗಿ ಮೂಲಭೂತ ಸಾಕ್ಷರತೆ ಹಾಗೂ ಅಂಕಿಗಳ ಪರಿಜ್ಞಾನವನ್ನು ಎಲ್ಲ ಮಕ್ಕಳೂ ಪಡೆದುಕೊಳ್ಳುವಂತೆ ಮಾಡುವುದಾಗಿದೆ. ಈ ಅತ್ಯಂತ ಮೂಲಭೂತವಾದ ಕಲಿಕೆಯ ಆವಶ್ಯಕತೆ (ಅಂದರೆ ಓದುವುದು, ಬರೆಯುವುದು ಮತ್ತು ಅಂಕಗಣಿತ ಪ್ರಾಥಮಿಕ ಹಂತದಲ್ಲಿ) ಮೊದಲಿಗೆ ಈಡೇರಿದರೆ ಮಾತ್ರ ಈ ನೀತಿಯ ಉಳಿದ ಅಂಶಗಳು ಸಂಗತವೆನಿಸಿಕೊಳ್ಳುತ್ತವೆ, ಆಗ ಇವು ಉಪಯುಕ್ತವಾಗಬಲ್ಲವು. ಈ ಗುರಿಯನ್ನು ಮುಟ್ಟುವ ಸಲುವಾಗಿ ಒಂದು ರಾಷ್ಟ್ರೀಯ ಮೂಲಭೂತ ಸಾಕ್ಷರತೆ ಮತ್ತು ಅಂಕ ಪರಿಜ್ಞಾನ ಮಿಷನ್ (National Mission on Foundational Literacy and Numeracy) ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದ ವತಿಯಿಂದ ಆದ್ಯತೆಯ ಮೇರೆಗೆ ಸ್ಥಾಪನೆಗೊಳ್ಳುವುದು. ಇದಕ್ಕೆ ಅನುಗುಣವಾಗಿ, ಎಲ್ಲ ರಾಜ್ಯ/ ಕೇಂದ್ರಾಡಳಿತ ಪ್ರದೇಶಗಳ ಸರ್ಕಾರಗಳು ಎಲ್ಲ ಪ್ರಾಥಮಿಕ ಶಾಲೆಗಳಲ್ಲಿ ಸಾರ್ವತ್ರಿಕ ಮೂಲಭೂತ ಸಾಕ್ಷರತೆ ಮತ್ತು ಅಂಕ ಪರಿಜ್ಞಾನವನ್ನು ಪಡೆದುಕೊಳ್ಳಲು ಸಾಧ್ಯವಾಗುವಂತೆ ಕೂಡಲೇ ಕಾರ್ಯಾನ್ವಯ ಯೋಜನೆಯೊಂದನ್ನು ಸಿದ್ಧಪಡಿಸತಕ್ಕದ್ದು. ಈ ನಿಟ್ಟಿನಲ್ಲಿ 2025ರ ವೇಳೆಗೆ ಸಾಧಿಸಬೇಕಾದ ಹಂತವಾರು ಉದ್ದೇಶಗಳನ್ನು ಮತ್ತು ಗುರಿಗಳನ್ನು ಗುರುತಿಸಿ, ಹತ್ತಿರದಿಂದ ಅವುಗಳನ್ನು ಗಮನಿಸುವ ಹಾಗೂ ಮೇಲ್ವಿಚಾರಣೆ ಮಾಡುವ ಕಾರ್ಯವನ್ನು ಮೇಲ್ಕಂಡಂತೆ ಸರ್ಕಾರಗಳು ಕೈಗೊಳ್ಳತಕ್ಕದ್ದು.

2.3 ಮೊಟ್ಟಮೊದಲಿಗೆ ಕಾಲಬದ್ಧವಾದ ರೀತಿಯಲ್ಲಿ ಅಧ್ಯಾಪಕರ ಹುದ್ದೆಗಳನ್ನು ಭರ್ತಿ ಮಾಡತಕ್ಕದ್ದು. ಹೀಗೆ ಮಾಡಬೇಕಾದರೆ ವಿಶೇಷವಾಗಿ ಅನನುಕೂಲಗಳಿಂದ ತೊಂದರೆಗೀಡಾಗಿರುವ ಪ್ರದೇಶಗಳು, ವಿದ್ಯಾರ್ಥಿ- ಅಧ್ಯಾಪಕ ವ್ಯತ್ಯಯದ ಪ್ರಮಾಣ ಹೆಚ್ಚಾಗಿರುವ ಪ್ರದೇಶಗಳು ಹಾಗೂ ಹೆಚ್ಚಿನ ಮಟ್ಟದ ಅನಕ್ಷರತೆ ಇರುವ ಸ್ಥಳಗಳ ಕಡೆಗೆ ತುರ್ತಾಗಿ ಗಮನ ಹರಿಸತಕ್ಕದ್ದು. ಸ್ಥಳೀಯ ಅಭ್ಯರ್ಥಿಗಳನ್ನು ಅಥವಾ ಸ್ಥಳೀಯ ಭಾಷೆಗಳ ಪರಿಚಯ ಇರುವಂತಹ ಅಭ್ಯರ್ಥಿಗಳನ್ನು ಅಧ್ಯಾಪಕರಾಗಿ ನೇಮಕ ಮಾಡಿಕೊಳ್ಳುವುದರ ಕಡೆಗೆ ವಿಶೇಷವಾಗಿ ಗಮನ ನೀಡತಕ್ಕದ್ದು. ಪ್ರತಿಯೊಂದು ಶಾಲಾಹಂತದಲ್ಲಿಯೂ ವಿದ್ಯಾರ್ಥಿ-ಅಧ್ಯಾಪಕ ಪ್ರಮಾಣ (PTR) 30:1 ಕ್ಕಿಂತ ಕಡಿಮೆ ಇರುವಂತೆ ಖಚಿತಪಡಿಸಿಕೊಳ್ಳತಕ್ಕದ್ದು. ಅಂತೆಯೆ ಸಾಮಾಜಿಕವಾಗಿ-ಆರ್ಥಿಕವಾಗಿ ಅನುಕೂಲ ವಿಲ್ಲದಿರುವ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿರುವ ಪ್ರದೇಶಗಳಲ್ಲಿ ಈ ಪಿ.ಟಿ.ಆರ್. ಪ್ರಮಾಣ 25:1 ಕ್ಕಿಂತ ಕಡಿಮೆ ಇರತಕ್ಕದ್ದು. ಮೂಲಭೂತ ಸಾಕ್ಷರತೆ ಮತ್ತು ಅಂಕಪರಿಜ್ಞಾನವನ್ನು ಪ್ರಚುರಪಡಿಸಲು ಅಧ್ಯಾಪಕರಿಗೆ ತರಬೇತಿ, ಉತ್ತೇಜನ ಮತ್ತು ಬೆಂಬಲ ನೀಡಲಾಗುತ್ತದೆ. ಮಾತ್ರವಲ್ಲದೆ ಅವರ ನಿರಂತರ ವೃತ್ತಿ ಬೆಳೆವಣಿಗೆಗೆ ಕೂಡ ಅವಕಾಶ ಒದಗಿಸಲಾಗುವುದು.

2.4 ಪಠ್ಯಕ್ರಮದ ವಿಚಾರವಾಗಿ ಹೇಳುವುದಾದರೆ ಮೂಲಭೂತ ಸಾಕ್ಷರತೆ ಮತ್ತು ಅಂಕಪರಿಜ್ಞಾನ ಇವುಗಳ ಕಡೆಗೆ ಹೆಚ್ಚು ಗಮನವನ್ನು ಕೇಂದ್ರೀಕರಿಸಲಾಗುವುದು. ಇವುಗಳ ಅಂಗವಾಗಿ ಓದುವುದು, ಬರೆಯುವುದು, ಮಾತನಾಡುವುದು, ಎಣಿಕೆ ಮಾಡುವುದು ಹಾಗೂ ಗಣಿತೀಯವಾಗಿ ಆಲೋಚನೆ ಮಾಡುವುದು - ಇವು ಸೇರಿಕೊಳ್ಳುತ್ತವೆ. ಸಿದ್ಧತಾ-ಶಾಲಾ ಹಾಗೂ ಮಾಧ್ಯಮಿಕ ಶಾಲಾ ಹಂತಗಳಲ್ಲಿ ಇದಕ್ಕೆ ನಿರಂತರವಾದ ಭದ್ರ ವ್ಯವಸ್ಥೆಯೊಂದನ್ನು ರೂಪಿಸಿ ರಚನಾತ್ಮಕ/ಅಳವಡಿಕೆ ಆಧಾರಿತ ಮೌಲ್ಯಾಂಕನವನ್ನು ಬಳಸಿ ಪ್ರತಿಯೊಬ್ಬ ವಿದ್ಯಾರ್ಥಿಯ ಕಲಿಕೆಯನ್ನು ಆಯಾ ವಿದ್ಯಾರ್ಥಿಗೇ ವಿಶಿಷ್ಟವನ್ನಾಗಿ ಮಾಡುವುದರ ಜೊತೆಗೆ, ಆ ವಿದ್ಯಾರ್ಥಿ ಗಮನಹರಿಸಿ ಕಲಿಯುವಂತೆ ನೋಡಿಕೊಳ್ಳಲಾಗುವುದು. ಇಂತಹ ವಿಶೇಷವಾದ ವಿಷಯಗಳನ್ನೊಳಗೊಂಡ ಚಟುವಟಿಕೆಗಳಿಗಾಗಿ ಪ್ರತಿದಿನವೂ ನಿರ್ದಿಷ್ಟ ಗಂಟೆಗಳನ್ನು ಗೊತ್ತುಪಡಿಸುವುದರ ಜೊತೆಗೆ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡಿ ಹುರಿದುಂಬಿಸುವ ಸಲುವಾಗಿ ಇಡೀ ವರ್ಷ ಆ ಸಂಬಂಧವಾಗಿ ನಿಯತವಾದ ವಿಶೇಷ ಚಟುವಟಿಕೆಗಳನ್ನು ಕೂಡ ಏರ್ಪಡಿಸಲಾಗುವುದು. ಮೂಲಭೂತ ಸಾಕ್ಷರತೆ ಮತ್ತು ಅಂಕಪರಿಜ್ಞಾನಗಳ ಮೇಲಿನ ಒತ್ತನ್ನು ನವೀಕರಿಸುವ ದೃಷ್ಟಿಯಿಂದ ಅಧ್ಯಾಪಕ ಶಿಕ್ಷಣ ಮತ್ತು ಮೊದಲ ಗ್ರೇಡ್ ಪಠ್ಯಕ್ರಮ ಇವುಗಳನ್ನು ಕೂಡ ಮರುವಿನ್ಯಾಸಗೊಳಿಸಲಾಗುವುದು.

2.5. ಸದ್ಯ ಇರುವ ಪರಿಸ್ಥಿತಿಯಲ್ಲಿ ಇ.ಸಿ.ಸಿ.ಇ.ಯ ಪ್ರಯೋಜನ ಸಾರ್ವತ್ರಿಕವಾಗಿ ಎಲ್ಲರಿಗೂ ಲಭ್ಯವಾಗಿಲ್ಲದ ಕಾರಣದಿಂದಾಗಿ ಗ್ರೇಡ್ 1ಕ್ಕೆ ಸೇರುವ ಮಕ್ಕಳಲ್ಲಿ ಬಹಳಷ್ಟು ಮಂದಿ ಮೊದಲ ಕೆಲವು ವಾರಗಳಲ್ಲೇ ಸ್ವಲ್ಪ ಹಿಂದೆ ಬೀಳುವರು. ಹಾಗಾಗಿ ಎಲ್ಲ ಮಕ್ಕಳನ್ನು ಕೂಡ 'ಶಾಲಾ ಸನ್ನದ್ಧ'ರಾಗಿ ಇರುವಂತೆ ಮಾಡುವ ಉದ್ದೇಶದಿಂದ 3 ತಿಂಗಳ ಆಟಗಳನ್ನು ಆಧರಿಸಿದ ಒಂದು 'ಶಾಲಾ ತಯಾರಿಕಾ ಮಾಡ್ಯೂಲನ್ನು' ಗ್ರೇಡ್ 1ಕ್ಕೆ ಸೇರಲಿರುವ ಮಕ್ಕಳೆಲ್ಲರ ಸಲುವಾಗಿ ಸಿದ್ಧಪಡಿಸಲಾಗುವುದು. ಈ ಮಾಡ್ಯೂಲಿನಲ್ಲಿ ವರ್ಣಮಾಲೆಯಲ್ಲಿರುವ ಅಕ್ಷರ ಕಲಿಕೆ, ಶಬ್ದಗಳು, ಪದಗಳು, ಬಣ್ಣಗಳು, ಆಕೃತಿಗಳು, ಅಂಕಿಗಳು ಇವೆಲ್ಲ ಸೇರಿರುವಂತೆ ಚಟುವಟಿಕೆಗಳನ್ನು ಮತ್ತು ವರ್ಕಬುಕ್‌ಗಳನ್ನು ಸಹಪಾಠಿಗಳ ಹಾಗೂ ತಂದೆತಾಯಿಗಳ ಸಹಕಾರ ಪಡೆದು ಎನ್.ಸಿ.ಇ.ಆರ್.ಟಿ. ಮತ್ತು ಎಸ್.ಸಿ.ಇ.ಆರ್.ಟಿ.ಗಳು ಸಿದ್ಧಪಡಿಸುವುವು.

2.6 'ಜ್ಞಾನ ವಿನಿಮಯಕ್ಕಾಗಿ ಡಿಜಿಟಲ್ ಮೂಲಸೌಕರ್ಯ' (Digital Infrastructure for Knowledge Sharing - DIKSHA) ಎಂಬುದರ ಮೇಲೆ ಮೂಲಭೂತ ಸಾಕ್ಷರತೆ ಮತ್ತು ಅಂಕ ಪರಿಜ್ಞಾನಕ್ಕೆ ಸಂಬಂಧಿಸಿದಂತೆ ಒಂದು ರಾಷ್ಟ್ರೀಯ ಮಟ್ಟದ ಸಂಪನ್ಮೂಲ ಭಂಡಾರವನ್ನು ಸಿದ್ಧಪಡಿಸಲಾಗುವುದು. ವಿದ್ಯಾರ್ಥಿಗಳ ಮತ್ತು ಅಧ್ಯಾಪಕರ ನಡುವೆ ಒಂದು ವೇಳೆ ಯಾವುದೇ ರೀತಿಯ ಭಾಷೆಗೆ ಸಂಬಂಧಪಟ್ಟ ಭಿನ್ನತೆಗಳಿದ್ದರೆ ಅದನ್ನು ಸರಿಪಡಿಸುವ ದೃಷ್ಟಿಯಿಂದ ಅಧ್ಯಾಪಕರ ಅನುಕೂಲಕ್ಕಾಗಿ ತಂತ್ರಜ್ಞಾನಾಧಾರಿತ ಸಲಕರಣೆಗಳನ್ನು ಒದಗಿಸಿಕೊಡಲಾಗುವುದು. ಇಂಥ ಸಮಸ್ಯೆಗಳ ನಿವಾರಣೆಯ ಕಡೆಗೆ ಗಮನ ಹರಿಸಿ ಉದ್ದೇಶವನ್ನು ಕಾರ್ಯಗತಗೊಳಿಸಲಾಗುವುದು.

2.7 ಸದ್ಯದ ಪರಿಸ್ಥಿತಿಯಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಮಕ್ಕಳು ಕಲಿಯಲು ಸಾಧ್ಯವಾಗದಿರುವುದರಿಂದ ಈ ಉದ್ದೇಶ ಸಾಧನೆಯ ಅಡಿಯಲ್ಲಿ ಬರುವ ಅಧ್ಯಾಪಕರು ಮೂಲಭೂತ ಸಾಕ್ಷರತೆ ಮತ್ತು ಅಂಕ ಪರಿಜ್ಞಾನ ಪಡೆದುಕೊಳ್ಳುವ ನಿಟ್ಟಿನಲ್ಲಿ ಎಲ್ಲ ಸಾಧ್ಯವಾಗುವ ವಿಧಾನಗಳನ್ನು ಕಂಡುಕೊಳ್ಳುವ ಪ್ರಯತ್ನ ನಡೆಸ ಲಾಗುವುದು. ಪ್ರಪಂಚಾದ್ಯಂತ ನಡೆದಿರುವ ಅಧ್ಯಯನಗಳ ಪ್ರಕಾರ ಕಂಡುಬರುವಂತೆ ವಿದ್ಯಾರ್ಥಿಗಳು ಮತ್ತು ಸಹಪಾಠಿಗಳೊಡನೆ ಸೇರಿ ಒಬ್ಬರು ಇನ್ನೊಬ್ಬರಿಗೆ ಕಲಿಸುವ ಮತ್ತು ಇನ್ನೊಬ್ಬರಿಂದ ಕಲಿಯುವ ಪ್ರಯತ್ನ ಮಾಡಿದರೆ, ಅದು ಕಲಿಯುವವರಿಗೆ ಮಾತ್ರವಲ್ಲ, ಕಲಿಸುವವರಿಗೂ ತುಂಬ ಅನುಕೂಲಕರವಾಗಿರುತ್ತದೆಂದೂ, ಪರಿಣಾಮಕಾರಿಯಾಗಿರುತ್ತದೆಂದೂ ಕಂಡುಬಂದಿದೆ. ಹಾಗಾಗಿ, ಸಹಪಾಠಿಗಳ ಜೊತೆ ಸೇರಿ ಕಲಿಯುವುದನ್ನು ಒಂದು ಸ್ವ-ಇಚ್ಛೆಯ ಹಾಗೂ ಸಂತೋಷಕರವಾದ ಕಲಿಕೆ ಎಂದು ಭಾವಿಸಿ ಇದನ್ನು ತರಬೇತಿ ಪಡೆದ ಅಧ್ಯಾಪಕರ ಮೇಲ್ವಿಚಾರಣೆಯಲ್ಲಿ ಸುರಕ್ಷತಾ ಕ್ರಮಗಳ ಕಡೆಗೆ ಅಗತ್ಯವಾದ ಗಮನಕೊಟ್ಟು ಕೈಗೊಳ್ಳತಕ್ಕದ್ದು. ಇದರೊಟ್ಟಿಗೆ ಹೇಳಬಹುದಾದ ಇನ್ನೊಂದು ಮಾತೆಂದರೆ ತರಬೇತಿ ಪಡೆದ ಸ್ವಯಂಸೇವಿ ಜನರು - ಅವರು ಸ್ಥಳೀಯ ಸಮುದಾಯಗಳವರೇ ಆಗಲಿ, ಹೊರಗಿನವರೇ ಆಗಲಿ - ಈ ಬೃಹತ್ ಗಾತ್ರದ ಮಿಷನ್ನಿನಲ್ಲಿ ಇನ್ನೂ ಹೆಚ್ಚು ಸುಲಭವಾಗಿ ಪಾಲುಗೊಳ್ಳಬಹುದು. ಸಮುದಾಯದ ಪ್ರತಿಯೊಬ್ಬ ಸಾಕ್ಷರ ವ್ಯಕ್ತಿಯೂ ಒಬ್ಬ ವಿದ್ಯಾರ್ಥಿಗೆ/ಇನ್ನೊಬ್ಬ ವ್ಯಕ್ತಿಗೆ ಓದುವುದು ಹೇಗೆ ಎಂಬುದನ್ನು ಕಲಿಸಿಕೊಡಲು ಬದ್ಧನಾದರೆ ಇಡೀ ದೇಶದ ನಕಾಶೆಯೆ ತ್ವರಿತವಾಗಿ ಬದಲಾಗುವುದು. ರಾಜ್ಯಗಳು ಈ ಬಗೆಯ ಸಹಪಾಠಿ ಕಲಿಕೆ ಹಾಗೂ ಸ್ವಯಂಸೇವಿ ಮಂದಿಯ ಸಹಭಾಗಿತ್ವಕ್ಕಾಗಿ ನವನವೀನವಾದ ಮಾದರಿಗಳನ್ನು ಜಾರಿಗೆ ತರುವುದರ ಜೊತೆಗೆ ಕಲಿಯುವವರಿಗೆಲ್ಲ ಬೆಂಬಲ ನೀಡಲು ಇತರ ಕಾರ್ಯಕ್ರಮಗಳನ್ನು ಕೂಡ ಅನುಷ್ಠಾನಕ್ಕೆ ತಂದರೆ ಮೂಲಭೂತ ಸಾಕ್ಷರತೆ ಮತ್ತು ಅಂಕಪರಿಜ್ಞಾನಗಳನ್ನು ಸಾಕಾರಗೊಳಿಸಲು ಉದ್ದೇಶಿಸಿರುವ ಈ ರಾಷ್ಟ್ರವ್ಯಾಪಿ ಮಿಷನ್ನಿನ ಯಶಸ್ಸಿಗೆ ಮಹತ್ವಪೂರ್ಣವೆನಿಸುತ್ತದೆ.

2.8 ಎಲ್ಲ ಹಂತಗಳ ವಿದ್ಯಾರ್ಥಿಗಳಿಗಾಗಿ ಮನಸ್ಸಿಗೆ ಮುದನೀಡುವ ಮತ್ತು ಪ್ರೇರಣದಾಯಕವಾದ ಪುಸ್ತಕ ಗಳನ್ನು ಸಿದ್ಧಪಡಿಸಲಾಗುವುದು. ಇವುಗಳಲ್ಲಿ ಉನ್ನತ ಗುಣಮಟ್ಟದ ಎಲ್ಲ ಸ್ಥಳೀಯ ಹಾಗೂ ಭಾರತೀಯ ಭಾಷೆಗಳ ಅನುವಾದಗಳು (ಅಗತ್ಯಕ್ಕೆ ತಕ್ಕಂತೆ ತಂತ್ರಜ್ಞಾನವನ್ನು ಕೂಡ ಬಳಕೆ ಮಾಡಿ ಹೊರತಂದಿರುವ) ಕೂಡ ಸೇರಿದ್ದು ಇವು ವ್ಯಾಪಕವಾಗಿ ಶಾಲೆಗಳಲ್ಲಿ ಮಾತ್ರವಲ್ಲದೆ ಸ್ಥಳೀಯ ಸಾರ್ವಜನಿಕ ಗ್ರಂಥಾಲಯಗಳಲ್ಲೂ ದೊರಕುವಂತೆ ವ್ಯವಸ್ಥೆ ಮಾಡಲಾಗುತ್ತದೆ. ಓದುವ ಸಂಸ್ಕೃತಿಯನ್ನು ವ್ಯಾಪಕವಾಗಿ ಬೆಳೆಸುವ ಸಲುವಾಗಿ

ದೇಶಾದ್ಯಂತ ಸಾರ್ವಜನಿಕ ಗ್ರಂಥಾಲಯಗಳನ್ನು ಮತ್ತು ಶಾಲಾ ಗ್ರಂಥಾಲಯಗಳನ್ನು ಗಮನಾರ್ಹವಾಗಿ ವಿಸ್ತರಿಸಲಾಗುವುದು. ಡಿಜಿಟಲ್ ಗ್ರಂಥಾಲಯಗಳನ್ನೂ ಸ್ಥಾಪನೆ ಮಾಡಲಾಗುವುದು. ಶಾಲಾ ಗ್ರಂಥಾಲಯಗಳನ್ನು - ವಿಶೇಷವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ - ಸ್ಥಾಪನೆ ಮಾಡಿ ಶಾಲಾ ವೇಳೆಯನ್ನು ಹೊರತಾಗಿಸಿ ಉಳಿದ ಸಮಯದಲ್ಲಿ ಸಮುದಾಯದ ಜನರು ಕೂಡ ಬಳಸಿಕೊಳ್ಳಲು ಅವಕಾಶ ಮಾಡಿಕೊಡುವುದಲ್ಲದೆ ಪುಸ್ತಕ ಕ್ಲಬ್ಬುಗಳು, ಸಾರ್ವಜನಿಕ/ಶಾಲಾ ಗ್ರಂಥಾಲಯಗಳಲ್ಲಿ ಸಭೆಸೇರಿ ವ್ಯಾಪಕವಾದ ಓದಿನ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಉತ್ತೇಜನ ನೀಡಲಾಗುವುದು. ಹಾಗೆಯೆ, ಒಂದು ರಾಷ್ಟ್ರೀಯ ಪುಸ್ತಕ ಪ್ರವರ್ಧನ ನೀತಿಯನ್ನು (National Book Promotion Policy) ರೂಪಿಸಲಾಗುವುದು ಹಾಗೂ ಅದರನ್ವಯ ಎಲ್ಲ ಪ್ರದೇಶಗಳ, ಎಲ್ಲ ಭಾಷೆಗಳ, ಎಲ್ಲ ಮಟ್ಟಗಳ, ಎಲ್ಲ ಪ್ರಕಾರಗಳ, ಉತ್ತಮ ಗುಣಮಟ್ಟದ ಹಾಗೂ ಓದುಗರಿಗೆ ಉಪಯುಕ್ತವಾಗುವ ಪುಸ್ತಕಗಳು ಸುಲಭಗ್ರಾಹ್ಯವಾಗುವಂತೆ ಮಾಡಲಾಗುವುದು.

2.9 ಮಕ್ಕಳಿಗೆ ಸರಿಯಾದ ಪೋಷಣೆ ದೊರೆಯದೆ ಇದ್ದರೆ ಅಥವಾ ಅವರು ಅನಾರೋಗ್ಯದಿಂದ ಕೂಡಿದ್ದರೆ ನಿರೀಕ್ಷಿತ ಮಟ್ಟದಲ್ಲಿ ಕಲಿಯಲು ಸಾಧ್ಯವಾಗುವುದಿಲ್ಲ. ಹಾಗಾಗಿ ಮಕ್ಕಳ ಪೋಷಣೆ ಮತ್ತು ಆರೋಗ್ಯ (ಮಾನಸಿಕ ಆರೋಗ್ಯ ಸೇರಿದಂತೆ) ಇವುಗಳ ಕಡೆಗೆ ಗಮನ ಹರಿಸಲಾಗುವುದು. ಈ ನಿಟ್ಟಿನಲ್ಲಿ ಮಕ್ಕಳಿಗೆ ಆರೋಗ್ಯಕರವಾದ ಆಹಾರವನ್ನು ಒದಗಿಸುವುದರ ಜೊತೆಗೆ ಉತ್ತಮವಾಗಿ ತರಬೇತಿ ಹೊಂದಿದ ಕೆಲಸಗಾರರು, ಸಲಹೆಗಾರರು ಹಾಗೂ ಇಡೀ ಸಮುದಾಯವೇ ಈ ಕಾರ್ಯದಲ್ಲಿ ಪಾಲುಗೊಳ್ಳುವಂತೆ ಮಾಡಲಾಗುವುದು. ಇಷ್ಟೇ ಅಲ್ಲದೆ, ಹೆಚ್ಚು ಸಂಜ್ಞಾನಾತ್ಮಕವಾಗಿ ಗಮನಹರಿಸಿ ಕಲಿಯಬೇಕಾದ ವಿಷಯಗಳನ್ನು ಬೆಳಗಿನ ಹೊತ್ತು ಪೋಷಕಾಂಶಸಹಿತವಾದ ಉಪಾಹಾರದ ಅನಂತರ ಕೈಗೆತ್ತಿಕೊಳ್ಳುವುದು ಸೂಕ್ತವೆಂದು ಸಂಶೋಧನೆಯಿಂದ ಶ್ರುತಪಡುವುದರಿಂದ, ಈ ಬಗೆಯ ವಿಷಯಗಳನ್ನು ಓದುವ ಮಕ್ಕಳಿಗೆ ಮಧ್ಯಾಹ್ನದ ಊಟವೇ ಅಲ್ಲದೆ ಪುಷ್ಟಿದಾಯಕವಾದ ಉಪಾಹಾರವನ್ನು ಕೂಡ ಒದಗಿಸುವುದರ ಮೂಲಕ ಮಕ್ಕಳ ಓದನ್ನು ಹೆಚ್ಚು ಫಲಪ್ರದವಾಗಿ ಮಾಡಬಹುದಾಗಿದೆ. ಬಿಸಿಯೂಟವನ್ನು ಒದಗಿಸಲು ಸಾಧ್ಯವಾಗದ ಪ್ರದೇಶಗಳಲ್ಲಿ, ಸರಳವಾದ ಆದರೆ ಪುಷ್ಟಿಕರವಾದ ಆಹಾರವನ್ನು ಉದಾ. ಕಡಲೆಕಾಯಿ/ಬೆಲ್ಲ ಸೇರಿಸಿದ ಕಡಲೆ ಹಾಗೂ/ಅಥವಾ ಸ್ಥಳೀಯವಾಗಿ ದೊರಕುವ ಹಣ್ಣುಗಳು ಇವುಗಳನ್ನು ನೀಡಬಹುದು. ಎಲ್ಲ ಮಕ್ಕಳೂ ನಿಯಮಿತವಾದ ಆರೋಗ್ಯ ತಪಾಸಣೆಗೆ ಒಳಪಡತಕ್ಕದ್ದು, ಅದರಲ್ಲೂ ವಿಶೇಷವಾಗಿ ಶಾಲೆಗಳಲ್ಲಿ ಶೇಕಡ 100ರಷ್ಟು ಸೋಂಕು ಪ್ರತಿರಕ್ಷಣೆ ಒದಗಿಸಿ ಇವನ್ನೆಲ್ಲಾ ಮೇಲ್ವಿಚಾರಣೆ ಮಾಡುವ ಸಲುವಾಗಿ ಆರೋಗ್ಯ ಕಾರ್ಡುಗಳನ್ನು ನೀಡಲಾಗುವುದು.

3. ಶಾಲೆ ಬಿಟ್ಟು ಹೋಗುವವರ (Dropouts) ಸಂಖ್ಯೆ ಕಡಿಮೆ ಮಾಡುವುದು ಹಾಗೂ ಎಲ್ಲ ಹಂತಗಳಲ್ಲಿ ಸಾರ್ವತ್ರಿಕ ಶಿಕ್ಷಣ ದೊರೆಯುವಂತೆ ಖಾತರಿಪಡಿಸಿಕೊಳ್ಳುವುದು

3.1 ಮಕ್ಕಳು ಶಾಲೆಗೆ ದಾಖಲಾಗುವುದು ಹಾಗೂ ಹಾಜರಾಗುವುದು ಶಾಲಾ ವ್ಯವಸ್ಥೆಯ ಮೊಟ್ಟಮೊದಲ ಆವಶ್ಯಕತೆಗಳಲ್ಲಿ ಒಂದು. ಸರ್ವ ಶಿಕ್ಷಣ ಅಭಿಯಾನ (ಈಗ ಸಮಗ್ರ ಶಿಕ್ಷಾ) ಹಾಗೂ ಶಿಕ್ಷಣಕ್ಕಾಗಿ ಹಕ್ಕು ಕಾಯ್ದೆ (Right to Education Act, India) ಇಂಥ ಉಪಕ್ರಮಗಳು ಈಚಿನ ವರ್ಷಗಳಲ್ಲಿ ಮಹತ್ವಪೂರ್ಣವಾದ ಹೆಜ್ಜೆಗಳನ್ನು ಇಟ್ಟಿವೆ. ಇವುಗಳಿಂದಾಗಿ ಸರಿಸುಮಾರು ಎಲ್ಲ ಮಕ್ಕಳು ಸಾರ್ವತ್ರಿಕ ಶಿಕ್ಷಣ ವ್ಯವಸ್ಥೆಯಲ್ಲಿ ದಾಖಲಾಗಿದ್ದಾರೆ ಎಂದು ಹೇಳಬಹುದಾಗಿದೆ. ಆದರೆ ಅನಂತರದ ಗ್ರೇಡುಗಳ ಅಂದರೆ ತರಗತಿಗಳ ವಿಚಾರವಾಗಿ ದೊರೆಯುತ್ತಿರುವ ದತ್ತಾಂಶಗಳು ಶಾಲಾ ವ್ಯವಸ್ಥೆಯಲ್ಲಿ ಮಕ್ಕಳನ್ನು ಉಳಿಸಿಕೊಳ್ಳುವ ಬಗೆಗೆ ಗಂಭೀರವಾದ ಕೆಲವು ಸಮಸ್ಯೆಗಳನ್ನು ಮುಂದೊಡ್ಡುತ್ತಿವೆ. ಗ್ರೇಡು 6-8ರವರೆಗೆ ಜಿ.ಇ.ಆರ್.(GER) ಶೇ.90.9 ಇದ್ದು, ಅದೇ 9-10 ಹಾಗೂ 11-12 ಗ್ರೇಡುಗಳಿಗೆ ಸಂಬಂಧಪಟ್ಟಂತೆ ಅನುಕ್ರಮವಾಗಿ ಕೇವಲ ಶೇ.79 ಹಾಗೂ ಶೇ.56.5ರಷ್ಟಾಗಿದೆ. ಇದು ಶಾಲೆಗೆ ದಾಖಲಾದ ವಿದ್ಯಾರ್ಥಿಗಳಲ್ಲಿ ಗ್ರೇಡ್ 5ರ ಅನಂತರ, ಅದರಲ್ಲೂ ಗ್ರೇಡ್ 8ರ ತರುವಾಯ ಗಮನಾರ್ಹ ಅನುಪಾತದಲ್ಲಿ ಶಾಲೆಯನ್ನು ಬಿಟ್ಟು ಹೋಗುತ್ತಿದ್ದಾರೆ ಎಂಬುದು ಕಳವಳಕಾರಿ ಸಂಗತಿಯಾಗಿದೆ. ಎನ್.ಎಸ್.ಎಸ್.ಓ. ಮೂಲಕ 2017-18ರಲ್ಲಿ ನಡೆದ 75ನೆಯ ಮನೆಮನೆ ಸರ್ವೇಕ್ಷಣೆಯಲ್ಲಿ ಹೊರಬಿದ್ದ ವಾಸ್ತವಾಂಶವೆಂದರೆ 6 ರಿಂದ 17ವರ್ಷಗಳ ವಯೋಮಾನಕ್ಕೆ ಸೇರಿದ್ದು ಶಾಲೆಗಳಿಂದ ಹೊರಗುಳಿದಿರುವ ಶಾಲಾ ಮಕ್ಕಳ ಸಂಖ್ಯೆ 3.22 ಕೋಟಿಯಷ್ಟಿದೆ. ಸಾಧ್ಯವಾದಷ್ಟು ಬೇಗ ಈ ಮಕ್ಕಳನ್ನು ಶಿಕ್ಷಣವ್ಯಾಪ್ತಿಗೆ ತರುವಂತೆ ಮಾಡುವುದು ಮೊದಲ ಆದ್ಯತೆಯ ಕೆಲಸವಾಗಿದೆ. ಹಾಗೆಯೆ 2030ರ ವೇಳೆಗೆ ಪೂರ್ವಶಾಲಾ ಹಂತದಿಂದ ಸೆಕಂಡರಿ ಹಂತದವರೆಗೆ ಶೇ.100ರಷ್ಟು ಜಿ.ಇ.ಆರ್. (Gross Enrolment Ratio) ಸಾಧ್ಯವಾಗುವಂತೆ ಸಾಧ್ಯವಾದಷ್ಟೂ ಮಕ್ಕಳು ಶಾಲೆ ಬಿಡುವುದನ್ನು ತಡೆದು ಅವರನ್ನು ಶಾಲೆಗೆ ಹಿಂದಿರುಗಿ ಕರೆದುಕೊಂಡು ಬರುವುದಕ್ಕೆ ಅತ್ಯಂತ ಹೆಚ್ಚಿನ ಆದ್ಯತೆ ನೀಡಬೇಕಾಗಿದೆ. ಹಾಗಾಗಿ ಪೂರ್ವಶಾಲಾ ಹಂತದಿಂದ ಗ್ರೇಡ್ 12ರ ಹಂತದವರೆಗೆ - ವೃತ್ತಿಪರ ಶಿಕ್ಷಣ ಸಹ ಸೇರಿದಂತೆ - ಉತ್ತಮ ಗುಣಮಟ್ಟದ ಸರ್ವವ್ಯಾಪಿ ಶಿಕ್ಷಣ ಸಾರ್ವತ್ರಿಕವಾಗಿ ಎಲ್ಲ ಮಕ್ಕಳಿಗೂ ಲಭ್ಯವಾಗುವಂತೆ ಈ ಅವಕಾಶವನ್ನು ಒದಗಿಸುವ ವ್ಯವಸ್ಥಿತ ರಾಷ್ಟ್ರೀಯ ಮಟ್ಟದ ಪ್ರಯತ್ನವೊಂದನ್ನು ಮಾಡಲಾಗುವುದು.

3.2 ಶಾಲೆಯನ್ನು ಬಿಟ್ಟು ಹೊರಗುಳಿದಿರುವ ಮಕ್ಕಳನ್ನು ಮತ್ತೆ ಶಾಲೆಗೆ ಕರೆತರುವ ಹಾಗೂ ಮುಂದೆ ಮಕ್ಕಳು ಶಾಲೆ ಬಿಡುವುದನ್ನು ತಪ್ಪಿಸುವ ಉದ್ದೇಶವನ್ನು ಸಾಧಿಸಲು ಒಟ್ಟಾರೆಯಾಗಿ ಎರಡು ಬಗೆಯ ಉಪಕ್ರಮಗಳು ಕಂಡುಬರುತ್ತವೆ. ಈ ನಿಟ್ಟಿನಲ್ಲಿ ಮೊದಲ

ಉಪಕ್ರಮವೆಂದರೆ ಎಲ್ಲ ಮಕ್ಕಳು ಪೂರ್ವಪ್ರಾಥಮಿಕ ಹಂತದಿಂದ ಗ್ರೇಡ್ 12ರವರೆಗೆ ಎಲ್ಲ ಹಂತಗಳಲ್ಲೂ ಸುರಕ್ಷಿತವಾಗಿ ಹಾಗೂ ಓದಿನಲ್ಲಿ ತೊಡಗಿಸಿಕೊಂಡಿರಲು ಸಾಧ್ಯವಾಗುವಂತೆ ಸಾಕಷ್ಟು ಪರ್ಯಾಪ್ತವಾದ ಮತ್ತು ಪರಿಣಾಮಕಾರಿಯಾದ ಮೂಲಸೌಕರ್ಯಗಳನ್ನು ಒದಗಿಸುವುದಾಗಿದೆ. ಪ್ರತಿಯೊಂದು ಹಂತದಲ್ಲೂ ನಿಯತವಾದ ತರಬೇತಿ ಪಡೆದ ಅಧ್ಯಾಪಕರನ್ನು ಶಾಲೆಗಳಿಗೆ ಒದಗಿಸುವುದರ ಜೊತೆಗೆ ಯಾವುದೇ ಶಾಲೆಯೂ ಮೂಲ ಸೌಕರ್ಯಗಳಿಲ್ಲದೆ ಬಳಲದಂತೆ ವಿಶೇಷ ಎಚ್ಚರಿಕೆಯನ್ನು ವಹಿಸಲಾಗುವುದು. ಸರ್ಕಾರಿ ಶಾಲೆಗಳ ವಿಶ್ವಾಸಾರ್ಹತೆಯನ್ನು ಮರುಸ್ಥಾಪನೆ ಮಾಡಲಾಗುವುದು ಹಾಗೂ ಈ ನಿಟ್ಟಿನಲ್ಲಿ ಈಗಾಗಲೆ ಅಸ್ತಿತ್ವದಲ್ಲಿರುವ ಶಾಲೆಗಳನ್ನು ಉನ್ನತೀಕರಿಸುವುದು ಮತ್ತು ವಿಸ್ತರಣೆ ಮಾಡುವುದು, ಶಾಲೆಗಳು ಇಲ್ಲದಿರುವ ಸ್ಥಳಗಳಲ್ಲಿ ಹೆಚ್ಚು ಸಂಖ್ಯೆಯಲ್ಲಿ ಒಳ್ಳೆಯ ಗುಣಮಟ್ಟದ ಶಾಲೆಗಳನ್ನು ಸ್ಥಾಪಿಸುವುದು, ಹಾಗೆಯೆ ಸುರಕ್ಷಿತವಾದ ಮತ್ತು ಅನುಕೂಲಕರವಾದ ವಾಹನ ಸೌಕರ್ಯವನ್ನು ಒದಗಿಸುವುದು ಹಾಗೂ/ಅಥವಾ ವಿದ್ಯಾರ್ಥಿನಿಲಯಗಳನ್ನು, ಅದರಲ್ಲೂ ವಿಶೇಷವಾಗಿ ಹೆಣ್ಣು ಮಕ್ಕಳಿಗಾಗಿ ನಿರ್ಮಿಸುವುದು ಈ ಕೆಲಸಗಳನ್ನು ಕೈಗೆತ್ತಿಕೊಳ್ಳಲಾಗುತ್ತದೆ. ಈ ಮೂಲಕ ಎಲ್ಲ ಮಕ್ಕಳು ಒಳ್ಳೆಯ ಗುಣಮಟ್ಟದ ಶಾಲೆಗಳನ್ನು ಸೇರುವ ಮತ್ತು ಸೂಕ್ತವಾದ ತರಗತಿಗಳಲ್ಲಿ ಓದುಬರೆಹ ಕೈಗೊಳ್ಳುವ ಸದವಕಾಶಗಳನ್ನು ಒದಗಿಸಲಾಗುವುದು. ವಲಸೆ ಕಾರ್ಮಿಕರ ಮತ್ತು ಇತರರ ಮಕ್ಕಳು ಬೇರೆಬೇರೆ ಕಾರಣಗಳಿಂದಾಗಿ ಶಾಲೆಗಳನ್ನು ಬಿಡುತ್ತಿದ್ದು ಇವರನ್ನೆಲ್ಲ ಶಿಕ್ಷಣ ವ್ಯವಸ್ಥೆಯನ್ನು ಮುಖ್ಯವಾಹಿನಿಗೆ ತರುವ ಉದ್ದೇಶದಿಂದ ನಾಗರಿಕ ಸಮಾಜದ ಸಹಯೋಗದಿಂದ ಪರ್ಯಾಯ ಹಾಗೂ ನವಚೆಂತನೆಯ ಶಿಕ್ಷಣ ಕೇಂದ್ರಗಳನ್ನು ಅಗತ್ಯವಾದೆಡೆಗಳಲ್ಲಿ ಸ್ಥಾಪನೆ ಮಾಡಲಾಗುವುದು.

3.3 ಇಲ್ಲಿ ಎರಡನೆಯ ಕ್ರಮವೆಂದರೆ ವಿದ್ಯಾರ್ಥಿಗಳನ್ನು ಮತ್ತು ಅವರ ಕಲಿಕೆಯ ಮಟ್ಟವನ್ನು ಹತ್ತಿರದಿಂದ ಗಮನಿಸಿ ಸಾರ್ವತ್ರಿಕವಾಗಿ ಅವರು ಶಾಲಾಚಟುವಟಿಕೆಗಳಲ್ಲಿ ಭಾಗಿಗಳಾಗುವಂತೆ ಮಾಡುವುದು. ಇದಕ್ಕಾಗಿ ಅವರು (ಅ) ಶಾಲೆಗೆ ದಾಖಲಾಗಿದ್ದಾರೆಯೆ ಹಾಗೂ ಸರಿಯಾಗಿ ಹಾಜರಾಗುತ್ತಿದ್ದಾರೆಯೆ ಹಾಗೂ (ಆ) ಒಂದು ವೇಳೆ ಶಾಲೆಯಲ್ಲಿ ಹಿಂದೆ ಬಿದ್ದಿದ್ದರೆ ಇಲ್ಲವೆ ಶಾಲೆಯನ್ನೇ ಬಿಟ್ಟಿದ್ದರೆ ತಮ್ಮ ಓದುಬರೆಹವನ್ನು ಉತ್ತಮ ಪಡಿಸಿಕೊಳ್ಳುವ ಅಥವಾ ಶಾಲೆಗೆ ಮರುಪ್ರವೇಶ ಮಾಡುವ ಸೂಕ್ತ ಸದವಕಾಶ ಅವರಿಗೆ ದೊರೆಯುತ್ತದೆಯೆ ಎಂಬುದನ್ನು ಖಾತರಿಪಡಿಸಿಕೊಳ್ಳಬೇಕಾಗಿದೆ. ತಳಹದಿ ಹಂತದಿಂದ ಹಿಡಿದು ಗ್ರೇಡ್ 12ರವರೆಗೆ 18ವರ್ಷಗಳು ತುಂಬುವ ತನಕ ಎಲ್ಲ ಮಕ್ಕಳಿಗೆ ಸಮಾನವಾದ ಮತ್ತು ಗುಣಾತ್ಮಕವಾದ ಶಿಕ್ಷಣವನ್ನು ಒದಗಿಸಲು ಅನುಕೂಲವಾಗುವ ಸೂಕ್ತ ವ್ಯವಸ್ಥೆಗಳನ್ನು ಕಲ್ಪಿಸುವ ಪ್ರಯತ್ನವನ್ನು ಮಾಡಲಾಗುವುದು. ಶಾಲೆಗೆ/ಶಾಲಾ ಸಂಕೀರ್ಣಗಳಿಗೆ ಸಂಬಂಧಪಟ್ಟ ಸಲಹೆಗಾರರು ಅಥವಾ ಒಳ್ಳೆಯ ತರಬೇತಿ ಪಡೆದ ಸಾಮಾಜಿಕ ಕಾರ್ಯಕರ್ತರು ಮತ್ತು ಅಧ್ಯಾಪಕರು ವಿದ್ಯಾರ್ಥಿಗಳೊಡನೆ ಹಾಗೂ ತಂದೆತಾಯಿಗಳ ಮತ್ತು ಪೋಷಕರ ಜೊತೆಯಲ್ಲಿ ಕೆಲಸಮಾಡುತ್ತಾ ಬೇರೆ ಬೇರೆ ಕಡೆಗಳಿಗೆ ತೆರಳಿ ಸಮುದಾಯಗಳನ್ನು ಸಂಪರ್ಕಿಸಿ ಎಲ್ಲ ಮಕ್ಕಳೂ ಶಾಲೆಗೆ ಸೇರಿದ್ದಾರೆಯೆ, ಹಾಗೆಯೆ ಶಾಲೆಗೆ ಹಾಜರಾಗಿ ಕಲಿಯುತ್ತಿದ್ದಾರೆಯೆ ಎಂಬುದನ್ನು ಖಾತರಿಪಡಿಸಿಕೊಳ್ಳುವರು. ನಾಗರಿಕ ಸಮಾಜದ ಸಂಘಸಂಸ್ಥೆಗಳ ಕಡೆಯಿಂದ ಬಂದಿರುವ ಅರ್ಹತೆ ಮತ್ತು ತರಬೇತಿ ಪಡೆದ ಸಾಮಾಜಿಕ ಕಾರ್ಯಕರ್ತರು ಹಾಗೂ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆ ಹಾಗೂ ರಾಜ್ಯ ಮತ್ತು ಜಿಲ್ಲಾ ಹಂತಗಳಲ್ಲಿ ಶಾರೀರಿಕ ಅಸಮರ್ಥತೆಯಿಂದ ಬಳಲುತ್ತಿರುವ ವ್ಯಕ್ತಿಗಳನ್ನು ಸಬಲೀಕರಣಗೊಳಿಸುವುದಕ್ಕಾಗಿ ಮುಡಿಪಾದ ಸರ್ಕಾರಿ ಇಲಾಖೆಗಳು ಮತ್ತು ಅಧಿಕಾರಿಗಳು ಇವರೆಲ್ಲ ಶಾಲೆಗಳ ಜೊತೆಯಲ್ಲಿ ಸಂಪರ್ಕ ಹೊಂದುವಂತೆ ಮಾಡಬಹುದಾಗಿದೆ. ಈ ಕೆಲಸವನ್ನು ಕೈಗೊಳ್ಳಲು ರಾಜ್ಯ ಸರ್ಕಾರಗಳು/ ಕೇಂದ್ರಾಡಳಿತ ಪ್ರದೇಶಗಳು ಅಳವಡಿಸಿಕೊಂಡಿರುವ ನವಚೆಂತನೆಯ ವಿಧಾನ ಮತ್ತು ಸಾಧನಗಳನ್ನು ಬಳಸಿಕೊಳ್ಳಬಹುದಾಗಿದೆ.

3.4 ಮೂಲಸೌಕರ್ಯಗಳು ಹಾಗೂ ವಿದ್ಯಾರ್ಥಿಗಳು ಸರಿಯಾಗಿ ಶಾಲೆಗೆ ಬಂದು ಕಲಿಯುವುದು ಇವು ಖಾತರಿಯಾದರೆ, ಒಳ್ಳೆಯ ಗುಣಮಟ್ಟದ ಶಿಕ್ಷಣ ನೀಡುವುದು ಅವರನ್ನು ಉಳಿಸಿಕೊಳ್ಳಲು ಕೀಲಿಕೈ ಎನಿಸುವುದು. ಆ ವಿದ್ಯಾರ್ಥಿಗಳು (ಅದರಲ್ಲೂ ವಿಶೇಷವಾಗಿ ಹೆಣ್ಣು ಮಕ್ಕಳು ಹಾಗೂ ಇತರ ಸಾಮಾಜಿಕ- ಆರ್ಥಿಕ ಅನನುಕೂಲ ವರ್ಗಗಳಿಂದ ಬಂದಿರುವ ಮಕ್ಕಳು) ಶಾಲೆಗೆ ಹಾಜರಾಗಲು ಆಸಕ್ತಿಯನ್ನು ಕಳೆದುಕೊಳ್ಳದಂತೆ ನೋಡಿಕೊಳ್ಳಬೇಕು. ಸ್ಥಳೀಯ ಭಾಷೆಯ ತಿಳಿವಳಿಕೆ ಹೊಂದಿರುವ ನುರಿತ ಅಧ್ಯಾಪಕರನ್ನು ಶಾಲೆ ಬಿಡುವ ಮಕ್ಕಳು ಹೆಚ್ಚು ಸಂಖ್ಯೆಯಲ್ಲಿ ಕಂಡುಬರುವ ಪ್ರದೇಶಗಳಿಗೆ ನೇಮಕ ಮಾಡುವುದರ ಹಾಗೂ ಪಠ್ಯಕ್ರಮವನ್ನು ಉಪಯುಕ್ತವಾಗಿ, ಆಕರ್ಷಕವಾಗಿ ಮಾರ್ಪಡಿಸುವುದರ ಮೂಲಕ ಇದನ್ನು ಸಾಧಿಸ ಬಹುದಾಗಿದೆ.

3.5 ಎಲ್ಲ ವಿದ್ಯಾರ್ಥಿಗಳ, ಅದರಲ್ಲೂ ವಿಶೇಷವಾಗಿ ಸಾಮಾಜಿಕವಾಗಿ-ಆರ್ಥಿಕವಾಗಿ ಅನನುಕೂಲದಿಂದಿರುವ ವರ್ಗಗಳ (Socio-economically Disadvantaged Groups-SEDGs) ಕಲಿಕೆಗೆ ಒತ್ತಾಸೆ ನೀಡುವ ಸಲುವಾಗಿ ಶಾಲಾಶಿಕ್ಷಣದ ವ್ಯಾಪ್ತಿಯನ್ನು ಹೆಚ್ಚಿಸಿ ಅದು ಔಪಚಾರಿಕ ಮತ್ತು ಅನೌಪಚಾರಿಕ ಈ ಎರಡೂ ಮಾದರಿಯಲ್ಲಿ ಬಹುಮುಖಿ ಮಾರ್ಗಗಳಲ್ಲಿ ಕಾರ್ಯಾನ್ವಯಗೊಳ್ಳುವಂತೆ ಮಾಡಲಾಗುವುದು. ರಾಷ್ಟ್ರೀಯ ಮುಕ್ತ ಶಾಲಾ ಸಂಸ್ಥೆ (National Institute of Open Schooling-NIOS) ಹಾಗೂ ರಾಜ್ಯಗಳಲ್ಲಿರುವ ಮುಕ್ತಶಾಲೆಗಳು ನೀಡುತ್ತಿರುವ ಮುಕ್ತ ಹಾಗೂ ದೂರಶಿಕ್ಷಣ ಕಾರ್ಯಕ್ರಮಗಳನ್ನು (ODL) ವಿಸ್ತರಿಸಿ ಸಾಂಪ್ರದಾಯಿಕವಾದ ಶಾಲೆಗೆ ಹೋಗಿ ಶಿಕ್ಷಣ ಪಡೆಯಲು ಸಾಧ್ಯವಾಗದ ಭಾರತೀಯ ಯುವ ಜನಸ್ತೋಮದ ಕಲಿಕೆಯ ಅಗತ್ಯಗಳನ್ನು ಅವು ಪೂರೈಸುವಂತೆ

ಸಜ್ಜುಗೊಳಿಸಲಾಗುವುದು. ಎನ್.ಐ.ಓ.ಎಸ್. ಮತ್ತು ರಾಜ್ಯ ಮುಕ್ತ ಶಾಲೆಗಳು ಹಾಲಿ ಇರುವ ಶಿಕ್ಷಣ ಕಾರ್ಯಕ್ರಮಗಳ ಜೊತೆಗೆ ಈ ಮುಂದೆ ಹೇಳಿರುವ ಕಾರ್ಯಕ್ರಮಗಳನ್ನು ಕೂಡ ನೀಡುವುವು : ಸಾಂಪ್ರದಾಯಿಕ ಶಾಲಾ ವ್ಯವಸ್ಥೆಯಲ್ಲಿ ಇರುವ ಗ್ರೇಡ್ 3,5 ಮತ್ತು 8 ಇವುಗಳಿಗೆ ಸಮಾನವಾಗಿ A, B ಮತ್ತು C ಹಂತಗಳು; ಗ್ರೇಡ್ 10 ಮತ್ತು 12 ಇವುಗಳಿಗೆ ಸಮಾನವಾದ ಸೆಕಂಡರಿ ಶಿಕ್ಷಣ ಕಾರ್ಯಕ್ರಮಗಳು; ವೃತ್ತಿ ಶಿಕ್ಷಣ ಕೋರ್ಸುಗಳು/ಕಾರ್ಯಕ್ರಮಗಳು; ವಯಸ್ಕರ ಶಿಕ್ಷಣ ಹಾಗೂ ಬದುಕನ್ನು ಶ್ರೀಮಂತಗೊಳಿಸುವ ಕಾರ್ಯಕ್ರಮಗಳು (Life-enrichment Programmes) - ಇವೇ ಕಾರ್ಯಕ್ರಮಗಳನ್ನು ಹೊಸ ಸಂಸ್ಥೆಗಳನ್ನು ಪ್ರಾರಂಭಿಸುವ/ಹಾಲಿ ಇರುವ ರಾಜ್ಯ ಮುಕ್ತಶಾಲಾ ಸಂಸ್ಥೆಗಳನ್ನು (SIOS) ಹೆಚ್ಚು ಶಕ್ತವನ್ನಾಗಿ ಮಾಡುವ ಮೂಲಕ ಪ್ರಾದೇಶಿಕ ಭಾಷೆಗಳಲ್ಲಿ ಕೂಡ ಒದಗಿಸಿಕೊಡುವ ನಿಟ್ಟಿನಲ್ಲಿ ರಾಜ್ಯಗಳಿಗೆ ಪ್ರೋತ್ಸಾಹ ನೀಡಲಾಗುವುದು.

3.6 ಎರಡೂ ಸರ್ಕಾರಗಳಿಗೆ ಹಾಗೂ ಸರ್ಕಾರೇತರ ಜನೋಪಕಾರಿ ಸಂಘಟನೆಗಳಿಗೆ ಮತ್ತು ಸಂಸ್ಥೆಗಳಿಗೆ ಶಾಲೆಗಳನ್ನು ಕಟ್ಟಲು ಹಾಗೂ ಸಂಸ್ಕೃತಿ, ಪ್ರಾದೇಶಿಕ ಭಿನ್ನತೆಗಳು, ಜನಸಂಖ್ಯಾ ಮಾದರಿ ಮುಂತಾದ ಕಾರಣಗಳಿಂದ ಕಂಡುಬರುವ ಸ್ಥಳೀಯ ವೈಶಿಷ್ಟ್ಯ ವಿಭಿನ್ನತೆಗಳನ್ನು ಪ್ರೋತ್ಸಾಹಿಸಲು ಮಾತ್ರವಲ್ಲದೆ ಪರ್ಯಾಯ ಶಿಕ್ಷಣ ಮಾದರಿಗಳಿಗೆ ಅವಕಾಶ ಮಾಡಿಕೊಡಲು ಅನುಕೂಲವಾಗುವಂತೆ ಶಾಲೆಗಳಿಗಾಗಿ ನಿಗದಿಪಡಿಸಿರುವ ಆವಶ್ಯಕತೆಗಳನ್ನು ಸ್ವಲ್ಪಮಟ್ಟಿಗೆ ಸಡಿಲಿಸಲಾಗುವುದು. ಅಪೇಕ್ಷಿತ ಕಲಿಕೆಯ ಫಲಿತಾಂಶಕ್ಕೆ ಸಂಬಂಧಿಸಿದಂತೆ ಇನ್‌ಪುಟ್ ಮೇಲೆ ಕಡಿಮೆ ಒತ್ತನ್ನು ಹಾಕಿ ಔಟ್‌ಪುಟ್‌ನಿಂದ ಸತ್ವಯುತವಾಗಿ ಏನು ದೊರೆಯಬಲ್ಲದು ಎಂಬುದರ ಕಡೆಗೆ ಹೆಚ್ಚಿನ ಗಮನ ಹರಿಸಲಾಗುವುದು. ಕೆಲವು ಇನ್‌ಪುಟ್‌ಗಳನ್ನು ಕುರಿತಂತೆ ಅಧ್ಯಾಯ 8ರಲ್ಲಿ ನಮೂದಿಸಲಾಗಿರುವಂತೆ ನಿಬಂಧನೆಗಳು ಕೆಲವು ಕ್ಷೇತ್ರಗಳಿಗೆ ಸೀಮಿತವಾಗಿರುತ್ತವೆ. ಹಾಗೆಯೆ ಸಾರ್ವಜನಿಕ-ಜನೋಪಕಾರಿ ಸಂಸ್ಥೆಗಳ ಸಹಭಾಗಿತ್ವ ಸೇರಿದಂತೆ ಇಂತಹ ಇತರ ಮಾದರಿಗಳ ಶಾಲೆಗಳನ್ನು ಕುರಿತಂತೆ ಚಾಲನೆ ಮಾಡಲಾಗುವುದು.

3.7 ಶಾಲಾ ಕಲಿಕೆಯನ್ನು ಉತ್ತಮಪಡಿಸುವ ದೃಷ್ಟಿಯಿಂದ ಈ ವ್ಯವಸ್ಥೆಯಲ್ಲಿ ಸಮುದಾಯದ ಜನರನ್ನು ಹಾಗೂ ಶಾಲೆಯ ಹಳೆಯ ವಿದ್ಯಾರ್ಥಿಗಳನ್ನು ಜೊತೆಗೂಡಿಸಿಕೊಳ್ಳುವ ಪ್ರಯತ್ನ ಮಾಡಲಾಗುವುದು. ಇಂತಹ ಉದ್ದೇಶಗಳಲ್ಲಿ ಕೆಲವೆಂದರೆ: ಒಬೊಬ್ಬೊಬ್ಬ ವಿದ್ಯಾರ್ಥಿಗೂ ಟ್ಯೂಟರಿಂಗ್ ನೀಡುವುದು; ಸಾಕ್ಷರತೆ ಬೋಧನೆ ಮತ್ತು ಹೆಚ್ಚುವರಿ ಸಹಾಯದ ಸೆಷನ್‌ಗಳು; ಶಿಕ್ಷಕರಿಗೆ ಬೋಧನೆಗಾಗಿ ಬೆಂಬಲ ಮತ್ತು ಮಾರ್ಗದರ್ಶನ; ವಿದ್ಯಾರ್ಥಿಗಳಿಗೆ ವೃತ್ತಿಸಂಬಂಧವಾದ ಸಲಹೆ ಮತ್ತು ಮಾರ್ಗದರ್ಶನ ಇತ್ಯಾದಿ. ಈ ವಿಷಯವಾಗಿ ಸಕ್ರಿಯರಾದ ಮತ್ತು ಆರೋಗ್ಯವಂತರಾದ ಹಿರಿಯ ನಾಗರಿಕರ ಬೆಂಬಲ ಪಡೆಯಲಾಗುವುದೆ ಅಲ್ಲದೆ ಶಾಲೆಯ ಹಳೆಯ ವಿದ್ಯಾರ್ಥಿಗಳು ಹಾಗೂ ಸ್ಥಳೀಯ ಸಮುದಾಯದ ಸದಸ್ಯರು ಇಂಥವರನ್ನು ಕೂಡ ಸೂಕ್ತವಾಗಿ ಗುರುತಿಸಿಕೊಳ್ಳಲಾಗುವುದು. ಸಾಕ್ಷರರಾದ ಸ್ವಯಂಸೇವಿ ಜನರು, ನಿವೃತ್ತ ವಿಜ್ಞಾನಿಗಳು, ಸರ್ಕಾರಿ/ಅರೆ ಸರ್ಕಾರಿ ಉದ್ಯೋಗಿಗಳು, ಹಿರಿಯ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು (educators) ಇಂಥವರ ಒಂದು ಡಾಟಾಬೇಸನ್ನು ಈ ಉದ್ದೇಶಕ್ಕಾಗಿ ಸಿದ್ಧಪಡಿಸಲಾಗುವುದು.

4. ಶಾಲೆಗಳಲ್ಲಿ ಪಠ್ಯಕ್ರಮ ಮತ್ತು ಬೋಧನಕ್ರಮ: ಕಲಿಕೆ ಒಂದು ಸಮಗ್ರವಾದ, ಸಂಕಲಿತವಾದ, ಆನಂದದಾಯಕವಾದ ಮತ್ತು ಕ್ರಿಯಾಶೀಲವಾದ ಚಟುವಟಿಕೆಯಾಗಿರಬೇಕು

ಹೊಸ 5+3+3+4 ವಿನ್ಯಾಸದಲ್ಲಿ ಶಾಲಾ ಪಠ್ಯಕ್ರಮ ಮತ್ತು ಬೋಧನಕ್ರಮ ಇವುಗಳ ಮರುರಚನೆ

4.1 ಕಲಿಯುವವರಿಗೆ ಅವರ ಬೆಳವಣಿಗೆಯ ವಿವಿಧ ಹಂತಗಳಲ್ಲಿ ಅವರಿಗಿರುವ ಅಗತ್ಯಗಳು ಮತ್ತು ಆಸಕ್ತಿಗಳಿಗೆ ಅನುಗುಣವಾಗಿ ಶಾಲಾಶಿಕ್ಷಣದ ಪಠ್ಯಕ್ರಮ ಮತ್ತು ಬೋಧನಕ್ರಮ ಇವುಗಳನ್ನು ಹೆಚ್ಚು ಪ್ರತಿಕ್ರಿಯಾತ್ಮಕವಾಗಿ ಮತ್ತು ಸಂಗತವಾಗಿ ಇರುವಂತೆ ಮರುವಿನ್ಯಾಸ ಮಾಡಲಾಗುವುದು. ಇದನ್ನು 3-8, 8-11, 11-14 ಹಾಗೂ 14-18 ವರ್ಷಗಳ ವಯೋಮಾನದವರಿಗೆ ಅನ್ವಯಿಸಲಾಗುವುದು. ಶಾಲಾ ಶಿಕ್ಷಣಕ್ಕಾಗಿ ಪಠ್ಯಕ್ರಮ ಮತ್ತು ಬೋಧನಾ ಕ್ರಮಗಳು 5+3+3+4 ಈ ವಿನ್ಯಾಸದಲ್ಲಿ ಕಾರ್ಯಾನ್ವಯಗೊಳ್ಳಲಿದ್ದು ಇದರಲ್ಲಿ ತಳಹದಿ ಹಂತ (Foundational Stage) ಎಂಬುದರಲ್ಲಿ ಎರಡು ಭಾಗಗಳಿದ್ದು 3ವರ್ಷಗಳ ಅಂಗನವಾಡಿ/ ಪೂರ್ವಶಾಲೆ+ 2ವರ್ಷಗಳ ಪ್ರಾಥಮಿಕ ಶಾಲೆ ಗ್ರೇಡುಗಳು 1-2 ಇರುತ್ತವೆ; ಇವೆರಡೂ 3-8 ವಯೋಮಾನದ ಮಕ್ಕಳಿಗೆ ಅನ್ವಯಿಸುತ್ತವೆ. ಅನಂತರದ ಪ್ರಾರಂಭಿಕ ಅಥವಾ ಸಿದ್ಧತಾಹಂತದಲ್ಲಿ ಗ್ರೇಡುಗಳು 3-5ಇದ್ದು ಇದು 8-11 ವಯೋಮಾನದ ಮಕ್ಕಳಿಗೆ ಅನ್ವಯಿಸುತ್ತದೆ; ಮಾಧ್ಯಮಿಕ ಹಂತದಲ್ಲಿ (Middle Stage) ಗ್ರೇಡುಗಳು 6-8 ಇದ್ದು ಇದು 11-14 ವಯೋಮಾನದ ಮಕ್ಕಳಿಗೆ ಅನ್ವಯಿಸುತ್ತದೆ; ಹಾಗೂ ಸೆಕಂಡರಿ ಹಂತದಲ್ಲಿ (Secondary Stage) ಗ್ರೇಡುಗಳು 9-12 ಎರಡು ಹಂತಗಳಲ್ಲಿ ಅಂದರೆ 9 ಮತ್ತು 10 ಮೊದಲನೆಯ ಹಂತ ಹಾಗೂ 11 ಮತ್ತು 12 ಎರಡನೆಯ ಹಂತವಾಗಿದ್ದು ಇದು 14-18 ವರ್ಷಗಳ ವಯೋಮಾನದ ಮಕ್ಕಳಿಗೆ ಅನ್ವಯವಾಗುತ್ತದೆ.

4.2 ತಳಹದಿ ಹಂತ 5ವರ್ಷಗಳ ಕಾಲಾವಧಿಯದಾಗಿದ್ದು ಇದು ನಮ್ಯತೆಯಿಂದ ಕೂಡಿದ್ದು, ಬಹು ಹಂತಗಳನ್ನು ಹೊಂದಿದ್ದು, ಆಟ/ಚಟುವಟಿಕೆಗಳನ್ನು ಆಧರಿಸಿದ ಕಲಿಕೆಯಾಗಿರುತ್ತದೆ ಪ್ಯಾರಾ 1-2 ರಲ್ಲಿ ಹೇಳಲಾಗಿರುವ ಇ.ಸಿ.ಸಿ.ಇ.ಯ ಪಠ್ಯಕ್ರಮ ಮತ್ತು

ಬೋಧನಕ್ರಮಗಳು ಇದಕ್ಕೆ ಅನ್ವಯವಾಗುತ್ತವೆ. ಸಿದ್ಧತಾ ಹಂತದಲ್ಲಿ ಮೂರು ವರ್ಷಗಳ ಶಿಕ್ಷಣ ಕಾಲಾವಧಿಯಿದ್ದು ಇದು ಆಟ, ಅನ್ವೇಷಣೆ ಮತ್ತು ಚಟುವಟಿಕೆ ಆಧಾರಿತ ಬೋಧನ ಕ್ರಮ ಮತ್ತು ಪಠ್ಯಕ್ರಮಗಳನ್ನು ಒಳಗೊಂಡಿರುತ್ತದೆ. ಅಲ್ಲದೆ ಕೆಲವು ಸರಳ ರೀತಿಯ ಪಠ್ಯಪುಸ್ತಕಗಳು ಕೂಡ ನಿಗದಿತವಾಗಿದ್ದು ಇವುಗಳಲ್ಲಿ ಹೆಚ್ಚು ಔಪಚಾರಿಕವಾದ, ಆದರೆ ತರಗತಿಮಟ್ಟದ ಅಭಿವ್ಯಕ್ತಿ-ಪ್ರತಿಕ್ರಿಯೆ (interactive) ಆಧಾರಿತ ಕಲಿಕೆ ಇರುತ್ತದೆ. ಇವುಗಳ ಮೂಲಕ ಓದುವುದು, ಬರೆಯುವುದು, ಮಾತನಾಡುವುದು, ದೈಹಿಕ ಶಿಕ್ಷಣ, ಕಲೆ, ಭಾಷೆಗಳು, ವಿಜ್ಞಾನ ಮತ್ತು ಗಣಿತ ಇಂಥ ವಿಷಯಗಳನ್ನು ಕಲಿಯಲು ಮಕ್ಕಳಿಗೆ ಗಟ್ಟಿಯಾದ ತಳಹದಿಯನ್ನು ಒದಗಿಸಿಕೊಡಲಾಗುತ್ತದೆ. ಮಾಧ್ಯಮಿಕ ಹಂತದಲ್ಲಿ ಮೂರು ವರ್ಷಗಳ ಶಿಕ್ಷಣವಿದ್ದು, ಸಿದ್ಧತಾ ಹಂತದ ಪಠ್ಯಕ್ರಮ ಮತ್ತು ಬೋಧನಕ್ರಮಗಳ ನಿಟ್ಟಿನಲ್ಲಿಯೇ ಇವು ಮುಂದುವರೆದಿರುತ್ತವೆ. ಆದರೆ ಇಲ್ಲಿ ಪ್ರತಿಯೊಂದು ವಿಷಯವನ್ನು ಕಲಿಸುವ ಅಧ್ಯಾಪಕರು ಇದ್ದು ಅವರು ಪ್ರತಿಯೊಂದು ವಿಷಯವನ್ನು ಕುರಿತ ಹೆಚ್ಚು ಅಮೂರ್ತ ಪರಿಕಲ್ಪನೆಗಳನ್ನು ಮಕ್ಕಳಿಗೆ ಪರಿಚಯ ಮಾಡಿಕೊಟ್ಟು ಕಲಿಕೆ ಮತ್ತು ಚರ್ಚೆಗಳ ಮೂಲಕ ಬೋಧನಕಾರ್ಯ ಕೈಗೊಳ್ಳುವರು. ಈ ವೇಳೆಗಾಗಲೇ ಮಕ್ಕಳು ವಿಜ್ಞಾನಗಳು, ಗಣಿತ, ಕಲೆಗಳು, ಸಮಾಜ ವಿಜ್ಞಾನಗಳು ಹಾಗೂ ಮಾನವಿಕಗಳು ಇಂಥ ವಿಷಯಗಳನ್ನು ಕಲಿಯಲು ಅಗತ್ಯವಾದ ಮನೋಭೂಮಿಕೆಯನ್ನು ಸಿದ್ಧಪಡಿಸಿಕೊಂಡಿರುತ್ತಾರೆ. ಪ್ರತಿಯೊಂದು ವಿಷಯದಲ್ಲೂ ಅನುಭವಾಧಾರಿತವಾದ ಕಲಿಕೆಗೆ ಹಾಗೂ ವಿವಿಧ ಶಿಕ್ಷಣ ವಿಷಯಗಳ ನಡುವೆ ಸಂಬಂಧವನ್ನು ಕಲ್ಪಿಸಿಕೊಂಡು ಮಾಡುವ ಕಲಿಕೆಗೆ ಹೆಚ್ಚು ಪ್ರಾಶಸ್ತ್ಯ ಮತ್ತು ಪ್ರೋತ್ಸಾಹಗಳನ್ನು ನೀಡಲಾಗುವುದು. ಹೆಚ್ಚು ಸಂಖ್ಯೆಯ ವಿಷಯಗಳನ್ನು ಸೇರಿಸಿ, ಹೆಚ್ಚು ಮಂದಿ ಅಧ್ಯಾಪಕರನ್ನು ನಿಯೋಜಿಸಿದರೂ ಈ ಮೇಲೆ ಹೇಳಿದ ಅಂಶಗಳಿಗೆ ಒತ್ತು ನೀಡಲಾಗುವುದು. ಸೆಕಂಡರಿ ಹಂತದ ಶಿಕ್ಷಣದಲ್ಲಿ ನಾಲ್ಕು ವರ್ಷಗಳ ಬಹುಶಿಸ್ತೀಯ ಅಧ್ಯಯನ ಕಂಡುಬರುತ್ತದೆ. ಮಾಧ್ಯಮಿಕ ಹಂತದಲ್ಲಿ ಕಂಡುಬರುವ ವಿಷಯಕೇಂದ್ರಿತ ಪಠ್ಯಕ್ರಮ ಮತ್ತು ಬೋಧನಕ್ರಮಗಳು ಇಲ್ಲಿ ಕೂಡ ಕಂಡುಬರುವುದಾದರೂ ಇಲ್ಲಿ ವಿಷಯಗಳನ್ನು ಹೆಚ್ಚು ಆಳವಾಗಿ, ಹೆಚ್ಚಿನ ತಾರ್ಕಿಕ ಚಿಂತನೆಯೊಂದಿಗೆ, ಬದುಕಿನ ಆಶೋತ್ತರಗಳಿಗೆ ಅನ್ವಯಿಸುವ ರೀತಿಯಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗುತ್ತದೆ. ಹೆಚ್ಚಿನ ನಮ್ಯತೆಯಿಂದ ಕೂಡಿದ ಈ ಶಿಕ್ಷಣದಲ್ಲಿ ವಿದ್ಯಾರ್ಥಿಗಳು ವಿಷಯಗಳನ್ನು ಆಯ್ಕೆ ಮಾಡಿಕೊಳ್ಳುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಡಲಾಗುತ್ತದೆ. ಇಲ್ಲಿ ವಿಶಿಷ್ಟವಾದ ಸಂಗತಿಯೆಂದರೆ ವಿದ್ಯಾರ್ಥಿಗಳಿಗೆ ಗ್ರೇಡ್ 10 ರ ಅನಂತರ ಹೊರಹೋಗುವ ಆಯ್ಕೆಯನ್ನು ಮುಂದುವರಿಸಲಾಗುತ್ತದೆ. ಅಂತೆಯೆ, ಅನಂತರ ಅವರು ಮುಂದಿನ ಹಂತದಲ್ಲಿ ಮರು ಪ್ರವೇಶಾತಿ ಪಡೆದುಕೊಂಡು ಗ್ರೇಡ್ 11-12 ರಲ್ಲಿ ಲಭ್ಯವಿರುವ ವೃತ್ತಿಪರ ಅಥವಾ ಬೇರೆ ಯಾವುದೇ ಶಿಕ್ಷಣವನ್ನು ಮುಂದುವರಿಸಲು ಅವಕಾಶವಿರುತ್ತದೆ. ಅಪೇಕ್ಷೆಪಡುವುದಾದರೆ ಅವರು ಇನ್ನೂ ಹೆಚ್ಚು ವಿಶೇಷ ಶಿಕ್ಷಣ ದೊರೆಯುವ ಶಾಲೆಯನ್ನು ಪ್ರವೇಶಿಸಬಹುದಾಗಿರುತ್ತದೆ.

4.3 ಮೇಲೆ ಹೇಳಿದ ಹಂತಗಳು ಮೂಲತಃ ಪಠ್ಯಕ್ರಮ ಮತ್ತು ಬೋಧನಕ್ರಮಗಳನ್ನು ಆಧರಿಸಿದ ಕಲಿಕೆಯಾಗಿದ್ದು, ಮಕ್ಕಳ ಸಂಜ್ಞಾನಾತ್ಮಕ ಬೆಳೆವಣಿಗೆಯನ್ನು ಆಧರಿಸಿ ಅವರು ಸಾಕಷ್ಟು ಸಾಧ್ಯವಾದ ಮಟ್ಟದಲ್ಲಿ ಕಲಿಯಲು ಅವಕಾಶವಾಗುವಂತೆ ಇವುಗಳನ್ನು ರೂಪಿಸಲಾಗಿದೆ. ಪ್ರತಿಯೊಂದು ಹಂತದಲ್ಲೂ ರಾಷ್ಟ್ರೀಯ ಹಾಗೂ ರಾಜ್ಯಮಟ್ಟದ ಪಠ್ಯಕ್ರಮಗಳು ಹಾಗೂ ಬೋಧನೆ-ಕಲಿಕೆ ತಂತ್ರವಿಧಾನಗಳನ್ನು ಕುರಿತಂತೆ ಅವು ಪರಿಚಯ ಮಾಡಿಕೊಡುತ್ತವೆ. ಆದರೆ ಇವುಗಳಿಗೆ ಸಂವಾದಿಯಾದ ಬದಲಾವಣೆಗಳು ಭೌತಿಕವಾದ ಮೂಲಸೌಕರ್ಯಗಳಿಗೆ ಬೇಕಾಗುವುದಿಲ್ಲ.

ವಿದ್ಯಾರ್ಥಿಗಳ ಸಮಗ್ರ ಬೆಳವಣಿಗೆ

4.4 ಈ ಎಲ್ಲ ಹಂತಗಳಲ್ಲೂ ಪಠ್ಯಕ್ರಮ ಹಾಗೂ ಶಿಕ್ಷಣದ ರೀತಿ ಹೇಗಿರುತ್ತದೆ ಎಂದರೆ ಅದರಲ್ಲಿ ಇಂದಿನ ಶಿಕ್ಷಣ ಪದ್ಧತಿಯಲ್ಲಿದ್ದಂತೆ ಉರುಹಚ್ಚುವುದನ್ನು ಬಿಟ್ಟು ಇದು ನಿಜವಾದ ತಿಳಿವಳಿಕೆ ಮತ್ತು ಜ್ಞಾನಸಂಪಾದನೆಗಳನ್ನು ಕೇಂದ್ರವಾಗಿರಿಸಿಕೊಳ್ಳುತ್ತದೆ. ಶಿಕ್ಷಣದ ಉದ್ದೇಶ ಕೇವಲ ಸಂಜ್ಞಾನಾತ್ಮಕ ಅರಿವು ಮಾತ್ರವಾಗಿರದೆ ಅದು ಚಾರಿತ್ರ್ಯ ನಿರ್ಮಾಣದ ಜೊತೆಗೆ ಇಪ್ಪತ್ತೊಂದನೆ ಶತಮಾನದ ಪ್ರಮುಖ ಕೌಶಲಗಳಿಂದ ಒಡಗೂಡಿರುತ್ತದೆ. ವಾಸ್ತವವಾಗಿ ಜ್ಞಾನ ಎಂಬುದು ಒಂದು ಬಾಗಿಲು ಮುಚ್ಚಿರುವ ಭಂಡಾರವಾಗಿದ್ದು ವ್ಯಕ್ತಿಯೊಬ್ಬನ ಪ್ರತಿಭೆಯ ಹಿನ್ನೆಲೆಯಲ್ಲಿ ಅದನ್ನು ತೆರೆಯಲು, ಆ ಸಂಪತ್ತನ್ನು ಗಳಿಸಿಕೊಳ್ಳಲು ಶಿಕ್ಷಣ ನೆರವಾಗುತ್ತದೆ. ಪಠ್ಯಕ್ರಮ ಹಾಗೂ ಶಿಕ್ಷಣದ ರೀತಿ ವಿಧಾನಗಳನ್ನು ಇಂಥ ಗುರಿಸಾಧನೆಗಾಗಿ ಮತ್ತೆ ಸಜ್ಜುಗೊಳಿಸಲಾಗುತ್ತದೆ. ಶಾಲಾಪೂರ್ವ ಹಂತದಿಂದ ಮೊದಲುಗೊಂಡು ಉನ್ನತ ಶಿಕ್ಷಣದ ಹಂತದವರೆಗೆ ಪ್ರತಿಯೊಂದು ಹಂತದಲ್ಲಿಯೂ ಸಮಗ್ರತೆಯನ್ನು ಪಡೆದುಕೊಳ್ಳಲು ಬೇರೆಬೇರೆ ಕ್ಷೇತ್ರಗಳಲ್ಲಿ ಯಾವ ಬಗೆಯ ವಿಶಿಷ್ಟವಾದ ಕೌಶಲಗಳು ಮತ್ತು ಮೌಲ್ಯಗಳು ಇವೆ ಎಂಬುದನ್ನು ಕಂಡುಕೊಳ್ಳಲಾಗುವುದು. ಶಿಕ್ಷಣ ಮತ್ತು ಕಲಿಕೆ ಪ್ರಕ್ರಿಯೆಗಳಲ್ಲಿ ಈ ಕೌಶಲಗಳನ್ನು ಮತ್ತು ಮೌಲ್ಯಗಳನ್ನು ಒಂದುಗೂಡಿಸಲಾಗುವುದು. ಇದನ್ನು ಖಾತರಿಪಡಿಸಿಕೊಳ್ಳುವ ಸಲುವಾಗಿ ಪಠ್ಯಕ್ರಮಕ್ಕಾಗಿ ಒಂದು ಆವರಣವನ್ನು ಮತ್ತು ಸಂಪರ್ಕ ಸ್ವರೂಪವನ್ನು ಅಭಿವೃದ್ಧಿಪಡಿಸಲಾಗುತ್ತದೆ. ಇದಕ್ಕೆ ಅಗತ್ಯವಾದ ಕೌಶಲವನ್ನು ಎನ್.ಸಿ.ಇ.ಆರ್.ಟಿ. ಪತ್ತೆ ಹಚ್ಚುವುದು ಹಾಗೂ ಪ್ರಾರಂಭಿಕ ಬಾಲ್ಯಸ್ಥಿತಿ ಮತ್ತು ಶಾಲಾ ಶಿಕ್ಷಣಕ್ಕಾಗಿ ರಾಷ್ಟ್ರೀಯ ಪಠ್ಯಕ್ರಮದ ಚೌಕಟ್ಟಿನಲ್ಲಿ ಇದನ್ನು ಅಳವಡಿಸಲು ತಂತ್ರೋಪಾಯಗಳನ್ನು ಕಂಡುಕೊಳ್ಳಲಾಗುವುದು.

ಕಡ್ಡಾಯ ಕಲಿಕೆ ಮತ್ತು ವಿಮರ್ಶಾತ್ಮಕ ಆಲೋಚನೆಯ ಪರಿಧಿಯನ್ನು ವಿಸ್ತರಿಸಲು ಪಠ್ಯಕ್ರಮದ ವಿಷಯವಸ್ತುವನ್ನು ಕಡಮೆ ಮಾಡುವುದು

4.5 ಪಠ್ಯಕ್ರಮದ ವಿಷಯವಸ್ತುವನ್ನು (Curriculum Content) ಪ್ರತಿಯೊಂದು ವಿಷಯದಲ್ಲಿ ಕಡಮೆಮಾಡಿ ಇದನ್ನು ಸಾಕಷ್ಟುಮಟ್ಟಿಗೆ ಮೂಲಭೂತ ವಿಷಯಗಳನ್ನು ಕುರಿತಂತೆ ಕೇಂದ್ರೀಕರಿಸಲಾಗುವುದು. ಇದರಿಂದ ವಿಮರ್ಶಾತ್ಮಕ ಚಿಂತನೆ, ಒಟ್ಟಾರೆಯಾದ ಹಾಗೂ ಸಂಶೋಧನಾಧಾರಿತವಾದ, ಚರ್ಚೆಯನ್ನು ಆಧರಿಸಿದ, ವಿಶ್ಲೇಷಣೆಯ ತಳಹದಿಯ ಮೇಲೆ ನಿಂತಿರುವ ಕಲಿಕೆಗೆ ಗಮನಕೊಡಲು ಸಾಧ್ಯವಾಗುವಂತಿರಬೇಕು. ಈ ವಿಷಯವಸ್ತು ಈಗ ಮುಖ್ಯವಾದ ಪರಿಕಲ್ಪನೆಗಳನ್ನು, ವಿಚಾರಗಳನ್ನು, ಪ್ರಾಯೋಗಿಕ ಅನ್ವಯಗಳನ್ನು ಹಾಗೂ ಸಮಸ್ಯೆಗಳಿಗೆ ಪರಿಹಾರ ಹುಡುಕುವುದನ್ನು ಆಧರಿಸಿರುತ್ತದೆ. ಶಿಕ್ಷಣ ಮತ್ತು ಕಲಿಕೆ ಹೆಚ್ಚುಹೆಚ್ಚಾಗಿ ಸಂವಾದ ರೂಪದಲ್ಲಿ ಸಾಗತೊಡಗುವುದು, ಪ್ರಶ್ನೆಗಳನ್ನು ಕೇಳಲು ಉತ್ತೇಜನ ನೀಡಲಾಗುವುದು. ಹಾಗೆಯೆ ತರಗತಿಗಳಲ್ಲಿ ನಿಯಮಬದ್ಧವಾಗಿ ಹೆಚ್ಚು ಅಭಿರುಚಿಯನ್ನು ಉಂಟುಮಾಡುವ, ರಚನಾತ್ಮಕವಾದ, ಸಹಕಾರವನ್ನಾಧರಿಸಿದ, ಸಂಶೋಧನಪ್ರಜ್ಞೆಯುಳ್ಳ ಬೋಧನಕ್ರಮಗಳನ್ನು ಅಭಿವೃದ್ಧಿಪಡಿಸಲಾಗುತ್ತದೆ. ಇದರಿಂದ ಕಲಿಕೆ ಆಳವಾಗಿ, ಪ್ರಾಯೋಗಿಕ ನೆಲೆಗಟ್ಟಿನಲ್ಲಿ ಕೈಗೂಡಲು ಸಾಧ್ಯವಾಗುತ್ತದೆ.

ಪ್ರಾಯೋಗಿಕ ಕಲಿಕೆ

4.6 ಎಲ್ಲ ಹಂತಗಳಲ್ಲೂ ಪ್ರಾಯೋಗಿಕವನ್ನು ಆಧರಿಸಿದ ಕಲಿಕಾಕ್ರಮವನ್ನು ಅಳವಡಿಸಿಕೊಳ್ಳಲಾಗುವುದು. ಅಂತೆಯೆ ಇದರಲ್ಲಿ ಸ್ವತಃ ಕಲಿತುಕೊಳ್ಳುವುದು ಹಾಗೂ ಪ್ರತಿಯೊಂದು ವಿಷಯದಲ್ಲೂ ಕಲಿಕಾ ವಿಷಯಗಳನ್ನು ಮತ್ತು ಕ್ರೀಡೆಯನ್ನು ಒಂದುಗೂಡಿಸಿ ಕಲಿಯುವುದು ಇವಕ್ಕೆ ಮಹತ್ತ್ವ ನೀಡಲಾಗುವುದು. ಪ್ರತಿಯೊಂದು ವಿಷಯಕ್ಕೂ ಸಂಬಂಧಪಟ್ಟಂತೆ ಕಥೆಯನ್ನು ಆಧರಿಸಿದ ಶಿಕ್ಷಣ ವಿಧಾನಕ್ಕೆ ಪ್ರಾಶಸ್ತ್ಯ ನೀಡಲಾಗುವುದು, ಶಿಕ್ಷಣಶಾಸ್ತ್ರದ ಒಂದು ಭಾಗವೆಂಬಂತೆ ಇದನ್ನು ಪರಿಗಣಿಸಲಾಗುವುದು. ಹಾಗೆಯೆ ಬೇರೆಬೇರೆ ವಿಷಯಗಳ ನಡುವೆ ಇರುವ ಸಂಬಂಧಗಳನ್ನು ಹುಡುಕುವುದಕ್ಕಾಗಿ ಪ್ರೋತ್ಸಾಹ ನೀಡಲಾಗುವುದು. ಇಂದು ಲಭ್ಯವಾಗುತ್ತಿರುವ ಕಲಿಕಾ ಫಲಿತ (Learning Outcome) ಹಾಗೂ ಅಪೇಕ್ಷಣೀಯವಾದ ಕಲಿಕಾ ಫಲಿತ ಇವೆರಡರ ನಡುವೆ ಇರುವ ಕಂದರವನ್ನು ದಾಟುವ ಸಲುವಾಗಿ ಕೆಲವು ವಿಷಯಗಳಲ್ಲಿ ತರಗತಿಯ ಚೌಕಟ್ಟಿನಲ್ಲಿ ನಡೆಯುವ ಶಿಕ್ಷಣಸಂಬಂಧವಾದ ಕ್ರಿಯೆಗಳು ಬದಲಾಗುತ್ತವೆ. ಸಾಮರ್ಥ್ಯವನ್ನಾಧರಿಸಿದ ಕಲಿಕೆ ಮತ್ತು ಶಿಕ್ಷಣದ ಕಡೆಗೆ ಈ ಗುರಿ ಬದಲಾಗುತ್ತದೆ. ಹಾಗೆಯೆ ಮೌಲ್ಯಮಾಪನ ಸಲಕರಣೆಗಳನ್ನು ಕೂಡ (ಉದಾಹರಣೆಗೆ 'ಎಂಬಂತೆ', 'ಎಂಬುದರ', ಮತ್ತು 'ಎಂಬುದಕ್ಕಾಗಿ' – 'as', 'of', 'for') ಇಂಥ ಕಲಿಕೆಯ ಮೌಲ್ಯಮಾಪನ ಸಹ ಸೇರಿದಂತೆ) ಒಂದು ಗೊತ್ತಾದ ತರಗತಿಯ ನಿರ್ದಿಷ್ಟ ಕಲಿಕಾ ವಿಷಯಕ್ಕೆ ಸಂಬಂಧಪಟ್ಟಂತೆ ಕಲಿಕಾ ಫಲಿತಗಳು, ಸಾಮರ್ಥ್ಯಗಳು ಮತ್ತು ನಿಲುವುಗಳು ಇವುಗಳನ್ನು ಕೂಡ ಹೊಂದಿಸಿಕೊಳ್ಳಲಾಗುತ್ತದೆ.

4.7 ಕಲಾ ಸಮನ್ವಯ (Art Integration) ಎಂಬುದು ಇಡೀ ಪಠ್ಯಕ್ರಮಕ್ಕೆ ಅನ್ವಯಿಸುವ ಒಂದು ಶೈಕ್ಷಣಿಕ ದೃಷ್ಟಿಕೋನವಾಗಿದ್ದು ಇದರಲ್ಲಿ ಬೇರೆಬೇರೆ ವಿಷಯಗಳನ್ನು ಕುರಿತ ಪರಿಕಲ್ಪನೆಗಳನ್ನು ಕಲಿಕೆಯ ಹಿನ್ನೆಲೆಯಲ್ಲಿ ಕಲೆ ಮತ್ತು ಸಂಸ್ಕೃತಿಗಳ ಬೇರೆಬೇರೆ ಘಟಕಗಳಿಗೆ ಸಂಬಂಧಪಟ್ಟಂತೆ ಬಳಕೆಮಾಡಿಕೊಳ್ಳಲಾಗುತ್ತದೆ. ಅನುಭವವನ್ನು ಆಧರಿಸಿದ ಕಲಿಕೆಗೆ ಹೆಚ್ಚು ಒತ್ತನ್ನು ನೀಡಲಾಗುವುದು. ಹೀಗೆ ಮಾಡುವುದರ ಮೂಲಕ ಕಲೆಗಳನ್ನು ಒಳಗೊಂಡ ಶಿಕ್ಷಣಕ್ಕೆ ತರಗತಿಗಳ ಕಲಿಕೆ ಪ್ರಕ್ರಿಯೆಯಲ್ಲಿ ಅವಕಾಶವನ್ನು ಕಲ್ಪಿಸಿಕೊಡಲಾಗುವುದು. ಇದರಿಂದ ಮಕ್ಕಳು ಕಲಿಯುವ ವಾತಾವರಣ ಉತ್ಸಾಹಭರಿತವಾಗಿ ಇರುವುದು ಮಾತ್ರವಲ್ಲದೆ ಭಾರತೀಯ ಕಲೆ ಮತ್ತು ಸಂಸ್ಕೃತಿಗಳ ಪರಿಚಯವನ್ನು ಶಿಕ್ಷಣದ ಅಂಗವಾಗಿ ಮಾಡಿಕೊಡುವುದರಿಂದ ಮಕ್ಕಳಿಗೆ ಭಾರತೀಯತೆ ಎಂಬ ಪರಿಕಲ್ಪನೆಯ ಪರಿಚಯ ದೊರಕಿದಂತಾಗುತ್ತದೆ. ಈ ರೀತಿಯ ಅಧ್ಯಯನ ಕ್ರಮದಿಂದಾಗಿ ಶಿಕ್ಷಣ ಮತ್ತು ಸಂಸ್ಕೃತಿಗಳ ಪರಸ್ಪರ ಸಂಬಂಧ ಕೂಡ ಗಟ್ಟಿಯಾಗುತ್ತದೆ.

4.8 ಕ್ರೀಡಾಸಮನ್ವಯ ಇನ್ನೊಂದು ಕ್ರಾಸ್‌ಕರಿಕ್ಯುಲರ್ ಅಥವಾ ವಿಭಿನ್ನ ಪಠ್ಯಕ್ರಮ ದೃಷ್ಟಿಕೋನವಾಗಿದ್ದು ಇದರಲ್ಲಿ ಸ್ಥಳೀಯ ಕ್ರೀಡೆಗಳು ಸಹ ಸೇರಿದಂತೆ ವಿವಿಧ ರೀತಿಯ ಶಾರೀರಿಕ ಚಟುವಟಿಕೆಗಳನ್ನು ಶೈಕ್ಷಣಿಕ ಪ್ರಕ್ರಿಯೆಯಲ್ಲಿ ಬಳಕೆಮಾಡಿಕೊಳ್ಳಲಾಗುತ್ತದೆ. ಇದರಿಂದಾಗಿ ಪರಸ್ಪರ ಸಹಕಾರ ನೀಡುವುದು, ಸ್ವಯಂಪ್ರವೃತ್ತವಾಗುವುದು, ತಾನೇ ಯೋಜಿಸಿಕೊಂಡು ಕೆಲಸದಲ್ಲಿ ತೊಡಗುವುದು, ಸ್ವಯಂಶಿಸ್ತು, ಸಾಮೂಹಿಕ ಕೆಲಸಗಾರಿಕೆ, ಜವಾಬ್ದಾರಿ, ನಾಗರಿಕತೆ ಇಂಥ ಭಾವನೆಗಳು ಹಾಗೂ ಕೌಶಲಗಳು ಕುಡಿಯೊಡೆದು ಬೆಳೆಯತೊಡಗುತ್ತವೆ. ಕ್ರೀಡಾಸಮನ್ವಯವನ್ನೊಳಗೊಂಡ ಈ ಕಲಿಕೆ ತರಗತಿಯ ಅವಧಿಯಲ್ಲಿಯೆ ನಡೆಯತಕ್ಕದ್ದು. ಇದರಿಂದ ವಿದ್ಯಾರ್ಥಿಗಳಿಗೆ ಫಿಟ್‌ನೆಸ್ ಅಥವಾ ದೈಹಿಕ ದಾರ್ಢ್ಯ ಎಂಬುದು ಜೀವನಪರ್ಯಂತ ಬೆಳೆಸಿಕೊಳ್ಳಬೇಕಾದ ಒಂದು ದೃಷ್ಟಿಕೋನ ಎಂಬ ಸಂಗತಿ ಮನದಟ್ಟಾಗುತ್ತದೆ. ಫಿಟ್‌ನೆಸ್ ಇಂಡಿಯಾ ಆಂದೋಲನದಲ್ಲಿ ಪರಿಕಲ್ಪನೆ ಮಾಡಿಕೊಳ್ಳಲಾಗಿರುವ ವಿಚಾರಗಳಿಗನುಗುಣವಾಗಿ ಫಿಟ್‌ನೆಸ್ ಪಡೆದುಕೊಳ್ಳುವುದರ ಜೊತೆಗೆ ಬದುಕಿನ ಕೌಶಲಗಳನ್ನು ಕೂಡ ಪಡೆದುಕೊಳ್ಳುವುದರಲ್ಲಿ ನೆರವು ದೊರೆಯುತ್ತದೆ. ಶಿಕ್ಷಣದಲ್ಲಿ ಕ್ರೀಡಾ ಸಮನ್ವಯ ಎಷ್ಟು ಅಗತ್ಯ ಎಂಬುದನ್ನು ಈಗಾಗಲೆ ಕಂಡುಕೊಳ್ಳಲಾಗಿದೆ. ಏಕೆಂದರೆ ಮಕ್ಕಳ ಶಾರೀರಿಕ ಮತ್ತು ಮಾನಸಿಕ ಬೆಳೆವಣಿಗೆಗೆ ಇದರಿಂದ ಒಳಿತುಂಟಾಗಿ ಅವರಲ್ಲಿ ಸರ್ವಾಂಗೀಣ ವಿಕಾಸ ಕಂಡುಬರುತ್ತದೆಯಲ್ಲದೇ ಅವರ ಸಂಜ್ಞಾನಾತ್ಮಕ ಸಾಮರ್ಥ್ಯಗಳು ಕೂಡ ಹೆಚ್ಚಾಗುತ್ತವೆ.

ಕೋರ್ಸುಗಳನ್ನು ಆಯ್ಕೆಮಾಡಿಕೊಳ್ಳುವುದರಲ್ಲಿ ಹೆಚ್ಚು ಮುಕ್ತ ಅವಕಾಶಗಳನ್ನು ಒದಗಿಸುವುದರ ಮೂಲಕ ವಿದ್ಯಾರ್ಥಿಗಳನ್ನು ಸಶಕ್ತರನ್ನಾಗಿ ಮಾಡುವುದು

4.9 ವಿದ್ಯಾರ್ಥಿಗಳಿಗೆ, ಅದರಲ್ಲೂ ವಿಶೇಷವಾಗಿ ಮಾಧ್ಯಮಿಕ ಶಾಲೆಗಳ ವಿದ್ಯಾರ್ಥಿಗಳಿಗೆ, ಅಧ್ಯಯನ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳುವುದರಲ್ಲಿ ಹೆಚ್ಚಿನ ಮುಕ್ತತೆಯನ್ನು ಕಲ್ಪಿಸಿಕೊಡಲಾಗುವುದು. ಇವುಗಳಲ್ಲಿ ದೈಹಿಕ ಶಿಕ್ಷಣ, ಕಲೆ ಮತ್ತು ಕರಕುಶಲ ವಿದ್ಯೆಗಳು ಹಾಗೂ ಔದ್ಯೋಗಿಕ ಕೌಶಲಗಳು (vocational skills) ಕೂಡ ಸೇರಿರುತ್ತವೆ. ಇದರಿಂದ ವಿದ್ಯಾರ್ಥಿಗಳು ತಮ್ಮ ಅಧ್ಯಯನ ಹಾಗೂ ಬದುಕಿನ ಹಾದಿಯನ್ನು ಸುಗಮಗೊಳಿಸಿಕೊಳ್ಳಲು ಸಾಧ್ಯವಾಗುತ್ತದೆಂಬುದು ಇಲ್ಲಿನ ಉದ್ದೇಶ. ಒಟ್ಟಾರೆ ಬೆಳವಣಿಗೆಗಾಗಿ ವರ್ಷದಿಂದ ವರ್ಷಕ್ಕೆ ಪಠ್ಯ ವಿಷಯಗಳು ಮತ್ತು ಪಠ್ಯಕ್ರಮಗಳಲ್ಲಿ ಹೊಸ ಆಯ್ಕೆಗಳನ್ನು ಒದಗಿಸಿಕೊಡುವುದು ಮಾಧ್ಯಮಿಕ ಶಾಲಾ ಶಿಕ್ಷಣದ ಹೊಸ ವೈಶಿಷ್ಟ್ಯವಾಗಿರುತ್ತದೆ. ಇಲ್ಲಿ 'ಪಠ್ಯಕ್ರಮ', 'ಪಠ್ಯೇತರ' ಅಥವಾ 'ಸಹ ಪಠ್ಯಕ್ರಮ', 'ಕಲೆ', 'ಮಾನವಿಕ', 'ವಿಜ್ಞಾನ' ಹೀಗೆ ಯಾವ ಬೇರೆ ಬೇರೆ ಬಗೆಯ ವ್ಯತ್ಯಾಸಗಳು ಇರುವುದಿಲ್ಲ. ಅಂತೆಯೆ 'ವೃತ್ತಿಪರ' ಹಾಗೂ 'ಶೈಕ್ಷಣಿಕ'(Academic) ಎಂಬಂತಹ ಭೇದಭಾವಗಳು ಕೂಡ ಕಂಡುಬರುವುದಿಲ್ಲ. ವಿಜ್ಞಾನ, ಮಾನವಿಕ, ಕಲೆ ಮತ್ತು ಕರಕುಶಲ ಕಲೆಗಳು, ವೃತ್ತಿಪರ ವಿಷಯಗಳು ಇವುಗಳನ್ನು ವಿದ್ಯಾರ್ಥಿಗಳ ಆಯಾ ವಯೋಮಾನ ಮತ್ತು ಅಭಿರುಚಿಗಳಿಗೆ ತಕ್ಕಂತೆ ಅವರಿಗೆ ಯಾವುದು ಸುರಕ್ಷಿತವಾಗಿದೆ, ಯಾವುದು ಆಗಿಲ್ಲ ಎಂಬುದನ್ನು ಪರಿಗಣಿಸಿ ಪಠ್ಯಕ್ರಮದಲ್ಲಿ ಸೇರಿಸಲಾಗುವುದು.

4.10 ಶಾಲಾ ಶಿಕ್ಷಣದ ನಾಲ್ಕು ಹಂತಗಳ ಪೈಕಿ ಪ್ರತಿಯೊಂದರಲ್ಲೂ ಬೇರೆ ಬೇರೆ ಪ್ರದೇಶಗಳಲ್ಲಿ ಲಭ್ಯವಿರುವ ಅನುಕೂಲಗಳನ್ನು ಆಧರಿಸಿ, ಸೆಮಿಸ್ಟರ್ ಅಥವಾ ಇಂಥ ಬೇರೆ ಯಾವುದೇ ವ್ಯವಸ್ಥೆಯನ್ನು ಅನುಸರಿಸುವ ಬಗ್ಗೆ ಪರ್ಯಾಲೋಚಿಸಬಹುದು. ಇದರಲ್ಲಿ ಕಡಿಮೆ ಅವಧಿಯ ಮಾಡ್ಯೂಲ್‌ಗಳು ಅಥವಾ ಕೋರ್ಸ್‌ಗಳನ್ನು ದಿನಬಿಟ್ಟು ದಿನದಂತೆ ಕಲಿಸಲು ಅವಕಾಶವಿರುವಂತೆ, ಇನ್ನೂ ಹೆಚ್ಚು ವಿಷಯಗಳ ಕಡೆಗೆ ಗಮನ ಹರಿಸುವಂತೆ, ಹೆಚ್ಚಿನ ಆಯ್ಕೆಯ ಮುಕ್ತತೆ ದೊರೆಯುವಂತೆ ನೋಡಿಕೊಳ್ಳಬೇಕು. ಕಲೆ, ವಿಜ್ಞಾನ, ಮಾನವಿಕಗಳು, ಭಾಷೆಗಳು, ಸಾಹಿತ್ಯ, ಕ್ರೀಡೆ ಮತ್ತು ವೃತ್ತಿಪರ ವಿಷಯಗಳು ಇವುಗಳನ್ನೆಲ್ಲ ಒಳಗೊಂಡಂತೆ ಹೆಚ್ಚು ಆಯ್ಕೆಯ ಮುಕ್ತತೆ ಹೊಂದಿರುವ, ಆನಂದಪ್ರದವಾದ, ವಿಸ್ತೃತವಾದ ಅಧ್ಯಯನ ವಿಷಯಗಳನ್ನು ಒದಗಿಸಿಕೊಡುವುದರ ಮೂಲಕ ಈ ಗುರಿಗಳನ್ನು ಸಾಧಿಸುವ ನಿಟ್ಟಿನಲ್ಲಿ ರಾಜ್ಯಗಳು ಹೊಸ ಹೊಸ ಬಗೆಯ ವಿಧಾನಗಳನ್ನು ಕಂಡುಕೊಳ್ಳಬಹುದು.

ಬಹುಭಾಷೀಯತೆ ಮತ್ತು ಭಾಷಾಶಕ್ತಿ

4.11 ಚಿಕ್ಕ ಮಕ್ಕಳು ತಮ್ಮ ಮನೆಯ ಭಾಷೆಯಲ್ಲಿ/ಮಾತೃಭಾಷೆಯಲ್ಲಿ ಅರ್ಥಸಹಿತವಾದ ಮಾತುಗಳನ್ನು ಮತ್ತು ಪರಿಕಲ್ಪನೆಗಳನ್ನು ಹೆಚ್ಚು ಬೇಗ ಕಲಿಯುತ್ತಾರೆ ಮತ್ತು ಅರ್ಥ ಮಾಡಿಕೊಳ್ಳುತ್ತಾರೆ ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಮನೆಭಾಷೆಯೆಂದರೆ ಸಾಧಾರಣವಾಗಿ ಮಾತೃಭಾಷೆ ಅಥವಾ ಸ್ಥಳೀಯ ಸಮುದಾಯಗಳು ಆಡುವ ಭಾಷೆಯಾಗಿರುತ್ತದೆ. ಇಷ್ಟಾದರೂ ವಾಸ್ತವ ಸಂಗತಿ ಏನೆಂದರೆ ಅನೇಕವೇಳೆ ಬಹುಭಾಷಿ ಕುಟುಂಬಗಳಲ್ಲಿ ಮನೆಯ ಕೆಲವರು ತಮ್ಮದೇ ವಿಶಿಷ್ಟವಾದ ಮನೆಮಾತನ್ನು ಬಳಕೆ ಮಾಡಬಹುದು. ಈ ಭಾಷೆ ಮಾತೃಭಾಷೆ ಅಥವಾ ಪ್ರಾದೇಶಿಕ ಭಾಷೆಗಿಂತ ಬೇರೆಯದೇ ಆಗಿರಬಹುದು. ಸಾಧ್ಯವಾದಷ್ಟು ಮಟ್ಟಿಗೆ ಕಡೇಪಕ್ಷ ಐದನೆಯ ತರಗತಿಯವರೆಗೆ ಅಥವಾ ಅದಕ್ಕಿಂತಲೂ ಮುಂದೆ ಅಂದರೆ ಎಂಟನೆಯ ತರಗತಿಯವರೆಗೆ ಅಥವಾ ಅದಕ್ಕಿಂತಲೂ ಮುಂದೆ ಶಿಕ್ಷಣದ ಮಾಧ್ಯಮ ಮನೆಭಾಷೆ/ ಮಾತೃಭಾಷೆ/ ಸ್ಥಳೀಯ ಭಾಷೆ/ ಪ್ರಾದೇಶಿಕ ಭಾಷೆ ಆಗಿರಬೇಕು. ಇದಾದ ಅನಂತರ ಸಾಧ್ಯವಾದಷ್ಟು ಮಟ್ಟಿಗೆ ಮನೆಭಾಷೆಯನ್ನು/ಸ್ಥಳೀಯ ಭಾಷೆಯನ್ನು ಒಂದು ಭಾಷೆಯಾಗಿ ಓದುವಂತೆ ಅವಕಾಶ ಇರತಕ್ಕದ್ದು. ಸರ್ಕಾರಿ ಹಾಗೂ ಖಾಸಗಿ ಎರಡೂ ಬಗೆಯ ಶಾಲೆಗಳಲ್ಲಿ ಇದನ್ನು ಜಾರಿಗೆ ತರಲಾಗುತ್ತದೆ. ವಿಜ್ಞಾನ ಸೇರಿದಂತೆ ಎಲ್ಲ ವಿಷಯಗಳಲ್ಲೂ ಉಚ್ಚಮಟ್ಟದ ಪಠ್ಯಪುಸ್ತಕಗಳನ್ನು ಮನೆಭಾಷೆಯಲ್ಲಿ/ಮಾತೃಭಾಷೆಯಲ್ಲಿ ದೊರಕಿಸಿಕೊಡಲಾಗುವುದು. ಒಂದು ವೇಳೆ ಮಗು ಆಡುವ ಭಾಷೆ ಹಾಗೂ ಶಿಕ್ಷಣ ಮಾಧ್ಯಮ ಇವೆರಡೂ ಎಲ್ಲಿಯೇ ಆದರೂ ಬೇರೆ ಬೇರೆಯಾಗಿದ್ದರೆ, ಅಂತೆಡೆಗಳಲ್ಲಿ ಈ ಕೊರತೆಯನ್ನು ತುಂಬುವ ಎಲ್ಲ ಪ್ರಯತ್ನ ಮಾಡಲಾಗುವುದು. ಮನೆಭಾಷೆಯಲ್ಲಿ ಒಂದುವೇಳೆ ಪಠ್ಯಸಾಮಗ್ರಿ ದೊರೆಯದೆ ಇರುವಂತಹ ಸಂದರ್ಭಗಳಲ್ಲಿ, ಅಧ್ಯಾಪಕರ ಮತ್ತು ವಿದ್ಯಾರ್ಥಿಗಳ ನಡುವೆ ಸಂಭಾಷಣೆಯ ರೂಪದಲ್ಲಾದರೂ ಮನೆಭಾಷೆಯನ್ನು ಬಳಕೆಗೆ ತರಲಾಗುತ್ತದೆ. ಮನೆಭಾಷೆ/ಮಾತೃಭಾಷೆ ಹಾಗೂ ಶಿಕ್ಷಣ ಮಾಧ್ಯಮ ಬೇರೆ ಬೇರೆಯಾಗಿರುವಂತಹ ವಿದ್ಯಾರ್ಥಿಗಳಿಗೆ ಸಂಬಂಧಪಟ್ಟ ಹಾಗೆ ಅಧ್ಯಾಪಕರು ದ್ವಿಭಾಷೆ ಕಲಿಕೆ ಸಾಮಗ್ರಿಯನ್ನು ಬಳಕೆ ಮಾಡುವ ಮೂಲಕ ದ್ವಿಭಾಷೆ ನಡೆಯನ್ನು ಅನುಸರಿಸುವಂತೆ ಪ್ರೋತ್ಸಾಹಿಸಲಾಗುವುದು. ಎಲ್ಲ ಭಾಷೆಗಳನ್ನೂ ಎಲ್ಲ ವಿದ್ಯಾರ್ಥಿಗಳಿಗೆ ಒಳ್ಳೆಯ ಗುಣಮಟ್ಟದಲ್ಲಿ ಕಲಿಸಿಕೊಡಲಾಗುವುದು. ಒಂದು ಭಾಷೆಯನ್ನು ಅಚ್ಚುಕಟ್ಟಾಗಿ ಕಲಿಸಲು ಹಾಗೂ ಕಲಿಯಲು ಅದು ಶಿಕ್ಷಣ ಮಾಧ್ಯಮವಾಗಿರಬೇಕು ಎಂಬ ಅಗತ್ಯವೇನಿಲ್ಲ.

4.12 ಸಂಶೋಧನೆಗಳು ಸ್ಪಷ್ಟವಾಗಿ ನಿರೂಪಿಸುವಂತೆ ಮಕ್ಕಳು 2 ವರ್ಷದಿಂದ 8 ವರ್ಷಗಳ ವಯೋಮಾನದ ನಡುವೆ ಬಹಳ ಬೇಗ ಭಾಷೆಯನ್ನು ಕಲಿಯುತ್ತಾರೆ. ಬಹುಭಾಷಿಕತೆಯಿಂದ ಈ ವಯಸ್ಸಿನ ಮಕ್ಕಳಿಗೆ ಬಹಳ ಹೆಚ್ಚಿನ ಮಟ್ಟಿಗೆ ಸಂಜ್ಞಾನಾತ್ಮಕ ಪ್ರಯೋಜನಗಳು

ದೊರೆಯುತ್ತವೆ. ಫೌಂಡೇಶನ್ ಅಥವಾ ತಳಹದಿ ಹಂತದ ಪ್ರಾರಂಭದಲ್ಲಿ ಹಾಗೂ ಅಲ್ಲಿಂದ ಮುಂದೆ ಮಕ್ಕಳಿಗೆ ಬೇರೆ ಬೇರೆ ಭಾಷೆಗಳ ವಾತಾವರಣಕ್ಕೆ (ಮಾತೃಭಾಷೆಗೆ ಇಲ್ಲಿ ಹೆಚ್ಚಿನ ಒತ್ತು ನೀಡಲಾಗುವುದು) ಒಡ್ಡಲಾಗುವುದು. ಎಲ್ಲ ಭಾಷೆಗಳನ್ನು ಮನರಂಜನೆ ಎನಿಸುವಂತೆ, ಸಂವಾದ ಶೈಲಿಯಲ್ಲಿ ಕಲಿಸಿಕೊಡಲಾಗುವುದು. ಇಲ್ಲಿ ಕಲಿಕೆ ಬಹಳಮಟ್ಟಿಗೆ ಸಂಭಾಷಣೆಯ ರೂಪದಲ್ಲಿ ಇರುವುದು ಹಾಗೂ ಪ್ರಾರಂಭದ ವರ್ಷಗಳಲ್ಲಿ ಮಾತೃಭಾಷೆಯಲ್ಲಿ ಓದಲು ಹಾಗೂ ತದನಂತರ ಬರಿಯಲು ಕಲಿಸಿಕೊಡಲಾಗುವುದು. ಗ್ರೇಡ್ 3 ಹಾಗೂ ಅಲ್ಲಿಂದ ಮುಂದಿನ ತರಗತಿಗಳಲ್ಲಿ ಬೇರೆ ಬೇರೆ ಭಾಷೆಗಳಲ್ಲಿ ಓದುವ ಮತ್ತು ಬರೆಯುವ ಕೌಶಲಗಳಿಗೆ ಒತ್ತಾಸೆ ನೀಡಲಾಗುವುದು. ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳು ಈ ಎರಡೂ ಕಡೆಯಿಂದ ದೇಶಾದ್ಯಂತ ಎಲ್ಲ ಕ್ಷೇತ್ರೀಯ ಭಾಷೆಗಳಲ್ಲಿ, ಅದರಲ್ಲೂ ಸಂವಿಧಾನದ ಎಂಟನೆಯ ಅನುಸೂಚಿಯಲ್ಲಿ ಉಲ್ಲೇಖಿಸಲಾಗಿರುವ ಎಲ್ಲ ಭಾಷೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಷಾ ಶಿಕ್ಷಕರನ್ನು ನೇಮಕ ಮಾಡಿಕೊಳ್ಳುವ ದೊಡ್ಡ ಪ್ರಯತ್ನವನ್ನು ಮಾಡಲಾಗುವುದು. ರಾಜ್ಯಗಳು, ಅದರಲ್ಲೂ ವಿಶೇಷವಾಗಿ ಭಾರತದ ಬೇರೆ ಬೇರೆ ಪ್ರದೇಶಗಳಲ್ಲಿರುವ ರಾಜ್ಯಗಳು, ತಮ್ಮ ತಮ್ಮ ರಾಜ್ಯಗಳಲ್ಲಿ ತ್ರಿಭಾಷಾ ಸೂತ್ರವನ್ನು ಅಳವಡಿಸಿಕೊಳ್ಳುವುದಕ್ಕಾಗಿ ಹಾಗೂ ಇಡೀ ದೇಶದಲ್ಲಿ ಭಾರತೀಯ ಭಾಷೆಗಳನ್ನು ಅಧ್ಯಯನ ಮಾಡುವ ಸಲುವಾಗಿ ಹೆಚ್ಚಿನ ಸಂಖ್ಯೆಯಲ್ಲಿ ಅಧ್ಯಾಪಕರನ್ನು ನೇಮಕ ಮಾಡಿಕೊಳ್ಳಲು ತಮ್ಮತಮ್ಮಲ್ಲೇ ದ್ವಿಪಕ್ಷೀಯ ಒಪ್ಪಂದಗಳನ್ನು ಮಾಡಿಕೊಳ್ಳಬಹುದು. ಬೇರೆ ಬೇರೆ ಭಾಷೆಗಳನ್ನು ಕಲಿಯಲು ಹಾಗೂ ಭಾಷಾ ಶಿಕ್ಷಣವನ್ನು ಜನಪ್ರಿಯವನ್ನಾಗಿ ಮಾಡಲು ಬಹಳ ದೊಡ್ಡ ಪ್ರಮಾಣದಲ್ಲಿ ತಂತ್ರಜ್ಞಾನವನ್ನು ಬಳಕೆ ಮಾಡಿಕೊಳ್ಳಲಾಗುವುದು.

4.13 ಸಂವಿಧಾನದಲ್ಲಿ ಒದಗಿಸಲಾಗಿರುವ ಅವಕಾಶಗಳು, ಜನಸ್ತೋಮದ, ಪ್ರದೇಶಗಳ ಹಾಗೂ ಕೇಂದ್ರದ ಆಸೆ ಆಕಾಂಕ್ಷೆಗಳನ್ನು, ಬಹುಭಾಷೀಯತೆಯನ್ನು ಮತ್ತು ರಾಷ್ಟ್ರೀಯ ಏಕತೆಯನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಇವುಗಳಿಗೆ ಇಂಬುನೀಡುವ ಸಲುವಾಗಿ ತ್ರಿಭಾಷಾ ಸೂತ್ರದ ಅಳವಡಿಕೆಯನ್ನು ಮುಂದುವರೆಸಲಾಗುವುದು. ಆದಾಗ್ಯೂ ಈ ತ್ರಿಭಾಷಾ ಸೂತ್ರದ ಅನ್ವಯದಲ್ಲಿ ಹೆಚ್ಚಿನ ಮುಕ್ತತೆ ಇರುವಂತೆ ನೋಡಿಕೊಳ್ಳಲಾಗುವುದು. ಯಾವುದೇ ರಾಜ್ಯದ ಮೇಲೆ ಯಾವುದೇ ಭಾಷೆಯನ್ನು ಬಲವಂತವಾಗಿ ಹೇರಲಾಗುವುದಿಲ್ಲ. ಮಕ್ಕಳು ಕಲಿಯುವ ಮೂರು ಭಾಷೆಗಳ ಪೈಕಿ ಆಯ್ಕೆ ಆಯಾ ರಾಜ್ಯಗಳ, ಪ್ರದೇಶಗಳ ಹಾಗೂ ಅದಕ್ಕಿಂತ ಮಿಗಿಲಾಗಿ ಕಲಿಯುವ ಮಕ್ಕಳ ಸ್ವಂತ ಆಯ್ಕೆಯೇ ಆಗಿರುತ್ತದೆ. ಆದರೆ ಕಲಿಯುವುದಕ್ಕೆ ಆಯ್ಕೆ ಮಾಡಿಕೊಳ್ಳುವ ಈ ಮೂರು ಭಾಷೆಗಳಲ್ಲಿ ಎರೆಡು ಭಾಷೆಗಳು ಭಾರತೀಯ ಭಾಷೆಗಳೇ ಆಗಿರಬೇಕು. ವಿಶೇಷವಾಗಿ ಇನ್ನೊಂದು ಸಂಗತಿ ಏನೆಂದರೆ ಆಯ್ಕೆ ಮಾಡಿಕೊಂಡ ಮೂರು ಭಾಷೆಗಳ ಪೈಕಿ ಯಾರೇ ವಿದ್ಯಾರ್ಥಿ ಒಂದು ಅಥವಾ ಹೆಚ್ಚಿನ ಭಾಷೆಗಳನ್ನು ಬದಲಾವಣೆ ಮಾಡಿಕೊಳ್ಳಲು ಬಯಸುವುದಾದರೆ, ಗ್ರೇಡ್ 6 ಇಲ್ಲವೆ 7ರಲ್ಲಿ ಹೀಗೆ ಮಾಡಬಹುದು. ಆದರೆ ಹೀಗೆ ಮಾಡಬೇಕಾದರೆ ಅಂಥ ವಿದ್ಯಾರ್ಥಿಗಳು ಈ ಮೂರೂ ಭಾಷೆಗಳಲ್ಲಿ - ಈ ಪೈಕಿ ಒಂದು ಭಾರತೀಯ ಭಾಷೆಯಲ್ಲಿ ಸಾಹಿತ್ಯದ ಮಟ್ಟದವರೆಗೆ ಅಧ್ಯಯನ ಮಾಡುವುದು ಸೇರಿಕೊಂಡಿರುತ್ತದೆ - ಸೆಕಂಡರಿ ಅಂದರೆ ಮಾಧ್ಯಮಿಕ ತರಗತಿಗಳ ಕೊನೆಯ ವೇಳೆಗೆ ತಾವು ಮೂಲ ಪ್ರಾವೀಣ್ಯ ಪಡೆದುಕೊಂಡಿದ್ದೇವೆಂಬ ಬಗ್ಗೆ ಖಾತರಿಪಡಿಸಬೇಕಾಗುತ್ತದೆ.

4.14 ಈ ಸಂಬಂಧವಾಗಿ ಒಳ್ಳೆಯ ಗುಣಮಟ್ಟದ ವಿಜ್ಞಾನ ಮತ್ತು ಗಣಿತ ವಿಷಯಗಳ ದ್ವಿಭಾಷಿ ಪಠ್ಯಪುಸ್ತಕಗಳನ್ನು ಮತ್ತು ಬೋಧನ-ಕಲಿಕಾ ಸಾಮಗ್ರಿಗಳನ್ನು ಸಿದ್ಧಪಡಿಸುವ ಎಲ್ಲ ಪ್ರಯತ್ನಗಳನ್ನೂ ಮಾಡಲಾಗುವುದು. ಇದರಿಂದ ವಿದ್ಯಾರ್ಥಿಗಳು ಎರಡೂ ವಿಷಯಗಳನ್ನು ಕುರಿತಂತೆ ಆಲೋಚಿಸಲು ಮತ್ತು ಮಾತನಾಡಲು ತಮ್ಮ ಮನೆಭಾಷೆ/ಮಾತೃಭಾಷೆ ಮತ್ತು ಇಂಗ್ಲಿಷ್ ಈ ಎರಡರಲ್ಲೂ ಸಮರ್ಥರಾಗಲು ಸಾಧ್ಯವಾಗುವಂತಿರಬೇಕು.

4.15 ಪ್ರಪಂಚದ ಹಲವಾರು ಮುಂದುವರಿದ ದೇಶಗಳಿಗೆ ಅವರವರ ಭಾಷೆ, ಸಂಸ್ಕೃತಿ ಮತ್ತು ಪರಂಪರೆಗಳ ಹಿನ್ನಲೆಯಲ್ಲಿ ಶಿಕ್ಷಣ ಪಡೆಯುವುದರಲ್ಲಿ ಯಾವ ಅಡ್ಡಿಯೂ ಕಂಡುಬರುವುದಿಲ್ಲ. ವಾಸ್ತವ ಸಂಗತಿ ಏನೆಂದರೆ ಇದರಿಂದ ಶೈಕ್ಷಣಿಕ, ಸಾಮಾಜಿಕ ಮತ್ತು ತಾಂತ್ರಿಕ ಬೆಳೆವಣಿಗೆಗೆ ಹೆಚ್ಚು ಅನುಕೂಲವೇ ಆಗುವುದು. ಭಾರತೀಯ ಭಾಷೆಗಳು ಪ್ರಪಂಚದ ಅತ್ಯಂತ ಸಮೃದ್ಧವಾದ, ಅತ್ಯಂತ ವೈಜ್ಞಾನಿಕವಾದ, ಅತ್ಯಂತ ಸುಂದರವಾದ ಹಾಗೂ ಅತ್ಯಂತ ಅಭಿವ್ಯಕ್ತಿ ಸಾಮರ್ಥ್ಯವುಳ್ಳ ಭಾಷೆಗಳ ಸಾಲಿನಲ್ಲಿ ತಮ್ಮದೇ ಆದ ಮನ್ನಣೆಯನ್ನು ಪಡೆದಿವೆ. ನಮ್ಮ ಈ ಭಾಷೆಗಳಲ್ಲಿ ಪ್ರಾಚೀನ ಮತ್ತು ಆಧುನಿಕ ಸಾಹಿತ್ಯದ (ಗದ್ಯ ಮತ್ತು ಕಾವ್ಯ ಎರಡೂ ಒಳಗೊಂಡಂತೆ) ದೊಡ್ಡ ಭಂಡಾರವೇ ಕಂಡುಬರುತ್ತದೆ. ಈ ಭಾಷೆಗಳಲ್ಲಿ ದೊರಕುವ ಚಲನಚಿತ್ರಗಳು, ಸಂಗೀತ ಮತ್ತು ಸಾಹಿತ್ಯ ಭಾರತದ ರಾಷ್ಟ್ರೀಯ ಅಸ್ಮಿತೆಯಾಗಿದೆ, ಗತಕಾಲದಿಂದ ಬಂದ ಬಳುವಳಿಯಾಗಿದೆ. ಸಾಂಸ್ಕೃತಿಕ ಮತ್ತು ರಾಷ್ಟ್ರೀಯ ಏಕೀಕರಣದ ದೃಷ್ಟಿಯಿಂದ ಭಾರತೀಯ ಯುವಜನರು ತಮ್ಮ ನಾಡಿನ ಭಾಷೆಗಳ ವಿಶಾಲವಾದ ಮತ್ತು ಸಮೃದ್ಧವಾದ ಸಂಪತ್ತು ಹಾಗೂ ಸಾಹಿತ್ಯದ ವಿಸ್ತೃತ ಭಂಡಾರದ ಬಗೆಗೆ ತಿಳಿವಳಿಕೆ ಹೊಂದಿದವರಾಗಬೇಕು.

4.16 ಈ ಪ್ರಯತ್ನಗಳ ಅಂಗವಾಗಿ ದೇಶದಲ್ಲಿರುವ ಪ್ರತಿಯೊಬ್ಬ ವಿದ್ಯಾರ್ಥಿಯೂ 'ಭಾರತೀಯ ಭಾಷೆಗಳು' ಎಂಬ ಉಲ್ಲಾಸಕರವಾದ ಯೋಜನೆ/ಚಟುವಟಿಕೆಯಲ್ಲಿ ಭಾಗವಹಿಸತಕ್ಕದ್ದು. ಉದಾಹರಣೆಗೆ ಗ್ರೇಡ್ 6-8ರಲ್ಲಿ 'ಒಂದು ಭಾರತ - ಶ್ರೇಷ್ಠ ಭಾರತ' ಇಂಥ ಒಂದು ವಿಷಯವನ್ನು ಆಯ್ಕೆ ಮಾಡಿಕೊಳ್ಳಬಹುದು. ಈ ಯೋಜನೆ/ಚಟುವಟಿಕೆಯಲ್ಲಿ ವಿದ್ಯಾರ್ಥಿಗಳು ಬಹಳ ಮಟ್ಟಿಗೆ ಪ್ರಮುಖ ಭಾರತೀಯ ಭಾಷೆಗಳಲ್ಲಿ ಏಕತೆಯನ್ನು ಕುರಿತಂತೆ ಕಂಡುಬರುವ ಗಮನಾರ್ಹ ಸಂಗತಿಗಳ ವಿಚಾರವಾಗಿ ತಿಳಿದುಕೊಳ್ಳುತ್ತಾರೆ. ಈ ಪ್ರಯತ್ನದ

ಅಡಿಯಲ್ಲಿ ಆ ಭಾಷೆಗಳ ಧ್ವನ್ಯಾತ್ಮಕತೆ, ವೈಜ್ಞಾನಿಕವಾಗಿ ನಿರ್ಮಾಣಗೊಂಡಿರುವ ವರ್ಣಮಾಲೆ ಮತ್ತು ಲಿಪಿವ್ಯವಸ್ಥೆ, ಅವುಗಳ ಸಾಮಾನ್ಯ ವ್ಯಾಕರಣ ರಚನೆ, ಸಂಸ್ಕೃತ ಮತ್ತು ಇತರ ಶಾಸ್ತ್ರೀಯ ಇಲ್ಲವೇ ಅಭಿಜಾತ ಭಾಷೆಗಳ ಕಡೆಯಿಂದ ಈ ಭಾಷೆಗಳಿಗೆ ಹರಿದುಬಂದಿರುವ ಪದಗಳ ಮೂಲ ಇವುಗಳನ್ನು ಅನ್ವೇಷಿಸುವುದರಿಂದ ಮೊದಲುಗೊಂಡು ಈ ಭಾಷೆಗಳ ನಡುವಣ ವ್ಯತ್ಯಾಸಗಳು, ಇವುಗಳ ಪರಸ್ಪರ ಪ್ರಭಾವ ಇವೆಲ್ಲವನ್ನು ಅರಿಯುವುದು ಈ ಚಟುವಟಿಕೆಯಲ್ಲಿ ಸೇರಿಕೊಂಡ ಅಂಶಗಳಾಗಿರುತ್ತವೆ. ಅಂತೆಯೆ ಅವರು ಯಾವ ಭೌಗೋಳಿಕ ಕ್ಷೇತ್ರಗಳಲ್ಲಿ ಯಾವ ಯಾವ ಭಾಷೆಗಳನ್ನು ಮಾತನಾಡುತ್ತಾರೆ ಎಂಬುದನ್ನು ಅರಿಯುತ್ತಾರೆ; ಆದಿವಾಸಿ ಬುಡಕಟ್ಟುಗಳ ಭಾಷೆಗಳ ಸ್ವರೂಪ ಮತ್ತು ಸಂರಚನೆಗಳ ಕುರಿತು ತಿಳಿವಳಿಕೆ ಪಡೆಯುತ್ತಾರೆ; ಹಾಗೆಯೇ ಭಾರತದ ಎಲ್ಲ ಭಾಷೆಗಳಲ್ಲಿ ಕಂಡುಬರುವ ಕೆಲವು ಮುಖ್ಯವಾದ ಉದ್ಧರಣಯೋಗ್ಯವಾದ ಉಕ್ತಿಗಳನ್ನು ಕಲಿಯುತ್ತಾರೆ; ಇಂಥ ಸಮೃದ್ಧವಾದ ಮತ್ತು ಪ್ರವರ್ಧಮಾನಕ್ಕೆ ಬರುತ್ತಿರುವ ಸಾಹಿತ್ಯಗಳ ವಿಚಾರವಾಗಿ ಪರಿಜ್ಞಾನವನ್ನು ಪಡೆದುಕೊಳ್ಳುತ್ತಾರೆ. ಅಗತ್ಯವಾದರೆ ಸೂಕ್ತವಾದ ಅನುವಾದಗಳ ಮೂಲಕ ಈ ರೀತಿಯ ಚಟುವಟಿಕೆಯಿಂದ ಅವರಿಗೆ ಭಾರತದ ಏಕತೆ ಹಾಗೂ ಮನೋಹರವಾದ ಸಾಂಸ್ಕೃತಿಕ ಬಳುವಳಿ ಮತ್ತು ವೈವಿಧ್ಯ ಇವುಗಳ ಅನುಭವ ಉಂಟಾಗುತ್ತದೆ. ಇವುಗಳ ಪರಿಣಾಮದಿಂದಾಗಿ ಅವರು ಮುಂದೆ ತಮ್ಮ ಜೀವನಾದ್ಯಂತ ಭಾರತದ ಬೇರೆ ಬೇರೆ ಪ್ರದೇಶಗಳ ಜನರನ್ನು ಸಂಧಿಸಿದಾಗ ಸಹಜವಾದ, ಪರಿಚಿತವಾದ ಅನುಭವವನ್ನು ಪಡೆದುಕೊಳ್ಳುತ್ತಾರೆ. ಈ ಯೋಜನೆ/ಚಟುವಟಿಕೆ ಒಂದು ಸದಭಿರುಚಿಯ ಆನಂದದಾಯಕವಾದ ಚಟುವಟಿಕೆಯಾಗಿರುತ್ತದೆ. ಇದರಲ್ಲಿ ಯಾವುದೇ ರೀತಿಯ ಮೌಲ್ಯಮಾಪನ ಕ್ರಮ ಇರುವುದಿಲ್ಲ.

4.17 ಭಾರತದ ಶಾಸ್ತ್ರೀಯ ಅಥವಾ ಅಭಿಜಾತ ಭಾಷೆಗಳ ಮತ್ತು ಸಾಹಿತ್ಯಗಳ ಮಹತ್ವ, ಪ್ರಸ್ತುತತೆ ಹಾಗೂ ಸೊಬುಗನ್ನು ಕಡೆಗಣಿಸುವಂತಿಲ್ಲ. ಸಂವಿಧಾನದ ಎಂಟನೆಯ ಅನುಸೂಚಿಯಲ್ಲಿ ಉಲ್ಲೇಖಿಸಿರುವ ಸಂಸ್ಕೃತ, ಒಂದು ಮಹತ್ವಪೂರ್ಣವಾದ ಆಧುನಿಕ ಭಾಷೆಯಾಗಿದ್ದರೂ ಇದು ಎಷ್ಟು ವ್ಯಾಪಕವಾದುದೆಂದರೆ ಇಡೀ ಗ್ರೀಕ್ ಮತ್ತು ಲ್ಯಾಟಿನ್ ಭಾಷೆಗಳ ಸಾಹಿತ್ಯವನ್ನು ಒಟ್ಟುಗೂಡಿಸಿ ಹೋಲಿಸಿ ನೋಡಿದರೂ ಅವು ಇದಕ್ಕೆ ಸಮನಾಗಲಾರವು. ಸಂಸ್ಕೃತ ಸಾಹಿತ್ಯದಲ್ಲಿ ಗಣಿತ, ತತ್ವಶಾಸ್ತ್ರ, ವ್ಯಾಕರಣ, ಸಂಗೀತ, ರಾಜನೀತಿ, ವೈದ್ಯ, ವಾಸ್ತುಶಿಲ್ಪ, ಲೋಹವಿಜ್ಞಾನ, ನಾಟಕ, ಕಾವ್ಯ, ಕಥೆ ಹಾಗೂ ಇನ್ನಿತರ ಹಲವಾರು ಶಾಸ್ತ್ರ ಪ್ರಕಾರಗಳು, ಕಲೆ ಸಾಹಿತ್ಯಗಳು ಕಂಡುಬರುತ್ತವೆ. (ಇದನ್ನು ಸಂಸ್ಕೃತ ಜ್ಞಾನ ವ್ಯವಸ್ಥೆ ಎಂದು ಕರೆಯುತ್ತಾರೆ). ಇದೊಂದು ವಿಸ್ತೃತವಾದ ಭಂಡಾರ. ಬೇರೆ ಬೇರೆ ಧರ್ಮಪಂಥಗಳಿಗೆ ಸೇರಿದ ಜನರೇ ಅಲ್ಲದೆ ಯಾವುದೇ ಧರ್ಮಕ್ಕೆ ಅಂಟಿಕೊಳ್ಳದ ಹಾಗೂ ಬದುಕಿನ ಎಲ್ಲ ಕ್ಷೇತ್ರಗಳಿಂದ, ಸಾಮಾಜಿಕ-ಆರ್ಥಿಕ ಹಿನ್ನೆಲೆಯಿಂದ ಬಂದ ಜನರು ಸಾವಿರಾರು ವರ್ಷಗಳ ಕಾಲ ಕೆಲಸ ಮಾಡಿ ಈ ಜ್ಞಾನನಿಧಿಯನ್ನು ನಿರ್ಮಾಣ ಮಾಡಿದ್ದಾರೆ. ಈ ರೀತಿಯಾಗಿ ಸಂಸ್ಕೃತವನ್ನು ತ್ರಿಭಾಷಾಸೂತ್ರಗಳಲ್ಲಿ ಒಂದು ಭಾಷೆಯಾಗಿ ಪರಿಗಣಿಸುತ್ತಾ ಶಾಲಾ ಹಂತದಲ್ಲಿ ಮಾತ್ರವಲ್ಲದೆ ಉನ್ನತ ಶಿಕ್ಷಣ ಹಂತದಲ್ಲಿಯೂ ಒಂದು ಪ್ರಮುಖ ಆಯ್ಕೆ ಭಾಷೆಯಾಗಿ, ವಿದ್ಯಾರ್ಥಿಗಳ ಪಾಲಿಗೆ ಜ್ಞಾನವರ್ಧಕ ಭಾಷೆಯಾಗಿ ತೆಗೆದುಕೊಂಡು ಅಭ್ಯಾಸ ಮಾಡಲು ಅವಕಾಶವನ್ನು ಒದಗಿಸಿಕೊಡಲಾಗುತ್ತದೆ. ಸಂಸ್ಕೃತದ ಈ ಬಗೆಯ ಓದು ಸಾಕಷ್ಟು ಉಲ್ಲಾಸಕರವಾಗಿರುವಂತೆಯೂ, ಅನುಭವಾತ್ಮಕವಾಗಿರುವಂತೆಯೂ ಮಾಡಲಾಗುವುದಲ್ಲದೆ ಇವತ್ತಿನ ಸಂದರ್ಭಕ್ಕೆ ಪ್ರಸ್ತುತವಾಗಿರುವಂತೆ ಗಮನಹರಿಸಲಾಗುವುದು. ಸಂಸ್ಕೃತ ಜ್ಞಾನವ್ಯವಸ್ಥೆ (Sanskrit knowledge systems) - ಅದರಲ್ಲೂ ವಿಶೇಷವಾಗಿ ಧ್ವನಿವಿಜ್ಞಾನ ಮತ್ತು ಉಚ್ಚಾರಣ ವಿಧಾನಗಳನ್ನು ಬಳಕೆ ಮಾಡಿಕೊಳ್ಳುವುದು ಕೂಡ - ಈ ಕಲಿಕೆಯ ಒಂದು ಮುಖ್ಯವಾದ ಭಾಗವಾಗಿರುತ್ತದೆ. ತಳಹದಿಯ ಹಾಗೂ ಮಾಧ್ಯಮಿಕ ಶಾಲಾ ಹಂತಗಳಲ್ಲಿ ಸಂಸ್ಕೃತ ಪಠ್ಯಪುಸ್ತಕಗಳನ್ನು ಸರಳ ಮಾನಕ ಸಂಸ್ಕೃತ (Simple Standard Sanskrit – SSS) ವಿಧಾನದಲ್ಲಿ ಸಂಸ್ಕೃತವನ್ನು ಸಂಸ್ಕೃತದ ಮೂಲಕ (STS) ಕಲಿಸಲನುವಾಗುವಂತೆ, ಸಂಸ್ಕೃತದ ಕಲಿಕೆ ನಿಜಕ್ಕೂ ಉಲ್ಲಾಸಕರವಾಗಿರುವಂತೆ ಸಿದ್ಧಪಡಿಸಲಾಗುವುದು.

4.18 ಶಾಸ್ತ್ರೀಯ ತಮಿಳು, ತೆಲುಗು, ಕನ್ನಡ, ಮಲೆಯಾಳಂ, ಒಡಿಯಾ ಭಾಷೆಗಳೂ ಸೇರಿದಂತೆ ಭಾರತದ ಇತರ ಶಾಸ್ತ್ರೀಯ ಭಾಷೆಗಳಲ್ಲೂ ಅತ್ಯಂತ ಶ್ರೀಮಂತವಾದ ಸಾಹಿತ್ಯ ಕಂಡುಬರುತ್ತದೆ. ಇವೇ ಅಲ್ಲದೆ ಪಾಲಿ, ಪರ್ಷಿಯನ್ ಮತ್ತು ಪ್ರಾಕೃತ ಭಾಷೆಗಳು ಕೂಡ ಮಹತ್ವದ್ದಾಗಿವೆ. ಇವುಗಳ ಶ್ರೀಮಂತಿಕೆಗಾಗಿ, ಇವುಗಳ ಆಸ್ವಾದನೆಯಿಂದ ದೊರೆಯುವ ಆನಂದಕ್ಕಾಗಿ ಮುಂಬರುವ ತಲೆಮಾರುಗಳಿಗಾಗಿ ಇವುಗಳನ್ನು ಸುರಕ್ಷಿತವಾಗಿ ಕಾಪಾಡಿಕೊಂಡು ಬರುವುದು ಅಗತ್ಯ. ಭಾರತ ಪೂರ್ಣವಾಗಿ ಅಭಿವೃದ್ಧಿ ಹೊಂದಿದ ದೇಶವಾಗಿ ರೂಪುಗೊಂಡಾಗ, ಮುಂದಿನ ತಲೆಮಾರಿನ ಜನರು ಭಾರತದ ಸೊಗಸಾದ ಮತ್ತು ವಿಸ್ತೃತವಾದ ಅಭಿಜಾತ ಸಾಹಿತ್ಯ ಶ್ರೀಮಂತಿಕೆಯನ್ನು ಆಸ್ವಾದಿಸಬಯಸುತ್ತಾರೆ. ಸಂಸ್ಕೃತವೇ ಅಲ್ಲದೆ ಭಾರತದ ತಮಿಳು, ತೆಲುಗು, ಕನ್ನಡ, ಮಲೆಯಾಳಂ, ಒಡಿಯಾ, ಪಾಳಿ, ಪಾರಸಿ, ಪ್ರಾಕೃತ ಇಂಥ ಇತರ ಭಾರತೀಯ ಶಾಸ್ತ್ರೀಯ ಭಾಷಾ ಸಾಹಿತ್ಯಗಳು ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಐಚ್ಛಿಕದ ರೂಪದಲ್ಲಿ ಲಭ್ಯವಾಗಬೇಕು. ಪ್ರಾಯಃ ಆನ್‌ಲೈನ್ ಮಾಡ್ಯೂಲ್‌ಗಳ ರೂಪದಲ್ಲಿ ಅನುಭವಜನ್ಯವಾದ ಹಾಗೂ ನವೀನ ಚಿಂತನೆಯೊಡಗೂಡಿದ ಕಲಿಕೆಯ ರೂಪದಲ್ಲಿ ವಿದ್ಯಾರ್ಥಿಗಳಿಗೆ ಇವು ದೊರಕಬಹುದು. ಇಂಥ ಭಾಷೆಗಳು ಮತ್ತು ಇವುಗಳ ಸಾಹಿತ್ಯ ಜೀವಂತವಾಗಿರಬೇಕು, ಹಸುರಾಗಿರಬೇಕು ಎಂಬುದು ಇಲ್ಲಿಯ ಉದ್ದೇಶವಾಗಿದೆ. ಅಂತೆಯೇ ಮೌಖಿಕವಾಗಿ, ಬರೆವಣಿಗೆ ರೂಪದಲ್ಲಿ ಸಮೃದ್ಧವಾದ ಭಾರತೀಯ ಸಾಹಿತ್ಯ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಮೈಗೂಡಿಸಿಕೊಂಡು ಬೆಳೆದುಬಂದಿರುವ, ಬರುತ್ತಿರುವ ಎಲ್ಲ ಭಾರತೀಯ ಭಾಷಾ

ಸಾಹಿತ್ಯಗಳನ್ನು ಇದೇ ರೀತಿಯಲ್ಲಿ ಪರಿಗಣಿಸುವ ಪ್ರಯತ್ನ ಮಾಡಲಾಗುವುದು.

4.19 ದೇಶದಲ್ಲಿ ಮಕ್ಕಳ ಉತ್ತಮ ಬೆಳವಣಿಗೆಗಾಗಿ, ಹಾಗೆಯೇ ಈ ಶ್ರೀಮಂತವಾದ ಪರಂಪರಾಗತ ಸಾಹಿತ್ಯಿಕ ಮತ್ತು ಕಲಾತ್ಮಕ ಬಳುವಳಿಯ ಸಂರಕ್ಷಣೆಗಾಗಿ ಎಲ್ಲ ಸರ್ಕಾರಿ ಹಾಗೂ ಖಾಸಗಿ ಶಾಲೆಗಳ ಎಲ್ಲ ವಿದ್ಯಾರ್ಥಿಗಳಿಗೆ ಭಾರತೀಯ ಭಾಷೆಗಳನ್ನು ಮತ್ತು ಅವುಗಳ ಸಾಹಿತ್ಯವನ್ನು ಅಭ್ಯಾಸ ಮಾಡಲು ಕಡೆಯಪಕ್ಷವೆಂದರೂ ಎರೆಡು ವರ್ಷಗಳ ಕಾಲಾವಕಾಶವಿರುತ್ತದೆ. ಅನುಭವಜನ್ಯವಾದ ಹಾಗೂ ಹೊಸ ಆಲೋಚನಾ ಪದ್ಧತಿಯ ಈ ಅಧ್ಯಯನದಲ್ಲಿ ತಂತ್ರಜ್ಞಾನದ ಬಳಕೆ ಕೂಡ ಒಟ್ಟುಸೇರಿದ್ದು ಗ್ರೇಡ್ ಆರರಿಂದ ಹನ್ನೆರಡರವರೆಗಿನ ವಿದ್ಯಾರ್ಥಿಗಳು ಇವುಗಳನ್ನು ಅಭ್ಯಾಸ ಮಾಡಲು ಸಾಧ್ಯವಾಗುತ್ತದೆ. ಮಾಧ್ಯಮಿಕ ಹಂತದಿಂದ ಸೆಕಂಡರಿ ಹಂತದವರೆಗೆ, ಅಷ್ಟೇ ಏಕೆ, ಅಲ್ಲಿಂದ ಮುಂದೆ ಇವುಗಳ ಓದನ್ನು ಮುಂದುವರಿಸಿಕೊಂಡು ಹೋಗುವ ಅವಕಾಶ ಇರುತ್ತದೆ.

4.20 ಭಾರತೀಯ ಭಾಷೆಗಳಲ್ಲಿ ಮತ್ತು ಇಂಗ್ಲಿಷಿನಲ್ಲಿ ಉತ್ತಮಮಟ್ಟದ ಕೋರ್ಸುಗಳೆ ಅಲ್ಲದೆ ಕೊರಿಯಾ, ಜಪಾನೀಸ್, ಫ್ರೆಂಚ್, ಜರ್ಮನ್, ಸ್ಪ್ಯಾನಿಷ್, ಪೋರ್ಚುಗೀಸ್ ಭಾಷೆಗಳನ್ನು ಕೂಡ ಮಾಧ್ಯಮಿಕ ಹಂತದಲ್ಲಿ ವ್ಯಾಪಕವಾಗಿ ಅಧ್ಯಯನ ಮಾಡುವ ಅವಕಾಶವನ್ನು ಒದಗಿಸಿಕೊಡಲಾಗುತ್ತದೆ. ಇದರಿಂದ ವಿದ್ಯಾರ್ಥಿಗಳಿಗೆ ಜಾಗತಿಕ ಸಂಸ್ಕೃತಿಗಳ ಬಗೆಗೆ ತಿಳಿದುಕೊಳ್ಳಲು, ತಮ್ಮ ಅಭಿರುಚಿ ಮತ್ತು ಆಕಾಂಕ್ಷೆಗಳಿಗನುಗುಣವಾಗಿ ಜಾಗತಿಕ ಜ್ಞಾನವನ್ನು ಪಡೆದುಕೊಳ್ಳಲು, ಪ್ರಪಂಚಾದ್ಯಂತ ಓಡಾಡುವ ಅಭ್ಯಾಸವನ್ನು ಸಹಜವಾಗಿಯೇ ರೂಢಿಸಿಕೊಳ್ಳಲು ಸಾಧ್ಯವಾಗುತ್ತದೆ.

4.21 ಎಲ್ಲ ಭಾಷೆಗಳಿಗೆ ಸಂಬಂಧಿಸಿದ ಶಿಕ್ಷಣವನ್ನು ಹೊಸ ಆಲೋಚನೆಯ ಹಾಗೂ ಅನುಭವಾಧಾರಿತವಾದ ಹಿನ್ನೆಲೆಯಲ್ಲಿ ಗಾಢವಾಗಿಸುವ ಪ್ರಯತ್ನ ಮಾಡಲಾಗುವುದು. ಆ ಕುರಿತ ಓದನ್ನು ಸರಳಗೊಳಿಸುವ ಹಾಗೂ ಆ್ಯಪ್ಸ್ ಮೂಲಕ ಸಾದರಪಡಿಸುವ ವಿಧಾನವನ್ನು ಬಳಸಿಕೊಳ್ಳಲಾಗುವುದು. ಇವುಗಳಿಗಾಗಿ ಫಿಲ್ಮ್, ಥಿಯೇಟರ್, ಕಥೆಹೇಳುವುದು, ಕಾವ್ಯವಾಚನ ಮತ್ತು ಸಂಗೀತ ಇಂತಹ ಅಭಿವ್ಯಕ್ತಿ ವಿಧಾನಗಳನ್ನು ಬಳಕೆ ಮಾಡಿಕೊಂಡು ಬೇರೆ ಬೇರೆ ಬಗೆಯ ಪ್ರಾಸಂಗಿಕ ವಿಷಯಗಳನ್ನು ಮತ್ತು ಸಂದರ್ಭಗಳನ್ನು ಉಲ್ಲೇಖಿಸುತ್ತಾ ಬದುಕಿನ ವಾಸ್ತವ ಸಂಗತಿಗಳ ಪರಿಚಯ ಮಾಡಿಕೊಡಲಾಗುವುದು; ಭಾಷೆಗಳಿಗೆ ಸಂಬಂಧಿಸಿದ ಸಾಂಸ್ಕೃತಿಕ ಮುಖಗಳನ್ನು ಕೂಡ ನಿರೂಪಿಸಲಾಗುವುದು. ಈ ರೀತಿಯಾಗಿ ಭಾಷಾಶಿಕ್ಷಣ ಅನುಭವಾಧಾರಿತ ಶಿಕ್ಷಣಶಾಸ್ತ್ರದ ಮೇಲೆ ಆಧಾರಗೊಂಡಿರುತ್ತದೆ.

4.22 ಭಾರತೀಯ ಸಂಜ್ಞಾಭಾಷೆಯನ್ನು (Indian Sign Language–ISL) ದೇಶಾದ್ಯಂತ ಪರಿನಿಷ್ಠಗೊಳಿಸಲಾಗುವುದು, ಅಂದರೆ ಮಾನಕೀಕರಣಗೊಳಿಸಲಾಗುವುದು. ಕಿವಿಯ ತೊಂದರೆಯಿಂದ ಆಲಿಸಲು ಕಷ್ಟವಾಗುವ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ರಾಷ್ಟ್ರೀಯ ಹಾಗೂ ರಾಜ್ಯ ಮಟ್ಟದಲ್ಲಿ ಪಠ್ಯ ಸಾಮಗ್ರಿಯನ್ನು ಸಿದ್ಧಪಡಿಸಲಾಗುವುದು. ಎಲ್ಲೆಲ್ಲಿ ಸಾಧ್ಯವಾಗುತ್ತದೆಯೋ ಹಾಗೂ ಸೂಕ್ತವೆಂದು ಕಂಡುಬರುತ್ತದೋ ಅಂತಹ ಕಡೆಗಳಲ್ಲಿ ಸ್ಥಳೀಯ ಸಾಂಕೇತಿಕ ಅಥವಾ ಸಂಜ್ಞಾತ್ಮಕ ಭಾಷೆಗಳನ್ನು ಗೌರವಿಸಲಾಗುವುದು ಹಾಗೂ ಪಠ್ಯಸಾಮಗ್ರಿ ಸಿದ್ಧತೆಯಲ್ಲಿ ಮತ್ತು ಬೋಧನೆಗಾಗಿ ಬಳಸಿಕೊಳ್ಳಲಾಗುವುದು.

ಅತ್ಯಾವಶ್ಯಕ ವಿಷಯಗಳ, ಕೌಶಲಗಳ ಮತ್ತು ಸಾಮರ್ಥ್ಯಗಳ ಪಠ್ಯಕ್ರಮ ಏಕೀಕರಣ

4.23 ವಿದ್ಯಾರ್ಥಿಗಳಿಗೆ ತಮ್ಮ ವೈಯಕ್ತಿಕ ಆಸಕ್ತಿಯ ಪಠ್ಯಕ್ರಮಗಳನ್ನು ಆಯ್ಕೆ ಮಾಡಿಕೊಳ್ಳಲು ಮುಕ್ತವಾದ ಆಯ್ಕೆ ಅವಕಾಶಗಳು ಖಂಡಿತವಾಗಿ ಇರಬೇಕು ಎನ್ನುವುದು ವಾಸ್ತವ ಸಂಗತಿ. ಆದರೂ ಬದಲಾಗುತ್ತಿರುವ ಇಂದಿನ ಪ್ರಪಂಚದಲ್ಲಿ ಎಲ್ಲ ವಿದ್ಯಾರ್ಥಿಗಳು ಒಂದು ಒಳ್ಳೆಯ, ಯಶಸ್ವಿಯಾದ, ಹೊಸಬಗೆಯ, ಅನುಕೂಲಕರವಾದ ಹಾಗೂ ಉತ್ಪಾದಕವಾದ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕಾದರೆ ಕೆಲವು ನಿರ್ದಿಷ್ಟ ವಿಷಯಗಳನ್ನು ಕಲಿಯುವ, ಕೌಶಲಗಳನ್ನು ಗಳಿಸಿಕೊಳ್ಳುವ ಮತ್ತು ಯೋಗ್ಯತೆಯನ್ನು ಪಡೆದುಕೊಳ್ಳುವ ಅಗತ್ಯ ಇರುತ್ತದೆ. ಭಾಷಾಪ್ರಾವೀಣ್ಯದ ಜತೆಗೆ ಬಹಳ ಅಗತ್ಯವೆನಿಸುವ ಇನ್ನೂ ಕೆಲವು ಕೌಶಲಗಳೆಂದರೆ: ವೈಜ್ಞಾನಿಕವಾಗಿ ಆಲೋಚನೆ ಮಾಡುವುದು ಮತ್ತು ಪುರಾವೆಗಳನ್ನು ಕಂಡುಕೊಳ್ಳುವ ಸ್ವಭಾವ; ರಚನಾತ್ಮಕತೆ ಮತ್ತು ಹೊಸತನಗಳನ್ನು ಅನ್ವೇಷಿಸುವ ಹುರುಪು; ಸೌಂದರ್ಯಶಾಸ್ತ್ರ ಮತ್ತು ಕಲಾತ್ಮಕತೆಯಿಂದೊಡಗೂಡಿದ ಮನೋಭಾವನೆ; ಮಾತನಾಡುವ ಮತ್ತು ಬರೆಯುವ ಕಲೆಗಾರಿಕೆ, ಸಂವಾದ ನೈಪುಣ್ಯ; ಆರೋಗ್ಯ ಮತ್ತು ಪೋಷಣೆ; ದೈಹಿಕ ಶಿಕ್ಷಣ, ಫಿಟ್ನೆಸ್, ಕ್ರೀಡಾಸಕ್ತಿ; ಸಹಕಾರ ಮತ್ತು ತಂಡ ಮನೋಭಾವನೆ (team work); ಸಮಸ್ಯೆಗಳನ್ನು ಪರಿಹರಿಸುವ ಮತ್ತು ತರ್ಕಬದ್ಧವಾಗಿ ಚಿಂತನೆ ನಡೆಸುವ ಗುಣ; ಔದ್ಯಮಿಕ ಕೌಶಲ ಮತ್ತು ವೃತ್ತಿಪರ ಮನೋಭಾವ; ಡಿಜಿಟಲ್ ಸಾಕ್ಷರತೆ, ಕೋಡಿಂಗ್ ಮತ್ತು ಕಂಪ್ಯೂಟೇಶನಲ್ ಕೆಲಸಗಳನ್ನು ಮಾಡುವ ಸ್ವಭಾವವನ್ನು ರೂಢಿಸಿಕೊಳ್ಳುವುದು; ನೈತಿಕತೆ ಮತ್ತು ನೀತಿ ಆಧಾರಿತ ಚಿಂತನೆ; ಮಾನವ ಮೌಲ್ಯಗಳ ಸಂವಿಧಾನಾತ್ಮಕವಾದ ಚಿಂತನೆ ಕುರಿತ ತಿಳಿವಳಿಕೆ ಮತ್ತು ವ್ಯವಹಾರಶೀಲತೆ; ಲಿಂಗ ಸಂವೇದನೀಯತೆ; ಮೂಲಭೂತ ಕರ್ತವ್ಯಗಳು; ನಾಗರಿಕತೆಯ ಕೌಶಲಗಳು ಮತ್ತು ಮೌಲ್ಯಗಳು; ಭಾರತ ದೇಶದ ಬಗ್ಗೆ ಅರಿವು; ನೀರು ಮತ್ತು ಪ್ರಾಕೃತಿಕ ಸಂಪನ್ಮೂಲಗಳ ಸಂರಕ್ಷಣೆಯ ಜತೆಗೆ ಪರಿಸರ ಜಾಗೃತಿಯ ಅರಿವು, ಸ್ವಚ್ಛತೆ ಮತ್ತು ನೈರ್ಮಲ್ಯಪಾಲನೆ ದೈನಂದಿನ ಆಗುಹೋಗುಗಳ ವಿಚಾರವಾಗಿ ತಿಳಿವಳಿಕೆ ಹಾಗೂ ಮತ್ತು ಸ್ಥಳೀಯ ಸಮುದಾಯಗಳು, ರಾಜ್ಯಗಳು, ದೇಶ ಮತ್ತು ಪ್ರಪಂಚದ ಮುಂದಿರುವ ಸವಾಲುಗಳು

ಇತ್ಯಾದಿಗಳ ಬಗ್ಗೆ ಪರಿಜ್ಞಾನ.

4.24 ಪ್ರಾರಂಭಿಕ ಹಂತಗಳಲ್ಲಿ ಕೃತಕ ಬುದ್ಧಿಶಕ್ತಿ (Artificial Intelligence), ವಿನ್ಯಾಸ ಚಿಂತನೆ (Design Thinking), ಸಮಗ್ರ ಆರೋಗ್ಯ ಚಿಂತನೆ (Holistic Health), ಸಾವಯವ ಬದುಕು (Organic Living), ಪರಿಸರ ಶಿಕ್ಷಣ (Environment Education), ಜಾಗತಿಕ ನಾಗರಿಕತೆ ಶಿಕ್ಷಣ (Global Citizenship Education – GCED) ಮೊದಲಾದ ಇತ್ತೀಚಿನ ವೃತ್ತಿ ಬದುಕಿಗೆ ಸಂಗತವಾದ ವಿಷಯಗಳನ್ನು ಮೊದಲಿನಿಂದ ಹಿಡಿದು ಎಲ್ಲ ಹಂತಗಳವರೆಗೂ ವಿದ್ಯಾರ್ಥಿಗಳಲ್ಲಿ ಬೇರೆ ಬೇರೆ ರೀತಿಯ ಮಹತ್ವಪೂರ್ಣವಾದ ಕೌಶಲಗಳನ್ನು ಬೆಳೆಸುವ ದೃಷ್ಟಿಯಿಂದ ಅಗತ್ಯವಾದ ಶಿಕ್ಷಣಕ್ರಮ ಸಂಬಂಧವಾದ ಹಾಗೂ ಬೋಧನೆಯನ್ನು ಅಳವಡಿಸಿದ ನಡೆಗಳಿಗೆ ಉತ್ತೇಜನ ನೀಡಲಾಗುವುದು.

4.25 ಗಣಿತ ಮತ್ತು ಗಣಿತೀಯವಾದ ಚಿಂತನೆ ಭಾರತದ ಭವಿಷ್ಯಕ್ಕಾಗಿ ಹಾಗೂ ಮುಂಬರುವ ಹಲವಾರು ಉದ್ಯಮಗಳಲ್ಲಿ ಮತ್ತು ಕಾರ್ಯಕ್ಷೇತ್ರಗಳಲ್ಲಿ ಭಾರತವನ್ನು ಮುಂದಾಳು ರಾಷ್ಟ್ರವನ್ನಾಗಿ ನೆಲೆ ನಿಲ್ಲಿಸುವುದಕ್ಕಾಗಿ ಅತ್ಯಂತ ಮಹತ್ವಪೂರ್ಣವೆನಿಸಿಕೊಳ್ಳುತ್ತದೆ. ಅಭಿವೃದ್ಧಿಯ ಹಾದಿಯಲ್ಲಿರುವ ಇಂತಹ ಕ್ಷೇತ್ರಗಳಲ್ಲಿ ಕೃತಕ ಬುದ್ಧಿಶಕ್ತಿ, ಮಷೀನ್ ಲರ್ನಿಂಗ್ ಮತ್ತು ಡಾಟಾ ಸೈನ್ಸ್ ಇವು ಸೇರಿವೆ. ಈ ರೀತಿಯಾಗಿ ಗಣಿತ ಹಾಗೂ ಕಂಪ್ಯೂಟೇಷನಲ್ ಆಲೋಚನಾಕ್ರಮವನ್ನು ಬೇರೆಬೇರೆ ರೀತಿಯ ಹೊಸಹೊಸ ವಿಧಾನಗಳ ಮೂಲಕ ತಳಹಂತದಿಂದಲೇ ಪ್ರಾರಂಭಿಸಿ ಶಾಲಾ ಶಿಕ್ಷಣದ ಪೂರ್ಣ ಅವಧಿಯವರೆಗೆ ಗಣಿತ ಚಿಂತನೆಯನ್ನು ಹೆಚ್ಚು ಆಕರ್ಷಕವಾಗಿ, ಮುದನೀಡುವಂತೆ ಮಾಡುವ ಉದ್ದೇಶದಿಂದ ಅವುಗಳಲ್ಲಿ ಒಗಟುಗಳು ಮತ್ತು ಆಟಗಳೇ (Games and Puzzles) ಮುಂತಾದವುಗಳನ್ನು ಸೇರಿಸಿ ರೂಪಿಸಲಾಗುವುದು. ಈ ಬಗೆಯ ಬೋಧನ ಕ್ರಮವನ್ನು ಅಳವಡಿಸಿಕೊಳ್ಳುವುದರ ಮೇಲೆ ಒತ್ತು ನೀಡಲಾಗುವುದು. ಮಾಧ್ಯಮಿಕ ಶಾಲಾ ಹಂತದಲ್ಲಿ ಕೋಡಿಂಗ್ ಸಂಬಂಧವಾದ ಚಟುವಟಿಕೆಗಳನ್ನು ಪ್ರಾರಂಭಿಸಲಾಗುವುದು.

4.26 ಪ್ರತಿಯೊಬ್ಬ ವಿದ್ಯಾರ್ಥಿಯೂ ಗ್ರೇಡ್ 6ರಿಂದ 8ರವರೆಗಿನ ಅವಧಿಯಲ್ಲಿ ರಾಜ್ಯಗಳ ಮತ್ತು ಸ್ಥಳೀಯ ಸಮುದಾಯಗಳ ವತಿಯಿಂದ ಗೊತ್ತುಪಡಿಸಲಾದ ಹಾಗೂ ಸ್ಥಳೀಯ ಕೌಶಲದ ಅಗತ್ಯಗಳನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಮ್ಯಾಪಿಂಗ್ ಮೊದಲಾದ ಮಾದರಿಯಲ್ಲಿ ಮುದನೀಡುವ ಶಿಕ್ಷಣವನ್ನು ಪೂರೈಸುತ್ತಾನೆ. ಇದರಲ್ಲಿ ಬಡಗಿ ಕೆಲಸ, ವಿದ್ಯುಚ್ಛಕ್ತಿ ಕೆಲಸ, ಲೋಹಗಾರಿಕೆ, ತೋಟಗಾರಿಕೆ, ಮಣ್ಣಿನ ಪಾತ್ರೆಗಳ ತಯಾರಿಕೆ ಮುಂತಾದ ಕುಶಲಕಲೆಗಳ ಶಿಕ್ಷಣ ದೊರೆಯುತ್ತದೆ. ತಮ್ಮ ಕೈಗಳಿಂದಲೇ ಕೆಲಸ ಮಾಡುವ ಅನುಭವ ಮತ್ತು ಸಂತೃಪ್ತಿ ದೊರೆಯುತ್ತವೆ. ಗ್ರೇಡ್ 6-8ಕ್ಕಾಗಿ ಅಭ್ಯಾಸವನ್ನು ಆಧರಿಸಿದ ಒಂದು ಪಠ್ಯಕ್ರಮವನ್ನು ಎನ್.ಸಿ.ಇ. ಆರ್.ಟಿ. ರೂಪಿಸುವುದು. 2020-21ಕ್ಕಾಗಿ ರೂಪಿಸಲಾಗುವ ಎನ್.ಸಿ.ಎಫ್.ಎಸ್.ಇ. ಜೊತೆಯಲ್ಲಿಯೇ ಇದನ್ನು ಕೂಡ ಎನ್.ಸಿ.ಇ.ಆರ್.ಟಿ. ಸಿದ್ಧಪಡಿಸುವುದು. 6ರಿಂದ 8ನೆಯ ತರಗತಿಗಳಲ್ಲಿ ಓದಬೇಕಾದರೆ ಎಲ್ಲ ವಿದ್ಯಾರ್ಥಿಗಳು ಹತ್ತು ದಿನಗಳ 'ಬ್ಯಾಗ್ ರಹಿತ' ತರಗತಿಗಳಲ್ಲಿ ಅಭ್ಯಾಸ ಮುಂದುವರಿಸುವರು. ಈ ಅವಧಿಯಲ್ಲಿ ಬಡಗಿ, ತೋಟದ ಮಾಲಿ, ಕುಂಬಾರ, ಕಲಾವಿದ ಮೊದಲಾದ ವೃತ್ತಿನಿರತರ ಜೊತೆಯಲ್ಲಿನೇರವಾಗಿ ಕೆಲಸ ಮಾಡಿ ಅವರು ತರಬೇತಿ ಪಡೆಯುವರು. ಇದೇ ರೀತಿಯಲ್ಲಿ 6ರಿಂದ 12ನೇ ತರಗತಿಯವರೆಗೆ ರಜೆ ದಿನಗಳಲ್ಲಿ ಕೂಡ ಬೇರೆ ಬೇರೆ ವೃತ್ತಿಪರ ವಿಷಯಗಳನ್ನು ಕಲಿತುಕೊಳ್ಳುವ ಅವಕಾಶಗಳನ್ನು ವಿದ್ಯಾರ್ಥಿಗಳಿಗೆ ಒದಗಿಸುವಬಹುದಾಗಿರುತ್ತದೆ. ಆನ್‌ಲೈನ್ ಮೂಲಕವಾಗಿ ಕೂಡ ಈ ಬಗೆಯ ವೃತ್ತಿಪರ ಶಿಕ್ಷಣವನ್ನು ಪಡೆದುಕೊಳ್ಳುವ ಅವಕಾಶವನ್ನು ಕಲ್ಪಿಸಬಹುದಾಗಿರುತ್ತದೆ. ವರ್ಷಾದ್ಯಂತ ಈ ರೀತಿಯ 'ಬ್ಯಾಗ್ ರಹಿತ' ತರಗತಿಗಳ ಅವಧಿಯಲ್ಲಿ ಅನುಭವವನ್ನು ಹೆಚ್ಚಿಸಿಕೊಳ್ಳುವ ಸಲುವಾಗಿ ಬೇರೆ ಬೇರೆ ರೀತಿಯ ಕಲೆಗಳು, ಆಟಗಳು ಹಾಗೂ ವೃತ್ತಿಪರ ಕೈಕೆಲಸಗಳಿಗೆ ಉತ್ತೇಜನ ನೀಡಲಾಗುವುದು. ಐತಿಹಾಸಿಕ, ಸಾಂಸ್ಕೃತಿಕ ಮತ್ತು ಪ್ರೇಕ್ಷಣೀಯ ಸ್ಥಳಗಳಿಗೆ/ಸ್ಮಾರಕಗಳಿಗೆ ಭೇಟಿ ನೀಡುವುದು, ಸ್ಥಳೀಯ ಕಲಾವಿದರನ್ನು ಮತ್ತು ಕುಶಲ ಕೆಲಸಗಾರರನ್ನು ಖುದ್ದಾಗಿ ಕಂಡುಬರುವುದು, ನಮ್ಮ ಹಳ್ಳಿ/ತಾಲ್ಲೂಕು/ಜಿಲ್ಲೆ/ರಾಜ್ಯ ಇವುಗಳಲ್ಲಿರುವ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಭೇಟಿ ನೀಡುವುದು ಇವೇ ಮುಂತಾದ ಹೊರಾಂಗಣ ಚಟುವಟಿಕೆ ಗಳನ್ನು ಹಮ್ಮಿಕೊಳ್ಳಲು ವಿದ್ಯಾರ್ಥಿಗಳಿಗೆ ಆಗಾಗ ಅವಕಾಶ ಕಲ್ಪಿಸಿ 'ಎಕ್ಸ್‌ಪೋಶರ್' ನೀಡಲಾಗುವುದು.

4.27 'ಭಾರತ ಜ್ಞಾನ' (Knowledge of India) ಎಂಬುದರ ಬಗ್ಗೆ ಅಡಿಯಲ್ಲಿ ಆಧುನಿಕ ಭಾರತ, ಅದರ ಯಶಸ್ಸು ಮತ್ತು ಅದು ಎದುರಿಸುತ್ತಿರುವ ಸವಾಲುಗಳು ಇವುಗಳ ಜೊತೆಯಲ್ಲಿ ಪ್ರಾಚೀನ ಭಾರತದ ವಿಚಾರವಾಗಿ ತಿಳಿವಳಿಕೆ ಮತ್ತು ಕೊಡುಗೆ ಎಂಬುದನ್ನು ಸೇರಿಸಲಾಗುವುದು. ಅಂತೆಯೇ ಅದರಲ್ಲಿ ಶಿಕ್ಷಣ, ಆರೋಗ್ಯ, ಪರಿಸರ ಮುಂತಾದ ವಿಷಯಗಳಿಗೆ ಸಂಬಂಧಪಟ್ಟಂತೆ ಭವಿಷ್ಯ ಭಾರತದ ಆಕಾಂಕ್ಷಿಗಳನ್ನು ಸ್ಪಷ್ಟವಾಗಿ ನಿರೂಪಿಸಲಾಗುವುದು. ಈ ಮಹತ್ವದ ಸಂಗತಿಗಳನ್ನು ಇಡೀ ಶಾಲಾ ಪಠ್ಯಕ್ರಮದಲ್ಲಿ ಎಲ್ಲೆಲ್ಲಿ ಸೂಕ್ತವೆಂದು ಕಂಡುಬರುತ್ತದೆಯೋ ಅಲ್ಲೆಲ್ಲ ವೈಜ್ಞಾನಿಕವಾಗಿ ಟಿಪ್ಪಣಿ ಅಥವಾ ನಿರೂಪಣೆಯನ್ನು ಬರೆದು ಸೇರಿಸಲಾಗುವುದು. ಅದರಲ್ಲೂ ವಿಶೇಷವಾಗಿ ಭಾರತೀಯ ಜ್ಞಾನ ಭಂಡಾರವನ್ನು ಆದಿವಾಸಿ ಬುಡಕಟ್ಟುಗಳ ತಿಳಿವಳಿಕೆ, ಸ್ವದೇಶಿ ಹಾಗೂ ಪರಂಪರಾಗತ ಪದ್ಧತಿಗಳನ್ನು ಕೂಡ ಪಠ್ಯಕ್ರಮದಲ್ಲಿ ಅಳವಡಿಸಲಾಗುವುದು. ಹಾಗೆಯೇ ಗಣಿತ, ಖಗೋಳವಿಜ್ಞಾನ, ತತ್ವಶಾಸ್ತ್ರ, ಯೋಗ, ವಾಸ್ತುಶಿಲ್ಪ, ವೈದ್ಯಶಾಸ್ತ್ರ, ಕೃಷಿ, ಇಂಜಿನಿಯರಿಂಗ್, ಭಾಷಾವಿಜ್ಞಾನ, ಸಾಹಿತ್ಯ ಇವುಗಳನ್ನು ಸಹ ಇದರಲ್ಲಿ ಸೇರಿಸಲಾಗುವುದು. ಇವುಗಳ ಜೊತೆಗೆ ಆಡಳಿತ, ರಾಜಕೀಯ

ವ್ಯವಸ್ಥೆ, ಸಂರಕ್ಷಣೆಯಂತಹ ವಿಷಯಗಳು ಸೇರ್ಪಡೆಯಾಗುವುವು. ಬುಡಕಟ್ಟುಗಳ ಪಾರಂಪರಿಕ ಔಷಧಪದ್ಧತಿ, ಕಾಡುಗಳ ನಿರ್ವಹಣೆ, ಸಾಂಪ್ರದಾಯಿಕ (ಜೈವಿಕ) ಬೆಳೆಗಾರಿಕೆ, ನೈಸರ್ಗಿಕ ಕೃಷಿ ಇತ್ಯಾದಿ ವಿಷಯಗಳನ್ನು ವಿಶೇಷ ಪಠ್ಯಕ್ರಮದ ಅಡಿಯಲ್ಲಿ ಒದಗಿಸಿಕೊಡಲಾಗುವುದು. ಭಾರತೀಯ ಜ್ಞಾನ ಪದ್ಧತಿಯನ್ನು ಕುರಿತಂತೆ ಒಂದು ಆಕರ್ಷಕ ಪಠ್ಯಕ್ರಮದ ರೂಪದಲ್ಲಿ ಐಚ್ಛಿಕ ವಿಷಯವಾಗಿ ಮಾಧ್ಯಮಿಕ ವಿದ್ಯಾಸಂಸ್ಥೆಗಳಲ್ಲಿ ವಿದ್ಯಾರ್ಥಿಗಳಿಗೆ ದೊರಕುತ್ತದೆ. ವಿನೋದ ಆಟಗಳು ಮತ್ತು ಸ್ವದೇಶಿ ಕ್ರೀಡೆಗಳ ಮೂಲಕ ಬೇರೆ ಬೇರೆ ಬಗೆಯ ವಿಷಯಗಳನ್ನು ಕಲಿಯುವುದಕ್ಕಾಗಿ ಶಾಲೆಗಳಲ್ಲಿ ಸ್ಪರ್ಧೆಗಳನ್ನು ಏರ್ಪಡಿಸಬಹುದು. ಶಾಲಾ ಪಠ್ಯಕ್ರಮದಾದ್ಯಂತ ವಿಜ್ಞಾನ ಮತ್ತು ಇತರ ಕ್ಷೇತ್ರಗಳಲ್ಲಿ ಪ್ರಖ್ಯಾತರಾದ ಮತ್ತು ಪ್ರೇರಣಾದಾಯಕರಾದ ಪ್ರಾಚೀನ ಹಾಗೂ ಆಧುನಿಕ ಭಾರತದ ವ್ಯಕ್ತಿಗಳ ವಿಚಾರವಾಗಿ ವಿಡಿಯೋ ಸಾಕ್ಷ್ಯಚಿತ್ರಗಳನ್ನು ಪ್ರದರ್ಶಿಸಲಾಗುವುದು. ಸಾಂಸ್ಕೃತಿಕ ಕೊಳು-ಕೊಡುಗೆ ಕಾರ್ಯಕ್ರಮಗಳ ಅಂಗವಾಗಿ ಬೇರೆ ಬೇರೆ ರಾಜ್ಯಗಳಿಗೆ ಪ್ರವಾಸ ಹೋಗುವ ಅವಕಾಶಗಳನ್ನು ವಿದ್ಯಾರ್ಥಿಗಳಿಗೆ ಒದಗಿಸಿ ಪ್ರೋತ್ಸಾಹ ನೀಡಲಾಗುವುದು.

4.28 ಕಿರಿಯ ವಯಸ್ಸಿನಲ್ಲೇ ವಿದ್ಯಾರ್ಥಿಗಳಿಗೆ "ಸರಿಯಾದುದನ್ನು ಮಾಡುವುದರ" ಮಹತ್ವವನ್ನು ಕಲಿಸಿಕೊಡಲಾಗುವುದು. ನೈತಿಕವಾಗಿ ತೀರ್ಮಾನವನ್ನು ಕೈಗೊಳ್ಳುವುದಕ್ಕಾಗಿ ಒಂದು ತಾರ್ಕಿಕ ಚೌಕಟ್ಟನ್ನು ಹಾಕಿಕೊಡಲಾಗುವುದು. ಅನಂತರದ ವರ್ಷಗಳಲ್ಲಿ ಮೋಸ, ಹಿಂಸೆ, ಕೃತಿಚೌರ್ಯ, ಕಸ ಹರಡುವುದು, ಸಹಿಷ್ಣುತೆ, ಸಮಾನತೆ, ಸಹಾನುಭೂತಿ ಇಂಥ ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿ ಈ ತಿಳಿವಳಿಕೆಯನ್ನು ವಿಸ್ತರಿಸಲಾಗುವುದು. ತಮ್ಮ ಮುಂದಿನ ಬದುಕಿನಲ್ಲಿ ಮಕ್ಕಳು ನೈತಿಕತೆ/ನೈತಿಕ ಮೌಲ್ಯಗಳನ್ನು ಅಳವಡಿಸಿಕೊಂಡು ಯೋಗ್ಯರಾಗುವಂತೆ ಮಾಡುವುದು; ಹಲವಾರು ದೃಷ್ಟಿಕೋನಗಳಿಂದ ನೈತಿಕ ವಿಷಯಗಳ ವಿಚಾರವಾಗಿ ತಾರ್ಕಿಕವಾಗಿ ಆಲೋಚನೆ ಮಾಡಿ ನಿರ್ಣಯ ಕೈಗೊಳ್ಳುವಂತೆ ಮಾಡುವುದು; ತಾವು ಮಾಡುವ ಎಲ್ಲಾ ಕೆಲಸಗಳಲ್ಲಿ ನೈತಿಕತೆಯನ್ನು ರೂಢಿಸಿಕೊಂಡು ಸಮರ್ಥರಾಗುವಂತಹ ಹ ವಿಚಾರಗಳಿಗೆ ಒತ್ತನ್ನು ನೀಡಲಾಗುವುದು. ಇಂತಹ ನೈತಿಕ ತಿಳಿವಳಿಕೆ ಮತ್ತು ತರ್ಕವನ್ನು ಉಪಯೋಗಿಸುವುದರ ಮೂಲಕ ಪರಂಪರಾಗತ ಭಾರತೀಯ ಮೌಲ್ಯಗಳು ಮತ್ತು ಎಲ್ಲಾ ಮೂಲಭೂತವಾದ ಮಾನವೀಯ ಹಾಗೂ ಸಂವಿಧಾನಾತ್ಮಕವಾದ ಮೌಲ್ಯಗಳನ್ನು (ಉದಾಹರಣೆಗೆ ಸೇವೆ, ಅಹಿಂಸೆ, ಸ್ವಚ್ಛತೆ, ಸತ್ಯ, ನಿಷ್ಕಾಮ ಕರ್ಮ, ಶಾಂತಿ, ತ್ಯಾಗ, ಸಹಿಷ್ಣುತೆ, ವೈವಿಧ್ಯ ಬಹುತ್ವ ನೈತಿಕ ನಡೆವಳಿಕೆ, ಲಿಂಗ ಸಂವೇದನಶೀಲತೆ, ಹಿರಿಯರಿಗೆ ಗೌರವ, ಎಲ್ಲ ಬಗೆಯ ಜನರನ್ನು ಹಾಗೂ ಅವರಲ್ಲಿ ಅಡಗಿರುವ ಸಾಮರ್ಥ್ಯಗಳನ್ನು ಗೌರವದಿಂದ ನೋಡುವುದು, ಪರಿಸರದ ಬಗ್ಗೆ ಗೌರವ, ನೆರವು, ಶಿಷ್ಟಾಚಾರ, ಧೈರ್ಯ, ಕ್ಷಮೆ, ಸಹಾನುಭೂತಿ, ಕರುಣೆ, ದೇಶಭಕ್ತಿ, ಪ್ರಜಾಪ್ರಭುತ್ವ ಸಂಬಂಧಿ ದೃಷ್ಟಿಕೋನ, ಅಖಂಡತೆ, ಜವಾಬ್ದಾರಿ, ನ್ಯಾಯ, ಸ್ವಾತಂತ್ರ್ಯ, ಸಮಾನತೆ, ಬಂಧುತ್ವ ಇಂಥವು) ವಿದ್ಯಾರ್ಥಿಗಳಲ್ಲಿ ಬೆಳೆಸಲಾಗುವುದು. ಮಕ್ಕಳಿಗೆ ಪಂಚತಂತ್ರದ ಮೂಲಕಥೆಗಳು, ಜಾತಕ, ಹಿತೋಪದೇಶ ಹಾಗೂ ಇತರ ಸ್ವಾರಸ್ಯಕರವಾದ ಹಾಗೂ ಭಾರತೀಯ ಪರಂಪರೆಯಿಂದ ಸ್ಫೂರ್ತಿಗೊಂಡ ಕಥೆಗಳನ್ನು ಕೇಳುವ ಮತ್ತು ಓದುವ ಅವಕಾಶಗಳು ದೊರೆಯುವವು. ಹಾಗೆಯೇ ಜಾಗತಿಕ ಸಾಹಿತ್ಯದ ಮೇಲೆ ಅವುಗಳ ಪ್ರಭಾವವನ್ನು ಕುರಿತಂತೆ ತಿಳಿವಳಿಕೆ ಪಡೆಯುವರು. ಭಾರತೀಯ ಸಂವಿಧಾನದ ಭಾಗಗಳನ್ನು ವಿದ್ಯಾರ್ಥಿಗಳು ಓದಿ ತಿಳಿದುಕೊಳ್ಳುವುದು ಆವಶ್ಯಕವೆಂದು ಭಾವಿಸಲಾಗುವುದು. ಆರೋಗ್ಯ ಕುರಿತ ಮೂಲಭೂತ ಶಿಕ್ಷಣದಲ್ಲಿ ನಿವಾರಕ ಆರೋಗ್ಯ (Preventive Health), ಮಾನಸಿಕ ಆರೋಗ್ಯ, ಉತ್ತಮ ಪೋಷಣೆ, ವೈಯಕ್ತಿಕ ಮತ್ತು ಸಾಮಾಜಿಕ ಆರೋಗ್ಯ, ವಿಕೋಪ ಪ್ರತಿಕ್ರಿಯೆ ಹಾಗೂ ಪ್ರಥಮ ಚಿಕಿತ್ಸೆ ಇವು ಸೇರಿರುತ್ತವೆ. ಇವುಗಳ ಜೊತೆಗೆ ಮದ್ಯ, ಹೊಗೆಸೊಪ್ಪು ಮತ್ತಿತರ ಪದಾರ್ಥಗಳಿಂದ ಉಂಟಾಗುವ ಹಾನಿ ಮತ್ತು ದುಷ್ಪರಿಣಾಮಗಳ ಕುರಿತ ವೈಜ್ಞಾನಿಕ ಚಿಂತನೆಯನ್ನು ಕೂಡ ಪಠ್ಯಕ್ರಮದಲ್ಲಿ ಸೇರಿಸಲಾಗುತ್ತದೆ.

4.29 ತಳಹದಿ ಹಂತದಿಂದ ಮೊದಲುಗೊಂಡು ಉಳಿದ ಎಲ್ಲ ಹಂತಗಳವರೆಗೆ ಪಠ್ಯಕ್ರಮ ಮತ್ತು ಬೋಧನ ಕ್ರಮಗಳಿಗೆ ಭದ್ರವಾದ ಭಾರತೀಯ ಮತ್ತು ಸ್ಥಳೀಯ ಪ್ರಸ್ತುತತೆಯನ್ನು ನೀಡುವ ದೃಷ್ಟಿಯಿಂದ ಅವುಗಳನ್ನು ಮರುರಚನೆ ಮಾಡಲಾಗುವುದು. ಇದರೊಳಗೆ ಸಂಸ್ಕೃತಿ, ಪರಂಪರೆ, ಪ್ರಾಚೀನರಿಂದ ಬಂದ ಬಳುವಳಿ, ರೀತಿನೀತಿಗಳು, ಭಾಷೆ, ದರ್ಶನ, ಭೂಗೋಳ, ಪ್ರಾಚೀನ ಮತ್ತು ಸಮಕಾಲೀನ ಜ್ಞಾನ, ಸಾಮಾಜಿಕ ಮತ್ತು ವೈಜ್ಞಾನಿಕ ಅಗತ್ಯಗಳು, ಪರಂಪರಾಗತ ಸ್ವದೇಶಿ ಮತ್ತು ವಿದೇಶಿ ಕಲಿಕೆ ವಿಧಾನಗಳು ಇವೆಲ್ಲ ಸೇರಿರುತ್ತವೆ. ಇದರಿಂದ ಶಿಕ್ಷಣ ಸಾಧ್ಯವಾದಷ್ಟು ಮಟ್ಟಿಗೆ ನಮ್ಮ ವಿದ್ಯಾರ್ಥಿಗಳ ಪಾಲಿಗೆ ಹೆಚ್ಚು ಭರವಸೆ ಮತ್ತು ಪ್ರಸ್ತುತತೆಯಿಂದ ಕೂಡಿದ್ದಾಗಿರಬೇಕು, ರೋಚಕವಾಗಿರಬೇಕು, ಪ್ರತಿಭಾಯುತವಾಗಿರಬೇಕು ಎಂಬುದು ಇಲ್ಲಿಯ ಉದ್ದೇಶವಾಗಿದೆ. ಸಾಧ್ಯವಾದಷ್ಟೂ ಮಟ್ಟಿಗೆ ಕಥೆಗಳು, ಕಲೆಗಳು, ಆಟಗಳು ಇವುಗಳಿಗೆ ಸಂಬಂಧಿಸಿದ ಉದಾಹರಣೆಗಳನ್ನು ಮತ್ತು ಸಮಸ್ಯೆಗಳನ್ನು ಭಾರತೀಯ ಹಾಗೂ ಸ್ಥಳೀಯ ನೆಲೆಗಟ್ಟಿನ ಆಧಾರದ ಮೇಲೆ ಆಯ್ಕೆ ಮಾಡಲಾಗುವುದು. ಶಿಕ್ಷಣಕ್ಕೆ ಈ ಬಗೆಯ ನೆಲೆಗಟ್ಟು ದೊರೆಯಿತೆಂದರೆ ಅದು ಅಮೂರ್ತ ಚಿಂತನೆಗೆ, ಹೊಸ ವಿಚಾರಗಳಿಗೆ ಹಾಗೂ ರಚನಾತ್ಮಕತೆಗೆ ಅವಶ್ಯವಾಗಿ ದಾರಿ ತೆರೆಯುವ ಅವಕಾಶ ದೊರೆಯುತ್ತದೆ.

ಶಾಲಾ ಶಿಕ್ಷಣಕ್ಕಾಗಿ ರಾಷ್ಟ್ರೀಯ ಪಠ್ಯಕ್ರಮದ ರೂಪುರೇಷೆಗಳು (ಎನ್. ಸಿ. ಎಫ್. ಎಸ್.ಇ.)

4.30 ಶಾಲಾ ಶಿಕ್ಷಣಕ್ಕಾಗಿ ಒಂದು ಹೊಸ ಮತ್ತು ವ್ಯಾಪಕವಾದ ರಾಷ್ಟ್ರೀಯ ಪಠ್ಯಕ್ರಮ ರೂಪುರೇಖೆಯನ್ನು ಎನ್. ಸಿ. ಎಫ್. ಎಸ್. ಇ., ಎನ್.ಸಿ. ಇ. ಆರ್. ಟಿ. ಮೂಲಕ ರಾಷ್ಟ್ರೀಯ ಶಿಕ್ಷಣ ನೀತಿ, 2020 ರ ಸಿದ್ಧಾಂತಗಳ ಮತ್ತು ಪ್ರಮುಖವಾದ ಪಠ್ಯಕ್ರಮಗಳ ಆಧಾರದ ಮೇಲೆ ಹಾಗೂ ರಾಜ್ಯ ಸರ್ಕಾರಗಳ, ಸಚಿವಾಲಯಗಳ, ಕೇಂದ್ರ ಸರ್ಕಾರದ ಸಂಬಂಧಪಟ್ಟ ಇಲಾಖೆಗಳ ಹಾಗೂ ಇತರ ಪರಿಣತರಿಂದ ಕೂಡಿದ ಎಲ್ಲ ನಿಕಾಯಗಳೂ ಸೇರಿದಂತೆ ಸಮಸ್ತ ಹಿತಚಿಂತಕರ ಜೊತೆಯಲ್ಲಿ ವಿಚಾರವಿನಿಮಯ ಮಾಡಿ ಸಿದ್ಧಪಡಿಸಲಾಗುವುದು. ಇದು ಎಲ್ಲ ಪ್ರಾದೇಶಿಕ ಭಾಷೆಗಳಲ್ಲಿ ದೊರೆಯುವಂತೆ ವ್ಯವಸ್ಥೆ ಮಾಡಲಾಗುವುದು. ಇದಾದ ಅನಂತರ ಈ ಎನ್.ಸಿ.ಎಫ್.ಎಸ್.ಇ. ದಾಖಲಾತಿಯನ್ನು ಪಠ್ಯಕ್ರಮದಲ್ಲಿನ ಮಹತ್ವದ ಅಂಶಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಪ್ರತಿ 5-10 ವರ್ಷಗಳಿಗೊಮ್ಮೆ ಪರಾಮರ್ಶೆ ಹಾಗೂ ನವೀಕರಣಕ್ಕೆ ಒಳಪಡಿಸಲಾಗುವುದು.

ಸ್ಥಳೀಯ ವಿಷಯವಸ್ತು ಮತ್ತು ಅಭಿರುಚಿಯಿ೦ದೊಡಗೂಡಿದ ರಾಷ್ಟ್ರೀಯ ಪಠ್ಯಪುಸ್ತಕಗಳು

4.31 ಶಾಲಾ ಪಠ್ಯಕ್ರಮದ ಹೊರೆಯಲ್ಲಿ ಇಳಿಕೆ, ಹೆಚ್ಚಿನ ಆಯ್ಕೆಯ ಸ್ವಾತಂತ್ರ್ಯ, ಉರು ಹಚ್ಚುವುದಕ್ಕೆ ಬದಲಾಗಿ ರಚನಾತ್ಮಕ ರೀತಿಯ ಕಲಿಕೆ ಇವುಗಳ ಕಾರಣದಿಂದಾಗಿ ಶಾಲಾ ಪಠ್ಯಪುಸ್ತಕಗಳಲ್ಲಿ ಬದಲಾವಣೆ ಉಂಟಾಗಬೇಕಾದುದು ಅಗತ್ಯವಾಗಿದೆ. ರಾಷ್ಟ್ರೀಯ ಮಟ್ಟದಲ್ಲಿ ಮಹತ್ವಪೂರ್ಣವೆನಿಸುವ ಅಗತ್ಯವಾದ ಮೂಲಸಾಮಗ್ರಿಗಳನ್ನು (ಚರ್ಚೆ, ವಿಶ್ಲೇಷಣೆ, ಉದಾಹರಣೆ ಹಾಗೂ ಅನ್ವಯ ಇವೆಲ್ಲ ಸೇರಿದಂತೆ) ಎಲ್ಲ ಪಠ್ಯಪುಸ್ತಕಗಳಲ್ಲಿ ಅಳವಡಿಸುವುದು ಅಗತ್ಯ. ಹಾಗೆಯೇ ಇವುಗಳ ಜತೆಗೆ ಸ್ಥಳೀಯ ಸಂದರ್ಭ ಮತ್ತು ಅಗತ್ಯಗಳ ದೃಷ್ಟಿಯಿಂದ ಯಾವುದಾದರೂ ಸೂಕ್ಷ್ಮ ವಿಚಾರಗಳು ಮತ್ತು ಪೂರಕ ಸಾಮಗ್ರಿಗಳು ಲಭ್ಯವಿದ್ದರೆ ಅವುಗಳನ್ನು ಕೂಡ ಸೇರಿಸಬೇಕು. ಸಾಧ್ಯವಾದೆಡೆಗಳಲ್ಲಿ ಶಾಲೆಗಳಿಗೆ ಮತ್ತು ಅಧ್ಯಾಪಕರಿಗೆ ತಾವು ನಿಗದಿಪಡಿಸುವ ಪಠ್ಯಪುಸ್ತಕಗಳ ವಿಚಾರದಲ್ಲಿ ಅನೇಕ ಆಯ್ಕೆ ಅವಕಾಶಗಳು ಇರುತ್ತವೆ. ಗೊತ್ತುಪಡಿಸಲಾಗಿರುವ ರಾಷ್ಟ್ರೀಯ ಹಾಗೂ ಸ್ಥಳೀಯ ಸಾಮಗ್ರಿಗಳನ್ನು ಹೊಂದಿರುವ ಪಠ್ಯಪುಸ್ತಕಗಳ ಕೆಲವಾರು ಸೆಟ್ಟುಗಳು ಅವರ ಬಳಿ ಇರಬಹುದು. ಅವುಗಳನ್ನು ಬಳಸಿಕೊಂಡು ತಮ್ಮದೇ ಬೋಧನ ಕ್ರಮಕ್ಕೆ ಹೊಂದುವಂತಹ ಹಾಗೂ ವಿದ್ಯಾರ್ಥಿಗಳ ಮತ್ತು ಸಮುದಾಯಗಳ ಅಗತ್ಯವನ್ನು ಪೂರೈಸುವ ಬಗೆಯ ಸಾಮಗ್ರಿಗಳನ್ನು ಅವರು ಉಪಯೋಗಿಸಿಕೊಳ್ಳಬಹುದು.

4.32 ವಿದ್ಯಾರ್ಥಿಗಳ ಹಾಗೂ ಶಿಕ್ಷಣ ವ್ಯವಸ್ಥೆಯ ಪಾಲಿಗೆ ಪಠ್ಯಪುಸ್ತಕಗಳ ಬೆಲೆ ಹೊರೆ ಎನಿಸಬಹುದಾದ ಸಂದರ್ಭಗಳಲ್ಲಿ ಈ ಬೆಲೆಯ ಭಾರವನ್ನು ಕಡಿಮೆ ಮಾಡುವ ಉದ್ದೇಶದಿಂದ ಪಠ್ಯಪುಸ್ತಕಗಳನ್ನು ಉತ್ಪಾದನ ವೆಚ್ಚ/ಮುದ್ರಣ ವೆಚ್ಚ ಸೇರಿದಂತೆ ಕನಿಷ್ಠ ಬೆಲೆಯ ಮೇಲೆ ಒದಗಿಸಿಕೊಡುವುದು ಇಲ್ಲಿಯ ಉದ್ದೇಶವಾಗಿದೆ. ಎಸ್.ಸಿ.ಇ.ಆರ್.ಟಿ. ಸಹಯೋಗದಲ್ಲಿ ಎನ್.ಸಿ.ಇ.ಆರ್.ಟಿ. ವತಿಯಿಂದ ಅಭಿವೃದ್ಧಿಪಡಿಸಿ ಹೊರತರಲಾಗಿರುವ ಉತ್ತಮ ಗುಣಮಟ್ಟದ ಪಠ್ಯಪುಸ್ತಕ ಸಾಮಗ್ರಿಗಳನ್ನು ಬಳಸಿ ಈ ಉದ್ದೇಶವನ್ನು ಈಡೇರಿಸಬಹುದಾಗಿದೆ. ಹೆಚ್ಚುವರಿ ಪಠ್ಯಪುಸ್ತಕ ಸಾಮಗ್ರಿಗಳನ್ನು ಸಾರ್ವಜನಿಕ - ದಾನಿ ಸಹಭಾಗಿತ್ವದ ಹಾಗೂ ಕ್ರೌಡ್ ಸೋರ್ಸಿಂಗ್ ಮೂಲಕ ಹಣ ವಿನಿಯೋಗ ಮಾಡಿ ಪರಿಣತರು ಉನ್ನತ ಗುಣಮಟ್ಟದ ಪಠ್ಯಪುಸ್ತಕಗಳನ್ನು ಉತ್ಪಾದನ ಬೆಲೆಗೆ ಸಿದ್ಧಪಡಿಸಿಕೊಡುವಂತೆ ಪ್ರೋತ್ಸಾಹಿಸಬಹುದು. ರಾಜ್ಯಗಳು ತಮ್ಮದೇ ಆದ ಪಠ್ಯಕ್ರಮಗಳನ್ನು (ಸಾಧ್ಯವಾದಷ್ಟು ಮಟ್ಟಿಗೆ ಎನ್.ಸಿ.ಎಫ್.ಎಸ್.ಇ. ಆಧಾರದ ಮೇಲೆ ಎನ್.ಸಿ.ಇ.ಆರ್.ಟಿ. ಸಿದ್ಧಪಡಿಸುವ ಪಠ್ಯಕ್ರಮಗಳಿಗೆ ಇವು ಅನುಗುಣವಾಗಿರಬಹುದು) ಸಿದ್ಧಪಡಿಸುತ್ತವೆ ಹಾಗೂ ತಮ್ಮದೇ ಆದ ಪಠ್ಯಪುಸ್ತಕಗಳನ್ನು (ಸಾಧ್ಯವಾದಷ್ಟು ಮಟ್ಟಿಗೆ ಇವು ಎನ್.ಸಿ.ಇ.ಆರ್.ಟಿ. ಪಠ್ಯಪುಸ್ತಕ ಸಾಮಗ್ರಿಗಳಿಗೆ ಅನುಗುಣವಾಗಿರಬಹುದು) ಸಿದ್ಧಪಡಿಸುತ್ತವೆ. ಇವುಗಳಲ್ಲಿ ಸ್ಥಳೀಯ ವೈಶಿಷ್ಟ್ಯಗಳನ್ನು, ಅಭಿರುಚಿಗಳನ್ನು ಕುರಿತ ಸಾಮಗ್ರಿಗಳನ್ನು ಅಗತ್ಯಕ್ಕೆ ತಕ್ಕಂತೆ ಸೇರಿಸಬಹುದಾಗಿದೆ. ಹೀಗೆ ಮಾಡಬೇಕಾದರೆ ಎನ್.ಸಿ.ಇ.ಆರ್.ಟಿ. ಸಿದ್ಧಪಡಿಸಿದ ಪಠ್ಯಕ್ರಮವನ್ನು ರಾಷ್ಟ್ರೀಯ ಮಟ್ಟದಲ್ಲಿ ಒಪ್ಪಬಹುದಾದ ಮಾನದಂಡವೆಂದು ಪರಿಗಣಿಸತಕ್ಕದ್ದು ಎಂಬುದು ಗಮನಿಸಬೇಕಾದ ಸಂಗತಿ. ಎಲ್ಲ ಪ್ರಾದೇಶಿಕ ಭಾಷೆಗಳಲ್ಲಿ ಇಂಥ ಪಠ್ಯಪುಸ್ತಕಗಳು ದೊರೆಯುವಂತಾಗಬೇಕೆಂಬುದಕ್ಕೆ ಎಲ್ಲಕ್ಕಿಂತ ಮಿಗಿಲಾದ ಆದ್ಯತೆ ನೀಡತಕ್ಕದ್ದು. ಇದರಿಂದ ಎಲ್ಲ ವಿದ್ಯಾರ್ಥಿಗಳಿಗೆ ಉನ್ನತ ಮಟ್ಟದ ಗುಣದಿಂದ ಕೂಡಿದ ಶಿಕ್ಷಣ ದೊರೆಯುವಂತಾಗಬೇಕು. ಶಾಲೆಗಳಲ್ಲಿ ಸಕಾಲಕ್ಕೆ ಪಠ್ಯಪುಸ್ತಕಗಳು ದೊರಕುವಂತಾಗಲು ಎಲ್ಲ ಪ್ರಯತ್ನಗಳನ್ನು ಮಾಡಲಾಗುವುದು. ಪರಿಸರ ಸಂರಕ್ಷಣೆಯ ದೃಷ್ಟಿಯಿಂದ ಹಾಗೂ ಒಟ್ಟು ವ್ಯವಸ್ಥೆಯ ಮೇಲಿನ ಹೊರೆಯನ್ನು ಕಡಿಮೆ ಮಾಡುವ ಉದ್ದೇಶದಿಂದ ಎಲ್ಲ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳು ಹಾಗೂ ಎನ್.ಸಿ.ಇ.ಆರ್.ಟಿ. ಮೂಲಕ ಎಲ್ಲ ಪಠ್ಯಪುಸ್ತಕಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ಹಾಗೂ ಪ್ರಿಂಟ್ ಮಾಡಿಕೊಳ್ಳುವ ಸೌಲಭ್ಯವನ್ನು ಒದಗಿಸಿಕೊಡಲಾಗುತ್ತದೆ.

4.33 ಪಠ್ಯಕ್ರಮ ಹಾಗೂ ಬೋಧನ ವಿಧಾನಗಳಲ್ಲಿ ಜಾರಿಮಾಡುವ ಬದಲಾವಣೆಗಳ ಮೂಲಕ ಸ್ಕೂಲ್ ಬ್ಯಾಗ್ ಮತ್ತು ಪಠ್ಯಪುಸ್ತಕಗಳ ಹೊರೆಯನ್ನು ಸಾಕಷ್ಟು ಮಟ್ಟಿಗೆ ಕಡಿಮೆ ಮಾಡುವುದಕ್ಕಾಗಿ ಎನ್.ಸಿ.ಇ.ಆರ್.ಟಿ., ಎಸ್.ಸಿ.ಇ.ಆರ್.ಟಿ. ಶಾಲೆಗಳು ಹಾಗೂ ಶಿಕ್ಷಕರು ಸಾಕಷ್ಟು ಗಟ್ಟಿಯಾದ ಪ್ರಯತ್ನಗಳನ್ನು ಮಾಡತಕ್ಕದ್ದು.

ವಿದ್ಯಾರ್ಥಿಗಳ ಬೆಳೆವಣಿಗೆಗಾಗಿ ಮೌಲ್ಯಾಂಕನ ಮಾಡಬೇಕಾದರೆ ಆಮೂಲಾಗ್ರ ಬದಲಾವಣೆಗಳು

4.34 ನಮ್ಮ ಶಾಲಾಶಿಕ್ಷಣ ಸಂಸ್ಕೃತಿಯಲ್ಲಿ ಮೌಲ್ಯಾಂಕನದ ಉದ್ದೇಶ ಕ್ರೋಡೀಕೃತ ಅಥವಾ ಯೋಗಾತ್ಮಕ (summative) - ಇದು ಮುಖ್ಯವಾಗಿ ಉರುಹಚ್ಚಿ ಹೇಳುವ ಕೌಶಲವನ್ನು ಮಾತ್ರ ಅಳೆಯುತ್ತದೆ - ಪದ್ಧತಿಯಿಂದ ದೂರ ಸರಿದು ರಚನಾತ್ಮಕ ಮೌಲ್ಯಾಂಕನದ ಕಡೆಗೆ ಕರೆದೊಯ್ಯಬೇಕಾಗಿದೆ. ಈ ರಚನಾತ್ಮಕ ಮೌಲ್ಯಾಂಕನವು ಸಾಮರ್ಥ್ಯವನ್ನು ಆಧರಿಸಿದ್ದು ವಿದ್ಯಾರ್ಥಿಗಳು ಕಲಿಯುವುದಕ್ಕೆ ಆಸ್ಪದ ಮಾಡಿಕೊಡುತ್ತದೆ, ಅವರ ಬೆಳೆವಣಿಗೆಗೆ ದಾರಿ ಮಾಡಿಕೊಡುತ್ತದೆ. ವಿದ್ಯಾರ್ಥಿಗಳ ಮೇಲ್ಮಟ್ಟದ ಸಾಮರ್ಥ್ಯಗಳಲ್ಲಿ ವಿಶ್ಲೇಷಣ ಶಕ್ತಿ, ತರ್ಕಬದ್ಧವಾದ ಆಲೋಚನೆ ಹಾಗೂ ಸ್ಪಷ್ಟವಾದ ಪರಿಕಲ್ಪನೆ ಇವುಗಳನ್ನು ಇದು ಅಳೆಯುತ್ತದೆ. ಮೌಲ್ಯಾಂಕನದ ಪ್ರಾಥಮಿಕ ಉದ್ದೇಶ ವಾಸ್ತವವಾಗಿ ಕಲಿಯುವುದಕ್ಕಾಗಿ ಇರುತ್ತದೆ - ಇದು ಅಧ್ಯಾಪಕರು, ವಿದ್ಯಾರ್ಥಿ ಹಾಗೂ ಶಾಲಾ ಶಿಕ್ಷಣದ ಇಡಿಯಾದ ಪ್ರಕ್ರಿಯೆಯಲ್ಲಿ ನೆರವಾಗುತ್ತದೆ. ಇದು ಎಲ್ಲ ವಿದ್ಯಾರ್ಥಿಗಳ ಪಾಲಿಗೆ ಕಲಿಯುವುದಕ್ಕೆ ಮತ್ತು ಬೆಳೆವಣಿಗೆ ಹೊಂದುವುದಕ್ಕೆ ಅನುವುಮಾಡಿಕೊಡುತ್ತದೆ ಮಾತ್ರವಲ್ಲ, ಕಲಿಯುವ ಪ್ರಕ್ರಿಯೆಯನ್ನು ನಿರಂತರವಾಗಿ ಮಾರ್ಪಾಟಿಗೆ ಒಳಪಡಿಸಲು ನೆರವಾಗುತ್ತದೆ. ಶಿಕ್ಷಣದ ಎಲ್ಲ ಹಂತಗಳಲ್ಲೂ ಇದು ಮೌಲ್ಯಮಾಪನ ಕಾರ್ಯದಲ್ಲಿ ಒಳಹರಿವಿನ ಸಿದ್ಧಾಂತದ ರೀತಿಯಲ್ಲಿ ಕೆಲಸ ಮಾಡುತ್ತದೆ.

4.35 ಈಗ ಪ್ರಸ್ತಾಪಗೊಂಡಿರುವ ರಾಷ್ಟ್ರೀಯ ಮೌಲ್ಯಾಂಕನ ಕೇಂದ್ರ (National Assessment Centre) ಎನ್.ಸಿ.ಇ.ಆರ್.ಟಿ. ಮತ್ತು ಎಸ್.ಸಿ.ಇ.ಆರ್.ಟಿ.ಗಳ ಮಾರ್ಗದರ್ಶನದಲ್ಲಿ ರಾಜ್ಯಗಳ ಹಾಗೂ ಕೇಂದ್ರಾಡಳಿತ ಪ್ರದೇಶಗಳ ಮೂಲಕ ಎಲ್ಲ ವಿದ್ಯಾರ್ಥಿಗಳ ಶಾಲಾಧಾರಿತ ಮೌಲ್ಯಾಂಕನದ ಆಧಾರದ ಮೇಲೆ ಸಿದ್ಧಪಡಿಸುವ ಹಾಗೂ ಮಕ್ಕಳ ಪೋಷಕರಿಗೆ ನೀಡಲಾಗುವ ಪ್ರಗತಿ ಕಾರ್ಡನ್ನು (Progress Card) ಪೂರ್ತಿಯಾಗಿ ಮಾರ್ಪಡಿಸಲಾಗುವುದು. ಈ ಹೊಸ ಪ್ರಗತಿ ಕಾರ್ಡ್ ಒಂದು ಸಮಗ್ರವಾದ 360 ಡಿಗ್ರಿಗಳ ಬಹು ಆಯಾಮಗಳುಳ್ಳ ಕಾರ್ಡ್ ಆಗಿದ್ದು ಇದರಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯ ಸಂಜ್ಞಾನಾತ್ಮಕ, ಭಾವನಾತ್ಮಕ ಹಾಗೂ ಮನೋಚಾಲಕ ನೆಲೆಗಟ್ಟುಗಳಲ್ಲಿ (Cognitive, Affective and Psychomotor domains) ಕಂಡುಬರುವ ಬೆಳೆವಣಿಗೆಯ ಸೂಕ್ಷ್ಮವಿಶ್ಲೇಷಣೆಯನ್ನು ವಿವರವಾಗಿ ನೀಡುವುದರ ಜೊತೆಗೆ ವಿದ್ಯಾರ್ಥಿಯ ವೈಶಿಷ್ಟ್ಯಗಳನ್ನು ದಾಖಲಿಸಿ ನೀಡಲಾಗುವುದು. ಇದರಲ್ಲಿ ಸ್ವಮೌಲ್ಯಮಾಪನ, ಸಹಪಾಠಿ ಮೌಲ್ಯಮಾಪನ, ಯೋಜನಾಕಾರ್ಯ ಹಾಗೂ ಶೋಧನಕಾರ್ಯಗಳನ್ನು ಆಧರಿಸಿದ ಕಲಿಕೆ, ಕ್ವಿಜ್, ಪಾತ್ರನಿರ್ವಹಣೆ, ಸಮೂಹ ಕೆಲಸ, ಪೋರ್ಟ್-ಫೋಲಿಯೊ ಇವುಗಳ ಜೊತೆಯಲ್ಲಿ ಅಧ್ಯಾಪಕರ ಮೌಲ್ಯಮಾಪನ ಕೂಡ ಸೇರಿರುತ್ತದೆ. ಈ ಸಮಗ್ರ ಪ್ರಗತಿ ಕಾರ್ಡ್ ಮನೆ ಹಾಗೂ ಶಾಲೆ ಇವೆರಡರ ನಡುವೆ ಮಹತ್ವಪೂರ್ಣವಾದ ಕೊಂಡಿಯಾಗುವುದು. ತಂದೆ ತಾಯಿ-ಅಧ್ಯಾಪಕರ ಸಮಾಲೋಚನಾ ಸಭೆಗಳಿಗಾಗಿ ಇದರಿಂದ ನೆರವು ದೊರೆಯುವುದಲ್ಲದೆ ಮಕ್ಕಳ ಒಟ್ಟಾರೆ ಶಿಕ್ಷಣದಲ್ಲಿ ತಂದೆತಾಯಿಗಳು ಸಕ್ರಿಯವಾಗಿ ಭಾಗಿಯಾಗುವಂತೆ ಇದು ಅವಕಾಶ ಮಾಡಿಕೊಡುತ್ತದೆ. ಈ ಪ್ರಗತಿ ಕಾರ್ಡಿನಿಂದ ಅಧ್ಯಾಪಕರಿಗೆ ಮತ್ತು ತಂದೆತಾಯಿಗಳಿಗೆ ಮಕ್ಕಳ ವಿಚಾರದಲ್ಲಿ ಮಹತ್ವಪೂರ್ಣವಾದ ಮಾಹಿತಿಗಳು ಲಭ್ಯವಾಗುತ್ತವೆ. ತರಗತಿಯ ಒಳಗೆ ಮಾತ್ರವಲ್ಲ, ಹೊರಗಡೆ ಕೂಡ ಮಕ್ಕಳಿಗೆ ನೆರವು ಒದಗಿಸುವ ಸಲುವಾಗಿ ಈ ಮಾಹಿತಿ ಉಪಯುಕ್ತವಾಗಬಲ್ಲದು. ಎ.ಐ. (Artificial Intelligence) ಅಥವಾ ಕೃತಕ ಬುದ್ಧಿಶಕ್ತಿ ಆಧರಿಸಿದ ಸಾಫ್ಟ್‌ವೇರ್ ಅಭಿವೃದ್ಧಿಪಡಿಸಿ ಅದನ್ನು ಬಳಕೆ ಮಾಡುವುದರಿಂದ ತಂದೆತಾಯಿಗೆ, ಮಕ್ಕಳಿಗೆ ಮತ್ತು ಅಧ್ಯಾಪಕರಿಗೆ ಕಲಿಕೆಯ ಡಾಟಾ ಮತ್ತು ಇಂಟರ್‌ಆಕ್ಟಿವ್ ಪ್ರಶ್ನಾವಳಿ ಆಧಾರದ ಮೇಲೆ ಶಾಲಾವರ್ಷಗಳಲ್ಲಿ ಮಕ್ಕಳ ಪ್ರಗತಿಯನ್ನು ಪತ್ತೆ ಮಾಡಲು ಅವಕಾಶವಾಗುತ್ತದೆ. ಈ ದತ್ತಸಾಮಗ್ರಿಗಳಿಂದಾಗಿ ವಿದ್ಯಾರ್ಥಿಗಳ ಸಾಮರ್ಥ್ಯ, ಅಭಿರುಚಿಯ ಕ್ಷೇತ್ರಗಳು, ಅವರು ಕೇಂದ್ರೀಕರಿಸಬಹುದಾದ ಕ್ಷೇತ್ರಗಳು ಇವೇ ಮೊದಲಾದ ವಿಷಯಗಳನ್ನು ಕುರಿತಂತೆ ಅಮೂಲ್ಯವಾದ ತಿಳಿವಳಿಕೆ ಲಭ್ಯವಾಗುತ್ತದೆ. ಇದರಿಂದಾಗಿ ಮಕ್ಕಳು ತಮಗೆ ಅತ್ಯಂತ ಇಷ್ಟವಾದ ಅಧ್ಯಯನ ಕ್ಷೇತ್ರಗಳನ್ನು ಆಯ್ಕೆ ಮಾಡಿಕೊಳ್ಳಲು ಸಹಾಯವಾಗುತ್ತದೆ.

4.36 ಸೆಕಂಡರಿ ಶಾಲೆಗಳಲ್ಲಿ ಇಂದು ಪರೀಕ್ಷೆಗಳು ನಡೆಯುವ ರೀತಿ - ಬೋರ್ಡ್ ಪರೀಕ್ಷೆಗಳು ಮತ್ತು ಪ್ರವೇಶ ಪರೀಕ್ಷೆಗಳು ಸೇರಿದಂತೆ - ಹಾಗೂ ಅವುಗಳ ಪರಿಣಾಮವಾಗಿ ತಲೆಯೆತ್ತಿರುವ ಇವತ್ತಿನ ಕೋಚಿಂಗ್ ಸಂಸ್ಕೃತಿ ತುಂಬಾ ಹಾನಿಯನ್ನು ಉಂಟುಮಾಡುತ್ತಿದೆ. ಅದರಲ್ಲೂ ವಿಶೇಷವಾಗಿ ಸೆಕಂಡರಿ ಶಾಲೆಗಳಲ್ಲಿ ನಿಜವಾದ ಕಲಿಕೆಗೆ ವಿದ್ಯಾರ್ಥಿಗಳ ಅಮೂಲ್ಯವಾದ ಸಮಯ ಹೆಚ್ಚಾಗಿ ಕೋಚಿಂಗ್ ಮತ್ತು ಪರೀಕ್ಷಾ ಸಿದ್ಧತೆಗಳಿಗಾಗಿ ವ್ಯಯವಾಗುತ್ತಾ ಹೋಗುತ್ತಿದೆ. ಈ ಪರೀಕ್ಷೆಗಳು ಕೂಡ ವಿದ್ಯಾರ್ಥಿಗಳು ಸೀಮಿತ ಚೌಕಟ್ಟಿನಲ್ಲಿ ಒಂದೇ ಹರಿವಿನಲ್ಲಿ ಪಾಠಪ್ರವಚನಗಳನ್ನು ಕಲಿಯುವುದಕ್ಕೆ ಒತ್ತಾಯ ಮಾಡುತ್ತಿವೆಯೇ ಹೊರತು ನಾಳಿನ ಶಿಕ್ಷಣ ಪದ್ಧತಿಯಲ್ಲಿ ಅಗತ್ಯವಾಗಿ ಮಹತ್ವದ ಪಾತ್ರ ವಹಿಸುವ ಆಯ್ಕೆ, ಸ್ವಾತಂತ್ರ್ಯ ಹಾಗೂ ಮುಕ್ತತೆ ಅಥವಾ ನಮ್ಯತೆಗಾಗಲಿ ಅವಕಾಶ ಕೊಡದೆ ಹೋಗುತ್ತಿವೆ.

4.37 ಗ್ರೇಡ್ 10 ಮತ್ತು 12ಕ್ಕಾಗಿ ಬೋರ್ಡ್ ಪರೀಕ್ಷೆಗಳು ಮುಂದೆ ಕೂಡ ಜಾರಿಯಲ್ಲಿರುತ್ತವೆ. ಆದರೆ ಈ ಕೋಚಿಂಗ್ ತರಗತಿಗಳ ಅಗತ್ಯವನ್ನು ಕಡಿಮೆ ಮಾಡುವ ದೃಷ್ಟಿಯಿಂದ ಬೋರ್ಡ್ ಮತ್ತು ಪ್ರವೇಶ ಪರೀಕ್ಷೆಗಳಲ್ಲಿ ಹಾಲಿ ಇರುವ ಪದ್ಧತಿಗಳಲ್ಲಿ ಮಾರ್ಪಾಡು ಮಾಡಲಾಗುವುದು. ಹಾಲಿ ಜಾರಿಯಲ್ಲಿರುವ ಮೌಲ್ಯಮಾಪನ ಪದ್ಧತಿಯ ಈ ಹಾನಿಕಾರಕ ಪರಿಣಾಮಗಳನ್ನು ಅಳಿಸಿಹಾಕುವ ಸಲುವಾಗಿ, ಬೋರ್ಡ್ ಪರೀಕ್ಷೆಗಳ ಎಲ್ಲಾ ಬಗೆಯ ರೀತಿನೀತಿಗಳನ್ನು ಮರುವಿನ್ಯಾಸ ಮಾಡಲಾಗುವುದು. ವಿದ್ಯಾರ್ಥಿಗಳು ತಮ್ಮ ವೈಯಕ್ತಿಕ ಅಭಿರುಚಿಯ ಆಧಾರದ ಮೇಲೆ ಕೊಟ್ಟಿರುವ ಹಲವಾರು ವಿಷಯಗಳಲ್ಲಿ ತಮಗೆ ಬೇಕಾದುದನ್ನು ಆಯ್ಕೆ ಮಾಡಿಕೊಂಡು ಪರೀಕ್ಷೆ ತೆಗೆದುಕೊಳ್ಳಲು ಅವಕಾಶ ಮಾಡಿಕೊಡಲಾಗುತ್ತದೆ. ಅಂತೆಯೆ, ಬೋರ್ಡ್ ಪರೀಕ್ಷೆಗಳನ್ನು ಕೂಡ 'ಸುಲಭ'ವಾಗುವಂತೆ

ಮಾಡಲಾಗುವುದು. ಅಂದರೆ ಕೋಚಿಂಗ್ ತೆಗೆದುಕೊಂಡು ಉರುಹಚ್ಚಿ ಬರೆಯುವುದಕ್ಕೆ ಬದಲಾಗಿ ಆ ಪರೀಕ್ಷೆಗಳು ವಿದ್ಯಾರ್ಥಿಗಳ ಸಾಮರ್ಥ್ಯವನ್ನು/ಯೋಗ್ಯತೆಯನ್ನು ಮಾಪನ ಮಾಡುವಂತೆ ವ್ಯವಸ್ಥೆ ಮಾಡಲಾಗುವುದು. ಯಾವೊಬ್ಬ ವಿದ್ಯಾರ್ಥಿ ಶಾಲೆಯ ತರಗತಿಗೆ ಹೋಗುತ್ತಾನೊ, ಅವನು ತನ್ನ ಕಡೆಯಿಂದ ತಳಸ್ಪರ್ಶಿಯಾದ ಪ್ರಯತ್ನ ಮಾಡುತ್ತಾನೆ, ಸುಲಭವಾಗಿ ಯಾವುದೇ ಹೊರಗಿನ ಪ್ರಯತ್ನ ಅಥವಾ ಒತ್ತಾಸೆಯಿಲ್ಲದೆ ಸಂಬಂಧಪಟ್ಟ ವಿಷಯದಲ್ಲಿ ಬೋರ್ಡ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಬಲ್ಲವನಾಗುತ್ತಾನೆ, ಉತ್ತಮ ಪ್ರಸ್ತುತಿಯನ್ನು ಕೂಡ ನೀಡಬಲ್ಲವನಾಗುತ್ತಾನೆ. ಬೋರ್ಡ್ ಪರೀಕ್ಷೆಗಳಲ್ಲಿ ಕಂಡುಬರುವ 'ಗಂಭೀರ ಸ್ವರೂಪದ ಅಪಾಯ'ಸ್ಥಿತಿಯನ್ನು ತೊಡೆದುಹಾಕುವುದಕ್ಕಾಗಿ ಎಲ್ಲಾ ವಿದ್ಯಾರ್ಥಿಗಳಿಗೂ ಯಾವುದೇ ಶಾಲಾವರ್ಷದಲ್ಲಿ ಎರಡು ಬಾರಿ ಬೋರ್ಡ್ ಪರೀಕ್ಷೆಗಳನ್ನು ತೆಗೆದುಕೊಳ್ಳಲು ಅವಕಾಶ ಕಲ್ಪಿಸಿಕೊಡಲಾಗುವುದು. ಅವರು ಒಂದು ಮುಖ್ಯ ಪರೀಕ್ಷೆ ಹಾಗೂ ಅಗತ್ಯ ಬಿದ್ದಲ್ಲಿ ಮಾತ್ರ ಒಂದು ಸುಧಾರಣ ಪರೀಕ್ಷೆ ತೆಗೆದುಕೊಳ್ಳಲು ಅವಕಾಶ ನೀಡಲಾಗುತ್ತದೆ.

4.38 ಹೆಚ್ಚು ಮುಕ್ತವಾದ ಆಯ್ಕೆಯ ಸ್ವಾತಂತ್ರ್ಯ, ಹೆಚ್ಚಿನ ನಮ್ಯತೆ (flexibility) ಎರಡರಲ್ಲಿ ಉತ್ತಮವಾದ ಒಂದನ್ನು ಪರಿಗಣಿಸುವುದು, ಮುಖ್ಯವಾಗಿ ಮೂಲ ಸಾಮರ್ಥ್ಯವನ್ನು ಮೌಲ್ಯಾಂಕನ ಮಾಡುವಂತಹ ವ್ಯವಸ್ಥೆ -ಇವು ಎಲ್ಲಾ ಬೋರ್ಡ್ ಪರೀಕ್ಷೆಗಳು ತಕ್ಷಣ ಜಾರಿಗೆ ತರಬೇಕಾದ ಸುಧಾರಣೆಗಳಾಗಬೇಕು. ಇದೇ ರೀತಿಯಲ್ಲಿ ಮುಂಬರುವ ಕೆಲವು ಸಮಯದಲ್ಲಿ ಬೋರ್ಡುಗಳು ವಿದ್ಯಾರ್ಥಿಗಳ ಮತ್ತು ವ್ಯವಸ್ಥೆಯ ಮೇಲೆ ಒತ್ತಡವನ್ನು ಕಡಿಮೆ ಮಾಡುವ ಹಾಗೂ ಕೋಚಿಂಗ್ ಸಂಸ್ಕೃತಿಯ ಭರಾಟೆಯನ್ನು ಇಳಿಸುವ ಸುಸ್ಥಿರವಾದ ಕ್ರಮಗಳನ್ನು ಯೋಜಿಸಿ ಜಾರಿ ಮಾಡಬಹುದು. ಇಂಥ ಕೆಲವು ಸಾಧ್ಯತೆಗಳು ಹೀಗಿವೆ: ವಾರ್ಷಿಕ/ ಸೆಮಿಸ್ಟರ್/ಮಾಡ್ಯುಲರ್ ಬೋರ್ಡ್ ಪರೀಕ್ಷೆಗಳ ವ್ಯವಸ್ಥೆಯೊಂದನ್ನು ಅಭಿವೃದ್ಧಿಪಡಿಸಬೇಕು. ಇದರಲ್ಲಿ ಸಾಕಷ್ಟು ಕಡಿಮೆ ಸಾಮಗ್ರಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಒಂದೊಂದು ಇಂಥ ಘಟಕ ಘಟಕಕ್ಕೂ ಬೇರೆ ಬೇರೆ ಟೆಸ್ಟುಗಳನ್ನು ಮಾಡುವ ಕ್ರಮ ರೂಪಿಸಿಕೊಳ್ಳಬೇಕು. ಶಾಲೆಯಲ್ಲಿ ನಿರ್ದಿಷ್ಟವಾದ ಶಿಕ್ಷಣ ಮುಗಿದ ಕೂಡಲೇ ಅದಕ್ಕೆ ಸಂಬಂಧಪಟ್ಟ ಟೆಸ್ಟನ್ನು ಮಾಡಿ ಮುಗಿಸಬೇಕು. ಇದರಿಂದಾಗಿ ಸೆಕಂಡರಿ ಅಥವಾ ಮಾಧ್ಯಮಿಕ ಶಾಲಾ ಹಂತದಲ್ಲಿ ಪರೀಕ್ಷೆಯ ಒತ್ತಡವನ್ನು ಉತ್ತಮವಾಗಿ ನಿರ್ವಹಿಸಲು ಸಾಧ್ಯವಾಗುತ್ತದೆ, ಪ್ರತಿಯೊಂದು ಪರೀಕ್ಷೆಯೂ ಸರಿಯಾದ ವಿತರಣೆಯಲ್ಲಿ ನಡೆಯುತ್ತದೆ, ಪಣಕ್ಕಿಟ್ಟಂತೆ ಪರೀಕ್ಷೆಗಳನ್ನು ಪರಿಗಣಿಸುವುದು ಕಡಿಮೆಯಾಗುತ್ತದೆ. ಗಣಿತದಿಂದ ಪರೀಕ್ಷೆಯನ್ನು ಪ್ರಾರಂಭ ಮಾಡಿ ಎರಡು ಹಂತಗಳಲ್ಲಿ ಪರೀಕ್ಷೆಗಳನ್ನು ನಡೆಸಬಹುದು. ವಿದ್ಯಾರ್ಥಿಗಳು ಕೆಲವು ವಿಷಯಗಳಲ್ಲಿ ಪರೀಕ್ಷೆಗಳನ್ನು ಮಾನಕ ಹಂತದಲ್ಲಿಯೂ ಕೆಲವು ವಿಷಯಗಳಲ್ಲಿ ಮೇಲ್ಮಟ್ಟದ ಹಂತದಲ್ಲಿಯೂ ತೆಗೆದುಕೊಳ್ಳುವಂತಿರಬೇಕು. ಅಂತೆಯೇ ಬೋರ್ಡ್ ಪರೀಕ್ಷೆಗಳನ್ನು ಎರಡು ಹಂತಗಳಲ್ಲಿ ವಿನ್ಯಾಸ ಮಾಡಬಹುದು - ಇದರಲ್ಲಿ ಒಂದು ಬಹು ಆಯ್ಕೆಯ ಪ್ರಶ್ನೆಗಳನ್ನು ಹೊಂದಿರುವ ವಸ್ತುನಿಷ್ಠ ಪರೀಕ್ಷೆ ಹಾಗೂ ಇನ್ನೊಂದು ವಿವರವಾದ ಉತ್ತರಗಳನ್ನು ಬರೆಯುವ ಪರೀಕ್ಷೆ.

4.39 ಮೇಲ್ಕಂಡ ಎಲ್ಲಾ ವಿಷಯಗಳಿಗೆ ಸಂಬಂಧಪಟ್ಟಂತೆ ಎನ್.ಸಿ.ಇ.ಆರ್.ಟಿ. ಮೌಲ್ಯಾಂಕನ ಬೋರ್ಡುಗಳು (BOAs), ಉದ್ದೇಶಿತ ರಾಷ್ಟ್ರೀಯ ಮೌಲ್ಯಾಂಕನ ಕೇಂದ್ರ ಇತ್ಯಾದಿಯಾಗಿ ಎಲ್ಲಾ ಹಿತಾಸಕ್ತಿ ಮೂಲಗಳ ಪರಾಮರ್ಶೆಯೊಂದಿಗೆ ಎನ್.ಸಿ.ಇ.ಆರ್.ಟಿ. ಮಾರ್ಗಸೂಚಿಯನ್ನು ಸಿದ್ಧಪಡಿಸುತ್ತದೆ. ಎನ್.ಸಿ.ಎಫ್.ಎಸ್.ಇ. 2020-21ಕ್ಕೆ ಅನುಗುಣವಾಗಿ 2022-23 ಶೈಕ್ಷಣಿಕ ವರ್ಷದಿಂದ ಈ ಮೌಲ್ಯಾಂಕನ ಪರಿವರ್ತನೆಯ ಪದ್ಧತಿ ಜಾರಿಗೆ ಬರುತ್ತದೆಂದು ಅಧ್ಯಾಪಕರು ನಿರೀಕ್ಷಿಸಬಹುದಾಗಿದೆ.

4.40 ಶಾಲಾವರ್ಷಗಳಲ್ಲಿ ವಿದ್ಯಾರ್ಥಿಗಳ ಪ್ರಗತಿಯನ್ನು ನಿರಂತರವಾಗಿ ಗಮನಿಸಿ ದಾಖಲಿಸುವ ಉದ್ದೇಶದಿಂದ ಕೇವಲ 10 ಮತ್ತು 12 ಗ್ರೇಡುಗಳಿಗೆ ಮಾತ್ರವಲ್ಲದೆ ಎಲ್ಲಾ ವಿದ್ಯಾರ್ಥಿಗಳ, ತಂದೆತಾಯಿ, ಪೋಷಕರ, ಅಧ್ಯಾಪಕರ, ಪ್ರಾಂಶುಪಾಲರ, ಅಷ್ಟೇ ಏಕೆ, ಇಡೀ ಶಾಲಾ ವ್ಯವಸ್ಥೆಯಲ್ಲಿ ಯೋಜನಾ ಪ್ರಗತಿ ತರುವ ಉದ್ದೇಶದಿಂದ ಹಾಗೂ ಬೋಧನ-ಕಲಿಕೆ ಪ್ರಕ್ರಿಯೆಯನ್ನು ಉತ್ತಮಪಡಿಸುವ ಉದ್ದೇಶದಿಂದ ಎಲ್ಲಾ ವಿದ್ಯಾರ್ಥಿಗಳಿಗಾಗಿ ಗ್ರೇಡ್ 3, 5 ಮತ್ತು 8 ಇವುಗಳಿಗಾಗಿ ಸೂಕ್ತ ಪ್ರಾಧಿಕಾರದಿಂದ ಶಾಲಾ ಪರೀಕ್ಷೆಗಳನ್ನು ನಡೆಸಲಾಗುವುದು. ಈ ಪರೀಕ್ಷೆಗಳು ಪ್ರಾಸಂಗಿಕವಾದ ಮೇಲುಮಟ್ಟದ ಕೌಶಲಗಳ ಮತ್ತು ವಾಸ್ತವಿಕ ಬದುಕಿನ ಸ್ಥಿತಿಗತಿಗಳನ್ನು ಆಧರಿಸಿದ ಹಾಗೂ ರಾಷ್ಟ್ರೀಯ ಮತ್ತು ಸ್ಥಳೀಯ ಪಠ್ಯಕ್ರಮಗಳ ಹಿನ್ನೆಲೆಯಲ್ಲಿ ಮಾಡಲಾಗುವ ಮೌಲ್ಯಾಂಕನವನ್ನು ದೃಷ್ಟಿಯಲ್ಲಿಟ್ಟುಕೊಂಡು ಮೂಲಭೂತ ಶಿಕ್ಷಣದ ಕಲಿಕೆಯ ಪರೀಕ್ಷೆ ಮಾಡಲಾಗುವುದು.

4.41 ಮಾನವ ಸಂಪನ್ಮೂಲ ಸಚಿವಾಲಯದ ಅಡಿಯಲ್ಲಿ ಮಾನಕವನ್ನು ಗೊತ್ತುಪಡಿಸುವ ರಾಷ್ಟ್ರೀಯ ಮೌಲ್ಯಾಂಕನ ಕೇಂದ್ರ, ಪರಖ್ (Performance, Assessment, Review and Analysis of Knowledge for Holistic Development – PARAKH) ಎಂಬುದನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಭಾರತದಲ್ಲಿ ಮಾನ್ಯತೆ ಪಡೆದಿರುವ ಎಲ್ಲಾ ಶಾಲಾ ಬೋರ್ಡುಗಳ ಸಲುವಾಗಿ ನೀತಿ, ಮಾನದಂಡಗಳು ಹಾಗೂ ಮಾರ್ಗದರ್ಶಕ ರೂಪುರೇಷೆಗಳನ್ನು ನಿಗದಿಪಡಿಸಿ ವಿದ್ಯಾರ್ಥಿಗಳ ಮೌಲ್ಯಮಾಪನ ಮತ್ತು ಮೌಲ್ಯಾಂಕನಕ್ಕಾಗಿ ಒದಗಿಸಿಕೊಡುವುದು ಈ ಕೇಂದ್ರದ ಉದ್ದೇಶ. ಅಂತೆಯೆ, ಇದು ರಾಜ್ಯ ಸಾಧನಾ ಸರ್ವೇಕ್ಷಣೆಗೆ (SAS) ಮಾರ್ಗದರ್ಶನ ಒದಗಿಸುವುದರ ಜೊತೆಗೆ ರಾಷ್ಟ್ರೀಯ ಸಾಧನಾ ಸರ್ವೇಕ್ಷಣೆಗೆ (NAS) ದಾರಿ ಮಾಡಿಕೊಡುವುದೇ ಅಲ್ಲದೆ ದೇಶದಲ್ಲಿ ಕಲಿಕೆಯ ಫಲಿತದ ಸ್ವರೂಪದ ಉಸ್ತುವಾರಿಯನ್ನು ಮಾಡುತ್ತದೆ ಹಾಗೂ ಶಾಲಾ ಬೋರ್ಡುಗಳು ಈ ಶಿಕ್ಷಣ ನೀತಿಗೆ ತಕ್ಕಂತೆ 21 ನೆಯ ಶತಮಾನದ ಅಗತ್ಯಗಳಿಗೆ

ಅನುಗುಣವಾಗಿ ತಮ್ಮ ಮೌಲ್ಯಾಂಕನ ಪದ್ಧತಿಯನ್ನು ಮತ್ತು ವಿನ್ಯಾಸವನ್ನು ಕೌಶಲಗಳ ಅಭಿವೃದ್ಧಿಯ ಕಡೆಗೆ ಪರಿವರ್ತಿಸಿಕೊಳ್ಳುವ ಕಡೆಗೆ ಪ್ರೋತ್ಸಾಹ ನೀಡಿ ನೆರವನ್ನು ಒದಗಿಸುತ್ತದೆ. ಈ ಕೇಂದ್ರ ಹೊಸ ಮೌಲ್ಯಾಂಕನ ಮಾದರಿಗಳ ಮತ್ತು ಅತ್ಯಾಧುನಿಕ ಸಂಶೋಧನೆಗಳ ಕುರಿತಂತೆ ಶಾಲಾಬೋರ್ಡುಗಳಿಗೆ ಸಲಹೆ ಸೂಚನೆಗಳನ್ನು ನೀಡುವುದು ಹಾಗೂ ಬೇರೆ ಬೇರೆ ಶಾಲಾ ಬೋರ್ಡುಗಳ ನಡುವೆ ಸಹಯೋಗವನ್ನು ಏರ್ಪಡಿಸುವುದು. ಶಾಲಾ ಬೋರ್ಡುಗಳಲ್ಲಿ ಕಂಡುಬರುವ ಅತ್ಯುತ್ತಮ ಕಾರ್ಯಾಚರಣೆಗಳ ರೀತಿನೀತಿಗಳ ವಿಚಾರವಾಗಿ ಮಾಹಿತಿ ಹಂಚಿಕೊಳ್ಳಲು ಇದು ಒಂದು ಉಪಕರಣವಾಗಿ ಕೆಲಸ ಮಾಡುವುದರ ಜೊತೆಗೆ ಎಲ್ಲ ಶಾಲಾಬೋರ್ಡುಗಳ ಅಡಿಯಲ್ಲಿ ಓದು ಬರೆಹ ಮಾಡುತ್ತಿರುವ ವಿದ್ಯಾರ್ಥಿಗಳ ನಡುವೆ ಸಮಾನ ಮಟ್ಟದ ಶೈಕ್ಷಣಿಕ ಮಾನದಂಡಗಳು ಅಸ್ತಿತ್ವದಲ್ಲಿರುವ ಬಗೆಗೆ ಖಾತರಿ ನೀಡುತ್ತವೆ.

4.42 ವಿಶ್ವವಿದ್ಯಾನಿಲಯ ಪ್ರವೇಶ ಪರೀಕ್ಷೆಗಳಿಗಾಗಿ ಗೊತ್ತುಪಡಿಸಲಾಗಿರುವ ತತ್ತ್ವ ವಿಧಾನಗಳು ಸಮಾನವಾಗಿರುತ್ತವೆ. ರಾಷ್ಟ್ರೀಯ ಪರೀಕ್ಷಣ ಏಜೆನ್ಸಿ (National Testing Agency) ಉನ್ನತ ಗುಣಮಟ್ಟದ ಅಭಿರುಚಿ ಅಥವಾ ಅಭಿಕ್ಷಮತೆ (aptitude) ಆಧರಿಸಿದ ಸಾರ್ವತ್ರಿಕ ಪರೀಕ್ಷಣ ಪದ್ಧತಿಯನ್ನು ಪ್ರಸ್ತುತಪಡಿಸಲು ಕಾರ್ಯೋನ್ಮುಖವಾಗುತ್ತದೆ ಹಾಗೂ ವಿಜ್ಞಾನಗಳು, ಮಾನವಿಕಗಳು, ಭಾಷೆಗಳು, ಕಲೆಗಳು ಹಾಗೂ ವೃತ್ತಿಪರ ವಿಷಯಗಳನ್ನು ಕುರಿತಂತೆ ಕನಿಷ್ಠ ವರ್ಷಕ್ಕೆ ಎರಡು ಬಾರಿಯಾದರೂ ವಿಶೇಷ ಸಾರ್ವತ್ರಿಕ ವಿಷಯ ಪರೀಕ್ಷೆಗಳನ್ನು ನಡೆಸಲು ಕೂಡ ಕಾರ್ಯವಿಧಾನ ಒದಗಿಸುವ ಕೆಲಸ ಮಾಡುತ್ತದೆ. ಈ ಪರೀಕ್ಷೆಗಳು ಅಭ್ಯರ್ಥಿಗಳು ಪರಿಕಲ್ಪನಾತ್ಮಕ ಆಳವಾದ ತಿಳಿವಳಿಕೆಯನ್ನು ಎಷ್ಟರಮಟ್ಟಿಗೆ ಹೊಂದಿದ್ದಾರೆ ಹಾಗೂ ತಮ್ಮ ತಿಳಿವಳಿಕೆಯನ್ನು ಹೇಗೆ ಪ್ರಾಯೋಗಿಕವಾಗಿ ಬಳಕೆ ಮಾಡಬಲ್ಲರು ಎಂಬುದನ್ನು ಪರೀಕ್ಷೆಗೆ ಒಳಪಡಿಸುತ್ತವೆ ಹಾಗೂ ಇಂತಹ ಪರೀಕ್ಷೆಗಳಿಗಾಗಿ ಕೋಚಿಂಗ್ ತೆಗೆದುಕೊಳ್ಳಬೇಕಾದ ಅಗತ್ಯವನ್ನು ಇಲ್ಲವಾಗಿಸುತ್ತದೆ. ವಿದ್ಯಾರ್ಥಿಗಳಿಗೆ ಪರೀಕ್ಷೆಗಾಗಿ ಅಧ್ಯಯನ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶವಿರುತ್ತದೆ ಹಾಗೂ ಪ್ರತಿಯೊಂದು ವಿಶ್ವವಿದ್ಯಾನಿಲಯವೂ ವಿದ್ಯಾರ್ಥಿಗಳು ಆಯ್ಕೆ ಮಾಡಿಕೊಂಡಿರುವ ಪ್ರತಿಯೊಂದು ವಿಷಯದಲ್ಲಿ ಅವರ ಕಾರ್ಯಕ್ಷಮತೆಯನ್ನು ಪರಿಶೀಲಿಸಿ ಅವರವರ ವೈಯಕ್ತಿಕ ಆಸಕ್ತಿ ಮತ್ತು ಕೌಶಲ್ಯಗಳಿಗೆ ಅನುಗುಣವಾಗಿ ಬೇರೆಬೇರೆ ಅಧ್ಯಯನ ವಿಷಯಗಳಲ್ಲಿ ಮತ್ತು ಕಾರ್ಯಕ್ರಮಗಳಲ್ಲಿ ಪ್ರವೇಶಾತಿ ನೀಡಲು ಸಾಧ್ಯವಾಗುತ್ತದೆ. ಸ್ನಾತಕಪೂರ್ವ ಮತ್ತು ಸ್ನಾತಕಮಟ್ಟದ ಪರೀಕ್ಷೆಗಳಿಗೆ ಹಾಗೂ ಉನ್ನತ ಶಿಕ್ಷಣ ಸಂಸ್ಥೆಗಳ ಫೆಲೋಶಿಪ್ ಅಥವಾ ಶಿಷ್ಯವೇತನಗಳಿಗಾಗಿ ಪ್ರವೇಶ ಪರೀಕ್ಷೆಗಳನ್ನು ನಡೆಸುವ ಸಲುವಾಗಿ ಎನ್.ಟಿ.ಎ. ಒಂದು ರಾಷ್ಟ್ರಮಟ್ಟದ, ಪರಿಣತ, ಸ್ವಾಯತ್ತ ಪರೀಕ್ಷಣ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತದೆ. ಈ ಎನ್.ಟಿ.ಎ. ಒದಗಿಸುವ ಉನ್ನತಮಟ್ಟದ, ವಿಸ್ತೃತ ವ್ಯಾಪ್ತಿಯ, ನಮ್ಯತೆಯಿಂದ ಕೂಡಿದ ಪರೀಕ್ಷಣ ಸೇವೆಗಳನ್ನು ಬಹಳಷ್ಟು ವಿಶ್ವವಿದ್ಯಾನಿಲಯಗಳು ತಮ್ಮ ತಮ್ಮ ಸಾರ್ವತ್ರಿಕ ಪ್ರವೇಶ ಪರೀಕ್ಷೆಗಳಿಗಾಗಿ ಉಪಯೋಗಿಸಿಕೊಳ್ಳಬಹುದು. ಇದರಿಂದ ನೂರಾರು ವಿಶ್ವವಿದ್ಯಾನಿಲಯಗಳು ತಮ್ಮದೇ ಆದ ಪ್ರವೇಶ ಪರೀಕ್ಷೆಗಳಿಗಾಗಿ ಪ್ರತ್ಯೇಕ ವ್ಯವಸ್ಥೆ ಮಾಡಿಕೊಳ್ಳುವುದರ ಅಗತ್ಯ ತಪ್ಪುವುದರಿಂದ ವಿದ್ಯಾರ್ಥಿಗಳ, ವಿಶ್ವವಿದ್ಯಾನಿಲಯಗಳ ಹಾಗೂ ಕಾಲೇಜುಗಳ ಮೇಲೆ ಮಾತ್ರವಲ್ಲದೆ ಇಡೀ ಶಿಕ್ಷಣ ವ್ಯವಸ್ಥೆಯ ಮೇಲೆ ಬೀಳುವ ಒತ್ತಡ ಅಪಾರಮಟ್ಟದಲ್ಲಿ ಕಡಿಮೆಯಾಗುತ್ತದೆ. ಪ್ರತಿಯೊಂದು ವಿಶ್ವವಿದ್ಯಾನಿಲಯ ಹಾಗೂ ಕಾಲೇಜಿಗೆ ಎನ್.ಟಿ.ಎ. ಮೌಲ್ಯಾಂಕನ ಸಾಮಗ್ರಿಗಳನ್ನು ತಮ್ಮ ಪ್ರವೇಶ ಪರೀಕ್ಷೆಗಳಿಗೆ ಬಳಸಿಕೊಳ್ಳುವುದು ಸ್ವಂತ ಆಯ್ಕೆಯ ವಿಷಯವಾಗಿರುತ್ತದೆ.

ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ/ ವಿಶೇಷ ಕೌಶಲ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ

4.43 ಪ್ರತಿಯೊಬ್ಬ ವಿದ್ಯಾರ್ಥಿಯಲ್ಲೂ ಅಂತರ್ಗತವಾಗಿರುವ ವಿಶಿಷ್ಟ ಕೌಶಲಗಳು ಇರುತ್ತವೆ; ಅಂತಹ ಕೌಶಲಗಳನ್ನು ಪತ್ತೆ ಮಾಡಿ, ಪೋಷಿಸಿ, ಬೆಳೆಸಿ ಮುಂದೆ ತರುವುದು ತುಂಬ ಆವಶ್ಯಕ. ವೈವಿಧ್ಯಮಯವಾದ ಆಸಕ್ತಿಗಳು, ನಿಲುವುಗಳು ಮತ್ತು ಸಾಮರ್ಥ್ಯಗಳ ಮೂಲಕ ಈ ಕೌಶಲಗಳು ತಮ್ಮ ಸ್ವರೂಪವನ್ನು ಜಾಹೀರು ಪಡಿಸುತ್ತವೆ. ಯಾವುದೇ ಕ್ಷೇತ್ರದಲ್ಲಿ ನಿರ್ದಿಷ್ಟವಾಗಿ ವಿಶೇಷ ಆಸಕ್ತಿಯನ್ನು ತೋರಿಸುವ, ಸಾಮರ್ಥ್ಯವನ್ನು ನಿರೂಪಿಸುವ ವಿದ್ಯಾರ್ಥಿಗಳಿಗೆ ಅವರ ಶಾಲಾಪಠ್ಯಕ್ರಮದ ಜೊತೆಯಲ್ಲಿ ಇಂಥ ಕೌಶಲ ಮತ್ತು ಸಾಮರ್ಥ್ಯಗಳ ಅಭಿವ್ಯಕ್ತಿಗೆ ಪ್ರೋತ್ಸಾಹ ನೀಡಿ ಅವಕಾಶ ಮಾಡಿಕೊಡುವುದು ಅಗತ್ಯ. ವಿದ್ಯಾರ್ಥಿಗಳಲ್ಲಿರುವ ಈ ಬಗೆಯ ಆಸಕ್ತಿ ಮತ್ತು ಕೌಶಲ್ಯಗಳನ್ನು ಗುರುತಿಸಿ ಅವುಗಳನ್ನು ಪೋಷಿಸಿ ಬೆಳೆಸುವ ವಿಧಾನಗಳನ್ನು ಅಧ್ಯಾಪಕರಿಗೆ ನೀಡುವ ಶಿಕ್ಷಣದಲ್ಲಿ ಸೇರಿಸಲಾಗುವುದು. ಪ್ರತಿಭಾನ್ವಿತ ಮಕ್ಕಳ ಶಿಕ್ಷಣಕ್ಕಾಗಿ ಎನ್.ಸಿ.ಇ.ಆರ್.ಟಿ. ಮತ್ತು ಎನ್.ಸಿ.ಟಿ.ಇ. ಮಾರ್ಗದರ್ಶಕ ರೂಪುರೇಷೆಗಳನ್ನು ಅಭಿವೃದ್ಧಿಪಡಿಸಲಿವೆ. ಬಿ.ಎಡ್. ಶಿಕ್ಷಣ ಕಾರ್ಯಕ್ರಮಗಳಲ್ಲಿ ಪ್ರತಿಭಾನ್ವಿತ ಮಕ್ಕಳಿಗೆ ಶಿಕ್ಷಣ ನೀಡುವುದನ್ನು ಒಂದು ವಿಶೇಷ ಆಯ್ಕೆ ವಿಷಯವಾಗಿ ಸೇರ್ಪಡೆ ಮಾಡಬಹುದಾಗಿದೆ.

4.44 ಯಾವುದೇ ನಿರ್ದಿಷ್ಟ ಕ್ಷೇತ್ರಗಳಲ್ಲಿ ಆಸಕ್ತಿ ಮತ್ತು/ಅಥವಾ ಕೌಶಲಗಳನ್ನು ಹೊಂದಿರುವ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ ಸಲುವಾಗಿ ಅಧ್ಯಾಪಕರು ಅವರಿಗೆ ಹೆಚ್ಚುವರಿ ಉಪಯುಕ್ತ ಸಾಮಗ್ರಿಗಳನ್ನು ಮತ್ತು ಬೆಂಬಲವನ್ನು ನೀಡಿ ಅವರ ಪ್ರತಿಭಾ ಸಂವರ್ಧನೆಯಲ್ಲಿ ನೆರವಾಗಬಹುದು. ಶಾಲೆಗಳು, ಶಾಲಾ ಸಂಕೀರ್ಣಗಳು, ಜಿಲ್ಲೆಗಳು ಹಾಗೂ ಇನ್ನೂ ವಿಸ್ತೃತ ಪ್ರದೇಶಗಳ ಹಂತಗಳಲ್ಲಿ ವಿಷಯ-ಕೇಂದ್ರಿತ ಹಾಗೂ ಯೋಜನಾ-ಕೇಂದ್ರಿತ ಕ್ಲಬ್ಬುಗಳನ್ನು ಮತ್ತು ಸರ್ಕಲ್‌ಗಳನ್ನು ಸ್ಥಾಪಿಸಲು ಉತ್ತೇಜನ ಮತ್ತು ಬೆಂಬಲಗಳನ್ನು ನೀಡಲಾಗುವುದು. ವಿಜ್ಞಾನ ಸರ್ಕಲ್‌ಗಳು, ಗಣಿತ ಸರ್ಕಲ್‌ಗಳು ಸಂಗೀತ ಮತ್ತು ನೃತ್ಯ ಪ್ರದರ್ಶನ ಸರ್ಕಲ್‌ಗಳು, ಚೆಸ್ ಸರ್ಕಲ್‌ಗಳು, ಪದ್ಯ ಸರ್ಕಲ್‌ಗಳು,

ಭಾಷಾ ಸರ್ಕಲ್‌ಗಳು, ನಾಟಕ ಸರ್ಕಲ್‌ಗಳು, ಚರ್ಚಾಸ್ಪರ್ಧೆ ಸರ್ಕಲ್‌ಗಳು, ಕ್ರೀಡಾ ಸರ್ಕಲ್‌ಗಳು, ಇಕೋ ಕ್ಲಬ್ಬುಗಳು, ಆರೋಗ್ಯ ಮತ್ತು ಸುಕ್ಷೇಮ (Health & Well-being) ಕ್ಲಬ್ಬುಗಳು / ಯೋಗ ಕ್ಲಬ್ಬುಗಳು ಈ ಬಗೆಯ ಕೆಲವು ಉದಾಹರಣೆಗಳು. ಇದೇ ಸಾಲಿನಲ್ಲಿ ವಿವಿಧ ವಿಷಯಗಳನ್ನು ಕುರಿತಂತೆ ಸೆಕಂಡರಿ ಶಾಲಾ ವಿದ್ಯಾರ್ಥಿಗಳಿಗಾಗಿ ಉನ್ನತ ಮಟ್ಟದ ರಾಷ್ಟ್ರೀಯ ನಿವಾಸಿ ಕಾರ್ಯಗಳನ್ನು ಏರ್ಪಡಿಸುವುದಕ್ಕೆ ಉತ್ತೇಜನ ನೀಡಲಾಗುವುದು. ಸಾಮಾಜಿಕ-ಆರ್ಥಿಕ ಅನನುಕೂಲಬಾಧಿತ ಸಮೂಹಗಳನ್ನು ಕೂಡ ಸೇರಿಸಿದಂತೆ ದೇಶಾದ್ಯಂತ ಅತ್ಯುತ್ತಮ ವಿದ್ಯಾರ್ಥಿಗಳನ್ನು ಮತ್ತು ಅಧ್ಯಾಪಕರನ್ನು ಆಕರ್ಷಿಸುವ ಸಲುವಾಗಿ ಕಟ್ಟುನಿಟ್ಟಾದ ಪ್ರತಿಭಾ ಆಧಾರಿತ ಹಾಗೂ ಸಮಾನತೆಯನ್ನು ಪರಿಗಣನೆಗೆ ತೆಗೆದುಕೊಂಡ ಪ್ರವೇಶಾತಿ ಪ್ರಕ್ರಿಯೆಯನ್ನು ಪ್ರೋತ್ಸಾಹಿಸಲಾಗುವುದು.

4.45 ದೇಶಾದ್ಯಂತ ವಿವಿಧ ವಿಷಯಗಳಲ್ಲಿ ಒಲಂಪಿಯಾಡುಗಳನ್ನು ಮತ್ತು ಸ್ಪರ್ಧೆಗಳನ್ನು ಏರ್ಪಡಿಸಲಾಗುವುದು. ಶಾಲೆಯಿಂದ ಸ್ಥಳೀಯ ಹಂತ, ಸ್ಥಳೀಯ ಹಂತದಿಂದ ರಾಜ್ಯದ ಹಂತ ಹಾಗೂ ರಾಜ್ಯದ ಹಂತದಿಂದ ರಾಷ್ಟ್ರೀಯ ಹಂತ ಹೀಗೆ ಸ್ಪಷ್ಟವಾದ ಸಮನ್ವಯದೊಡನೆ ಇವುಗಳನ್ನು ಹಂತಹಂತವಾಗಿ ಮೇಲೇರುವ ನಿಟ್ಟಿನಲ್ಲಿ ವ್ಯವಸ್ಥೆ ಮಾಡಲಾಗುವುದು. ಎಲ್ಲ ವಿದ್ಯಾರ್ಥಿಗಳು ತಾವು ಅರ್ಹರಾಗುವ ಎಲ್ಲ ಹಂತಗಳಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಿಕೊಡಲಾಗುವುದು. ವಿದ್ಯಾರ್ಥಿಗಳು ವ್ಯಾಪಕವಾಗಿ ಭಾಗವಹಿಸಲು ಅನುವಾಗುವಂತೆ ಗ್ರಾಮಾಂತರ ಪ್ರದೇಶಗಳಲ್ಲಿ ಮತ್ತು ಪ್ರಾದೇಶಿಕ ಭಾಷೆಗಳ ಬಳಕೆಯೊಂದಿಗೆ ಈ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುವುದು. ಐ.ಐ.ಟಿ. ಮತ್ತು ಎನ್.ಐ.ಟಿ.ಯಂತಹ ಉತ್ಕೃಷ್ಟ ಮಟ್ಟದ ಸಂಸ್ಥೆಗಳೂ ಸೇರಿದಂತೆ ಸಾರ್ವಜನಿಕ/ಸರ್ಕಾರಿ ಹಾಗೂ ಖಾಸಗಿ ವಿಶ್ವವಿದ್ಯಾನಿಲಯಗಳು ಮೇಲ್ಕಂಡ ಬಗೆಯ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಒಲಿಂಪಿಯಾಡ್‌ಗಳಲ್ಲಿ ಗಳಿಸಿರುವ ಫಲಿತಾಂಶಗಳ ಮತ್ತು ಇತರ ಸೂಕ್ತ ರಾಷ್ಟ್ರೀಯ ಕಾರ್ಯಕ್ರಮಗಳಲ್ಲಿ ಪಡೆದುಕೊಂಡಿರುವ ಫಲಿತಾಂಶಗಳನ್ನು ತಮ್ಮ ಸ್ನಾತಕಪೂರ್ವ ಶಿಕ್ಷಣ ಕಾರ್ಯಕ್ರಮಗಳಿಗಾಗಿ ನಡೆಸಲಾಗುವ ಪ್ರವೇಶಾತಿ ಪ್ರಕ್ರಿಯೆಯಲ್ಲಿ ಅರ್ಹತೆಯ ಒಂದು ಭಾಗವಾಗಿ ಉಪಯೋಗಿಸಿಕೊಳ್ಳುವುದನ್ನು ಪ್ರೋತ್ಸಾಹಿಸಲಾಗುವುದು.

4.46 ಅಂತರ್ಜಾಲ ಅಂದರೆ ಇಂಟರ್‌ನೆಟ್ ಸಂಪರ್ಕ ಹೊಂದಿದ ಸ್ಮಾರ್ಟ್ ಫೋನುಗಳು ಅಥವಾ ಟ್ಯಾಬ್ಲೆಟ್ ಗಳು ಎಲ್ಲ ಮನೆಗಳಲ್ಲಿ ಮತ್ತು/ಅಥವಾ ಶಾಲೆಗಳಲ್ಲಿ ದೊರೆಯುವುದು ಪ್ರಾರಂಭವಾದೊಡನೆಯೆ ಕ್ವಿಜ್‌ಗಳು, ಸ್ಪರ್ಧೆಗಳು, ಮೌಲ್ಯಾಂಕನಗಳು, ಮಾಹಿತಿವರ್ಧಕ ಸಾಮಗ್ರಿಗಳು ಇವುಗಳಿಗೆ ಸಂಬಂಧಪಟ್ಟ ಆಪ್‌ಗಳ ಬಳಕೆಯನ್ನು ಹೆಚ್ಚಿಸಲಾಗುವುದು. ಅಧ್ಯಾಪಕರ ಮತ್ತು ತಂದೆ ತಾಯಿಗಳ ಸೂಕ್ತವಾದ ಮೇಲ್ವಿಚಾರಣೆಯಲ್ಲಿ ಮೇಲ್ಕಂಡ ಉಪಕ್ರಮಗಳನ್ನು ಮಕ್ಕಳು ಗುಂಪು ಚಟುವಟಿಕೆಯಾಗಿ ನಿರ್ವಹಿಸುವಂತೆ ಮಾಡಲಾಗುವುದು. ಆಸಕ್ತಿಗಳನ್ನು ಹಂಚಿಕೊಳ್ಳುವ ಉದ್ದೇಶದಿಂದ ಆನ್‌ಲೈನ್ ಸಮುದಾಯಗಳನ್ನು ಪ್ರೋತ್ಸಾಹಿಸಲಾಗುವುದು. ಶಾಲೆಗಳಲ್ಲಿ ಹಂತಹಂತವಾಗಿ ಸ್ಮಾರ್ಟ್ ತರಗತಿಗಳನ್ನು ಅಭಿವೃದ್ಧಿಪಡಿಸಲಾಗುವುದು. ಆನ್‌ಲೈನ್ ಸಂಪರ್ಕ ಸಂಪನ್ಮೂಲಗಳನ್ನು ಮತ್ತು ಸಹಭಾಗಿತ್ವಗಳನ್ನು ಡಿಜಿಟಲ್ ಬೋಧನಕ್ರಮವನ್ನು ಬಳಕೆ ಮಾಡಿಕೊಂಡು ಬೋಧಿಸುವ ಮತ್ತು ಕಲಿಸುವ ಪ್ರಕ್ರಿಯೆಗಳನ್ನು ಸಮೃದ್ಧಗೊಳಿಸಲಾಗುವುದು.

5. ಅಧ್ಯಾಪಕರು

5.1 ಆಧ್ಯಾಪಕರು ನಿಜಕ್ಕೂ ಮಕ್ಕಳ ಭವಿಷ್ಯವನ್ನು ರೂಪಿಸುವವರು. ಹಾಗಾಗಿ ಆ ಮೂಲಕ ಅವರು ಭವಿಷ್ಯವನ್ನು ಕಟ್ಟಿಕೊಡುವವರು. ಅಧ್ಯಾಪಕರು ವಹಿಸುವ ಉದಾತ್ತವಾದ ಪಾತ್ರದಿಂದಲೇ ಭಾರತದಲ್ಲಿ ಅವರನ್ನು ಸಮಾಜದ ಅತ್ಯಂತ ಗೌರವಾನ್ವಿತ ವ್ಯಕ್ತಿಗಳೆಂದು ಪರಿಗಣಿಸಲಾಗಿತ್ತು. ಸಮಾಜದಲ್ಲಿ ಅತ್ಯುತ್ತಮರಾದವರು, ವಿದ್ಯಾವಾರಿಧಿಗಳಾದವರು ಅಧ್ಯಾಪಕರಾಗುತ್ತಿದ್ದರು. ತಮ್ಮ ಶಿಷ್ಯವೃಂದಕ್ಕೆ ಜ್ಞಾನ, ಕೌಶಲಗಳು ಮತ್ತು ನೀತಿಬೋಧನೆ ಇವುಗಳನ್ನು ಪರ್ಯಾಪ್ತವಾಗಿ ನೀಡಲು ಅಧ್ಯಾಪಕರಿಗೆ, ಅಥವಾ ಗುರುಗಳಿಗೆ ಏನೇನು ಅಗತ್ಯವಿತ್ತೊ ಅವನ್ನೆಲ್ಲಾ ಸಮಾಜ ಅವರಿಗೆ ನೀಡುತ್ತಿತ್ತು. ಅಧ್ಯಾಪಕರಿಗೆ ಬೇಕಾದ ತರಬೇತಿಯ ಗುಣಮಟ್ಟ, ನೇಮಕಾತಿ, ಕಾರ್ಯನಿರ್ವಹಣೆ, ಸೇವಾನಿಬಂಧನೆಗಳು, ಅಧ್ಯಾಪಕರ ಸಬಲೀಕರಣ ಇವೆಲ್ಲ ಹೇಗೆ ಇರಬೇಕೋ ಹಾಗೆ ಇಲ್ಲವಾದ ಕಾರಣ ಅಧ್ಯಾಪಕರ ಗುಣಮಟ್ಟ ಮತ್ತು ಪ್ರೇರಣಾಶಕ್ತಿ ಅಗತ್ಯವಾದ ಮಾನದಂಡಗಳನ್ನು ತಲುಪಲು ಸಾಧ್ಯವಾಗಿಲ್ಲ. ಹಾಗಾಗಿ ಅಧ್ಯಾಪಕರಿಗೆ ದೊರಕಬೇಕಾದ ಅತ್ಯುನ್ನತ ಗೌರವ ಹಾಗೂ ಅಧ್ಯಾಪಕ ವೃತ್ತಿಗೆ ಸಿಗಬೇಕಾದ ಸ್ಥಾನಮಾನಗಳು ಇವುಗಳನ್ನು ಮರುಸ್ಥಾಪನೆ ಮಾಡಿ ಅತ್ಯುತ್ತಮರೆನಿಸಿದ ವ್ಯಕ್ತಿಗಳು ಅಧ್ಯಾಪಕ ವೃತ್ತಿಗೆ ಪ್ರವೇಶಿಸುವುದಕ್ಕೆ ಪ್ರೇರಣೆ ಒದಗಿಸಬೇಕು. ನಮ್ಮ ದೇಶ ಹಾಗೂ ದೇಶದ ಮಕ್ಕಳು ಅತ್ಯುತ್ತಮವಾದ ಭವಿಷ್ಯವನ್ನು ಕಾಣಬೇಕೆಂದರೆ ಅಧ್ಯಾಪಕರಿಗೆ ಉತ್ತಮ ಪ್ರೇರಣೆ ಹಾಗೂ ಸಬಲೀಕರಣ ಲಭ್ಯವಾಗಬೇಕು.

ನೇಮಕಾತಿ ಮತ್ತು ನಿಯೋಜನೆ

5.2 ಪ್ರತಿಭಾನ್ವಿತರೂ ಮೇಧಾವಿಗಳೂ ಆದ ವಿದ್ಯಾರ್ಥಿಗಳು - ಅದರಲ್ಲೂ ವಿಶೇಷವಾಗಿ ಗ್ರಾಮಾಂತರ ಪ್ರದೇಶದಿಂದ ಬಂದ ವಿದ್ಯಾರ್ಥಿಗಳು - ಅಧ್ಯಾಪಕ ವೃತ್ತಿಗೆ ಸೇರಲು ಪ್ರೇರಣೆ ಪ್ರೋತ್ಸಾಹ ನೀಡಬೇಕಾದುದರಿಂದ ಉತ್ತಮ ಗುಣಮಟ್ಟದ 4-ವರ್ಷಗಳ ಇಂಟೆಗ್ರೇಟೆಡ್ ಬಿ.ಎಡ್. ಅಧ್ಯಯನಕ್ಕಾಗಿ ದೇಶಾದ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಅರ್ಹತಾ ಆಧಾರಿತವಾದ ವಿದ್ಯಾರ್ಥಿವೇತನಗಳನ್ನು ನೀಡುವ ವ್ಯವಸ್ಥೆ ಮಾಡುವ ಅಗತ್ಯವಿದೆ. ಹಾಗಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ವಿಶೇಷ ಅರ್ಹತಾ ಆಧಾರಿತ ವಿದ್ಯಾರ್ಥಿವೇತನಗಳನ್ನು

ನೀಡುವ ವ್ಯವಸ್ಥೆ ಮಾಡಿ ಬಿ.ಎಡ್. ಶಿಕ್ಷಣ ಕಾರ್ಯಕ್ರಮವನ್ನು ಯಶಸ್ವಿಯಾಗಿ ಪೂರೈಸುವ ವಿದ್ಯಾರ್ಥಿಗಳಿಗೆ ಅವರ ಸ್ಥಳೀಯ ಪ್ರದೇಶಗಳಲ್ಲಿ ಉದ್ಯೋಗ ಪಡೆದುಕೊಳ್ಳುವ ಹೆಚ್ಚಿನ ಆಯ್ಕೆಯ ಅವಕಾಶವನ್ನು ಕೂಡ ಒದಗಿಸಲಾಗುವುದು. ಇಂಥ ವಿದ್ಯಾರ್ಥಿವೇತನಗಳು ಸ್ಥಳೀಯ ವಿದ್ಯಾರ್ಥಿಗಳಿಗೆ, ಅದರಲ್ಲೂ ಮಹಿಳಾ ವಿದ್ಯಾರ್ಥಿಗಳಿಗೆ, ಸ್ಥಳೀಯವಾಗಿ ಉದ್ಯೋಗ ಪಡೆದುಕೊಳ್ಳುವ ಸದವಕಾಶವನ್ನು ನೀಡುತ್ತದೆ. ಇದರಿಂದಾಗಿ ಇಂಥ ವಿದ್ಯಾರ್ಥಿಗಳು ಸ್ಥಳೀಯ ಪ್ರದೇಶದಲ್ಲಿ ಮಾದರಿ ಅಭ್ಯರ್ಥಿಗಳಾಗಿ, ಸ್ಥಳೀಯ ಭಾಷೆಯನ್ನು ಮಾತನಾಡುವ ಉನ್ನತ ಅರ್ಹತೆ ಪಡೆದ ಅಧ್ಯಾಪಕರಾಗಿ ರೂಪುಗೊಳ್ಳುತ್ತಾರೆ. ಅಂತೆಯೆ, ಗ್ರಾಮಾಂತರ ಪ್ರದೇಶಗಳಲ್ಲಿ ಅಧ್ಯಾಪಕ ವೃತ್ತಿಯನ್ನು ಕೈಗೊಳ್ಳುವ ಅಭ್ಯರ್ಥಿಗಳಿಗೆ ಪ್ರೋತ್ಸಾಹಕಗಳನ್ನು ಕೂಡ ನೀಡಲಾಗುವುದು. ಗ್ರಾಮಾಂತರ ಪ್ರದೇಶದಲ್ಲಿರುವ ಶಾಲೆಗಳಲ್ಲಿ ಸೇವೆ ಸಲ್ಲಿಸುವ ಅಧ್ಯಾಪಕರಿಗೆ ಒಂದು ಪ್ರಮುಖ ಪ್ರೋತ್ಸಾಹಕವಾಗಿ ಶಾಲೆಯ ಬಳಿ ಅಥವಾ ಶಾಲಾ ಆವರಣದಲ್ಲಿ ವಾಸದ ಮನೆ ನೀಡುವ ಅಥವಾ ಹೆಚ್ಚಿನ ಮನೆ ಬಾಡಿಗೆ ಭತ್ಯೆ ಕೊಡುವ ವ್ಯವಸ್ಥೆ ಮಾಡಲಾಗುವುದು.

5.3 ಹೆಚ್ಚಿನ ಪ್ರಮಾಣದಲ್ಲಿ ಅಧ್ಯಾಪಕರನ್ನು ವರ್ಗಾವಣೆ ಮಾಡುವ ಹಾನಿಕಾರಕ ಪದ್ಧತಿಯನ್ನು ನಿಲ್ಲಿಸಲಾಗುವುದು. ಇದರಿಂದ ವಿದ್ಯಾರ್ಥಿಗಳಿಗೆ ತಾವು ಆದರ್ಶವಾಗಿದ್ದಾರೆಂದು ಪರಿಗಣಿಸಿದ ಅಧ್ಯಾಪಕರ ಹಾಗೂ ಶೈಕ್ಷಣಿಕ ವಾತಾವರಣದ ಸಂಪರ್ಕ ನಿರಂತರವಾಗಿ ದೊರೆಯಲು ಸಾಧ್ಯವಾಗುತ್ತದೆ. ತುಂಬ ವಿಶೇಷವಾದ ಪರಿಸ್ಥಿತಿಗಳಲ್ಲಿ ಮಾತ್ರ ರಾಜ್ಯ ಸರ್ಕಾರಗಳು/ಕೇಂದ್ರಾಡಳಿತ ಪ್ರದೇಶಗಳ ಸರ್ಕಾರಗಳು ಒಂದು ನಿರ್ದಿಷ್ಟವಾದ ವಿನ್ಯಾಸ ಮಾಡಿದ ರೀತಿಯಲ್ಲಿ ವರ್ಗಾವಣೆಗಳು ನಡೆಯುತ್ತಿವೆ. ಇಷ್ಟೇ ಅಲ್ಲದೆ, ಪಾರದರ್ಶಕತೆಯನ್ನು ಕಾಯ್ದುಕೊಳ್ಳುವ ಸಲುವಾಗಿ ವರ್ಗಾವಣೆಗಳನ್ನು ಆನ್‌ಲೈನ್ ಕಂಪ್ಯೂಟರೀಕೃತ ವ್ಯವಸ್ಥೆಯ ಮೂಲಕ ಮಾಡಲಾಗುವುದು.

5.4 ವಿಷಯವಸ್ತು ಮತ್ತು ಬೋಧನಕ್ರಮ ಎರಡೂ ದೃಷ್ಟಿಗಳಿಂದ ಉತ್ತಮ ಪರೀಕ್ಷಣ ಸಾಮಗ್ರಿಯನ್ನು ಸಿದ್ಧಪಡಿಸುವ ದೃಷ್ಟಿಯಿಂದ ಅಧ್ಯಾಪಕ ಅರ್ಹತಾ ಪರೀಕ್ಷೆಗಳನ್ನು (Teacher Eligibility Tests – TETs) ಸಬಲೀಕರಣ ಗೊಳಿಸಲಾಗುವುದು. ಶಾಲಾ ಶಿಕ್ಷಣದ ಎಲ್ಲಾ ಹಂತಗಳಿಗೆ ಅನ್ವಯಿಸುವಂತೆ (ತಳಹದಿ, ಸಿದ್ಧತಾ, ಮಾಧ್ಯಮಿಕ ಮತ್ತು ಸೆಕಂಡರಿ) ಎಲ್ಲಾ ಅಧ್ಯಾಪಕರಿಗಾಗಿ ಕೂಡ ಈ ಟಿ.ಇ.ಟಿ.ಗಳನ್ನು ವಿಸ್ತರಿಸಲಾಗುವುದು. ನಿರ್ದಿಷ್ಟ ವಿಷಯಗಳನ್ನು ಕುರಿತು ಪಾಠ ಹೇಳುವ ಅಧ್ಯಾಪಕರಿಗಾಗಿ ನೇಮಕಾತಿ ಸಮಯದಲ್ಲಿ ಆಯಾ ವಿಷಯಗಳಲ್ಲಿ ಅವರು ಗಳಿಸಿರುವ ಟಿ.ಇ.ಟಿ. ಅಥವಾ ಎನ್.ಟಿ.ಎ. ಟೆಸ್ಟ್ ಸ್ಕೋರ್‌ಗಳನ್ನು ಕೂಡ ಗಣನೆಗೆ ತೆಗೆದುಕೊಳ್ಳಲಾಗುವುದು. ಬೋಧನಾ ವೃತ್ತಿಯಲ್ಲಿ ಇರುವ ಆಸ್ಥೆ ಮತ್ತು ಆಸಕ್ತಿಗಳನ್ನು ಪರೀಕ್ಷೆ ಮಾಡುವ ಸಲುವಾಗಿ, ಶಾಲೆಗೆ ಹಾಗೂ ಶಾಲಾ ಸಂಕೀರ್ಣಗಳಿಗೆ ಅಧ್ಯಾಪಕರನ್ನು ನೇಮಕ ಮಾಡಿಕೊಳ್ಳುವಾಗ ಅವರಿಗೆ ಪ್ರತ್ಯಕ್ಷ ತರಗತಿಯೊಂದನ್ನು ತೆಗೆದುಕೊಂಡು ತೋರಿಸಲು ಹೇಳುವುದು ಅಥವಾ ಸಂದರ್ಶನ ಮಾಡುವುದು ಅಧ್ಯಾಪಕರ ನೇಮಕದ ಅವಿಭಾಜ್ಯ ಭಾಗವಾಗುವುದು. ಹಾಗೆಯೆ, ಅಧ್ಯಾಪಕರು ಸ್ಥಳೀಯ ಭಾಷೆಯಲ್ಲಿ ಎಷ್ಟು ಆರಾಮವಾಗಿ ಮತ್ತು ಪ್ರಾವೀಣ್ಯದೊಡನೆ ಬೋಧಿಸಬಲ್ಲರು ಎಂಬುದನ್ನು ಕಂಡುಕೊಳ್ಳಲು ಸಹ ಈ ಸಂದರ್ಶನಗಳನ್ನು ಬಳಕೆಮಾಡಿಕೊಳ್ಳಲಾಗುವುದು. ಯಾವುದೇ ಒಂದು ಶಾಲೆ ಅಥವಾ ಶಾಲಾ ಸಂಕೀರ್ಣದಲ್ಲಿ ಕಡೆಯಪಕ್ಷ ಕೆಲವು ಮಂದಿ ಅಧ್ಯಾಪಕರಾದರೂ ವಿದ್ಯಾರ್ಥಿಗಳೊಡನೆ ಸ್ಥಳೀಯ ಭಾಷೆಯಲ್ಲಿ ಅಥವಾ ವಿದ್ಯಾರ್ಥಿಗಳ ತಾಯ್ನುಡಿಗಳಲ್ಲಿ ಮಾತನಾಡುವ ಹಾಗಿರಬೇಕು ಎಂಬುದು ಇಲ್ಲಿಯ ಆಶಯ. ಇದೇ ರೀತಿಯಲ್ಲಿ ಖಾಸಗಿ ಶಾಲೆಗಳಲ್ಲಿ ಬೋಧಿಸುವ ಅಧ್ಯಾಪಕರು ಕೂಡ ಇದೇ ರೀತಿಯಲ್ಲಿ. ಟಿ.ಇ.ಟಿ., ಪಾಠ ಮಾಡಿ ತೋರಿಸುವುದು/ಸಂದರ್ಶನ ಹಾಗೂ ಸ್ಥಳೀಯ ಭಾಷೆ ಅಥವಾ ಭಾಷೆಗಳ ಪರಿಜ್ಞಾನ ಈ ಅರ್ಹತೆಗಳನ್ನು ಹೊಂದಿರತಕ್ಕದ್ದು.

5.5 ಬೇರೆ ಬೇರೆ ವಿಷಯಗಳಲ್ಲಿ - ಅದರಲ್ಲೂ ಕಲೆ, ದೈಹಿಕ ಶಿಕ್ಷಣ, ವೃತ್ತಿಪರ ಶಿಕ್ಷಣ ಮತ್ತು ಭಾಷೆಗಳು - ಸಾಕಷ್ಟು ಮಂದಿ ಅಧ್ಯಾಪಕರು ಇದ್ದಾರೆಯೇ ಎಂಬುದನ್ನು ಖಾತರಿಪಡಿಸಿಕೊಳ್ಳಲು ಯಾವುದೇ ಶಾಲೆಗೆ/ಶಾಲಾ ಸಂಕೀರ್ಣಕ್ಕೆ ಅಧ್ಯಾಪಕರನ್ನು ನೇಮಕ ಮಾಡಿಕೊಂಡು ಶಾಲೆಗಳ ನಡುವೆ ಅಧ್ಯಾಪಕರನ್ನು ವಿನಿಮಯ ಮಾಡಿಕೊಳ್ಳುವ ವಿಚಾರದ ಬಗೆಗೆ ಕೂಡ ಆಲೋಚನೆ ನಡೆಸಬಹುದಾಗಿದೆ. ರಾಜ್ಯ ಸರ್ಕಾರಗಳು/ ಕೇಂದ್ರಾಡಳಿತ ಪ್ರದೇಶಗಳು ವಹಿಸಿಕೊಂಡಿರುವ ಶಾಲೆಗಳನ್ನು ಸಮೂಹಗಳಾಗಿ ಜೊತೆಗೂಡಿಸಿ ವ್ಯವಸ್ಥೆ ಮಾಡುವ ಹಿನ್ನೆಲೆಯಲ್ಲಿ ಇದನ್ನು ಪರಿಗಣಿಸಬಹುದಾಗಿದೆ.

5.6 ಸ್ಥಳೀಯವಾಗಿ ಲಭ್ಯವಿರುವ ಖ್ಯಾತ ವ್ಯಕ್ತಿಗಳನ್ನು ಅಥವಾ ಪರಿಣತರನ್ನು ವಿವಿಧ ವಿಷಯಗಳಲ್ಲಿ 'ಪರಿಣತ ಬೋಧಕರೆಂದು' (Master Instructors) ನೇಮಕ ಮಾಡಿಕೊಳ್ಳಲು ಶಾಲೆಗಳನ್ನು/ಶಾಲಾಸಂಕೀರ್ಣಗಳನ್ನು ಪ್ರೋತ್ಸಾಹಿಸಲಾಗುವುದು. ಸ್ಥಳೀಯ ಸಾಂಪ್ರದಾಯಿಕ ಕಲೆಗಳು, ವೃತ್ತಿಪರ ಕೌಶಲಗಳು, ಉದ್ಯಮಶೀಲತೆ, ಕೃಷಿ ಈ ರೀತಿಯಾಗಿ ಸ್ಥಳೀಯ ಪರಿಣತಿಗೆ ಮಹತ್ವ ಇರುವ ಕಡೆಗಳಲ್ಲಿ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಹಾಗೂ ಸ್ಥಳೀಯವಾದ ಜ್ಞಾನವನ್ನು ಮತ್ತು ವೃತ್ತಿಗಳನ್ನು ಉಳಿಸುವ ಬೆಳೆಸುವ ಸಲುವಾಗಿ ಇಂತಹ ಕ್ರಮಕ್ಕಾಗಿ ಉತ್ತೇಜನ ನೀಡಲಾಗುವುದು.

5.7 ಪ್ರತಿಯೊಂದು ರಾಜ್ಯವೂ ತಂತ್ರಜ್ಞಾನವನ್ನು ಆಧರಿಸಿದ ಅಧ್ಯಾಪಕರ ಆವಶ್ಯಕತೆ ಕುರಿತು ಪೂರ್ವಭಾವಿಯಾಗಿ ಲೆಕ್ಕಹಾಕುವ ಯೋಜನಾಕ್ರಮವನ್ನು ಕೈಗೊಳ್ಳುವುದು. ಅದರಂತೆ ಮುಂದಿನ ಎರಡು ದಶಕಗಳ ಅವಧಿಗೆ ವಿಷಯವಾರು ಎಷ್ಟು ಮಂದಿ ಅಧ್ಯಾಪಕರು ಬೇಕಾಗುತ್ತಾರೆ ಎಂಬುದನ್ನು ಮುಂದಾಗಿಯೆ ಲೆಕ್ಕಹಾಕಲಾಗುವುದು. ಕಾಲಕಾಲಕ್ಕೆ ಆವಶ್ಯಕತೆಗೆ ಅನುಗುಣವಾಗಿ ಅಧ್ಯಾಪಕರ ನೇಮಕಾತಿ

ಮತ್ತು ಕಾರ್ಯ ನಿಯೋಜನೆ ಕುರಿತಂತೆ ಈ ಮೇಲೆ ವಿವರಿಸಿರುವ ರೀತಿಯಲ್ಲಿ ಉಪಕ್ರಮಗಳನ್ನು ಕೈಗೊಳ್ಳಲಾಗುವುದು. ಸ್ಥಳೀಯ ಅಧ್ಯಾಪಕರೂ ಸೇರಿದಂತೆ, ಅರ್ಹ ಅಧ್ಯಾಪಕರನ್ನು ನೇಮಕಮಾಡುವುದರ ಮೂಲಕ ಎಲ್ಲ ಹುದ್ದೆಗಳನ್ನು ಭರ್ತಿ ಮಾಡುವುದು, ಅವರ ವೃತ್ತಿ ನಿರ್ವಹಣೆ ಮತ್ತು ಬಡ್ತಿ ಮುಂತಾದ ವಿಚಾರಗಳಲ್ಲಿ ಸೂಕ್ತವಾದ ಉತ್ತೇಜನ ನೀಡುವುದು. ಇವುಗಳನ್ನು ಕೆಳಗೆ ವಿವರಿಸಿರುವಂತೆ ಮಾಡಲಾಗುವುದು. ಈ ರೀತಿಯಾಗಿ ಪ್ರಸ್ತಾಪಿಸಲಾದ ಹುದ್ದೆಗಳನ್ನು ಭರ್ತಿಮಾಡುವ ಹಿನ್ನೆಲೆಯಲ್ಲಿ ಅಧ್ಯಾಪಕರ ತರಬೇತಿ ಶಿಕ್ಷಣ ಕಾರ್ಯಕ್ರಮಗಳನ್ನು ನಡೆಸುವುದು, ಅವರಿಗೆ ಅನುಕೂಲಗಳನ್ನು ಮಾಡಿಕೊಡುವುದು ಇವುಗಳನ್ನು ಪರಿಗಣಿಸಲಾಗುತ್ತದೆ.

ಸೇವಾ ಪರಿಸರ ಮತ್ತು ಸಂಸ್ಕೃತಿ

5.8 ಶಾಲೆಗಳಲ್ಲಿ ಸೇವಾ ಪರಿಸರವನ್ನು ಮತ್ತು ಸಂಸ್ಕೃತಿಯನ್ನು ಹೆಚ್ಚಿನ ಸುಧಾರಣೆಗೆ ಒಳಪಡಿಸುತ್ತಿರುವ ಮುಖ್ಯ ಉದ್ದೇಶ ಅಧ್ಯಾಪಕರು ತಮ್ಮ ಕೆಲಸ ಕಾರ್ಯಗಳನ್ನು ಗರಿಷ್ಠ ಸಾಮರ್ಥ್ಯದೊಡನೆ ಪರಿಣಾಮಕಾರಿಯಾಗಿ ಮಾಡಲು ಸಾಧ್ಯವಾಗಬೇಕೆಂಬುದಾಗಿದೆ. ಅಧ್ಯಾಪಕರು, ವಿದ್ಯಾರ್ಥಿಗಳು, ತಂದೆತಾಯಿಗಳು, ಪ್ರಾಚಾರ್ಯರುಗಳು ಹಾಗೂ ಇತರ ಸಹಾಯಕ ಸಿಬ್ಬಂದಿ ಎಲ್ಲರೂ ಸೇರಿದಂತೆ ರೂಪುಗೊಂಡಿರುವ ಒಂದು ಸ್ಪಂದನಶೀಲವಾದ, ಕಾಳಜಿಯಿಂದ ಕೂಡಿದ, ಸಮಾವರ್ತನದಿಂದ ಒಡಗೂಡಿರುವ ಸಮುದಾಯದ ಭಾಗವಾಗಿ ಕೆಲಸ ಮಾಡುತ್ತಿದ್ದೇವೆಂಬ ಖಾತರಿ ಅಧ್ಯಾಪಕರಲ್ಲಿ ಇದರಿಂದ ಮೂಡುವಂತಾಗುತ್ತದೆ. 'ನಮ್ಮ ಮಕ್ಕಳು ಚೆನ್ನಾಗಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ' ಎಂಬುದನ್ನು ಖಾತರಿ ಪಡಿಸಿಕೊಳ್ಳುವುದೇ ಇವರೆಲ್ಲರ ಸಾರ್ವತ್ರಿಕ ಗುರಿಯಾಗಿರುತ್ತದೆ.

5.9 ಶಾಲೆಗಳಲ್ಲಿ ಸೇವಾನಿಬಂಧನೆಗಳು ಚೊಕ್ಕವಾಗಿ ಮತ್ತು ಹಿತಕರವಾಗಿ ಇರಬೇಕಾದುದು ಈ ನಿಟ್ಟಿನಲ್ಲಿ ಮೊದಲ ಮಹತ್ವದ ಅಂಶವಾಗುತ್ತದೆ. ಸಾಕಷ್ಟು ಪ್ರಮಾಣದಲ್ಲಿ ಸುರಕ್ಷತೆಯಿಂದ ಕೂಡಿದ ಮೂಲಸೌಕರ್ಯಗಳು ಇಲ್ಲಿ ಬಹಳ ಮುಖ್ಯ. ಇವುಗಳಲ್ಲಿ ಉಪಯೋಗಿಸಲು ಸಜ್ಜಾದ ಶೌಚಾಲಯಗಳು, ಶುದ್ಧವಾದ ಕುಡಿಯುವ ನೀರು, ಸ್ವಚ್ಛವಾದ ಮತ್ತು ಆಕರ್ಷಕವಾದ ಪರಿಸರ, ವಿದ್ಯುಚ್ಛಕ್ತಿ, ಕಂಪ್ಯೂಟರ್ ಸಂಬಂಧಿ ಉಪಕರಣಗಳು, ಇಂಟರ್‌ನೆಟ್, ಗ್ರಂಥಾಲಯಗಳು, ಕ್ರೀಡಾಂಗಣಗಳು ಮತ್ತು ಮನೋರಂಜನ ಸೌಲಭ್ಯಗಳು ಸೇರಿಕೊಳ್ಳುತ್ತವೆ. ಈ ಸೌಕರ್ಯಗಳನ್ನು ಎಲ್ಲ ಶಾಲೆಗಳಿಗೆ ಒದಗಿಸಿ, ಲಿಂಗಭೇದವಿಲ್ಲದೆ, ಅಸಾಮರ್ಥ್ಯ ಹೊಂದಿದವರೂ ಸೇರಿದಂತೆ ಎಲ್ಲಾ ಮಕ್ಕಳ ಪಾಲಿಗೆ ಸುರಕ್ಷಿತವಾದ, ಸಮಾವರ್ತವಾದ ಮತ್ತು ಪರಿಣಾಮಕಾರಿಯಾದ ಕಲಿಯುವ ವಾತಾವರಣ ಮೂಡುವಂತೆ ಮಾಡಲಾಗುವುದು. ಶಾಲೆಗಳಲ್ಲಿ ಅಧ್ಯಾಪಕರಿಗೆ ಮತ್ತು ಮಕ್ಕಳಿಗೆ ಅನುಕೂಲಕರವಾದ ಮತ್ತು ಪ್ರೇರಣಾದಾಯಕವಾದ ಕಲಿಸುವ ಮತ್ತು ಕಲಿಯುವ ವಾತಾವರಣವನ್ನು ಈ ರೀತಿಯಾಗಿ ಒದಗಿಸಿಕೊಡಲಾಗುವುದು. ಅಧ್ಯಾಪಕ ತರಬೇತಿ ಕಾರ್ಯಕ್ರಮಗಳಲ್ಲಿ ಅವರಿಗೆ ಕೆಲಸಮಾಡುವ ಸ್ಥಳಗಳಲ್ಲಿ ಹೊಂದಿರಬೇಕಾದ ಸುರಕ್ಷತೆ, ಆರೋಗ್ಯ ಮತ್ತು ನೈರ್ಮಲ್ಯಪಾಲನೆ, ಪರಿಸರ ಕಾಳಜಿ ಈ ವಿಷಯಗಳ ಬಗೆಗೆ ಕೂಡ ಬೋಧನೆ ನೀಡಿ ಎಲ್ಲ ಅಧ್ಯಾಪಕರು ಇಂತಹ ಅಗತ್ಯಗಳ ನಿರ್ವಹಣೆಗೆ ಸಜ್ಜಾಗುವಂತೆ ಮಾಡಲಾಗುವುದು.

5.10 ಶಾಲಾ ಸಂಕೀರ್ಣಗಳು, ಶಾಲೆಗಳನ್ನು ತಾರ್ಕಿಕವಾಗಿ ವರ್ಗೀಕರಿಸುವುದು, ಶಾಲೆಗೆ ವಿದ್ಯಾರ್ಥಿಗಳು ಹೋಗುವ ಅವಕಾಶಗಳನ್ನು ಯಾವುದೇ ರೀತಿಯಲ್ಲಿ ಕಡಿಮೆ ಮಾಡದಿರುವುದು, ಪರಿಣಾಮಕಾರಿಯಾದ ಶಾಲಾ ಆಡಳಿತ, ಸಂಪನ್ಮೂಲಗಳನ್ನು ಹಂಚಿಕೊಳ್ಳುವುದು, ಸಮುದಾಯ ನಿರ್ಮಾಣ ಇಂತಹ ಹಲವಾರು ನವನವೀನ ಕ್ರಮಗಳನ್ನು ರಾಜ್ಯ ಸರ್ಕಾರಗಳು/ಕೇಂದ್ರಾಡಳಿತ ಪ್ರದೇಶಗಳು ಕೈಗೊಳ್ಳಬಹುದು. ಶಾಲಾ ಸಂಕೀರ್ಣಗಳನ್ನು ಹುಟ್ಟುಹಾಕುವುದರಿಂದ ಕಾಲಾಂತರದಲ್ಲಿ ವಿದ್ಯಾರ್ಥಿಗಳ ಅಗತ್ಯಕ್ಕೆ ಸ್ಪಂದಿಸಬಲ್ಲ ಎಲ್ಲ ಅಧ್ಯಾಪಕರ ಸಮುದಾಯವನ್ನು ಸೃಷ್ಟಿಸುವಲ್ಲಿ ಪರಿಣಾಮಕಾರಿಯಾಗಬಹುದು. ಶಾಲಾ ಸಂಕೀರ್ಣಗಳಿಗೆ ಅಧ್ಯಾಪಕರನ್ನು ನೇಮಕ ಮಾಡಿಕೊಳ್ಳುವುದರಿಂದ ಆ ಸಂಕೀರ್ಣದಲ್ಲಿರುವ ಶಾಲೆಗಳ ನಡುವೆ ಉತ್ತಮವಾದ ಸೌಹಾರ್ದ ಸಂಬಂಧಗಳು ಏರ್ಪಡಬಹುದು; ಅಂತೆಯೇ ವಿಷಯವಾರು ಉತ್ತಮ ಅಧ್ಯಾಪಕರ ವಿತರಣೆ ಕೂಡ ಇದರಿಂದ ಖಾತರಿಯಾಗುತ್ತದೆ; ಇದರಿಂದ ಇನ್ನೂ ಹೆಚ್ಚು ಸ್ಪಂದನಶೀಲರಾದ ಅಧ್ಯಾಪಕ ಜ್ಞಾನ ಮಾಹಿತಿ ಭಂಡಾರವನ್ನು (Teacher Knowledge Base) ಸಿದ್ಧಪಡಿಸಬಹುದು. ಸಣ್ಣಸಣ್ಣ ಶಾಲೆಗಳಲ್ಲಿ ಕೆಲಸ ಮಾಡುತ್ತಿರುವ ಅಧ್ಯಾಪಕರು ಇನ್ನು ಮುಂದೆ ತಾವು ಪ್ರತ್ಯೇಕಗೊಂಡು ಮೂಲೆಗುಂಪಾಗಿದ್ದೇವೆಂದು ಭಾವಿಸಬೇಕಾಗಿಲ್ಲ, ಅದಕ್ಕೆ ಬದಲಾಗಿ ಅವರು ದೊಡ್ಡ ಶಾಲಾಸಂಕೀರ್ಣವೊಂದರ ಭಾಗವಾಗಿದ್ದುಕೊಂಡು ತಮ್ಮ ತಿಳಿವಳಿಕೆ ಮತ್ತು ಅನುಭವಗಳನ್ನು ಬೇರೆಯವರೊಡನೆ ಹಂಚಿಕೊಂಡು ಸಹಯೋಗದಲ್ಲಿ ಕೆಲಸ ಮಾಡುತ್ತಾ ಎಲ್ಲಾ ಮಕ್ಕಳು ಉತ್ತಮವಾಗಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆಂದು ದೃಢಪಡಿಸಿಕೊಳ್ಳಬಹುದು. ಶಾಲಾ ಸಂಕೀರ್ಣಗಳು ಸಲಹೆಗಾರರನ್ನು, ತರಬೇತಿ ಪಡೆದ ಸಾಮಾಜಿಕ ಕಾರ್ಯಕರ್ತರನ್ನು, ತಾಂತ್ರಿಕ ಸಿಬ್ಬಂದಿ, ನಿರ್ವಹಣ ಸಿಬ್ಬಂದಿ ಮುಂತಾದವರನ್ನು ಒಟ್ಟಾಗಿ ತೆಗೆದುಕೊಂಡು ಅಧ್ಯಾಪಕರಿಗೆ ಇನ್ನೂ ಹೆಚ್ಚಿನ ಬೆಂಬಲ ನೀಡುವುದರ ಮೂಲಕ ಅನುಕೂಲಕರವಾದ ಮತ್ತು ಪರಿಣಾಮಕಾರಿಯಾದ ಕಲಿಯುವ ವಾತಾವರಣವನ್ನು ಸೃಷ್ಟಿ ಮಾಡಿಕೊಳ್ಳಬಹುದು.

5.11 ತಂದೆತಾಯಿಗಳ ಹಾಗೂ ಶಾಲೆಗಳ ಹಿತೈಷಿಗಳಾಗಿರುವ ಸ್ಥಳೀಯರ ಸಹಯೋಗವನ್ನು ಪಡೆದುಕೊಂಡು ಅವರನ್ನು ಶಾಲಾ/ಶಾಲಾಸಂಕೀರ್ಣದ ವ್ಯವಸ್ಥಾಪನ ಸಮಿತಿಗಳ ಸದಸ್ಯರಾಗಿ ನೇಮಕ ಮಾಡಿಕೊಳ್ಳುವುದರ ಮೂಲಕ ಅಧ್ಯಾಪಕರು ಶಾಲೆಯ ಅಥವಾ ಶಾಲಾಸಂಕೀರ್ಣಗಳ ಆಡಳಿತವನ್ನು ಹೆಚ್ಚು ಪರಿಣಾಮಕಾರಿಯಾಗಿ ನಿರ್ವಹಿಸಬಹುದಾಗಿರುತ್ತದೆ.

5.12 ಹಾಲಿ ಅಧ್ಯಾಪಕರ ಸಮಯದಲ್ಲಿ ಹೆಚ್ಚು ಭಾಗ ಅಧ್ಯಾಪಕೇತರ ಚಟುವಟಿಕೆಗಳಲ್ಲಿ ಕಳೆದುಹೋಗುತ್ತಿದ್ದು ಇದನ್ನು ತಡೆಯುವ ಸಲುವಾಗಿ ನೇರವಾಗಿ ಬೋಧನೆಗೆ ಸಂಬಂಧಪಡದೆ ಇರುವ ಚಟುವಟಿಕೆಗಳಲ್ಲಿ ಅಧ್ಯಾಪಕರನ್ನು ತೊಡಗಿಸಿಕೊಳ್ಳಲಾಗದು. ಅದರಲ್ಲೂ ವಿಶೇಷವಾಗಿ ಅವರನ್ನು ಶ್ರಮಸಾಧ್ಯವಾದ ಆಡಳಿತ ಸಂಬಂಧವಾದ ಕೆಲಸಗಳಿಗೆ ಬಳಸಿಕೊಳ್ಳುವುದು ಸಾಧ್ಯವಾಗದು. ತೀರಾ ಅಗತ್ಯವಾದ ಸಂದರ್ಭಗಳಲ್ಲಿ, ಉದಾಹರಣೆಗೆ ಮಧ್ಯಾಹ್ನ ವಿದ್ಯಾರ್ಥಿಗಳಿಗೆ ಊಟ ವಿತರಣೆ ಮಾಡುವಂತಹ ಕೆಲಸಗಳನ್ನು ಹೊರತುಪಡಿಸಿ, ಅವರು ಪೂರ್ತಿಯಾಗಿ ತಮ್ಮ ಸಮಯವನ್ನು ಬೋಧನೆ-ಕಲಿಕೆ ಕೆಲಸಗಳ ಕಡೆಗೆ ಕೇಂದ್ರೀಕರಿಸುವಂತೆ ಮಾಡಲಾಗುವುದು.

5.13 ಶಾಲೆಗಳಲ್ಲಿ ಇತ್ಯಾತ್ಮಕ ಕಲಿಕೆಯ ವಾತಾವರಣವನ್ನು ಕಲ್ಪಿಸಲು ನೆರವಾಗುವ ಉದ್ದೇಶದಿಂದ, ಪ್ರಾಂಶುಪಾಲರು ಅಥವಾ ಪ್ರಾಚಾರ್ಯರು ಹಾಗೂ ಅಧ್ಯಾಪಕರುಗಳು ತಮ್ಮ ಶಾಲೆಗಳಲ್ಲಿ ಕಾಳಜಿ ತುಂಬಿದ ಹಾಗೂ ಸಮಾವರ್ತಿಯಾದ ಸಂಸ್ಕೃತಿಯೊಂದನ್ನು ರೂಪಿಸುವರೆಂದು ನಿರೀಕ್ಷಿಸಲಾಗುತ್ತದೆ. ವಿದ್ಯಾರ್ಥಿಗಳು ಪರಿಣಾಮಕಾರಿಯಾಗಿ ವಿದ್ಯಾಭ್ಯಾಸ ಮಾಡುವುದಕ್ಕೆ ಹಾಗೂ ಶಾಲಾ ಹಿತೈಷಿಗಳೆಲ್ಲರ ಒಳಿತು ಮತ್ತು ಅನುಕೂಲಕ್ಕಾಗಿ ಅವರು ಹೀಗೆ ಮಾಡುವರೆಂದು ಅಪೇಕ್ಷೆ ಪಡಲಾಗಿದೆ.

5.14 ತಮ್ಮ ಬೋಧನಕ್ರಮವನ್ನು ಆಯ್ಕೆ ಮಾಡಿಕೊಳ್ಳಲು ಅಧ್ಯಾಪಕರಿಗೆ ಹೆಚ್ಚಿನ ಸ್ವಾಯತ್ತತೆಯನ್ನು ನೀಡಲಾಗುವುದು. ತರಗತಿಗಳಲ್ಲಿ ವಿದ್ಯಾರ್ಥಿಗಳಿಗೆ ಯಾವ ರೀತಿಯಲ್ಲಿ ಕಲಿಸಿದರೆ ಅತ್ಯಂತ ಪರಿಣಾಮಕಾರಿಯಾಗಿ ಇರುತ್ತದೆ ಎಂಬುದನ್ನು ಅಧ್ಯಾಪಕರೇ ಆಯ್ಕೆ ಮಾಡಿಕೊಳ್ಳಬಹುದಾಗಿರುತ್ತದೆ. ಅಧ್ಯಾಪಕರು ವಿದ್ಯಾರ್ಥಿಗಳ ಒಟ್ಟಾರೆ ಬೆಳೆವಣಿಗೆಯಲ್ಲಿ ಮಹತ್ವಪೂರ್ಣ ಹಾಗೂ ನಿರ್ಣಾಯಕವಾದ ಅಂಶವೆಂದೆನಿಸಿಕೊಂಡಿರುವ ಸಾಮಾಜಿಕ-ಭಾವಾತ್ಮಕ ಕಲಿಕೆಯ (Socio-emotional learning) ಕಡೆಗೆ ಕೂಡ ವಿಶೇಷವಾದ ಗಮನವನ್ನು ಹರಿಸುವರು. ತರಗತಿಗಳಲ್ಲಿ ಹೊಸಹೊಸ ಬಗೆಯಲ್ಲಿ ವಿದ್ಯಾರ್ಥಿಗಳು ಕಲಿಯುವಂತೆ ವಿಧಾನಗಳನ್ನು ರೂಪಿಸಿ ಪಾಠಹೇಳುವ ಅಧ್ಯಾಪಕರನ್ನು ಗುರುತಿಸಿ ಗೌರವಿಸಲಾಗುವುದು.

ನಿರಂತರ ವೃತ್ತಿಪರ ಅಭಿವೃದ್ಧಿ (Continuous Professional Development –C.P.D.)

5.15 ತಮ್ಮ ವೃತ್ತಿಯಲ್ಲಿ ಈಚೆಗೆ ಪ್ರಚಲಿತವಾಗಿರುವ ಹೊಸ ಹೊಸ ವಿಧಾನಗಳನ್ನು ಮತ್ತು ಮುನ್ನಡೆಗಳನ್ನು ಗಮನಿಸಿ, ಕಲಿತು ಅವುಗಳನ್ನು ಅಳವಡಿಸಿಕೊಂಡು ಉತ್ತಮಪಡಿಸಿಕೊಳ್ಳುವ ನಿರಂತರ ಅವಕಾಶಗಳನ್ನು ಅಧ್ಯಾಪಕರಿಗೆ ಒದಗಿಸಿಕೊಡಲಾಗುವುದು. ಸ್ಥಳೀಯ, ಪ್ರಾದೇಶಿಕ, ರಾಜ್ಯಮಟ್ಟದ, ರಾಷ್ಟ್ರೀಯ ಮಟ್ಟದ ಮತ್ತು ಅಂತಾರಾಷ್ಟ್ರೀಯ ಮಟ್ಟದ ಕಮ್ಮಟಗಳು ಹಾಗೂ ಆನ್‌ಲೈನ್ ಅಧ್ಯಾಪಕ ಅಭಿವೃದ್ಧಿ ಮಾಡ್ಯೂಲುಗಳೂ ಸೇರಿದಂತೆ ವಿವಿಧ ಬಗೆಗಳಲ್ಲಿ ಇಂತಹ ಅವಕಾಶಗಳನ್ನು ಕಲ್ಪಿಸಿಕೊಡಲಾಗುವುದು. ವೇದಿಕೆ ಅಥವಾ ಪ್ಲಾಟ್‌ಫಾರ್ಮ್‌ಗಳನ್ನು (ವಿಶೇಷವಾಗಿ ಆನ್‌ಲೈನ್ ಪ್ಲಾಟ್‌ಫಾರ್ಮ್‌ಗಳನ್ನು) ಅಭಿವೃದ್ಧಿಪಡಿಸಿ ಅಧ್ಯಾಪಕರು ತಮ್ಮ ಚಿಂತನೆಗಳನ್ನು ಮತ್ತು ಅತ್ಯುತ್ತಮವೆನಿಸಿದ ಮಾರ್ಗೋಪಾಯಗಳನ್ನು ವಿನಿಮಯ ಮಾಡಿಕೊಳ್ಳಲು ಅನುವು ಮಾಡಿಕೊಡಲಾಗುವುದು. ಪ್ರತಿಯೊಬ್ಬ ಅಧ್ಯಾಪಕರೂ ತಮ್ಮ ಸ್ವಂತ ವೃತ್ತಿಪರ ಬೆಳೆವಣಿಗೆಗಾಗಿ ಕನಿಷ್ಠ 50 ಗಂಟೆಗಳ ಸಿ.ಪಿ.ಡಿ. ಕಾರ್ಯಕ್ರಮಗಳಲ್ಲಿ ಸ್ವಯಂಪ್ರೇರಣೆಯಿಂದ ಭಾಗವಹಿಸುತ್ತಾರೆಂದು ನಿರೀಕ್ಷಿಸಲಾಗುತ್ತದೆ. ಸಿ.ಪಿ.ಡಿ. ಸದವಕಾಶಗಳು, ವಿಶೇಷವಾಗಿ, ತಳಹದಿ ಸಾಕ್ಷರತೆ ಮತ್ತು ಅಂಕಜ್ಞಾನ, ಕಲಿಕೆಯ ಫಲಿತಗಳ ರೂಪಾತ್ಮಕ ಮತ್ತು ಅಳವಡಿಕೆ ಮೌಲ್ಯಾಂಕನಗಳು, ಸಕ್ಷಮತೆ-ಆಧಾರಿತ ಕಲಿಕೆ ಹಾಗೂ ಅನುಭವಮೂಲವಾದ ಕಲಿಕೆ, ಕಲೆಯಿಂದೊಡಗೂಡಿದ, ಕ್ರೀಡೆಗಳಿಂದೊಡಗೂಡಿದ, ಕಥೆಗಳನ್ನು ಹೇಳುವುದನ್ನು ಆಧರಿಸಿದ ಕಲಿಕೆಗಳೇ ಮುಂತಾದವುಗಳನ್ನೊಳಗೊಂಡ ಸಂಬಂಧಪಟ್ಟ ಬೋಧನಕ್ರಮಗಳು ಇವುಗಳಲ್ಲಿ ಸೇರ್ಪಡೆಗೊಂಡಿರುತ್ತವೆ.

5.16 ಶಾಲೆಗಳ ಪ್ರಾಂಶುಪಾಲರು ಮತ್ತು ಶಾಲಾಸಂಕೀರ್ಣಗಳ ನೇತೃತ್ವ ವಹಿಸುವವರು ಇವರಿಗೆ ಸಹ ಇಂತಹದೇ ಮಾದರಿಯ ನೇತೃತ್ವ/ನಿರ್ವಹಣ ಕಮ್ಮಟಗಳನ್ನು, ಆನ್‌ಲೈನ್ ಅಭಿವೃದ್ಧಿಗಾಗಿ ಸದವಕಾಶಗಳನ್ನು ಹಾಗೂ ತಮ್ಮ ಮುಂದಾಳುತನ ಮತ್ತು ನಿರ್ವಹಣ ಕೌಶಲಗಳನ್ನು ನಿರಂತರವಾಗಿ ಹೆಚ್ಚಿಸಿಕೊಳ್ಳಲು ವೇದಿಕೆಗಳನ್ನು ಕಲ್ಪಿಸಿಕೊಡಲಾಗುವುದು. ಹಾಗಾಗಿ ಈ ಮೂಲಕ ಅವರು ಕೂಡ ತಾವು ಬೆಳೆಸಿಕೊಂಡಿರುವ ಅತ್ಯುತ್ತಮವಾದ ಅಭ್ಯಾಸಗಳನ್ನು ಬೇರೆಯವರೊಡನೆ ಹಂಚಿಕೊಳ್ಳಲು ಸಾಧ್ಯವಾಗುವುದು. ಇಂತಹ ಮುಂದಾಳುಗಳು ಕೂಡ ಪ್ರತಿವರ್ಷ 50 ಅಥವಾ ಅದಕ್ಕಿಂತ ಹೆಚ್ಚು ಗಂಟೆಗಳ ಸಿ.ಪಿ.ಡಿ. ಮಾಡ್ಯೂಲುಗಳಲ್ಲಿ ಪಾಲುಗೊಳ್ಳುತ್ತಾರೆಂದು ನಿರೀಕ್ಷಿಸಲಾಗುತ್ತದೆ. ಸಕ್ಷಮತೆಯನ್ನಾಧರಿಸಿದ ಶಿಕ್ಷಣವನ್ನು ಅವಲಂಬಿಸಿದ ಬೋಧನಕ್ರಮ ಯೋಜನೆಗಳನ್ನು ಸಿದ್ಧಪಡಿಸುವ ಮತ್ತು ಕಾರ್ಯರೂಪಕ್ಕೆ ತರುವುದರ ಮೇಲೆ ಕೇಂದ್ರೀಕರಿಸುವ ವಿಷಯವಸ್ತು ಮತ್ತು ಬೋಧನಕ್ರಮ ಹಾಗೂ ನೇತೃತ್ವ ಮತ್ತು ನಿರ್ವಹಣೆ ಈ ವಿಷಯಗಳನ್ನು ಸಿ.ಪಿ.ಡಿ. ಮಾಡ್ಯೂಲುಗಳು ಒಳಗೊಂಡಿರುತ್ತವೆ.

ವೃತ್ತಿ ನಿರ್ವಹಣೆ ಮತ್ತು ಮುಂದುವರಿಕೆ (Career Management and Progression - CMP)

5.17 ಅಧ್ಯಾಪಕರು ಅತ್ಯುತ್ತಮವಾಗಿ ಕೆಲಸ ಮಾಡುವ ನಿಟ್ಟಿನಲ್ಲಿ ಎಲ್ಲ ಅಧ್ಯಾಪಕರಿಗೂ ಪ್ರೋತ್ಸಾಹ ನೀಡುವ ಸಲುವಾಗಿ ಅಸಾಧಾರಣ ಸ್ವರೂಪದ ಕೆಲಸಗಳನ್ನು ಮಾಡುವ ಅಧ್ಯಾಪಕರನ್ನು ಗುರುತಿಸಿ ಅವರಿಗೆ ಬಡ್ತಿ ನೀಡಬೇಕು ಹಾಗೂ ಅವರ ಸಂಬಳವನ್ನು ಹೆಚ್ಚಿಸಬೇಕು. ಹಾಗಾಗಿ ಸೇವಾವಧಿ, ಬಡ್ತಿ ಮತ್ತು ವೇತನ ವಿನ್ಯಾಸಗಳುಳ್ಳ ಭದ್ರವಾದ ಒಂದು ಅರ್ಹತಾ ಆಧಾರಿತ ಪ್ರೋತ್ಸಾಹಕ ವ್ಯವಸ್ಥೆಯೊಂದನ್ನು ಅಭಿವೃದ್ಧಿಪಡಿಸತಕ್ಕದ್ದು. ಅಸಾಧಾರಣರಾದ ಅಧ್ಯಾಪಕರಿಗೆ ಪ್ರೋತ್ಸಾಹ ನೀಡಿ ಗುರುತಿಸುವ, ಪ್ರತಿಯೊಂದು ಅಧ್ಯಾಪಕ- ಹಂತದಲ್ಲೂ ಬಹುಸ್ತರಗಳನ್ನು ಒಳಗೊಂಡ ವ್ಯವಸ್ಥೆ ಇದಾಗಿರಬೇಕಇದೇ ರೀತಿಯಲ್ಲಿ ರಾಜ್ಯಗಳ ಮತ್ತು ಕೇಂದ್ರಾಡಳಿತ ಪ್ರದೇಶಗಳ ಸರ್ಕಾರಗಳ ವತಿಯಿಂದ ಕೂಡ ಸೂಕ್ತ ನಿರ್ವಹಣ ಸಾಮರ್ಥ್ಯವನ್ನು ಮೌಲ್ಯಾಂಕನ ಮಾಡುವ ಬಹುಪ್ರಾಚಲಗಳನ್ನು ಹೊಂದಿರುವ ಒಂದು ವ್ಯವಸ್ಥೆಯನ್ನು ಕೂಡ ರೂಪಿಸಬೇಕು. ಇದು ಎನ್.ಪಿ.ಎಸ್.ಟಿ.ಯನ್ನು ಆಧರಿಸಿ ಅದರ ಪ್ಯಾರಾ 5.20ಕ್ಕೆ ಅನುಗುಣವಾಗಿದ್ದು ಶಾಲೆಯ ಮತ್ತು ಸಮುದಾಯದ ಸೇವೆಗೆ ಅಗತ್ಯವಾದ ಅಂಶಗಳೇ ಅಲ್ಲದೆ ಸಮಸ್ಕ೦ದರ ವಿಮರ್ಶೆಗಳು, ಹಾಜರಾತಿ, ಬದ್ಧತೆ, ಸಿ.ಪಿ.ಡಿ.ಯ ಗಂಟೆಗಳು ಇವುಗಳನ್ನು ಸಹ ಇದು ಆಧರಿಸಿರಬೇಕು. ಪ್ರಸಕ್ತ ನೀತಿಯಲ್ಲಿ ವೃತ್ತಿಗೆ ಸಂಬಂಧಪಟ್ಟಂತೆ, 'ಸೇವಾವಧಿ' (tenure) ಎಂದರೆ ನಿರ್ವಹಣೆ ಮತ್ತು ಕೊಡುಗೆ ಇವುಗಳನ್ನು ಸೂಕ್ತವಾಗಿ ಮೌಲ್ಯಾಂಕನ ಮಾಡಿದಮೇಲೆ ಖಾಯಂ ಹುದ್ದೆಗಾಗಿ ಮಾಡಲಾಗುವ ದೃಢೀಕರಣ ಎಂದೂ 'ಸೇವಾವಧಿಯ ಜಾಡು' (tenure track) ಎಂದರೆ ಖಾಯಂ ಮಾಡುವ ಮೊದಲಿನ ಖಾಯಂಪೂರ್ವ ಅವಧಿ ಎಂದೂ ತಿಳಿಯಬೇಕಾಗಿದೆ.

5.18 ಇನ್ನೂಮುಂದೆ ವೃತ್ತಿಯಲ್ಲಿ ಈ ಬಗೆಯ ಮುನ್ನಡೆ (ಸೇವಾವಧಿ, ಬಡ್ತಿ, ಸಂಬಳದ ಹೆಚ್ಚಳ ಇತ್ಯಾದಿ) ಅಧ್ಯಾಪಕರಿಗೆ ಕೇವಲ ಒಂದು ಶಾಲಾಹಂತದೊಳಗೆ (ಅಂದರೆ ತಳಹದಿ, ಸಿದ್ಧತಾ, ಮಾಧ್ಯಮಿಕ ಅಥವಾ ಸೆಕಂಡರಿ) ಲಭ್ಯವಾಗುತ್ತದೆಂದು ಖಚಿತಪಡಿಸಲಾಗುತ್ತದೆ. ಅಂತೆಯೆ ಮೊದಲ ಹಂತದಿಂದ ಮುಂದಿನ ಹಂತಗಳಿಗೆ ಹೋಗುವ ಅಥವಾ ಮುಂದಿನ ಹಂತಗಳಿಂದ ಹಿಂದಿನ ಹಂತಗಳಿಗೆ ಬರುವ ಅಧ್ಯಾಪಕರಿಗೆ ಇಂಥ ವೃತ್ತಿ ಮುನ್ನಡೆಗೆ ಸಂಬಂಧಿಸಿದ ಪ್ರೋತ್ಸಾಹಗಳು ಲಭ್ಯವಾಗುವುದಿಲ್ಲ. (ಅಧ್ಯಾಪಕರ ಇಚ್ಛೆ ಮತ್ತು ಅರ್ಹತೆ ಇವುಗಳನ್ನು ಆಧರಿಸಿ ಹಂತದಿಂದ ಹಂತಕ್ಕೆ ಈ ಬಗೆಯ ವೃತ್ತಿಪರ ನಡೆಯಲ್ಲಿ ಅವಕಾಶ ಮಾಡಿ ಕೊಡಲಾಗುತ್ತದೆ ಎಂಬುದು ಬೇರೆ ಸಂಗತಿ.) ಶಾಲಾ ಶಿಕ್ಷಣದ ಎಲ್ಲ ಹಂತಗಳಲ್ಲೂ ಅತ್ಯುತ್ತಮ ಅರ್ಹತೆಯುಳ್ಳ ಅಧ್ಯಾಪಕರು ಇರಬೇಕಾಗುತ್ತದೆ ಹಾಗೂ ಯಾವ ಹಂತವನ್ನೂ ಬೇರೊಂದು ಹಂತಕ್ಕಿಂತ ಹೆಚ್ಚು ಇಲ್ಲವೇ ಕಡಿಮೆ ಎಂದು ಪರಿಗಣಿಸತಕ್ಕದ್ದಲ್ಲ ಎಂಬ ವಾಸ್ತವ ಸಂಗತಿಗೆ ಇದು ಪುರಾವೆಯಾಗಿ ನಿಲ್ಲುತ್ತದೆ.

5.19 ಅರ್ಹತೆ ಆಧರಿಸಿ ಅಧ್ಯಾಪಕರಿಗೆ ನೇರವಾಗಿ ಮೇಲುಮೇಲಿನ ಹಂತಗಳಲ್ಲಿ ಕೆಲಸ ಮಾಡಲು ಅವಕಾಶ ಒದಗಿಸುವುದು ಅತ್ಯುತ್ತಮ ನಡೆಯೆನಿಸಿಕೊಳ್ಳುತ್ತದೆ. ತಮ್ಮ ಅರ್ಹತೆಯನ್ನು ಸ್ಪಷ್ಟವಾಗಿ ನಿರೂಪಿಸಿ ತೋರುವ, ಮುಂದಾಳುತನ ಮತ್ತು ನಿರ್ವಹಣ ಕೌಶಲಗಳನ್ನು ಪಡೆದುಕೊಂಡಿರುವ ಅಸಾಧಾರಣರೆನಿಸಿದ ಅಧ್ಯಾಪಕರಿಗೆ ಕಾಲಕಾಲಕ್ಕೆ ಅಗತ್ಯವಾದ ತರಬೇತಿ ನೀಡಿ ಶಾಲೆಗಳು, ಶಾಲಾಸಂಕೀರ್ಣಗಳು, ಬಿ.ಆರ್.ಸಿ.ಗಳು, ಸಿ.ಆರ್.ಸಿ.ಗಳು, ಬಿ.ಐ.ಟಿ.ಇ.ಗಳು, ಡಿ.ಐ.ಇ.ಟಿ.ಗಳು (BRCs, CRCs, BITEs, DIETs) ಹಾಗೂ ಸಮುಚಿತವಾದ ಸರ್ಕಾರಿ ಇಲಾಖೆಗಳಲ್ಲಿ ಶೈಕ್ಷಣಿಕ ಸ್ವರೂಪದ ಮುಂದಾಳುತನದ ಹುದ್ದೆಗಳಿಗಾಗಿ ಅವರ ಸೇವೆಯನ್ನು ಬಳಸಿಕೊಳ್ಳಲಾಗುವುದು.

ಅಧ್ಯಾಪಕರಿಗಾಗಿ ವೃತ್ತಿಪರ ಮಾನದಂಡಗಳು

5.20 ಅಧ್ಯಾಪಕರಿಗಾಗಿ ರಾಷ್ಟ್ರೀಯ ವೃತ್ತಿಪರ ಮಾನದಂಡಗಳ ಒಂದು ಸಾರ್ವತ್ರಿಕ ಮಾರ್ಗದರ್ಶಕ ನಮೂನೆಯನ್ನು (National Professional Standards for Teachers - NPST) 2022 ರ ವೇಳೆಗೆ ಅಭಿವೃದ್ಧಿಪಡಿಸಲಾಗುವುದು. ಸಾರ್ವತ್ರಿಕ ಶಿಕ್ಷಣ ಪರಿಷತ್ತಿನ (General Education Council - GEC) ಆಶ್ರಯದಲ್ಲಿ ವೃತ್ತಿಪರ ಮಾನಕ ನಿರ್ಮಾಣ ಸಂಸ್ಥೆ (Professional Standard Setting Body - PSSB) ಎಂಬುದಾಗಿ ಮರುವಿನ್ಯಾಸಗೊಂಡಿರುವ ರಾಷ್ಟ್ರೀಯ ಅಧ್ಯಾಪಕ ಶಿಕ್ಷಣ ಪರಿಷತ್ತಿನ (National Council for Teacher Education) ವತಿಯಿಂದ ಈ ಮಾರ್ಗದರ್ಶಕ ನಮೂನೆಯನ್ನು ಸಿದ್ಧಪಡಿಸಲಾಗುತ್ತದೆ. ಇದಕ್ಕಾಗಿ ಎನ್.ಸಿ.ಇ.ಆರ್.ಟಿ., ಎಸ್.ಸಿ.ಇ.ಆರ್.ಟಿ.ಗಳು, ಬೇರೆ ಬೇರೆ ಹಂತಗಳ ಹಾಗೂ ಪ್ರದೇಶಗಳ ಅಧ್ಯಾಪಕರು, ಅಧ್ಯಾಪಕರ ತರಬೇತಿ ಮತ್ತು ಅಭಿವೃದ್ಧಿ ಕುರಿತ ಪರಿಣತ ಸಂಸ್ಥೆಗಳು, ವೃತ್ತಿಪರ ಶಿಕ್ಷಣದಲ್ಲಿ ಪರಿಣತ ಸಂಸ್ಥೆಗಳು, ಉನ್ನತ ಶಿಕ್ಷಣ ಸಂಸ್ಥೆಗಳು ಇವುಗಳ ವತಿಯಿಂದ ಈ ಉದ್ದೇಶಕ್ಕಾಗಿ ಸಲಹೆ ಸೂಚನೆಗಳನ್ನು ಪಡೆಯಲಾಗುವುದು. ಬೇರೆ ಬೇರೆ ಹಂತಗಳಲ್ಲಿ ಬೇಕಾದ ಪರಿಣತಿ ಹಾಗೂ ಆ ಹಂತಗಳಿಗೆ ಅಗತ್ಯವಾಗುವ ಸಕ್ಷಮತೆ ಇವುಗಳ ಹಿನ್ನೆಲೆಯಲ್ಲಿ ಅಧ್ಯಾಪಕರು ವಹಿಸಬೇಕಾದ ಪಾತ್ರಗಳನ್ನು ಕುರಿತ ನಿರೀಕ್ಷೆಗಳನ್ನು ಈ ಮಾನಕಗಳ ಅಡಿಯಲ್ಲಿ ಪರಿಗಣಿಸಲಾಗುವುದು. ಅಲ್ಲದೆ ಈ ಮಾನದಂಡಗಳಲ್ಲಿ ಪ್ರತಿಯೊಂದು ಹಂತಕ್ಕೂ ಸಂಬಂಧಿಸಿದಂತೆ ಕಾಲಕಾಲಕ್ಕೆ ನಡೆಸಲಾಗುವ ಅಧ್ಯಾಪಕರ ಕಾರ್ಯನಿರ್ವಹಣ ಮೌಲ್ಯಾಂಕನಕ್ಕೆ ಬೇಕಾದ ಅಂಶಗಳನ್ನು ಕೂಡ ಅಳವಡಿಸಲಾಗುವುದು. ಸೇವೆಗೆ ಸೇರುವುದಕ್ಕಿಂತ ಮುಂಚೆ ನಡೆಸಲಾಗುವ ಅಧ್ಯಾಪಕ ಶಿಕ್ಷಣ ಕಾರ್ಯಕ್ರಮಗಳ ವಿನ್ಯಾಸದ ವಿಚಾರವಾಗಿ ಕೂಡ ಈ ಎನ್.ಪಿ.ಸಿ.ಟಿ. ಮಾಹಿತಿ ನೀಡುತ್ತದೆ. ಅನಂತರ ಇದನ್ನು ರಾಜ್ಯಗಳು ಅಳವಡಿಸಿಕೊಂಡು ಅಧ್ಯಾಪಕರ ಸೇವಾವಧಿ, ವೃತ್ತಿಪರ ಅಭಿವೃದ್ಧಿಗಾಗಿ ಪ್ರಯತ್ನಗಳು, ಸಂಬಳದ ಹೆಚ್ಚಳ,

ಬಡ್ತಿ ಹಾಗೂ ಮತ್ತಿತರ ಮನ್ನಣೆಗಳು ಕೂಡ ಸೇರಿದಂತೆ ಅಧ್ಯಾಪಕ ವೃತ್ತಿ ನಿರ್ವಹಣೆಯ ಎಲ್ಲ ಮುಖಗಳಿಗೂ ಅಳವಡಿಸಿಕೊಳ್ಳಬಹುದು. ಬಡ್ತಿ ಹಾಗೂ ವೇತನದಲ್ಲಿ ಹೆಚ್ಚಳ ಇವು ಸೇವೆಯ ಅವಧಿ ಅಥವಾ ವರಿಷ್ಠತೆ ಇವುಗಳನ್ನು ಅವಲಂಬಿಸದೆ ಈ ಬಗೆಯ ಮೌಲ್ಯಾಂಕನದ ಆಧಾರದ ಮೇಲೆ ಪರಿಗಣಿಸಬೇಕಾದ ಸಂಗತಿಗಳಾಗಿರುತ್ತವೆ. ವೃತ್ತಿಪರ ಮಾನದಂಡಗಳನ್ನು 2030ರಲ್ಲಿ ಮರುಪರಿಶೀಲನೆ ಮಾಡಿ ಮರುವಿಮರ್ಶೆಗೆ ಒಳಪಡಿಸಲಾಗುತ್ತದೆ ಹಾಗೂ ತದನಂತರ ಪ್ರತಿ ಹತ್ತು ವರ್ಷಗಳಿಗೊಮ್ಮೆ ವ್ಯವಸ್ಥೆಯ ಸೂಕ್ತತೆ ಮತ್ತು ಸಾಮರ್ಥ್ಯವನ್ನು ಕಟ್ಟುನಿಟ್ಟಾದ ಅನುಭವದ ವಿಶ್ಲೇಷಣೆಯ ಹಿನ್ನೆಲೆಯಲ್ಲಿ ಪರಿಗಣಿಸಲಾಗುವುದು.

ವಿಶೇಷ ಶಿಕ್ಷಕರು (Special Educators)

5.21 ಶಾಲಾ ಶಿಕ್ಷಣದ ಕೆಲವು ಕ್ಷೇತ್ರಗಳಿಗಾಗಿ ವಿಶೇಷ ಶಿಕ್ಷಕರನ್ನು ತುರ್ತಾಗಿ ನೇಮಿಸುವ ಅಗತ್ಯವಿದೆ. ಕೆಲವು ವಿಶಿಷ್ಟ ಬಗೆಯ ಕಲಿಕೆಯ ಅಸಾಮರ್ಥ್ಯಗಳನ್ನು ಹೊಂದಿರುವವರಿಗೆ ಕಲಿಸುವುದೂ ಸೇರಿದಂತೆ ಮಾಧ್ಯಮಿಕ ಮತ್ತು ಸೆಕಂಡರಿ ಹಂತಗಳಲ್ಲಿ ಓದುತ್ತಿರುವ ವಿಶೇಷ ಸಾಮರ್ಥ್ಯವುಳ್ಳ/ ದಿವ್ಯಾಂಗರಾದ ಮಕ್ಕಳ ಶಿಕ್ಷಣ ಕೂಡ ಇಂತಹ ಕ್ಷೇತ್ರಗಳಲ್ಲಿ ಒಂದು. ಈ ಅಧ್ಯಾಪಕರಿಗೆ ತಾವು ಕಲಿಸುವ ವಿಷಯಗಳಲ್ಲಿ ಮತ್ತು ಆಯಾ ವಿಷಯಕ್ಕೆ ಸಂಬಂಧಿಸಿದ ಶೈಕ್ಷಣಿಕ ಗುರಿಗಳ ಬಗೆಗೆ ತಿಳಿವಳಿಕೆ ಇದ್ದರೆ ಮಾತ್ರ ಸಾಲದು, ಅದರ ಜೊತೆಗೆ ಇಂಥ ವಿಶೇಷ ಮಕ್ಕಳ ವಿಶಿಷ್ಟ ಬಗೆಯ ಆವಶ್ಯಕತೆಗಳನ್ನು ಅರ್ಥಮಾಡಿಕೊಳ್ಳುವ ಸೂಕ್ತವಾದ ಕೌಶಲಗಳು ಕೂಡ ಅವರಿಗೆ ಕರಗತವಾಗಿರಬೇಕು. ಆದ್ದರಿಂದ ವಿಷಯಗಳನ್ನು ಬೋಧಿಸುವ ಹಾಗೂ ಸಾಮಾನ್ಯವಾಗಿ ಎಲ್ಲ ವಿಷಯಗಳ ಪಾಠ ಹೇಳುವ ಅಧ್ಯಾಪಕರಿಗಾಗಿ ಇಂಥ ಕ್ಷೇತ್ರಗಳನ್ನು ದ್ವಿತೀಯಿಕ ಅಥವಾ ಎರಡನೇ ಪ್ರಾಶಸ್ತ್ಯದ ವಿಶಿಷ್ಟ ವಿಷಯಕ್ಷೇತ್ರಗಳಾಗಿ ಅಭಿವೃದ್ಧಿಪಡಿಸಬಹುದಾಗಿದೆ. ಸೇವೆಗೆ ಸೇರುವ ಮೊದಲಿಗೆ ಅಥವಾ ಸಿದ್ಧತಾಹಂತ ಪೂರೈಸಿದ ಅನಂತರ ಈ ವಿಶೇಷ ಕ್ಷೇತ್ರಗಳ ಅಧ್ಯಯನಕ್ಕೆ ಅಧ್ಯಾಪಕರನ್ನು ಒಳಪಡಿಸಬಹುದು. ಅವುಗಳನ್ನು ಸೇವಾವಧಿಯ ಮೊದಲಿಗೆ ಅಥವಾ ಸೇವಾವಧಿಯಲ್ಲಿ ಪೂರ್ವಾವಧಿ ಇಲ್ಲವೆ ಅಲ್ಪಾವಧಿ/ ಸಮ್ಮಿಲಿತ ಸ್ವರೂಪದ ಸರ್ಟಿಫಿಕೇಟ್ ಶಿಕ್ಷಣದ ರೂಪದಲ್ಲಿ ನೀಡಬಹುದಾಗಿದ್ದು ಈ ಶಿಕ್ಷಣವನ್ನು ಅಗತ್ಯವಾಗಿ ಬಹು ವಿಷಯಗಳನ್ನು ಬೋಧಿಸುವ ಕಾಲೇಜುಗಳ ಇಲ್ಲವೇ ವಿಶ್ವವಿದ್ಯಾನಿಲಯಗಳ ಮೂಲಕ ನೀಡಬೇಕಾಗಿದೆ. ಎನ್.ಸಿ.ಟಿ.ಇ. ಮತ್ತು ಆರ್.ಸಿ.ಐ.ಗಳ ಶಿಕ್ಷಣ ಪಠ್ಯಕ್ರಮಗಳ ನಡುವೆ ಹೆಚ್ಚಿನ ಸಹಯೋಗ ಸಾಧ್ಯವಾಗುವಂತೆ ಮಾಡಿ ಇಂತಹ ವಿಷಯಗಳನ್ನು ಸಮರ್ಥವಾಗಿ ಬೋಧಿಸಬಲ್ಲ ಅರ್ಹತೆ ಹೊಂದಿರುವ ಅಧ್ಯಾಪಕರು ಸಾಕಷ್ಟು ಸಂಖ್ಯೆಯಲ್ಲಿ ಒದಗುವಂತೆ ಏರ್ಪಾಡು ಮಾಡಲಾಗುವುದು.

ಅಧ್ಯಾಪಕ ಶಿಕ್ಷಣದತ್ತ ನಡೆ

5.22 ಅಧ್ಯಾಪಕರಿಗೆ ಉನ್ನತಗುಣಮಟ್ಟದ ವಿಷಯಜ್ಞಾನ ಮತ್ತು ಬೋಧನಕ್ರಮ ಎರಡರಲ್ಲೂ ತರಬೇತಿ ಅಗತ್ಯವಾಗಿ ಬೇಕೆಂಬ ಸಂಗತಿಯನ್ನು ಗುರುತಿಸಿ 2030ರ ವೇಳೆಗೆ ಅಧ್ಯಾಪಕ ಶಿಕ್ಷಣವನ್ನು ಕ್ರಮೇಣ ಬಹು ವಿಷಯಗಳನ್ನು ಬೋಧಿಸುವ ಕಾಲೇಜುಗಳಿಗೆ ಮತ್ತು ವಿಶ್ವವಿದ್ಯಾನಿಲಯಗಳಿಗೆ ವರ್ಗಾಯಿಸಲಾಗುವುದು. ಎಲ್ಲ ಕಾಲೇಜುಗಳು ಮತ್ತು ವಿಶ್ವವಿದ್ಯಾನಿಲಯಗಳು ಬಹು ವಿಷಯಗಳನ್ನು ಕುರಿತು ಶಿಕ್ಷಣ ನೀಡುವತ್ತ ಧಾವಿಸುತ್ತಿರುವುದರಿಂದ, ಅವುಗಳಲ್ಲಿ ಶಿಕ್ಷಣದಲ್ಲಿ ಬಿ.ಎಡ್., ಎಂ.ಎಡ್., ಹಾಗೂ ಪಿಎಚ್.ಡಿ. ಪದವಿಗಳಿಗಾಗಿ ಅಭ್ಯರ್ಥಿಗಳನ್ನು ಸಜ್ಜುಗೊಳಿಸುವ ಉನ್ನತ ಮಟ್ಟದ ಶಿಕ್ಷಣ ಇಲಾಖೆಗಳನ್ನು ಸಹ ಹೊಂದುವ ಗುರಿಯನ್ನು ಇಟ್ಟುಕೊಳ್ಳಬೇಕಾಗುತ್ತದೆ

5.23 2030ರ ವೇಳೆಗೆ ಅಧ್ಯಾಪನ ಮಾಡುವುದಕ್ಕೆ ಬೇಕಾದ ಕನಿಷ್ಠ ವಿದ್ಯಾರ್ಹತೆ ನಾಲ್ಕು ವರ್ಷಗಳ ಸಮಾಕಲಿತ (integrated) ಬಿ.ಎಡ್. ಪದವಿ ಶಿಕ್ಷಣವಾಗಿರುತ್ತದೆ. ಇದರಲ್ಲಿ ವಿಷಯವಸ್ತುವಿನ ವಿಸ್ತಾರವಾದ ತಿಳಿವಳಿಕೆ ಮತ್ತು ಬೋಧನಕ್ರಮಗಳು ಸೇರಿಕೊಂಡಿದ್ದು, ಸ್ಥಳೀಯ ಶಾಲೆಗಳಲ್ಲಿ ಮಕ್ಕಳಿಗೆ ನೇರವಾಗಿ ಬೋಧನೆ ಮಾಡುವಂತಹ ದೃಢವಾದ ಪ್ರಾಯೋಗಿಕ ತರಬೇತಿ ಕೂಡ ಅಳವಡ್ಡಿರುತ್ತದೆ. ನಾಲ್ಕು ವರ್ಷಗಳ ಸಮಾಕಲಿತ ಬಿ.ಎಡ್. ಶಿಕ್ಷಣವನ್ನು ನೀಡುವ ಬಹುವಿಷಯಗಳನ್ನು ಬೋಧಿಸುವ ಸಂಸ್ಥೆಗಳೇ ಎರಡು ವರ್ಷಗಳ ಬಿ.ಎಡ್. ಶಿಕ್ಷಣವನ್ನು ಕೂಡ ನೀಡುವುವು. ಈ ಎರಡು ವರ್ಷಗಳ ಬಿ.ಎಡ್. ಶಿಕ್ಷಣ ಈಗಾಗಲೆ ಬೇರೆ ವಿಶಿಷ್ಟ ವಿಷಯಗಳಲ್ಲಿ ಪದವಿಗಳನ್ನು ಗಳಿಸಿಕೊಂಡಿರುವ ಅಭ್ಯರ್ಥಿಗಳ ಸಲುವಾಗಿಯೆ ಏರ್ಪಟ್ಟಿರುತ್ತದೆ. ನಾಲ್ಕು ವರ್ಷಗಳ ಬಹುವಿಷಯಕ ಪದವಿ ಶಿಕ್ಷಣವನ್ನು ಅಥವಾ ಯಾವುದೇ ಒಂದು ನಿರ್ದಿಷ್ಟ ವಿಷಯದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದುಕೊಂಡಿದ್ದು ಆ ವಿಶಿಷ್ಟ ಕ್ಷೇತ್ರದಲ್ಲಿ ವಿಷಯ-ಅಧ್ಯಾಪಕರಾಗಲು ಇಷ್ಟಪಡುವ ಅಭ್ಯರ್ಥಿಗಳ ಸಲುವಾಗಿ ಮಾತ್ರ ಈ ಬಿ.ಎಡ್. ಶಿಕ್ಷಣ ಕಾರ್ಯಕ್ರಮಗಳನ್ನು ಒಂದು ವರ್ಷದ ಬಿ.ಎಡ್. ಕಾರ್ಯಕ್ರಮವಾಗಿ ಕೂಡ ಅಳವಡಿಸಿಕೊಳ್ಳಬಹುದು. ಇಂಥ ಎಲ್ಲ ಬಿ.ಎಡ್. ಪದವಿಗಳನ್ನು ನಾಲ್ಕು ವರ್ಷಗಳ ಸಮಾಕಲಿತ ಬಿ.ಎಡ್ ಪದವಿ ಕಾರ್ಯಕ್ರಮಗಳಿಗಾಗಿ ಶಿಕ್ಷಣ ನೀಡುವ ಮಾನ್ಯತೆ ಪಡೆದ ಬಹುಶಾಸ್ತ್ರೀಯ ಉನ್ನತ ಶಿಕ್ಷಣ ಸಂಸ್ಥೆಗಳು ಮಾತ್ರ ನೀಡತಕ್ಕದ್ದು. ಅಂತೆಯೇ ನಾಲ್ಕು ವರ್ಷಗಳ ಅವಧಿಯ ಸಮಾಕಲಿತ ಬಿ.ಎಡ್. ಪದವಿಯನ್ನು ತಮ್ಮ ಸಂಸ್ಥೆಯಲ್ಲಿ ತರಗತಿಗಳನ್ನು ನಡೆಸುವ ಮೂಲಕ ಹಾಗೂ ಓ.ಡಿ.ಎಲ್.ಗಾಗಿ ಮಾನ್ಯತೆ ಪಡೆದಿದ್ದು ಉನ್ನತ ಗುಣಮಟ್ಟದ ಬಿ.ಎಡ್. ಶಿಕ್ಷಣ ಕಾರ್ಯಕ್ರಮಗಳನ್ನು ಸಂಯುಕ್ತ ಮಾದರಿಯಲ್ಲಿ ಅಥವಾ ಓ.ಡಿ.ಎಲ್. ಮೂಲಕವಾಗಿ ನಡೆಸುವ ಸಂಸ್ಥೆಗಳು ಕೂಡ ನಿರ್ವಹಿಸಬಹುದಾಗಿದೆ. ತುಂಬ ದೂರದೂರುಗಳಲ್ಲಿ ಮತ್ತು ಸುಲಭವಾಗಿ ಹೋಗಿಬರಲು ಸಾಧ್ಯವಿಲ್ಲದ ಪ್ರದೇಶಗಳಲ್ಲಿರುವ ವಿದ್ಯಾರ್ಥಿಗಳು ಹಾಗೂ ಸೇವೆಯಲ್ಲಿರುವ ಅಧ್ಯಾಪಕರು ತಮ್ಮ ವಿದ್ಯಾರ್ಹತೆಗಳನ್ನು

ಹೆಚ್ಚಿಸಿಕೊಳ್ಳುವ ಸಲುವಾಗಿ ಈ ಬಿ.ಎಡ್. ಶಿಕ್ಷಣ ಪಡೆಯಬಹುದಾಗಿದೆ. ಇಂಥ ಸಂಸ್ಥೆಗಳಲ್ಲಿ ಅಭ್ಯರ್ಥಿಗಳಿಗೆ ಕಟ್ಟುನಿಟ್ಟಾದ ಶಿಕ್ಷಣ ಕ್ರಮವನ್ನು ಜಾರಿಮಾಡುವ, ಪ್ರಾಯೋಗಿಕ ತರಗತಿಗಳನ್ನು ನಡೆಸುವ ಸೌಲಭ್ಯಗಳಿಂದ ಕೂಡಿರುವ ಹಾಗೂ ವಿದ್ಯಾರ್ಥಿ-ಅಧ್ಯಾಪಕ ಸಂಪರ್ಕಕ್ಕೆ ಅವಕಾಶ ಮಾಡಿಕೊಡುವ ಸುದೃಢವಾದ ವ್ಯವಸ್ಥೆ ಇರತಕ್ಕದ್ದು.

5.24 ಇಂತಹ ಎಲ್ಲ ಬಿ.ಎಡ್. ಕಾರ್ಯಕ್ರಮಗಳಲ್ಲಿ ಬಹುಕಾಲದಿಂದ ಯಶಸ್ವಿಯಾಗಿ ನಡೆದು ಬಂದಿರುವ ಬೋಧನಕ್ರಮಗಳ ಜೊತೆಗೆ ಆಧುನಿಕ ತಂತ್ರಜ್ಞಾನ ಸ್ವರೂಪವಾದ ಸೌಕರ್ಯಗಳು ಕೂಡ ಇರತಕ್ಕದ್ದು. ತಳಹದಿ ಮಟ್ಟದ ಸಾಕ್ಷರತೆ ಮತ್ತು ಅಂಕಪರಿಜ್ಞಾನ, ಬಹುಹಂತಗಳ ಬೋಧನೆ ಮತ್ತು ಮೌಲ್ಯಮಾಪನ, ಅಸಾಮರ್ಥ್ಯದಿಂದ ಕೂಡಿದ ಮಕ್ಕಳಿಗೆ ಬೋಧನೆ ಮಾಡುವುದು, ವಿಶೇಷ ಆಸಕ್ತಿ ತಳೆದ ಅಥವಾ ಕೌಶಲಗಳನ್ನು ಪಡೆದ ಮಕ್ಕಳಿಗೆ ಪಾಠ ಹೇಳುವುದು, ಶಿಕ್ಷಣ ತಂತ್ರಜ್ಞಾನವನ್ನು ಬಳಕೆ ಮಾಡುವುದು, ಕಲಿಕಾರ್ಥಿ-ಕೇಂದ್ರಿತ ಮತ್ತು ಸಹಯೋಗ ಆಧಾರಿತ ಕಲಿಕೆ ಇಂಥವೆಲ್ಲ ಈ ಬೋಧನಕ್ರಮದಲ್ಲಿ ಅಳವಟ್ಟಿರಬೇಕು. ಎಲ್ಲ ಬಿ.ಎಡ್. ಕಾರ್ಯಕ್ರಮಗಳಲ್ಲೂ ಸ್ಥಳೀಯ ಶಾಲೆಗಳನ್ನು ಬಳಸಿಕೊಂಡು ವಿದ್ಯಾರ್ಥಿಗಳಿಗೆ ನೇರವಾಗಿ ಪಾಠಹೇಳಿ ತರಬೇತಿ ಪಡೆಯುವ ಭದ್ರವಾದ ವ್ಯವಸ್ಥೆ ಇರಬೇಕು. ಎಲ್ಲ ಬಿ.ಎಡ್. ಕಾರ್ಯಕ್ರಮಗಳಲ್ಲೂ ಭಾರತೀಯ ಸಂವಿಧಾನದಲ್ಲಿ ಪ್ರಸ್ತಾಪಿಸಲಾಗಿರುವ ಮೂಲಭೂತ ಕರ್ತವ್ಯಗಳ ಪಾಲನೆ (ಅನುಚ್ಛೇದ 51ಎ) ಹಾಗೂ ಇತರ ಸಾಂವಿಧಾನಿಕ ಸವತ್ತುಗಳನ್ನು ಕುರಿತಂತೆ ಪ್ರತಿಯೊಂದು ವಿಷಯವನ್ನು ಪಾಠಹೇಳುವ ಅಥವಾ ಪ್ರತಿಯೊಂದು ಚಟುವಟಿಕೆಯನ್ನು ನಡೆಸುವ ಸಮಯದಲ್ಲಿ ಗಟ್ಟಿಯಾಗಿ ಮನದಟ್ಟಾಗುವಂತೆ ತಿಳಿಯಪಡಿಸಬೇಕು. ಹಾಗೆಯೆ ಪಠ್ಯಕ್ರಮದ ಜೊತೆಯಲ್ಲಿ ಪರಿಸರಪ್ರಜ್ಞೆ ಮತ್ತು ಪರಿಸರ ಸಂರಕ್ಷಣೆ ಹಾಗೂ ಸುಸ್ಥಿರ ಬೆಳೆವಣಿಗೆ ಕುರಿತ ಸಂವೇದನೆಯನ್ನು ಸೂಕ್ತವಾಗಿ ಮೂಡಿಸುವ ದೃಢವಾದ ಕ್ರಮ ಕೈಗೊಳ್ಳಬೇಕು. ಈ ಮೂಲಕ ಪರಿಸರ ಶಿಕ್ಷಣವನ್ನು ಶಾಲಾ ಪಠ್ಯಕ್ರಮದ ಒಂದು ಅವಿನಾಭಾಗವಾಗುವಂತೆ ನೋಡಿಕೊಳ್ಳಬೇಕು.

5.25 ಬಿ.ಐ.ಟಿ.ಇ., ಡಿ.ಐ.ಇ.ಟಿ. ಅಥವಾ ಶಾಲಾಸಂಕೀರ್ಣಗಳಲ್ಲಿ ವಿಶೇಷವಾದ ಅಲ್ಪಾವಧಿ ಸ್ಥಳೀಯ ಅಧ್ಯಾಪಕ ಶಿಕ್ಷಣ ಕಾರ್ಯಕ್ರಮಗಳು ಲಭ್ಯವಿರುತ್ತವೆ. ಇಂತೆಡೆಗಳಲ್ಲಿ ಖ್ಯಾತರಾದ ಸ್ಥಳೀಯ ವ್ಯಕ್ತಿಗಳನ್ನು 'ಪರಿಣತ ಬೋಧಕ'ರಾಗಿ (master instructors) ನೇಮಿಸಿಕೊಂಡು ಶಾಲೆಗಳಲ್ಲಿ ಅಥವಾ ಶಾಲಾ- ಸಂಕೀರ್ಣಗಳಲ್ಲಿ ಅವರ ಸೇವೆಯನ್ನು ಪಡೆದುಕೊಳ್ಳಬಹುದು. ಸ್ಥಳೀಯ ಕಲೆ, ಸಂಗೀತ, ಕೃಷಿ, ವ್ಯಾಪಾರ, ಕ್ರೀಡೆಗಳು, ಮರಗೆಲಸ ಮತ್ತಿತರ ರೀತಿಯ ವೃತ್ತಿಪರ ಕೌಶಲಗಳು ಇವೇ ಮುಂತಾದ ಬಗೆಯ ಸ್ಥಳೀಯ ಉದ್ಯೋಗಗಳು, ತಿಳಿವಳಿಕೆ ಮತ್ತು ಕೌಶಲಗಳ ಪ್ರಸರಣಕ್ಕೆ ಬೆಂಬಲ ನೀಡುವ ಉದ್ದೇಶದಿಂದ ಈ ರೀತಿ ಮಾಡಬಹುದಾಗಿದೆ.

5.26 ಬಹುಶಿಸ್ತೀಯ ಕಾಲೇಜುಗಳಲ್ಲಿ ಮತ್ತು ವಿಶ್ವವಿದ್ಯಾನಿಲಯಗಳಲ್ಲಿ ಬಿ.ಎಡ್. ಅನಂತರದ ಅಲ್ಪಾವಧಿ ಸರ್ಟಿಫಿಕೇಟ್ ಶಿಕ್ಷಣ ಕಾರ್ಯಕ್ರಮಗಳನ್ನು ವ್ಯಾಪಕವಾಗಿ ಜಾರಿಗೆ ತರಬಹುದು. ಅಸಾಮರ್ಥ್ಯವುಳ್ಳ ವಿದ್ಯಾರ್ಥಿಗಳಿಗೆ ಬೋಧಿಸುವುದು, ಶಾಲಾ ವ್ಯವಸ್ಥೆಯಲ್ಲಿ ಮುಂದಾಳುತನ ಮತ್ತು ನಿರ್ವಹಣ ಸಂಬಂಧವಾದ ಹುದ್ದೆಗಳಲ್ಲಿ ಕೆಲಸ ಮಾಡುವುದು ಅಥವಾ ತಳಹದಿ ಹಂತದ ಮತ್ತು ಸಿದ್ಧತಾ, ಮಾಧ್ಯಮಿಕ ಹಾಗೂ ಸೆಕಂಡರಿ ಹಂತಗಳಲ್ಲಿ ಒಂದು ಹಂತದಿಂದ ಇನ್ನೊಂದು ಹಂತಕ್ಕೆ ಹೋಗಬಯಸುವುದು ಇವುಗಳನ್ನು ಅಪೇಕ್ಷಿಸುವ ಅಧ್ಯಾಪಕರಿಗಾಗಿ ಈ ಬಗೆಯ ಸರ್ಟಿಫಿಕೇಟ್ ಶಿಕ್ಷಣ ನೀಡುವ ಕ್ರಮವನ್ನು ಕೈಗೊಳ್ಳಲಾಗುವುದು.

5.27 ಕೆಲವು ವಿಶೇಷ ಬಗೆಯ ವಿಷಯಗಳನ್ನು ಬೋಧಿಸಲು ಅಂತಾರಾಷ್ಟ್ರೀಯ ಮಟ್ಟದಲ್ಲಿ ಹಲವಾರು ಬಗೆಯ ಬೋಧನಕ್ರಮಗಳು ಇವೆ ಎಂಬ ಸಂಗತಿಯನ್ನು ಕಂಡುಕೊಳ್ಳಲಾಗಿದೆ. ಎನ್.ಸಿ.ಇ.ಆರ್.ಟಿ. ಈ ಬಗೆಗೆ ಅಧ್ಯಯನ, ಸಂಶೋಧನೆ, ದಾಖಲಾತಿಕರಣ, ಸಂಯೋಜನೆ ಮುಂತಾದುವುಗಳನ್ನು ಕೈಗೊಂಡು ಬೇರೆಬೇರೆ ವಿಷಯಗಳ ಬೋಧನಕ್ರಮಗಳಲ್ಲಿ ಅಂತಾರಾಷ್ಟ್ರೀಯ ನೆಲೆಗಳಲ್ಲಿ ಕಂಡುಬರುವ ವೈಶಿಷ್ಟ್ಯಗಳನ್ನು ಕುರಿತಂತೆ ಅಧ್ಯಯನ ನಡೆಸಿ ಇಂಥ ಅಂಶಗಳಿಂದ ಭಾರತದಲ್ಲಿ ಜಾರಿಯಲ್ಲಿರುವ ಬೋಧನಕ್ರಮಗಳಿಗೆ ಯಾವ ರೀತಿಯಲ್ಲಿ ಪ್ರಯೋಜನವಾಗುತ್ತದೆ, ಅವುಗಳನ್ನು ಹೇಗೆ ಮೈಗೂಡಿಸಿಕೊಳ್ಳಬಹುದು ಎಂಬ ಬಗ್ಗೆ ಪರಿಶೀಲಿಸಿ ಸೂಕ್ತವಾದ ಶಿಫಾರಸುಗಳನ್ನು ಮಾಡುವುದು.

5.28 ಎನ್.ಸಿ.ಇ.ಆರ್.ಟಿ. ಜೊತೆಯಲ್ಲಿ ಸಮಾಲೋಚನೆ ನಡೆಸಿ ಎನ್.ಸಿ.ಟಿ.ಇ. 2021ರ ವೇಳೆಗೆ ಒಂದು ಹೊಸದಾದ ಮತ್ತು ಸಮಗ್ರವಾದ ರಾಷ್ಟ್ರೀಯ ಅಧ್ಯಾಪಕ ಶಿಕ್ಷಣ ಪಠ್ಯಕ್ರಮ ರೂಪುರೇಷೆಗಳು, ಎನ್.ಸಿ.ಎಫ್. ಟಿ.ಇ., 2021 ಎಂಬುದನ್ನು ರೂಪಿಸಲಿದೆ. ಈ ರೂಪುರೇಷೆಗಳನ್ನು ರಾಷ್ಟ್ರೀಯ ಶಿಕ್ಷಣ ನೀತಿ 2020ರ ತತ್ವಗಳ ಆಧಾರದ ಮೇಲೆ ಸಿದ್ಧಪಡಿಸಲಾಗುವುದು. ರಾಜ್ಯ ಸರ್ಕಾರಗಳು, ಕೇಂದ್ರ ಸರ್ಕಾರದ ಸಂಬಂಧಪಟ್ಟ ಸಚಿವಾಲಯಗಳು ಮತ್ತು ಇಲಾಖೆಗಳು ಹಾಗೂ ವಿವಿಧ ಪರಿಣತ ಸಂಘಸಂಸ್ಥೆಗಳು ಇವುಗಳೊಡನೆ ಸಮಾಲೋಚಿಸಿ ಈ ರೂಪುರೇಷೆಗಳನ್ನು ಸಿದ್ಧಪಡಿಸಲಾಗುವುದು ಹಾಗೂ ಇವು ಎಲ್ಲ ಪ್ರಾದೇಶಿಕ ಭಾಷೆಗಳಲ್ಲಿ ಲಭ್ಯವಾಗುವಂತೆ ಮಾಡಲಾಗುವುದು. ಈ ಎನ್.ಸಿ.ಎಫ್.ಟಿ.ಇ. 2021 ವೃತ್ತಿಪರ ಶಿಕ್ಷಣ ಕುರಿತ ಅಧ್ಯಾಪಕ ಶಿಕ್ಷಣ ಪಠ್ಯಕ್ರಮದಲ್ಲಿ ಮಹತ್ತರವಾದ ಪಾತ್ರವನ್ನು ನಿರ್ವಹಿಸುವುದು. ತದನಂತರ ಪ್ರತಿ 5-10 ವರ್ಷಗಳಿಗೆ ಒಂದು ಬಾರಿ ಮರು ಪರಿಶೀಲನೆಗೆ ಒಳಪಡುವ ಈ ಎನ್.ಸಿ.ಎಫ್.ಟಿ.ಇ. ಯಲ್ಲಿ ಪುನರ್ ಪರಿಶೀಲನೆಗೆ ಒಳಗಾದ ಎನ್.ಎಸ್.ಸಿ.ಎಫ್.ಗಳಲ್ಲಿ ಕಂಡುಬರುವ ಬದಲಾವಣೆಗಳು ಹಾಗೂ ಅಧ್ಯಾಪಕ ಶಿಕ್ಷಣದ ಹಾದಿಯಲ್ಲಿ ಎದುರಾಗುವ ತುರ್ತು ಅಗತ್ಯಗಳು ಇವುಗಳನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತದೆ.

5.29 ಅಂತಿಮವಾಗಿ, ಅಧ್ಯಾಪಕ ಶಿಕ್ಷಣ ವ್ಯವಸ್ಥೆಯ ಸಮಗ್ರತೆಯನ್ನು ಸಂಪೂರ್ಣವಾಗಿ, ಸುರಕ್ಷಿತವಾಗಿ ಕಾಪಾಡುವ ದೃಷ್ಟಿಯಿಂದ ದೇಶದಲ್ಲಿರುವ ಕೀಳುಗುಣಮಟ್ಟದ ಸ್ವತಂತ್ರ ಸ್ವರೂಪದ ಅಧ್ಯಾಪಕ ಶಿಕ್ಷಣ ಸಂಸ್ಥೆಗಳನ್ನು (ಟಿ.ಇ.ಐ.ಗಳು) ಗಂಭೀರವಾಗಿ ಪರಿಗಣಿಸಿ, ಅವುಗಳ ವಿರುದ್ಧ ಕ್ರಮ ಅಗತ್ಯವಾದಲ್ಲಿ ಅವುಗಳನ್ನು ಮುಚ್ಚುವುದೂ ಸೇರಿದಂತೆ, ಕಠಿಣವಾದ ಕ್ರಮ ಕೈಗೊಳ್ಳಲಾಗುವುದು.

6. ಸಮಾನತೆ ಆಧಾರಿತ ಮತ್ತು ಸಮಾವರ್ತನೆಯಿಂದ ಕೂಡಿದ ಶಿಕ್ಷಣ: ಎಲ್ಲರಿಗಾಗಿ ಕಲಿಕೆ

6.1 ನ್ಯಾಯ ಮತ್ತು ಸಮಾನತೆಗಳನ್ನು ಪಡೆದುಕೊಳ್ಳಲು ಲಭ್ಯವಾಗುವ ಏಕೈಕ ಮಹಾನ್ ಉಪಕರಣವೆಂದರೆ ಶಿಕ್ಷಣವೇ ಆಗಿದೆ. ಸಮಾವರ್ತವಾದ ಮತ್ತು ಸಮಾನತೆಯಿಂದ ಕೂಡಿದ ಸಮಾಜವೊಂದನ್ನು ಪಡೆದುಕೊಂಡು ಅದರಲ್ಲಿ ಪ್ರತಿಯೊಬ್ಬ ಪ್ರಜೆಯೂ ಕನಸು ಕಾಣುವ, ಬೆಳೆವಣಿಗೆ ಹೊಂದುವ ಮತ್ತು ದೇಶಕ್ಕಾಗಿ ಕೊಡುಗೆ ನೀಡುವ ಸದವಕಾಶಗಳನ್ನು ಒದಗಿಸುವ ಸಮಾವರ್ತವಾದ ಮತ್ತು ಸಮಾನವಾದ ಶಿಕ್ಷಣ ಪದ್ಧತಿ ತನ್ನದೇ ಆದ ರೀತಿಯಲ್ಲಿ ಮಹತ್ವದ ಪಾತ್ರ ನಿರ್ವಹಿಸಿ ಗುರಿ ಸಾಧಿಸುತ್ತದೆ. ಯಾವುದೇ ಮಗು ತನ್ನ ಹುಟ್ಟು ಅಥವಾ ಹಿನ್ನೆಲೆಯ ಕಾರಣದಿಂದಾಗಿ ಕಲಿಯಲು, ಕಲಿತು ಮುಂದೆ ಬರಲು ಅವಕಾಶಗಳನ್ನು ಕಳೆದುಕೊಳ್ಳದಂತೆ ಭಾರತದ ಮಕ್ಕಳಿಗೆ ಅನುಕೂಲ ಒದಗಿಸಿಕೊಡುವ ಗುರಿಯನ್ನು ನಮ್ಮ ಶಿಕ್ಷಣ ವ್ಯವಸ್ಥೆ ಇಟ್ಟುಕೊಂಡು ಸಾಧಿಸಬೇಕು. ಅವಕಾಶಗಳನ್ನು ಪಡೆದುಕೊಳ್ಳುವುದು, ಭಾಗವಹಿಸುವುದು ಹಾಗೂ ಕಲಿಕೆಯ ಪ್ರಯೋಜನ ಗಳನ್ನು ಶಾಲಾಶಿಕ್ಷಣಾದ್ಯಂತ ಗಳಿಸಿಕೊಳ್ಳುವುದು ಇವು ಎಲ್ಲ ಶಿಕ್ಷಣ ಕ್ಷೇತ್ರಗಳಿಗೆ ಸಂಬಂಧಪಟ್ಟ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಮುಖವಾದ ಗುರಿಗಳಲ್ಲಿ ಒಂದಾಗಿದ್ದು ಈ ನಿಟ್ಟಿನಲ್ಲಿ ಸಾಮಾಜಿಕ ವರ್ಗಗಳ ನಡುವೆ ಇರುವ ವ್ಯತ್ಯಯಗಳನ್ನು ತೊಡೆದುಹಾಕಲು ಈ ಶಿಕ್ಷಣನೀತಿ ಕಟಿಬದ್ಧವಾಗಿದೆ ಎಂದು ಮತ್ತೊಮ್ಮೆ ಹೇಳಬೇಕಾಗಿದೆ. ಉನ್ನತ ಶಿಕ್ಷಣದಲ್ಲಿ ಕಂಡುಬರುವ ಸಮಾನತೆ ಮತ್ತು ಸಮಾವರ್ತನೆ ಕುರಿತು ಚರ್ಚಿಸುವ ಅಧ್ಯಾಯ 14ರ ಜೊತೆಯಲ್ಲಿ ಸಂವಾದಿಯಾಗಿ ಈ ಅಧ್ಯಾಯವನ್ನು ಓದಬಹುದಾಗಿದೆ.

6.2 ಭಾರತೀಯ ಶಿಕ್ಷಣ ವ್ಯವಸ್ಥೆ ಹಾಗೂ ಕಾಲಕಾಲಕ್ಕೆ ಜಾರಿಯಾಗುತ್ತಾ ಬಂದ ಸರ್ಕಾರಿ ನೀತಿಗಳು ಹಾಗೂ ಶಾಲಾ ಶಿಕ್ಷಣದ ಎಲ್ಲ ಹಂತಗಳಲ್ಲಿ ಲಿಂಗ ಮತ್ತು ಸಾಮಾಜಿಕವರ್ಗಗಳು ಇವುಗಳ ಕಾರಣದಿಂದ ಉಂಟಾಗುತ್ತಿದ್ದ ಕಂದರಗಳನ್ನು ತೊಡೆದುಹಾಕುವ ನಿರಂತರ ಪ್ರಯತ್ನಗಳನ್ನು ಮಾಡುತ್ತಿದ್ದರೂ, ವಿಶೇಷವಾಗಿ, ಸೆಕಂಡರಿ ಹಂತದ ಶಿಕ್ಷಣದಲ್ಲಿ, ಅದರಲ್ಲೂ ವಿಶೇಷವಾಗಿ ಐತಿಹಾಸಿಕವಾಗಿ ಶಿಕ್ಷಣ ವಿಷಯದಲ್ಲಿ ಕಡಿಮೆ ಪ್ರಾತಿನಿಧ್ಯವನ್ನು ಹೊಂದಿರುವ ಹಾಗೂ ಅನನುಕೂಲಗಳಿಂದ ಕೂಡಿರುವ ವರ್ಗಗಳ ವಿಚಾರದಲ್ಲಿ ಆ ವ್ಯತ್ಯಾಸಗಳು ಇಂದಿಗೂ ಅಗಾಧವಾಗಿ ಕಂಡುಬರುತ್ತಿವೆ. ಸಾಮಾಜಿಕವಾಗಿ-ಆರ್ಥಿಕವಾಗಿ ಅನನುಕೂಲಗಳಿಂದ ಕೂಡಿರುವ ವರ್ಗಗಳನ್ನು (ಎಸ್.ಇ.ಡಿ.ಜಿ.ಗಳು) ವ್ಯಾಪಕವಾಗಿ ಈ ಕೆಳಕಂಡಂತೆ ಗುರುತಿಸಿ ವರ್ಗೀಕರಣ ಮಾಡಬಹುದು: ಲಿಂಗ ಪ್ರತ್ಯೇಕತೆ (ವಿಶೇಷವಾಗಿ ಸ್ತ್ರೀ ಮತ್ತು ಉಭಯಲಿಂಗಿ ವ್ಯಕ್ತಿಗಳು), ಸಾಮಾಜಿಕ-ಸಾಂಸ್ಕೃತಿಕ ಹಿನ್ನೆಲೆ (ಉದಾಹರಣೆಗೆ ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಪಂಗಡಗಳು, ಇತರ ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರು), ಭೌಗೋಳಿಕ ಹಿನ್ನೆಲೆ (ಉದಾಹರಣೆಗೆ ಗ್ರಾಮಾಂತರ ಪ್ರದೇಶಗಳಿಂದ, ಸಣ್ಣ ಪಟ್ಟಣಗಳಿಂದ ಮತ್ತು ಮುನ್ನಡೆಯಬೇಕಾದ ಜಿಲ್ಲೆಗಳಿಂದ ಬರುವ ವಿದ್ಯಾರ್ಥಿಗಳು), ಸಾಮಾಜಿಕ-ಆರ್ಥಿಕ ಸ್ಥಿತಿಗತಿಗಳು (ಉದಾಹರಣೆಗೆ ಅಲೆಮಾರಿ ಸಮುದಾಯಗಳು, ಕಡಿಮೆ ಆದಾಯ ವರ್ಗದ ಕುಟುಂಬಗಳು, ಅಸಹಾಯಕ ಸ್ಥಿತಿಯಲ್ಲಿರುವ ಮಕ್ಕಳು, ಕಳ್ಳತನಕ್ಕೆ ಅಂಟಿಕೊಂಡ ಮಕ್ಕಳು, ಅನೈತಿಕ ಚಟುವಟಿಕೆಗಳಲ್ಲಿ ನಿರತರಾದವರ ಮಕ್ಕಳು, ನಗರಪ್ರದೇಶಗಳಲ್ಲಿ ಭಿಕ್ಷೆ ಬೇಡುವ ಮಕ್ಕಳೂ ಸೇರಿದಂತೆ ಅನಾಥ ಮಕ್ಕಳು, ನಗರ ಪ್ರದೇಶಗಳಲ್ಲಿರುವ ಬಡಜನರು), ಅಸಮರ್ಥತೆಯುಳ್ಳವರು (ಕಲಿಯುವ ಅಸಮರ್ಥತೆ ಸಹ ಸೇರಿದಂತೆ). ಗ್ರೇಡ್ 1 ರಿಂದ ಗ್ರೇಡ್ 12 ರವರೆಗೆ ಪರಿಗಣಿಸಿದಾಗ ಒಟ್ಟಾರೆಯಾಗಿ ಶಾಲೆಗೆ ಸೇರುವ ಮಕ್ಕಳ ಸಂಖ್ಯೆಯಲ್ಲಿ ನಿರಂತರವಾಗಿ ಇಳಿಮುಖ ಕಂಡುಬರುತ್ತಿದ್ದು, ಇದು ಈ ಮೇಲೆ ಪ್ರಸ್ತಾಪಿಸಿದ ಎಸ್.ಇ.ಡಿ.ಜಿ.ಗಳಿಗೆ ಸಂಬಂಧಿಸಿದಂತೆ ಇನ್ನೂ ಹೆಚ್ಚಾಗಿ ಕಂಡುಬರುತ್ತಿದೆ. ಹಾಗೆಯೆ ಈ ಪ್ರತಿಯೊಂದು ಎಸ್.ಇ.ಡಿ.ಜಿ.ಗಳಲ್ಲಿಯೂ ಹೆಣ್ಣುಮಕ್ಕಳನ್ನು ಕುರಿತಂತೆ ಹೆಚ್ಚು ಇಳಿಕೆ, ಅದರಲ್ಲೂ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ, ಇನ್ನೂ ಹೆಚ್ಚು ಇಳಿಕೆ ಕಂಡುಬರುತ್ತದೆ. ಈ ಪೈಕಿ ಸಾಮಾಜಿಕ-ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಕಂಡುಬರುವ ಎಸ್.ಇ.ಡಿ.ಜಿ. ಸಂಬಂಧಿತ ವಿವರಗಳನ್ನು ಈ ಮುಂದಿನ ಉಪವಿಭಾಗದಲ್ಲಿ ನೀಡಲಾಗಿದೆ:

6.2.1 ಯು-ಡಿ.ಐ.ಎಸ್.ಇ.(U- DISE) 2016-17ರ ದತ್ತಾಂಶಗಳ ಪ್ರಕಾರ ಪ್ರಾಥಮಿಕ ಹಂತದಲ್ಲಿ ಪರಿಶಿಷ್ಟ ಜಾತಿಗಳಿಗೆ ಸೇರಿರುವ ಸುಮಾರು ಶೇಕಡ 19.6 ಮಂದಿ ವಿದ್ಯಾರ್ಥಿಗಳಲ್ಲಿ ಈ ವಿದ್ಯಮಾನ ಕಂಡುಬರುತ್ತಿದ್ದು ಇದು ಉನ್ನತ ಸೆಕಂಡರಿ ಹಂತದಲ್ಲಿ ಶೇಕಡ 17.3 ಇರುವುದಾಗಿ ತಿಳಿದುಬರುತ್ತದೆ. ಶಾಲೆಗೆ ಸೇರುವ ವಿದ್ಯಾರ್ಥಿಗಳ ಪೈಕಿ ಕಂಡುಬರುವ ಈ ಇಳಿತ ಹೆಚ್ಚು ತೀವ್ರವಾಗಿ (10.6% ರಿಂದ 6.8%) ಪರಿಶಿಷ್ಟ ಪಂಗಡಗಳಲ್ಲಿ, ಭಿನ್ನ ರೀತಿಯ ಸಾಮರ್ಥ್ಯ ಹೊಂದಿರುವ ಮಕ್ಕಳಲ್ಲಿ (1.1% ರಿಂದ 0.25%) ಕಂಡುಬರುತ್ತಿದ್ದು ಈ ಪ್ರತಿಯೊಂದು ವಿಭಾಜನೆಯಲ್ಲಿ ಕಂಡುಬರುವ ಹೆಣ್ಣುಮಕ್ಕಳಲ್ಲಂತೂ ಇನ್ನೂ ಹೆಚ್ಚು ಇಳಿತ ಗೋಚರವಾಗುತ್ತದೆ. ಉನ್ನತ ಶಿಕ್ಷಣದಲ್ಲಿ ಈ ಇಳಿತದ ಮಟ್ಟ ಇನ್ನೂ ಹೆಚ್ಚಾಗಿರುವುದು ಗಮನಹರಿಸಬೇಕಾದ ವಿಚಾರವಾಗಿದೆ.

6.2.2 ಉತ್ತಮ ಗುಣಮಟ್ಟದ ಶಾಲೆಗಳಿಗೆ ಸೇರಲು ಸಾಧ್ಯವಾಗದಿರುವುದು, ಬಡತನ, ಸಾಮಾಜಿಕ ರೂಢಿಗಳು ಮತ್ತು ನಂಬಿಕೆಗಳು,

ಭಾಷೆ ಇಂತಹ ಅಂಶಗಳು ಪರಿಶಿಷ್ಟ ಜಾತಿಗಳಿಗೆ ಸೇರಿದ ಮಕ್ಕಳು ಶಾಲೆಗೆ ಸೇರಬೇಕಾದರೆ ಹಾಗೂ ಶಾಲೆಯಲ್ಲಿ ಉಳಿದುಕೊಂಡು ಓದನ್ನು ಮುಂದುವರಿಸಬೇಕಾದರೆ ಎದುರಾಗುವ ನಿರ್ಣಾಯಕ ಸಮಸ್ಯೆಗಳಾಗಿವೆ. ಈ ರೀತಿಯಾಗಿ ಶಾಲೆಗಳು ಸುಲಭ ಲಭ್ಯವಾಗುವಂತೆ ಮಾಡುವುದು, ಶಾಲೆಗೆ ಸೇರಿ ಉತ್ತಮವಾಗಿ ಕಲಿಯುವುದು, ಈ ಸೌಲಭ್ಯಗಳು ಪರಿಶಿಷ್ಟ ಜಾತಿಗಳ ಮಕ್ಕಳಿಗೆ ದೊರಕುವಂತೆ ಮಾಡುವುದು ಪ್ರಸಕ್ತ ನೀತಿಯ ಪ್ರಮುಖ ಉದ್ದೇಶಗಳಲ್ಲಿ ಒಂದಾಗಿ ಮುಂದುವರಿಯುತ್ತದೆ. ಇದೇ ರೀತಿಯಲ್ಲಿ ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಬಹುಕಾಲದಿಂದ ಹಿಂದುಳಿದು ಬರುತ್ತಿವೆಯೆಂದು ಕಂಡುಬಂದಿರುವ ಇತರ ಹಿಂದುಳಿದ ಸಮುದಾಯಗಳ (ಓ.ಬಿ.ಸಿ.) ಕಡೆಗೆ ಕೂಡ ವಿಶೇಷವಾದ ಗಮನವನ್ನು ಹರಿಸುವ ಅಗತ್ಯವಿದೆ.

6.2.3 ಹಲವಾರು ಬಗೆಯ ಐತಿಹಾಸಿಕ ಮತ್ತು ಭೌಗೋಳಿಕ ಕಾರಣಗಳಿಂದಾಗಿ ಪರಿಶಿಷ್ಟ ಪಂಗಡಗಳಿಗೆ ಸೇರಿರುವ ಬುಡಕಟ್ಟು ಸಮುದಾಯಗಳ ಮಕ್ಕಳು ವಿವಿಧ ಹಂತಗಳಲ್ಲಿ ಹಲವಾರು ಬಗೆಯ ಅನನುಕೂಲಗಳಿಗೆ ಒಳಗಾಗಿದ್ದಾರೆ. ಸಾಂಸ್ಕೃತಿಕವಾಗಿ ಮತ್ತು ಶೈಕ್ಷಣಿಕವಾಗಿ, ತಾವು ಶಾಲೆಗೆ ಹೋಗಿ ಕಲಿಯುವ ವಿದ್ಯೆ ಬಹಳಷ್ಟು ವೇಳೆ ತಮ್ಮ ಬದುಕಿಗೆ ಅಸಂಗತವಾಗಿ, ಹೊರಗಿನಿಂದ ಹೇರುತ್ತಿರುವ ಶಿಕ್ಷಣ ಎಂಬುದಾಗಿ ಈ ಸಮುದಾಯಗಳ ಮಕ್ಕಳಿಗೆ ಕಂಡುಬರುತ್ತಿದೆ. ಬುಡಕಟ್ಟು ಸಮುದಾಯಗಳಿಗೆ ಸೇರಿದ ಮಕ್ಕಳನ್ನು ಮೇಲೆತ್ತುವ ಸಲುವಾಗಿ ಹಲವಾರು ಬಗೆಯ ಕಾರ್ಯಕ್ರಮಗಳು ಈಗಾಗಲೆ ಅಸ್ತಿತ್ವದಲ್ಲಿದ್ದು, ಅವುಗಳನ್ನು ಹಾಗೆಯೆ ಮುಂದುವರಿಸುವ ಉದ್ದೇಶವಿದ್ದರೂ ಇಂತಹ ಕಾರ್ಯಕ್ರಮಗಳ ಪ್ರಯೋಜನವನ್ನು ಬುಡಕಟ್ಟು ಸಮುದಾಯಗಳ ಮಕ್ಕಳು ಇನ್ನೂ ಚೆನ್ನಾಗಿ ಪಡೆದುಕೊಳ್ಳಲು ಸಾಧ್ಯವಾಗುವಂತೆ ವಿಶೇಷ ತಂತ್ರ ವಿಧಾನಗಳನ್ನು ರೂಪಿಸುವುದು ಅಗತ್ಯವಾಗಿದೆ.

6.2.4 ಹಾಗೆಯೇ ಶಾಲೆಗಳಲ್ಲಿ ಮತ್ತು ಉನ್ನತ ಶಿಕ್ಷಣದಲ್ಲಿ ಅಲ್ಪಸಂಖ್ಯಾತ ವರ್ಗಗಳು ಸಾಪೇಕ್ಷವಾಗಿ ಕಡಿಮೆ ಮಟ್ಟದಲ್ಲಿ ಭಾಗವಹಿಸುತ್ತಿರುವ ವಿದ್ಯಮಾನ ಕೂಡ ಕಂಡುಬರುತ್ತಿದೆ. ಹಾಗಾಗಿ ಈ ಶಿಕ್ಷಣನೀತಿ ಎಲ್ಲ ಅಲ್ಪಸಂಖ್ಯಾತ ವರ್ಗಗಳಿಗೆ ಸೇರಿದ ಮಕ್ಕಳು, ಅದರಲ್ಲೂ ವಿಶೇಷವಾಗಿ ಶೈಕ್ಷಣಿಕವಾಗಿ ಕಡಿಮೆ ಪ್ರಾತಿನಿಧ್ಯ ಹೊಂದಿರುವ ಅಲ್ಪಸಂಖ್ಯಾತ ಸಮುದಾಯಗಳ ಮಕ್ಕಳು ಉತ್ತಮ ಮಟ್ಟದ ಶಿಕ್ಷಣ ಪಡೆಯಲು ಸಾಧ್ಯವಾಗುವಂತೆ ಮಾಡಲು ಬದ್ಧವಾಗಿದೆ.

6.2.5 ಅಂತೆಯೆ, ವಿಶೇಷ ಅಗತ್ಯಗಳನ್ನು ಬಯಸುವ ಮಕ್ಕಳಿಗೆ (Children with Special Needs -CWSN) ಅಥವಾ ದಿವ್ಯಾಂಗ ಮಕ್ಕಳಿಗೆ ಉಪಯುಕ್ತವಾಗುವಂತಹ ತಂತ್ರವಿಧಾನಗಳನ್ನು ರೂಪಿಸಿ, ಅವರು ಸಹ ಉಳಿದ ಯಾವುದೇ ಸಾಧಾರಣ ಮಕ್ಕಳಂತೆ, ವಿದ್ಯೆ ಕಲಿಯುವ ಅವಕಾಶಗಳನ್ನು ಒದಗಿಸಿಕೊಡುವ ಅಗತ್ಯವಿದೆ ಎಂಬುದನ್ನು ಸಹ ಈ ಶಿಕ್ಷಣನೀತಿ ಮನಗಂಡಿದೆ.

6.2.6 ಕೆಳಕಂಡ ಉಪವಿಭಜನೆಗಳಲ್ಲಿ ತೋರಿಸಿರುವಂತೆ ಶಾಲಾ ಶಿಕ್ಷಣದಲ್ಲಿ ಸಾಮಾಜಿಕ ವರ್ಗಗಳ ನಡುವೆ ಕಂಡುಬರುವ ಭೇದಗಳನ್ನು ಕಡಿಮೆ ಮಾಡುವತ್ತ ಗಮನ ಹರಿಸಲು ಅಗತ್ಯವಾದ ಬೇರೆ ಬೇರೆ ಬಗೆಯ ಮಾರ್ಗೋಪಾಯಗಳನ್ನು ಕಂಡುಕೊಳ್ಳಲಾಗುವುದು.

6.3 ಇ.ಸಿ.ಸಿ.ಇ., ತಳಹದಿ ಸಾಕ್ಷರತೆ ಮತ್ತು ಅಂಕಪರಿಜ್ಞಾನ, ಶಿಕ್ಷಣ ಪಡೆದುಕೊಳ್ಳುವ ಅವಕಾಶ, ಶಾಲೆಗೆ ಸೇರುವುದು ಮತ್ತು ಹಾಜರಾತಿ ಈ ರೀತಿಯಾಗಿ 1 ರಿಂದ 3ರ ವರೆಗಿನ ಅಧ್ಯಾಯಗಳಲ್ಲಿ ಚರ್ಚಿಸಲಾಗಿರುವ ಸಂಗತಿಗಳನ್ನು ಕುರಿತಂತೆ ಪ್ರಸ್ತಾಪಿಸಲಾಗಿರುವ ಗಂಭೀರವಾದ ಸಮಸ್ಯೆಗಳು ಹಾಗೂ ಆ ಸಂಬಂಧವಾದ ಶಿಫಾರಸುಗಳು ಹೆಚ್ಚು ನಿರ್ದಿಷ್ಟವಾಗಿ ಕಡಿಮೆ ಪ್ರಾತಿನಿಧ್ಯ ಹೊಂದಿರುವ ಮತ್ತು ಅನನುಕೂಲಗಳಿಂದ ಕೂಡಿರುವ ವರ್ಗಗಳಿಗೆ ಹೆಚ್ಚು ಸಂಗತವಾಗಿ ಅನ್ವಯಿಸುತ್ತವೆ. ಹಾಗಾಗಿ 1 ರಿಂದ 3ರ ವರೆಗಿನ ಅಧ್ಯಾಯಗಳಲ್ಲಿ ನಮೂದಿಸಲಾಗಿರುವಂತಹ ಕ್ರಮಗಳನ್ನು ಎಸ್.ಇ.ಡಿ.ಜಿ.ಗಳಿಗೆ ಕ್ರಮಕ್ರಮವಾಗಿ ಅನ್ವಯಿಸುತ್ತಾ ಹೋಗಲಾಗುತ್ತದೆ.

6.4 ಇವೇ ಅಲ್ಲದೆ ಕೆಲವು ನಿರ್ದಿಷ್ಟ ಬಗೆಯ ವಿದ್ಯಾರ್ಥಿಗಳಿಗಾಗಿ ನೀಡಲಾಗುವ ವಿದ್ಯಾರ್ಥಿ ವೇತನಗಳು, ಮಕ್ಕಳನ್ನು ಶಾಲೆಗೆ ಸೇರಿಸಲು ತಂದೆತಾಯಿಗಳಿಗೆ ಪ್ರೋತ್ಸಾಹ ನೀಡುವ ನಿಬಂಧಿತ ನಗದು ವರ್ಗಾವಣೆಗಳು, ಶಾಲೆಗೆ ಹೋಗಿಬರುವ ಸಲುವಾಗಿ ಬೈಸಿಕಲ್ಲುಗಳನ್ನು ಒದಗಿಸುವುದು ಇಂತಹ ಹಲವಾರು ಯಶಸ್ವಿ ನೀತಿಗಳು ಮತ್ತು ಕಾರ್ಯಯೋಜನೆಗಳು ಕೆಲವು ಪ್ರದೇಶಗಳಲ್ಲಿ ಶಾಲಾವ್ಯವಸ್ಥೆಯಲ್ಲಿ ಎಸ್.ಇ.ಡಿ.ಜಿ. ಗಳಿಗೆ ಸೇರಿದ ಮಕ್ಕಳ ಪಾಲುಗೊಳ್ಳುವಿಕೆಯನ್ನು ಗಮನಾರ್ಹವಾಗಿ ಹೆಚ್ಚಿಸಿದೆ. ಈ ಯಶಸ್ವಿ ನೀತಿಗಳನ್ನು ಮತ್ತು ಕಾರ್ಯಯೋಜನೆಗಳನ್ನು ದೇಶಾದ್ಯಂತ ಗಮನಾರ್ಹವಾಗಿ ವಿಸ್ತರಿಸಿ ಸಶಕ್ತಗೊಳಿಸಬೇಕಾಗಿದೆ.

6.5 ಕೆಲವು ಬಗೆಯ ಎಸ್.ಇ.ಡಿ.ಜಿ.ಗಳನ್ನು ಕುರಿತಂತೆ ಯಾವ ಬಗೆಯ ನಿರ್ದಿಷ್ಟವಾದ ಕ್ರಮಗಳು ಹೆಚ್ಚು ಪರಿಣಾಮಕಾರಿಯಾಗಿರುತ್ತವೆ ಎಂಬುದನ್ನು ನಿರೂಪಿಸುವ ಸಂಶೋಧನ ಕಾರ್ಯಗಳನ್ನು ಗಣನೆಗೆ ತೆಗೆದುಕೊಳ್ಳುವುದು ಕೂಡ ತುಂಬಾ ಆವಶ್ಯಕವಾಗಿದೆ. ಉದಾಹರಣೆಗೆ, ಮಕ್ಕಳಿಗೆ ಬೈಸಿಕಲ್ಲುಗಳನ್ನು ಒದಗಿಸಿ ಶಾಲೆಗೆ ಹೋಗಿ ಬರಲು, ಅವರು ಗುಂಪಾಗಿ ನಡೆದುಕೊಂಡು ಹೋಗುವುದು ಅಥವಾ ಒಟ್ಟಾರೆಯಾಗಿ ಸೈಕಲ್ಲುಗಳ ಮೇಲೆ ಹೋಗುವುದು - ಇಂಥ ವಿಧಾನಗಳು ಪರಿಣಾಮಕಾರಿಯಾಗಿ ಕಂಡುಬರುತ್ತವೆ. ಕಡಿಮೆ ದೂರವಾದರೂ ಇಂತಹ ಕ್ರಮಗಳಿಗೆ ಅವಕಾಶ ಮಾಡಿಕೊಡುವುದರಿಂದ ಮಕ್ಕಳಿಗೆ - ಅದರಲ್ಲೂ ಹೆಣ್ಣು ಮಕ್ಕಳಿಗೆ ವಿಶೇಷವಾಗಿ ಪ್ರಯೋಜನವಾಗಿದೆ. ಈ ವಿಧಾನಗಳಿಂದ ಮಕ್ಕಳ ವಿಚಾರದಲ್ಲಿ ತಂದೆತಾಯಿಗಳಲ್ಲಿ ಉಂಟಾಗುವ ಸುರಕ್ಷತಾ ಭಾವನೆ ಮತ್ತು ನೆಮ್ಮದಿ ಗಮನಾರ್ಹವಾಗಿದೆ. ಒಂದೊಂದು ಮಗುವಿಗೆ ಒಬ್ಬ ಅಧ್ಯಾಪಕರು ಮತ್ತು ಶಿಕ್ಷಕರು, ಸಹಪಾಠಿಗಳೊಡನೆ ಕಲಿಯುವುದು, ಮುಕ್ತ

ಶಾಲೆಗಳು, ಸೂಕ್ತವಾದ ಮೂಲಸೌಕರ್ಯಗಳು, ಅಗತ್ಯವಾದ ಮತ್ತು ಸೂಕ್ತವಾದ ತಂತ್ರಜ್ಞಾನಾಧಾರಿತವಾದ ಉಪಕರಣಗಳು ಇಂಥವು ಕೆಲವು ಬಗೆಯ ಮಕ್ಕಳಿಗೆ ಅದರಲ್ಲೂ ಶಾರೀರಿಕವಾಗಿ ಅಸಾಮರ್ಥ್ಯ ಹೊಂದಿರುವ ಮಕ್ಕಳಿಗೆ ವಿಶೇಷವಾಗಿ ಪರಿಣಾಮಕಾರಿಯಾಗಿದೆ. ಆರ್ಥಿಕವಾಗಿ ಅನನುಕೂಲಗಳಿಂದ ಕೂಡಿರುವ ಕುಟುಂಬಗಳಿಂದ ಬರುವ ಮಕ್ಕಳಿಗೆ ಉತ್ತಮ ಗುಣಮಟ್ಟದ ಇ.ಸಿ.ಸಿ.ಇ. ಒದಗಿಸುವ ಶಾಲೆಗಳು ಅತ್ಯಂತ ಒಳ್ಳೆಯ ಫಲಿತಾಂಶಗಳನ್ನು ಮತ್ತು ಲಾಭಗಳನ್ನು ಗಳಿಸುತ್ತಿವೆ. ಇದೇ ಸಂದರ್ಭದಲ್ಲಿ, ವಿದ್ಯಾರ್ಥಿಗಳ, ತಂದೆತಾಯಿಗಳ, ಶಾಲೆಗಳ ಹಾಗೂ ಅಧ್ಯಾಪಕರ ಜೊತೆಯಲ್ಲಿ ಸಂಪರ್ಕ ಇಟ್ಟುಕೊಂಡು ಕೆಲಸ ಮಾಡುವ ಸಲಹೆಗಾರರು ಮತ್ತು/ಅಥವಾ ಒಳ್ಳೆಯ ತರಬೇತಿ ಪಡೆದ ಸಾಮಾಜಿಕ ಕಾರ್ಯಕರ್ತರು ಹಾಜರಾತಿಯನ್ನು ಹೆಚ್ಚುಮಾಡುವ ಹಾಗೂ ಕಲಿಕೆಯ ಮಟ್ಟವನ್ನು ಅಧಿಕಗೊಳಿಸುವ ನಿಟ್ಟಿನಲ್ಲಿ ತುಂಬ ಉಪಯುಕ್ತರಾಗಿ ಕಂಡುಬರುತ್ತಿದ್ದಾರೆ. ಪಟ್ಟಣಗಳಲ್ಲಿ ಬಡಜನರು ವಾಸಿಸುವ ಪ್ರದೇಶಗಳಿಂದ ಬರುವ ಮಕ್ಕಳ ವಿಚಾರದಲ್ಲಿ ಈ ವಿದ್ಯಮಾನ ಹೆಚ್ಚು ಸಂಗತವಾಗಿ ಕಂಡುಬರುತ್ತಿದೆ.

6.6 ಎಸ್.ಇ.ಡಿ.ಜಿ.ಗಳ ಕುರಿತಂತೆ ಗಮನಾರ್ಹವಾಗಿ ಹೆಚ್ಚು ಪ್ರಮಾಣ ಕೆಲವು ಬಗೆಯ ಭೌಗೋಳಿಕ ಪ್ರದೇಶಗಳಲ್ಲಿ ಕಂಡುಬರುತ್ತದೆ ಎಂಬ ಸಂಗತಿ ದತ್ತಾಂಶಗಳಿಂದ ತಿಳಿದುಬರುತ್ತದೆ. ಹಾಗೆಯೆ, 'ಆಶೋತ್ತರಗಳ ಜಿಲ್ಲೆ'ಗಳೆಂದು (Aspirational Districts) ಗುರುತಿಸಲಾಗಿರುವ ಕೆಲವು ಭೌಗೋಳಿಕ ಪ್ರದೇಶಗಳು ಅಸ್ತಿತ್ವದಲ್ಲಿದ್ದು ಇವುಗಳಲ್ಲಿ ಶೈಕ್ಷಣಿಕ ಬೆಳೆವಣಿಗೆಯನ್ನು ಪ್ರೋತ್ಸಾಹಿಸುವ ಸಲುವಾಗಿ ವಿಶೇಷ ಬಗೆಯ ಕಾರ್ಯವಿಧಾನಗಳನ್ನು ಹಮ್ಮಿಕೊಳ್ಳಬೇಕಾಗಿದೆ. ಆದ್ದರಿಂದ ಶೈಕ್ಷಣಿಕವಾಗಿ ಹಿಂದುಳಿದಿರುವ ಎಸ್.ಇ.ಡಿ.ಜಿ.ಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಹೊಂದಿರುವ ದೇಶದ ಕೆಲವು ಪ್ರದೇಶಗಳನ್ನು ವಿಶೇಷ ಶಿಕ್ಷಣ ವಲಯಗಳು (ಎಸ್.ಇ.ಜೆಡ್.ಗಳು) ಎಂಬುದಾಗಿ ಘೋಷಿಸತಕ್ಕದ್ದೆಂದು ಶಿಫಾರಸು ಮಾಡಲಾಗಿದೆ. ಆ ಪ್ರದೇಶಗಳ ಶೈಕ್ಷಣಿಕ ರೂಪುರೇಷೆಗಳನ್ನು ನಿಜವಾಗಿಯೂ ಬದಲಾಯಿಸಬೇಕೆಂಬ ಉದ್ದೇಶದಿಂದ ಹೆಚ್ಚಿನ ಸಹಯೋಜಿತ ಪ್ರಯತ್ನಗಳ ಮೂಲಕ ಎಲ್ಲ ಬಗೆಯ ಯೋಜನೆಗಳನ್ನು ಮತ್ತು ನೀತಿಗಳನ್ನು ಜಾರಿಮಾಡಿ ಗರಿಷ್ಠ ಮಟ್ಟದ ಪ್ರಯತ್ನ ಮಾಡಬೇಕಾಗಿದೆ.

6.7 ಅಲ್ಪ ಪ್ರಾತಿನಿಧ್ಯ ಹೊಂದಿದ ಎಲ್ಲ ವರ್ಗಗಳ ವಿಚಾರದಲ್ಲೂ ಮಹಿಳೆಯರು ಸಾಕಷ್ಟು ಪ್ರಮಾಣದಲ್ಲಿ ಕಂಡುಬರುತ್ತಿದ್ದು, ಎಲ್ಲ ಎಸ್.ಇ.ಡಿ.ಜಿ.ಗಳ ಅರ್ಧಭಾಗದಷ್ಟು ಮಹಿಳೆಯರೇ ಕಂಡುಬರುತ್ತಾರೆ ಎಂಬುದು ಒಂದು ಗಮನಾರ್ಹವಾದ ಸಂಗತಿ. ದುರದೃಷ್ಟವಶಾತ್, ಈ ಎಸ್.ಇ.ಡಿ.ಜಿ.ಗಳಲ್ಲಿ ಅವು ಎದುರಿಸುವ ಹೊರಗುಳಿಯುವಿಕೆ ಮತ್ತು ಅಸಮಾನತೆ ಕುರಿತ ವಿಚಾರಗಳಲ್ಲಿ ಮಹಿಳೆಯರನ್ನೇ ಹೆಚ್ಚು ಪ್ರಧಾನವಾಗಿ ತೋರಿಸಲಾಗುತ್ತಿದೆ. ಸಮಾಜದಲ್ಲಿ ಮಹಿಳೆಯರು ನಿರ್ವಹಿಸುವ ವಿಶೇಷವಾದ ಮತ್ತು ನಿರ್ಣಾಯಕವಾದ ಪಾತ್ರವನ್ನು ಹಾಗೂ ಸಾಮಾಜಿಕ ರೂಢಿಸಂಪ್ರದಾಯಗಳನ್ನು ರೂಪಿಸುವಲ್ಲಿ ಅವರು ಪಾಲುಗೊಳ್ಳುವ ಬಗೆಯನ್ನು ಈ ಶಿಕ್ಷಣ ನೀತಿ ಹೆಚ್ಚು ವಿಶೇಷವಾಗಿ ಗಮನಿಸುತ್ತದೆ. ಹಾಗಾಗಿ ಈ ಎಸ್.ಇ.ಡಿ.ಜಿ.ಗಳ ಶೈಕ್ಷಣಿಕ ಮಟ್ಟವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಅಲ್ಲಿಯ ಹೆಣ್ಣುಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣವನ್ನು ನೀಡುವುದು ಅಗತ್ಯವಾಗಿದೆ. ಇದು ಕೇವಲ ಸದ್ಯಕ್ಕೆ ಮಾತ್ರವಲ್ಲ, ಮುಂದಿನ ತಲೆಮಾರುಗಳಿಗೆ ಕೂಡ ಅನ್ವಯವಾಗಬೇಕಾಗಿದೆ. ಆದ್ದರಿಂದ ಎಸ್.ಇ.ಡಿ.ಜಿ.ಗಳ ವಿದ್ಯಾರ್ಥಿಗಳಿಗೆಂದು ರೂಪಿಸಲಾಗಿರುವ ಎಲ್ಲ ನೀತಿಗಳು ಮತ್ತು ಕಾರ್ಯಯೋಜನೆಗಳು ಆ ಎಸ್.ಇ.ಡಿ.ಜಿ.ಗಳ ಅಡಿಯಲ್ಲಿ ಬರುವ ಹೆಣ್ಣುಮಕ್ಕಳಿಗೆ ವಿಶೇಷವಾಗಿ ಅನ್ವಯವಾಗತಕ್ಕದ್ದೆಂದು ಈ ಶಿಕ್ಷಣನೀತಿ ಶಿಫಾರಸು ಮಾಡುತ್ತದೆ.

6.8 ಇವುಗಳ ಜೊತೆಗೆ, ಭಾರತ ಸರ್ಕಾರ ಎಲ್ಲ ಹೆಣ್ಣುಮಕ್ಕಳಿಗೆ ಮತ್ತು ಉಭಯಲಿಂಗಿ ವಿದ್ಯಾರ್ಥಿಗಳಿಗೆ ಸಮಾನತೆಯುಳ್ಳ ಉತ್ತಮ ಗುಣಮಟ್ಟದ ಶಿಕ್ಷಣವನ್ನು ಒದಗಿಸುವ ಸಲುವಾಗಿ ರಾಷ್ಟ್ರದ ಸಾಮರ್ಥ್ಯವನ್ನು ಅಧಿಕಗೊಳಿಸುವ ನಿಟ್ಟಿನಲ್ಲಿ 'ಲಿಂಗ ಸಮಾವರ್ತನ ನಿಧಿ' (Gender-Inclusion Fund) ಎಂಬ ಹೆಸರಿನ ನಿಧಿಯೊಂದನ್ನು ಸ್ಥಾಪಿಸಲಿದೆ. ಶಿಕ್ಷಣ ಪಡೆಯಲು ಮುಂದೆ ಬರುವಂತೆ ಹೆಣ್ಣುಮಕ್ಕಳಿಗೆ ಮತ್ತು ಉಭಯಲಿಂಗಿ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಭಾರತ ಸರ್ಕಾರ ನಿರೂಪಿಸುವ ರೀತಿಯಲ್ಲಿ ಆದ್ಯತೆ ಕೊಟ್ಟು ಈ ನಿಧಿಯನ್ನು ವಿನಿಯೋಗಿಸಲು ರಾಜ್ಯಸರ್ಕಾರಗಳಿಗೆ ನೀಡಲಾಗುವುದು. ಉದಾಹರಣೆಗೆ ನೈರ್ಮಲ್ಯ ಪಾಲನೆ ಮತ್ತು ಶೌಚಾಲಯಗಳು, ಬೈಸಿಕಲ್ಲುಗಳು, ನಿಬಂಧಿತ ನಗದು ವರ್ಗಾವಣೆ ಇತ್ಯಾದಿ ವ್ಯವಸ್ಥೆಯನ್ನು ಇದರಿಂದ ಮಾಡಬಹುದಾಗಿರುತ್ತದೆ. ಶಿಕ್ಷಣ ವ್ಯವಸ್ಥೆಯಲ್ಲಿ ಪಾಲುಗೊಳ್ಳಬೇಕಾದರೆ ಹೆಣ್ಣುಮಕ್ಕಳು ಮತ್ತು ಉಭಯಲಿಂಗಿ ಮಕ್ಕಳು ಸ್ಥಳೀಯ ಸಂದರ್ಭಗಳ ಹಿನ್ನೆಲೆಯಲ್ಲಿ ವಿಭಿನ್ನವಾದ ಪರಿಸ್ಥಿತಿಗಳನ್ನು ಪರಿಣಾಮಕಾರಿಯಾಗಿ ಸುಧಾರಿಸುವ ನಿಟ್ಟಿನಲ್ಲಿ ಕೂಡ ಸಾಮುದಾಯಿಕವಾದ ನೆಲೆಗಟ್ಟಿನಲ್ಲಿ ರಾಜ್ಯ ಸರ್ಕಾರಗಳು ಸೂಕ್ತವಾದ ಕ್ರಮಗಳನ್ನು ಕೈಗೊಳ್ಳಲು ಈ ನಿಧಿಯ ಬಳಕೆ ಮಾಡಬಹುದಾಗಿದೆ. ಇತರ ಎಸ್.ಇ.ಡಿ.ಜಿ.ಗಳಿಗೆ ಸಂಬಂಧಪಟ್ಟಂತೆ ಕೂಡ ಅವರ ಇಂತಹದೇ ಸಮಸ್ಯೆಗಳನ್ನು ನಿವಾರಿಸಲು ಇದೇ ಬಗೆಯ ಸಮಾವರ್ತನ ನಿಧಿ (Inclusion Fund) ಯೋಜನೆಗಳನ್ನು ಅಭಿವೃದ್ಧಿಪಡಿಸಲಾಗುವುದು. ಒಟ್ಟಾರೆಯಾಗಿ ಹೇಳುವುದಾದರೆ, ಯಾವುದೇ ಲಿಂಗಕ್ಕೆ ಅಥವಾ ಇತರ ಸಾಮಾಜಿಕ-ಆರ್ಥಿಕವಾಗಿ ಅನನುಕೂಲಗಳಿಂದ ಕೂಡಿರುವ ವರ್ಗಗಳಿಗೆ ಸೇರಿದ ಮಕ್ಕಳಿಗೆ ಶಿಕ್ಷಣ ಪಡೆಯುವಲ್ಲಿ (ವೃತ್ತಿಕೌಶಲ ಶಿಕ್ಷಣ ಸಹ ಸೇರಿದಂತೆ) ಎದುರಾಗುವ ಉಳಿದ ಯಾವುದೇ ಬಗೆಯ ಭೇದ ಭಿನ್ನತೆಗಳ ಸಮಸ್ಯೆಗಳನ್ನು ತೊಡೆದು ಹಾಕುವುದು ಈ ಶಿಕ್ಷಣ ನೀತಿಯ ಗುರಿಯಾಗಿದೆ.

6.9 ದೂರದ ಪ್ರದೇಶಗಳಿಂದ ಬರುವ, ಅದರಲ್ಲೂ ಸಾಮಾಜಿಕ-ಆರ್ಥಿಕವಾಗಿ ಅನನುಕೂಲಕರವಾದ ಹಿನ್ನೆಲೆಗಳಿಂದ ಬಂದಿರುವ ವಿದ್ಯಾರ್ಥಿಗಳ ಸಲುವಾಗಿ ಜವಾಹರ ನವೋದಯ ವಿದ್ಯಾಲಯಗಳ ಮಾದರಿಯಲ್ಲಿ ಶಾಲಾ ಸ್ಥಳಗಳಲ್ಲಿ ಉಚಿತ ವಿದ್ಯಾರ್ಥಿನಿಲಯ ಸೌಲಭ್ಯಗಳನ್ನು ಒದಗಿಸಿಕೊಡಲಾಗುವುದು. ಅವುಗಳಲ್ಲಿ ಎಲ್ಲ ಮಕ್ಕಳ, ವಿಶೇಷವಾಗಿ ಹೆಣ್ಣುಮಕ್ಕಳ, ಸುರಕ್ಷತಾ ವ್ಯವಸ್ಥೆಯನ್ನು ಸೂಕ್ತವಾಗಿ ಮಾಡಲಾಗುವುದು. ಸಾಮಾಜಿಕ- ಆರ್ಥಿಕ ಅನನುಕೂಲಕರವಾದ ಹಿನ್ನೆಲೆಗಳಿಂದ ಬಂದಿರುವ ಹೆಣ್ಣುಮಕ್ಕಳ ಸಲುವಾಗಿ ಉತ್ತಮ ಗುಣಮಟ್ಟದ ಶಾಲೆಗಳಲ್ಲಿ (12ನೇ ಗ್ರೇಡ್ ವರೆಗೆ) ಕಸ್ತೂರಬಾ ಬಾಲಿಕಾ ವಿದ್ಯಾಲಯ ಸೌಲಭ್ಯಗಳನ್ನು ವಿಸ್ತರಿಸಿ ಹೆಚ್ಚಿನ ಮಕ್ಕಳ ವಿದ್ಯಾರ್ಜನೆಗೆ ಅವಕಾಶವಾಗುವಂತೆ ಅವುಗಳನ್ನು ಸಶಕ್ತವಾಗಿ ಮಾಡಲಾಗುವುದು. ಉನ್ನತ ಗುಣಮಟ್ಟದ ಶೈಕ್ಷಣಿಕ ಅವಕಾಶಗಳನ್ನು ಒದಗಿಸಿಕೊಡುವ ದೃಷ್ಟಿಯಿಂದ ದೇಶದಲ್ಲಿ ಎಲ್ಲೆಡೆ, ಅದರಲ್ಲೂ ವಿಶೇಷವಾಗಿ ಆಶೋತ್ತರ ಜಿಲ್ಲೆಗಳಲ್ಲಿ, ವಿಶೇಷ ಶಿಕ್ಷಣ ವಲಯಗಳಲ್ಲಿ ಮತ್ತಿತರ ಅನನುಕೂಲಗಳಿಂದ ಕೂಡಿರುವ ಪ್ರದೇಶಗಳಲ್ಲಿ ಹೆಚ್ಚಿರುವ ಹೆಚ್ಚುವರಿ ಜವಾಹರ ನವೋದಯ ವಿದ್ಯಾಲಯಗಳನ್ನು ಮತ್ತು ಕೇಂದ್ರೀಯ ವಿದ್ಯಾಲಯಗಳನ್ನು ಸ್ಥಾಪನೆ ಮಾಡಲಾಗುವುದು. ದೇಶಾದ್ಯಂತ ಕೇಂದ್ರೀಯ ವಿದ್ಯಾಲಯಗಳಲ್ಲಿ ಮತ್ತು ಇತರ ಪ್ರಾಥಮಿಕ ಶಾಲೆಗಳಲ್ಲಿ ಪ್ರಾರಂಭಿಕ ಹಂತದಲ್ಲಿನ ಬಾಲ್ಯಾವಸ್ಥೆಯ ಸುರಕ್ಷತೆ ಮತ್ತು ಶಿಕ್ಷಣವನ್ನೊಳಗೊಂಡ ಕಡೆಯಪಕ್ಷ ಒಂದು ವರ್ಷ ಅವಧಿಯ ಶಾಲಾಪೂರ್ವ (Pre-School) ತರಗತಿಗಳನ್ನು ವಿಶೇಷವಾಗಿ ಅನನುಕೂಲಗಳಿಂದ ಕೂಡಿರುವ ಪ್ರದೇಶಗಳಿಂದ ತೆರೆಯಲಾಗುವುದು.

6.10 ಇ.ಸಿ.ಸಿ.ಇ.ಯಲ್ಲಿ ಶಾರೀರಿಕ ನ್ಯೂನತೆಗಳನ್ನು ಹೊಂದಿರುವ ಮಕ್ಕಳು ಸೇರ್ಪಡೆಗೊಂಡು ಸಮಾನ ಸ್ವರೂಪದ ಅವಕಾಶಗಳನ್ನು ಪಡೆದುಕೊಳ್ಳಬೇಕೆನ್ನುವ ಉದ್ದೇಶದಿಂದ ಶಾಲಾವ್ಯವಸ್ಥೆಯಲ್ಲಿ ಆದ್ಯತೆಯ ಮೇಲೆ ಅಗತ್ಯವಾದ ಕ್ರಮಗಳನ್ನು ಕೈಗೊಳ್ಳಲಾಗುವುದು. ತಳಹದಿ ಹಂತದಿಂದ ಉನ್ನತ ಶಿಕ್ಷಣದ ಹಂತದವರೆಗೆ ಶಾರೀರಿಕ ಅಸಾಮರ್ಥ್ಯ ಹೊಂದಿರುವ ಮಕ್ಕಳು ನಿಯತವಾದ ಶಾಲಾ ಪ್ರಕ್ರಿಯೆಗಳಲ್ಲಿ ಪೂರ್ಣಪ್ರಮಾಣದಲ್ಲಿ ಭಾಗವಹಿಸುವಂತೆ ಅವಕಾಶ ಮಾಡಿಕೊಡಲಾಗುವುದು. ಶಾರೀರಿಕ ಅಸಾಮರ್ಥ್ಯ ಹೊಂದಿರುವ ವ್ಯಕ್ತಿಗಳ ಹಕ್ಕುಗಳ (ಆರ್.ಪಿ.ಡಬ್ಲ್ಯೂ.ಡಿ.) ಕಾಯಿದೆ, 2016 ಸಮಾವರ್ತ ಶಿಕ್ಷಣವನ್ನು 'ಶಾರೀರಿಕ ಅಸಾಮರ್ಥ್ಯ ಹೊಂದಿರುವ ಮತ್ತು ಹೊಂದದೇ ಇರುವ ವ್ಯಕ್ತಿಗಳು ಒಟ್ಟುಸೇರಿ ಕಲಿಯುವ ವ್ಯವಸ್ಥೆ ಹಾಗೂ ಈ ಬೋಧನ ಮತ್ತು ಕಲಿಕೆಯ ವ್ಯವಸ್ಥೆಯಲ್ಲಿ ಬೇರೆಬೇರೆ ಬಗೆಯಲ್ಲಿ ಅಸಾಮರ್ಥ್ಯ ಹೊಂದಿರುವ ವಿದ್ಯಾರ್ಥಿಗಳ ಕಲಿಕೆಯ ಅಗತ್ಯಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಶಿಕ್ಷಣ ವ್ಯವಸ್ಥೆಯನ್ನು ಅಳವಡಿಸಿಕೊಳ್ಳುವ ಒಂದು ಏರ್ಪಾಡು' ಎಂಬುದಾಗಿ ಪರಿಭಾಷಿಸಲಾಗಿದೆ. ಶಿಕ್ಷಣ ನೀತಿ ಆರ್.ಪಿ.ಡಬ್ಲ್ಯೂ.ಡಿ. ಕಾಯಿದೆ 2016ರ ಎಲ್ಲ ಅವಕಾಶಗಳಿಗೆ ಪೂರ್ಣರೀತಿಯಲ್ಲಿ ಸಮ್ಮತಿ ಸೂಚಿಸುತ್ತದೆಂದೂ ಶಾಲಾಶಿಕ್ಷಣವನ್ನು ಕುರಿತಂತೆ ಅದರಲ್ಲಿ ಪ್ರಸ್ತಾಪಿಸಲಾಗಿರುವ ಎಲ್ಲ ಶಿಫಾರಸುಗಳನ್ನು ಮಾನ್ಯ ಮಾಡುತ್ತದೆಂದೂ ಇಲ್ಲಿ ಸ್ಪಷ್ಟಪಡಿಸಲಾಗುತ್ತಿದೆ. ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟನ್ನು (National Curriculum Framework) ರೂಪಿಸಬೇಕಾದರೆ ಎನ್.ಸಿ.ಇ.ಆರ್.ಟಿ. ಸಂಸ್ಥೆ ಡಿ.ಇ.ಪಿ.ಡಬ್ಲ್ಯೂ.ಡಿ.ಗೆ ಸೇರಿರುವಂತಹ ರಾಷ್ಟ್ರೀಯ ಮಟ್ಟದ ಸಂಸ್ಥೆಗಳ ಜೊತೆಯಲ್ಲಿ ಪರಾಮರ್ಶಿಸಿ ಈ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ ಎಂಬುದನ್ನು ದೃಢಪಡಿಸಿಕೊಳ್ಳತಕ್ಕದ್ದು.

6.11 ಈ ಬಗೆಗೆ ಮುಂದುವರಿಸಿ ಹೇಳಬಹುದಾದರೆ, ಶಾರೀರಿಕ ಅಸಾಮರ್ಥ್ಯವುಳ್ಳ ಮಕ್ಕಳನ್ನು ಒಟ್ಟುಗೂಡಿಸಬೇಕಾದ ನಿಟ್ಟಿನಲ್ಲಿ ಅಗತ್ಯವಾಗುವ ಸಂಪನ್ಮೂಲಗಳನ್ನು ಶಾಲೆಗೆ/ಶಾಲಾಸಂಕೀರ್ಣಗಳಿಗೆ ಒದಗಿಸಲಾಗುವುದು. ಬೇರೆ ಬೇರೆ ಬಗೆಯ ಶಾರೀರಿಕ ಅಸಾಮರ್ಥ್ಯವುಳ್ಳ ಮಕ್ಕಳಿಗೆ ತರಬೇತಿ ನೀಡಬಲ್ಲ ವಿಶೇಷ ಶಿಕ್ಷಕರನ್ನು ನೇಮಕ ಮಾಡಲಾಗುವುದು ಹಾಗೂ ಅಗತ್ಯವಾದೆಡೆಗಳಲ್ಲಿ, ಅದರಲ್ಲೂ ವಿಶೇಷವಾಗಿ ಗಂಭೀರ ಸ್ವರೂಪದ ಅಥವಾ ಬಹುವಿಧದ ಶಾರೀರಿಕ ಅಸಾಮರ್ಥ್ಯಗಳಿಂದ ಕೂಡಿರುವ, ಮಕ್ಕಳಿಗೆ ಶಿಕ್ಷಣ ನೀಡುವ ಸಲುವಾಗಿ ಸಂಪನ್ಮೂಲ ಕೇಂದ್ರಗಳನ್ನು ಸ್ಥಾಪನೆ ಮಾಡಲಾಗುವುದು. ಆರ್.ಪಿ.ಡಬ್ಲ್ಯೂಡಿ. ಕಾಯಿದೆಗೆ ಅನುಗುಣವಾಗಿ ಶಾರೀರಿಕ ಅಸಾಮರ್ಥ್ಯ ಹೊಂದಿರುವ ಮಕ್ಕಳ ಸಲುವಾಗಿ ಯಾವುದೇ ಅಡ್ಡಿ ಆತಂಕಗಳಿಲ್ಲದೆ ಸೌಲಭ್ಯಗಳು ದೊರಕುವಂತೆ ವ್ಯವಸ್ಥೆ ಮಾಡಲಾಗುವುದು. ಬೇರೆಬೇರೆ ಬಗೆಯ ಶಾರೀರಿಕ ಅಸಾಮರ್ಥ್ಯವುಳ್ಳ ಮಕ್ಕಳ ಅಗತ್ಯಗಳು ಕೂಡ ಬೇರೆಬೇರೆ ಬಗೆಯದಾಗಿರುತ್ತವೆ. ಶಾಲೆಗಳು ಮತ್ತು ಶಾಲಾಸಂಕೀರ್ಣಗಳು ಶಾರೀರಿಕ ಅಸಾಮರ್ಥ್ಯ ಹೊಂದಿರುವ ಎಲ್ಲ ಮಕ್ಕಳಿಗಾಗಿ ಅವರವರ ಅಗತ್ಯಗಳಿಗೆ ತಕ್ಕಂತೆ ಕಟ್ಟಡಗಳೇ ಮುಂತಾದ ಅಗತ್ಯವಾದ ಬೆಂಬಲಗಳನ್ನು ಒದಗಿಸಲು ಸಾಧ್ಯವಾಗುವಂತೆ ಅವುಗಳಿಗೆ ಅನುಕೂಲ ಮಾಡಿಕೊಡಲಾಗುವುದು. ಆ ಮಕ್ಕಳು ತರಗತಿಗಳಲ್ಲಿ ಪೂರ್ಣಪ್ರಮಾಣದಲ್ಲಿ ಉಳಿದ ಮಕ್ಕಳ ಜೊತೆ ಒಂದಾಗಿ ಕಲಿಯಲು ಸಾಧ್ಯವಾಗುವಂತೆ ಅವರ ಎಲ್ಲ ಆವಶ್ಯಕತೆಗಳನ್ನು ಗಮನಿಸಲಾಗುವುದು. ಅದರಲ್ಲೂ ವಿಶೇಷವಾಗಿ, ನೆರವಾಗುವಂತಹ, ಉಪಕರಣಗಳು ಹಾಗೂ ಸೂಕ್ತವಾದ ತಂತ್ರಜ್ಞಾನಾಧಾರಿತ ಸಲಕರಣೆಗಳು ಇವುಗಳನ್ನು ಒದಗಿಸುವುದರ ಜೊತೆಗೆ ಸಾಕಷ್ಟು ಪ್ರಮಾಣದಲ್ಲಿ ಆಯಾ ಮಕ್ಕಳ ಭಾಷೆಗಳಿಗೆ ಅನುಗುಣವಾಗಿ ಕಲಿಸುವ ಸಾಮಗ್ರಿಗಳನ್ನು (ಉದಾಹರಣೆಗೆ ಅಂತಹ ಮಕ್ಕಳಿಗೆ ಉಪಯೋಗಿಸಲು ಅನುಕೂಲವಾಗುವಂತಹ ದೊಡ್ಡ ಅಕ್ಷರಗಳಲ್ಲಿ ಮುದ್ರಣಗೊಂಡಿರುವ ಬ್ರೇಲ್ ಮಾದರಿಯ ಪಠ್ಯಪುಸ್ತಕಗಳು) ಒದಗಿಸುವುದರ ಮೂಲಕ ಆ ಮಕ್ಕಳು ತರಗತಿಯ ಓದುಬರೆಹ ಕಾರ್ಯಗಳಲ್ಲಿ ಸುಲಭವಾಗಿ ಒಂದಾಗಿ ಅಧ್ಯಾಪಕರೊಡನೆ ಮತ್ತು ಸಹಪಾಠಿಗಳೊಡನೆ ಪರಸ್ಪರ ವ್ಯವಹರಿಸಲು ಸಾಧ್ಯವಾಗುವಂತೆ ಅನುಕೂಲ ಒದಗಿಸಿಕೊಡಲಾಗುವುದು. ಇದು ಕಲೆ, ಕ್ರೀಡೆಗಳು ಮತ್ತಿತರ ವೃತ್ತಿಪರ ಶಿಕ್ಷಣವನ್ನೊಳಗೊಂಡಂತೆ ಎಲ್ಲ ಬಗೆಯ ಶಾಲಾ ಚಟುವಟಿಕೆಗಳಿಗೂ ಅನ್ವಯವಾಗುವುದು. ಭಾರತೀಯ ಸಂಜ್ಞಾಭಾಷೆ (Indian Sign Language) ಹಾಗೂ ಭಾರತೀಯ

ಸಂಜ್ಞಾಭಾಷೆಯನ್ನು ಬಳಕೆಮಾಡಿ ಇತರ ಮೂಲಭೂತ ವಿಷಯಗಳನ್ನು ಬೋಧಿಸಲು ಅಗತ್ಯವಾದ ಉನ್ನತಮಟ್ಟದ ಮಾಡ್ಯೂಲುಗಳನ್ನು ಎನ್.ಐ.ಓ.ಎಸ್. ಅಭಿವೃದ್ಧಿಪಡಿಸುವುದು. ಶಾರೀರಿಕ ಅಸಾಮರ್ಥ್ಯ ಹೊಂದಿರುವ ಮಕ್ಕಳ ಸುರಕ್ಷತೆ ಮತ್ತು ಭದ್ರತೆಗಾಗಿ ಸಾಕಷ್ಟು ಗಮನ ಹರಿಸಲಾಗುವುದು.

6.12 ಆರ್.ಪಿ.ಡಬ್ಲ್ಯೂ.ಡಿ. ಕಾಯಿದೆ 2016ಕ್ಕೆ ಅನುಗುಣವಾಗಿ ಮೂಲಭೂತ ಸ್ವರೂಪದ ಅಸಾಮರ್ಥ್ಯ (benchmark disabilities) ಹೊಂದಿರುವ ಮಕ್ಕಳು ನಿಯತವಾದ ಇಲ್ಲವೇ ವಿಶೇಷ ಬಗೆಯ ಶಾಲಾಶಿಕ್ಷಣದ ಆಯ್ಕೆಯನ್ನು ಹೊಂದಿರುತ್ತಾರೆ. ವಿಶೇಷ ಪರಿಣತಿಯುಳ್ಳ ಬೋಧಕರ ನೆರವಿನಿಂದ ಸಂಪನ್ಮೂಲ ಕೇಂದ್ರಗಳು ಗಂಭೀರ ಸ್ವರೂಪದ ಇಲ್ಲವೇ ಬಹುಬಗೆಯ ಶಾರೀರಿಕ ನ್ಯೂನತೆಯುಳ್ಳ ಮಕ್ಕಳ ಶೈಕ್ಷಣಿಕ ಅಗತ್ಯಗಳನ್ನು ಪೂರೈಸಿ ಪುನರ್ವಸತಿ ಕಲ್ಪಿಸುವ ಕಾರ್ಯವನ್ನು ಕೈಗೊಳ್ಳುತ್ತವೆ. ಅಂತೆಯೆ ಅಗತ್ಯಕ್ಕೆ ತಕ್ಕಂತೆ ಇಂತಹ ಮಕ್ಕಳಿಗೆ ಉನ್ನತ ಮಟ್ಟದ ಮನೆ-ಶಾಲೆಯನ್ನು (Home-Schooling) ಮತ್ತು ಕೌಶಲಗಳ ಗಳಿಕೆಯನ್ನು ಸಾಧಿಸುವ ದಿಶೆಯಲ್ಲಿ ತಂದೆತಾಯಿಗಳಿಗೆ/ಪೋಷಕರಿಗೆ ನೆರವಾಗುವ ಕೆಲಸಗಳನ್ನು ಸಹ ಈ ಸಂಪನ್ಮೂಲ ಕೇಂದ್ರಗಳು ಕೈಗೊಳ್ಳುತ್ತವೆ. ಗಂಭೀರ ಸ್ವರೂಪದ ಹಾಗೂ ಅನಿವಾರ್ಯವಾದ ಶಾರೀರಿಕ ಅಸಾಮರ್ಥ್ಯಗಳಿಂದ ಕೂಡಿದ್ದು ಶಾಲೆಗೆ ಹೋಗಲು ಸಾಧ್ಯವಾಗದೆ ಇರುವಂತಹ ಮಕ್ಕಳಿಗೆ ಈ ಬಗೆಯ ಮನೆ-ಆಧಾರಿತ ಶಿಕ್ಷಣಕ್ಕೆ ಅನುಕೂಲ ಮಾಡಿಕೊಡುವ ಕಾರ್ಯ ಮುಂದುವರಿಯುತ್ತದೆ. ಈ ರೀತಿಯಾಗಿ ಮನೆ ಆಧಾರಿತ ಶಿಕ್ಷಣ ಪಡೆಯುತ್ತಿರುವ ಮಗುವನ್ನು ನಿಯತವಾಗಿ ಶಾಲೆಗೆ ಹೋಗಿ ಅಭ್ಯಾಸ ಮಾಡುತ್ತಿರುವ ಇತರ ಯಾವುದೇ ಸಾಮಾನ್ಯ ಮಗುವಿಗೆ ಸಮವಾಗಿ ಪರಿಗಣಿಸತಕ್ಕದ್ದು. ಈ ರೀತಿಯಾಗಿ ಮನೆ-ಆಧಾರಿತ ಶಿಕ್ಷಣ ಸಮರ್ಪಕವಾಗಿ ಮತ್ತು ಪರಿಣಾಮಕಾರಿಯಾಗಿ ನಡೆಯುತ್ತಿದೆಯೇ ಎಂಬುದನ್ನು ದೃಢಪಡಿಸಿಕೊಳ್ಳಲು ಸಮಾನತೆ ಮತ್ತು ಸಮಾನ ಅವಕಾಶಗಳ ಲಭ್ಯತೆ ಇವುಗಳನ್ನು ಆಧರಿಸಿದ ತತ್ತ್ವದ ಹಿನ್ನೆಲೆಯಲ್ಲಿ ಸೂಕ್ತ ತಪಾಸಣೆ ವ್ಯವಸ್ಥೆ ಇರತಕ್ಕದ್ದು. ಆರ್.ಪಿ.ಡಬ್ಲ್ಯೂ.ಡಿ. ಕಾಯಿದೆ 2016ಕ್ಕೆ ಅನುಗುಣವಾಗಿ ಈ ರೀತಿಯ ತಪಾಸಣೆಯನ್ನು ಆಧಾರವಾಗಿ ಇಟ್ಟುಕೊಂಡು ಮನೆ-ಆಧಾರಿತ ಶಾಲಾ ವ್ಯವಸ್ಥೆಗೆ ಅಗತ್ಯವಾದ ಮಾರ್ಗಸೂಚಕ ರೂಪುರೇಷೆಗಳನ್ನು ಮತ್ತು ಮಾನದಂಡಗಳನ್ನು ಅಭಿವೃದ್ಧಿಪಡಿಸತಕ್ಕದ್ದು. ಶಾರೀರಿಕ ಅಸಾಮರ್ಥ್ಯ ಹೊಂದಿದ ಎಲ್ಲ ಮಕ್ಕಳಿಗೆ ಶಿಕ್ಷಣ ನೀಡುವುದು ಸರ್ಕಾರದ ಜವಾಬ್ದಾರಿ ಎಂಬುದು ಸ್ಪಷ್ಟವಾಗಿರುವುದರಿಂದ, ತಂದೆತಾಯಿಗಳಿಗೆ/ಪೋಷಕರಿಗೆ ತಂತ್ರಜ್ಞಾನಾಧಾರಿತ ಪರಿಹಾರಗಳ ಬಗೆಗೆ ಸೂಕ್ತ ತಿಳಿವಳಿಕೆ ನೀಡಿ ಅಂತಹ ತಂದೆತಾಯಿಗಳು/ಪೋಷಕರು ತಮ್ಮ ಮಕ್ಕಳ ಕಲಿಕೆಯ ಅಗತ್ಯಗಳನ್ನು ಪೂರೈಸಲು ಸಾಧ್ಯವಾಗುವಂತೆ, ಆ ಕೆಲಸದಲ್ಲಿ ಅವರು ಸಕ್ರಿಯವಾಗಿ ತೊಡಗಿಸಿಕೊಳ್ಳಲು ಅನುವಾಗುವಂತೆ ವ್ಯಾಪಕ ಸ್ವರೂಪದ ಕಲಿಕೆಯ ಸಾಮಗ್ರಿಗಳು ಲಭ್ಯವಾಗುವಂತೆ ಆದ್ಯತೆಯ ಮೇಲೆ ವ್ಯವಸ್ಥೆ ಮಾಡಲಾಗುವುದು.

6.13 ಬಹಳಷ್ಟು ಶಾಲಾ ತರಗತಿಗಳಲ್ಲಿ ನಿರ್ದಿಷ್ಟ ಬಗೆಯ ಕಲಿಕಾ ಅಸಾಮರ್ಥ್ಯವುಳ್ಳ ಮಕ್ಕಳು ಕಂಡುಬರುತ್ತಿದ್ದು ಅವರಿಗೆ ನಿರಂತರವಾದ ಬೆಂಬಲ ಅಗತ್ಯವಾಗಿದೆ. ಇಂತಹ ಬೆಂಬಲ ಎಷ್ಟು ಶೀಘ್ರವಾಗಿ ದೊರಕುವುದೋ, ಅಷ್ಟು ಬೇಗ ಮುನ್ನಡೆ ಸಾಧ್ಯವಾಗಬಲ್ಲದು ಎಂಬ ಸಂಗತಿಯು ಸಂಶೋಧನೆಗಳಿಂದ ಸ್ಪಷ್ಟವಾಗಿ ಹೊರಬಂದಿದೆ. ಹಾಗಾಗಿ ಅಧ್ಯಾಪಕರು ತರಗತಿಯಲ್ಲಿರುವ ಮಕ್ಕಳ ಕಲಿಕೆಯ ಅಸಾಮರ್ಥ್ಯಗಳನ್ನು ಸಾಧ್ಯವಾದಷ್ಟು ಬೇಗ ಪತ್ತೆ ಮಾಡಿ ಅವುಗಳನ್ನು ಪರಿಹರಿಸಲು ಅಗತ್ಯವಾದ ನಿರ್ದಿಷ್ಟ ವಿಧಾನವನ್ನು ಕಂಡುಕೊಳ್ಳಬೇಕು. ಈ ನಿಟ್ಟಿನಲ್ಲಿ ಎದುರಾಗುವ ನಿರ್ದಿಷ್ಟ ವಿಧಾನಗಳು ಎಂದರೆ ಮಕ್ಕಳು ತಮ್ಮದೇ ಆದ ಧಾಟಿಯಲ್ಲಿ ಮತ್ತು ವೇಗದಲ್ಲಿ ಕೆಲಸ ಮಾಡಲು ಅನುಕೂಲ ಮಾಡಿಕೊಡುವ ಹಾಗೂ ಅವರನ್ನು ಸಮರ್ಥರನ್ನಾಗಿಸುವ ಸೂಕ್ತ ತಂತ್ರಜ್ಞಾನ, ಪ್ರತಿಯೊಂದು ಮಗುವಿನ ಸಾಮರ್ಥ್ಯಕ್ಕೆ ಹೊಂದುವಂತಹ ಸುಲಭ- ನಮ್ಯವಾದ ಪಠ್ಯಕ್ರಮ ಹಾಗೂ ಸೂಕ್ತ ಮೌಲ್ಯಾಂಕನ ಮತ್ತು ಪ್ರಮಾಣೀಕರಣಕ್ಕೆ ಅಗತ್ಯವಾದಂತಹ ಪರಿಸರ ವ್ಯವಸ್ಥೆಯ ನಿರ್ಮಾಣ ಇಂತಹವುಗಳಾಗಿವೆ. ಈಗಾಗಲೇ ಪ್ರಸ್ತಾಪಿಸಲಾಗಿರುವ ರಾಷ್ಟ್ರೀಯ ಮೌಲ್ಯಾಂಕನ ಕೇಂದ್ರ (National Assessment Centre, PARAKH) ಸೇರಿದಂತೆ ಮೌಲ್ಯಾಂಕನ ಮತ್ತು ಪ್ರಮಾಣೀಕರಣ ಸಂಸ್ಥೆಗಳು ತಳಹದಿ ಹಂತದಿಂದ ಮೊದಲುಗೊಂಡು ಉನ್ನತ ಶಿಕ್ಷಣದವರೆಗೆ (ಪ್ರವೇಶ ಪರೀಕ್ಷೆಗಳೂ ಒಳಗೊಂಡಂತೆ) ಈ ಬಗೆಯ ಮೌಲ್ಯಾಂಕನವನ್ನು ಕೈಗೊಳ್ಳಲು ಮಾರ್ಗಸೂಚಿಗಳನ್ನು ರೂಪಿಸಿ, ಸೂಕ್ತವಾದ ಉಪಕರಣಗಳ ಬಗೆಗೆ ಶಿಫಾರಸು ಮಾಡುತ್ತವೆ. ಕಲಿಯುವ ಅಸಾಮರ್ಥ್ಯ ಹೊಂದಿರುವ ಎಲ್ಲ ವಿದ್ಯಾರ್ಥಿಗಳಿಗೂ ಸಮಾನವಾದ ಅವಕಾಶಗಳ ಲಭ್ಯತೆ ಇರಬೇಕಾದುದು ಆವಶ್ಯಕವೆಂಬ ನಿಟ್ಟಿನಲ್ಲಿ ಈ ಮಾರ್ಗಸೂಚಿಗಳ ಮತ್ತು ಉಪಕರಣಗಳ ಅಗತ್ಯ ಸೂಕ್ತವೆನಿಸುತ್ತದೆ.

6.14 ನಿರ್ದಿಷ್ಟವಾದ ಶಾರೀರಿಕ ಅಸಾಮರ್ಥ್ಯವುಳ್ಳ (ಕಲಿಕೆಯ ಸಾಮರ್ಥ್ಯಗಳು ಸಹ ಸೇರಿದಂತೆ) ಮಕ್ಕಳಿಗೆ ಬೋಧನೆ ಮಾಡುವ ಬಗೆಗೆ ಅರಿವು ಮತ್ತು ತಿಳಿವಳಿಕೆಗಳನ್ನು ಪಡೆದುಕೊಳ್ಳುವುದು ಎಲ್ಲ ಅಧ್ಯಾಪಕ ಶಿಕ್ಷಣ ಕಾರ್ಯಕ್ರಮಗಳ ಅನಿವಾರ್ಯ ಭಾಗವಾಗುತ್ತದೆ. ಅಂತೆಯೆ, ಲಿಂಗಸಂವೇದನೆ ಮತ್ತು ಕಡಿಮೆ ಪ್ರಾತಿನಿಧ್ಯ ಹೊಂದಿರುವ ಗುಂಪುಗಳ ವಿಚಾರವಾಗಿ, ಅವುಗಳ ಅಲ್ಪ ಪ್ರಾತಿನಿಧ್ಯವನ್ನು ಬೇರ್ಪಡಿಸುವ ದೃಷ್ಟಿಯಿಂದ, ಸಂವೇದನಶೀಲತೆಯನ್ನು ಬೆಳೆಸಿಕೊಳ್ಳುವುದು ಕೂಡ ಇಂತಹ ಅಧ್ಯಾಪಕ ಶಿಕ್ಷಣ ಕಾರ್ಯಕ್ರಮಗಳ ಅಂಗಭಾಗವಾಗಿದೆ.

6.15 ಪಾರಂಪರಿಕವಾದ ಅಥವಾ ವಿಭಿನ್ನ ಮಾದರಿಯ ಬೋಧನಶೈಲಿಗಳನ್ನು ಉಳಿಸಿಕೊಳ್ಳುವುದನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಪರ್ಯಾಯ ಶಾಲಾಮಾದರಿಗಳಿಗೆ ಅವಕಾಶ ಮಾಡಿಕೊಡಲಾಗುವುದು. ಇದೇ ವೇಳೆಯಲ್ಲಿ, ಎನ್.ಸಿ.ಎಫ್.ಎಸ್.ಇ. ಗೊತ್ತುಪಡಿಸಿದ

ವಿಷಯಗಳನ್ನು ಮತ್ತು ಕಲಿಕೆಯ ಕೇಂದ್ರಗಳನ್ನು ತಮ್ಮತಮ್ಮ ಪಠ್ಯಕ್ರಮದಲ್ಲಿ ಒಂದಾಗುವಂತೆ ಅಳವಡಿಸಿಕೊಳ್ಳಲು ಇಂತಹ ಶಾಲೆಗಳಿಗೆ ಅವಕಾಶ ಒದಗಿಸಲಾಗುವುದು. ಇಂತಹ ಶಾಲೆಗಳಿಂದ ಉನ್ನತ ಶಿಕ್ಷಣಕ್ಕೆ ಬಂದು ಸೇರುವ ಮಕ್ಕಳ ಅಲ್ಪ ಪ್ರಾತಿನಿಧ್ಯವನ್ನು ಕಡಿಮೆ ಮಾಡುವ ಹಾಗೂ ಕ್ರಮೇಣ ಇಲ್ಲವಾಗಿಸುವ ದೃಷ್ಟಿಯಿಂದ ಮೇಲ್ಕಂಡಂತೆ ವಿಷಯಗಳ ಮತ್ತು ಕಲಿಕೆಯ ಕ್ಷೇತ್ರಗಳ ಸೇರ್ಪಡೆಯನ್ನು ಉತ್ತೇಜಿಸಲಾಗುವುದು. ಅದರಲ್ಲೂ ವಿಶೇಷವಾಗಿ ಈ ಶಾಲೆಗಳು ಬಯಸಬಹುದಾದಂತೆ ವಿಜ್ಞಾನ, ಗಣಿತ, ಸಾಮಾಜಿಕ ಅಧ್ಯಯನ, ಹಿಂದಿ, ಇಂಗ್ಲಿಷ್, ರಾಜ್ಯಭಾಷೆಗಳು ಅಥವಾ ಇನ್ನಿತರ ವಿಷಯಗಳನ್ನು ಪಠ್ಯಕ್ರಮಗಳಲ್ಲಿ ಸೇರಿಸಿಕೊಳ್ಳಲು ಅನುಕೂಲವಾಗುವಂತೆ ಇವುಗಳಿಗೆ ಹಣಕಾಸು ನೆರವನ್ನು ನೀಡಲಾಗುವುದು. ಹೀಗೆ ಮಾಡುವುದರಿಂದ, ಈ ಶಾಲೆಗಳಲ್ಲಿ ಓದುವ ಮಕ್ಕಳು ಗ್ರೇಡ್ 1-12 ರವರೆಗಿನ ಮಕ್ಕಳಿಗೆಂದು ಗೊತ್ತುಪಡಿಸಲಾದ ಕಲಿಕೆಯ ಫಲಿತಾಂಶಗಳನ್ನು ಪಡೆದುಕೊಳ್ಳಲು ಸಾಧ್ಯವಾಗುತ್ತದೆ. ಅಷ್ಟೇ ಅಲ್ಲದೆ, ಇಂತಹ ಶಾಲೆಗಳಲ್ಲಿ ಓದುತ್ತಿರುವ ಮಕ್ಕಳಿಗೆ ರಾಜ್ಯಮಟ್ಟದ ಇಲ್ಲವೇ ಇತರ ಮಂಡಳಿಗಳು ನಡೆಸುವ ಪರೀಕ್ಷೆಗಳನ್ನು ತೆಗೆದುಕೊಳ್ಳಲು ಅಥವಾ ಎನ್.ಟಿ. ಎ. ಮೌಲ್ಯಾಂಕನಕ್ಕೆ ಒಳಗಾಗಲು ಸಾಧ್ಯವಾಗುತ್ತದೆ, ಆ ಮೂಲಕ ಆ ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಪಡೆಯುವ ಅವಕಾಶ ಒದಗುತ್ತದೆ. ವಿಜ್ಞಾನ, ಗಣಿತ, ಭಾಷೆ, ಸಾಮಾಜಿಕ ಅಧ್ಯಯನ ಈ ವಿಷಯಗಳನ್ನು ಬೋಧಿಸುತ್ತಿರುವ ಅಧ್ಯಾಪಕರ ಸಾಮರ್ಥ್ಯವನ್ನು ಹೆಚ್ಚಿಸಲಾಗುವುದಲ್ಲದೆ ಅವರಿಗೆ ಹೊಸ ಬೋಧನಕ್ರಮವನ್ನು ಅಳವಡಿಸಿಕೊಳ್ಳುವ ಸಲುವಾಗಿ ಅನುಸ್ಥಾಪನ ಶಿಕ್ಷಣವನ್ನು ಕೂಡ ನೀಡಲಾಗುವುದು. ಗ್ರಂಥಾಲಯಗಳನ್ನು ಮತ್ತು ಪ್ರಯೋಗಶಾಲೆಗಳನ್ನು ಇನ್ನೂ ಹೆಚ್ಚು ಸಮೃದ್ಧಗೊಳಿಸಲಾಗುವುದು ಮಾತ್ರವಲ್ಲದೆ ಪುಸ್ತಕಗಳು, ಪತ್ರಿಕೆಗಳು ಮೊದಲಾಗಿ ಇತರ ಬೋಧನ-ಕಲಿಕಾ ಸಾಮಗ್ರಿಗಳನ್ನು ಸಾಕಷ್ಟು ಪ್ರಮಾಣದಲ್ಲಿ ಒದಗಿಸಿಕೊಡಲಾಗುವುದು.

6.16 ಎಸ್.ಇ.ಡಿ.ಜಿ.ಗಳ ಒಳಗೆ ಹಾಗೂ ಮೇಲ್ಕಂಡ ನೀತಿಸಂಬಂಧವಾದ ಅಂಶಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಪರಿಶಿಷ್ಟ ಜಾತಿಗಳ ಮತ್ತು ಪರಿಶಿಷ್ಟ ಪಂಗಡಗಳ ಶೈಕ್ಷಣಿಕ ಬೆಳೆವಣಿಗೆಯಲ್ಲಿ ಕಂಡುಬರುವ ವ್ಯತ್ಯಾಸಗಳನ್ನು ಕಡಿಮೆ ಮಾಡುವ ಕಡೆಗೆ ವಿಶೇಷ ಗಮನ ಹರಿಸಲಾಗುವುದು. ಶಾಲೆಗಳಲ್ಲಿ ಮಕ್ಕಳು ಓದುವ ಪ್ರಮಾಣವನ್ನು ಹೆಚ್ಚಿಸುವ ಪ್ರಯತ್ನಗಳ ಒಂದು ಭಾಗವಾಗಿ ಅಗತ್ಯವಿರುವ ಕೆಲವು ಆಯ್ದ ಪ್ರದೇಶಗಳಲ್ಲಿ ವಿಶೇಷ ವಿದ್ಯಾರ್ಥಿ ವಸತಿ ನಿಲಯಗಳನ್ನು ಸ್ಥಾಪಿಸಲಾಗುವುದು, ಸೇತು ಶಿಕ್ಷಣಗಳನ್ನು (bridge courses) ಏರ್ಪಡಿಸಲಾಗುವುದು ಮಾತ್ರವಲ್ಲದೆ ಶುಲ್ಕ ವಿನಾಯತಿ ಮತ್ತು ವಿದ್ಯಾರ್ಥಿವೇತನಗಳನ್ನು ಎಲ್ಲ ಎಸ್.ಇ.ಡಿ.ಜಿ.ಗಳಿಂದ ಬರುವ ಪ್ರತಿಭಾಸಂಪನ್ನರಾದ ಮತ್ತು ಕೌಶಲಗಳನ್ನು ಹೊಂದಿರುವ ವಿದ್ಯಾರ್ಥಿಗಳಿಗೆ ದೊಡ್ಡ ಪ್ರಮಾಣದಲ್ಲಿ ನೀಡಲಾಗುವುದು. ಅದರಲ್ಲೂ ವಿಶೇಷವಾಗಿ ಸೆಕಂಡರಿ ಶಿಕ್ಷಣದ ಹಂತದಲ್ಲಿ ಅವರಿಗೆ ಈ ಸೌಲಭ್ಯಗಳನ್ನು ಒದಗಿಸುವುದರಿಂದ ಉನ್ನತ ಶಿಕ್ಷಣದಲ್ಲಿ ಪ್ರವೇಶ ಪಡೆಯಲು ಹೆಚ್ಚು ಅನುಕೂಲವಾಗುತ್ತದೆ.

6.17 ರಕ್ಷಣಾ ಸಚಿವಾಲಯದ ಆಶ್ರಯದಲ್ಲಿ ರಾಜ್ಯ ಸರ್ಕಾರಗಳು ತಮ್ಮ ಸೆಕಂಡರಿ ಮತ್ತು ಹೈಯರ್ ಸೆಕಂಡರಿ ಶಾಲೆಗಳಲ್ಲಿ ಎನ್.ಸಿ.ಸಿ. ವಿಭಾಗಗಳನ್ನು ತೆರೆಯಲು ಉತ್ತೇಜನ ನೀಡಬಹುದು. ಬುಡಕಟ್ಟುಗಳ ಜನರು ಹೆಚ್ಚಾಗಿರುವ ಪ್ರದೇಶಗಳಲ್ಲಿರುವ ಶಾಲೆಗಳಲ್ಲೂ ಇವುಗಳನ್ನು ತೆರೆಯಬಹುದಾಗಿದೆ. ವಿದ್ಯಾರ್ಥಿಗಳ ಸಹಜ ಕೌಶಲಗಳನ್ನು ಮತ್ತು ಅಪರೂಪವಾದ ಸಾಮರ್ಥ್ಯಗಳನ್ನು ಬಳಕೆಮಾಡಿಕೊಳ್ಳುವ ನಿಟ್ಟಿನಲ್ಲಿ ಅವರನ್ನು ಉತ್ತೇಜಿಸಲು ಹಾಗೂ ಆ ಮೂಲಕ ಅವರಿಗೆ ರಕ್ಷಣಾ ಸೇನಾ ಬಲಗಳಲ್ಲಿ ಯಶಸ್ವಿಯಾದ ಉದ್ಯೋಗಗಳನ್ನು ಪಡೆದುಕೊಳ್ಳಲು ಆಸಕ್ತರಾಗುವಂತೆ ಮಾಡಬಹುದು.

6.18 ಎಲ್ಲ ಬಗೆಯ ವಿದ್ಯಾರ್ಥಿವೇತನಗಳನ್ನು ಮತ್ತಿತರ ಅವಕಾಶಗಳನ್ನು ಮತ್ತು ಯೋಜನೆಗಳನ್ನು ಎಸ್.ಇ.ಡಿ.ಜಿ.ವರ್ಗಗಳಿಂದ ಬರುವ ವಿದ್ಯಾರ್ಥಿಗಳು ಸುಲಭವಾಗಿ ಬಳಸಿಕೊಳ್ಳಲು ಸಾಧ್ಯವಾಗುವಂತೆ ಅವುಗಳನ್ನು ಸಂಯೋಜಿಸಲಾಗುವುದು ಹಾಗೂ ಆ ಸಲುವಾಗಿ ಒಂದು ಏಕೈಕವಾದ ಏಜೆನ್ಸಿಯನ್ನು ಮತ್ತು ವೆಬ್ ತಾಣವನ್ನು ರೂಪಿಸಲಾಗುವುದು. ಇದರಿಂದಾಗಿ ಎಲ್ಲ ವಿದ್ಯಾರ್ಥಿಗಳು ತಮ್ಮ ತಮ್ಮ ಅರ್ಹತೆಗೆ ಅನುಸಾರವಾಗಿ ಈ ಬಗ್ಗೆ ತಿಳಿವಳಿಕೆ ಪಡೆದು 'ಏಕ ಗವಾಕ್ಷ ವ್ಯವಸ್ಥೆ' ಯ ಮೂಲಕ ಇವುಗಳಿಗೆ ಸುಲಭವಾಗಿ ಅರ್ಜಿಸಲ್ಲಿಸುವಂತೆ ಸಾಧ್ಯವಾಗಬೇಕು.

6.19 ಈ ಮೇಲೆ ಹೇಳಿದ ಎಲ್ಲ ನೀತಿಗಳು ಮತ್ತು ಉದ್ದೇಶಗಳು ಇವುಗಳ ತಾರ್ಕಿಕವಾದ ಗುರಿ ಎಲ್ಲ ಎಸ್.ಇ.ಡಿ.ಜಿ.ಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ ಸಮಾವರ್ತನ ಮತ್ತು ಸಮಾನತೆಯ ಆಧಾರದ ಮೇಲೆ ಅವಕಾಶಗಳು ದೊರಕಬೇಕೆಂಬುದೇ ಆಗಿದೆ. ಆದರೆ ಅವು ಅಷ್ಟೇ ಸಾಲದು. ಇದರ ಜೊತೆಗೆ ಆಗಬೇಕಾದ ಇನ್ನೊಂದು ಸಂಗತಿ ಎಂದರೆ ಶಾಲಾ ಸಂಸ್ಕೃತಿಯಲ್ಲಿ ಬದಲಾವಣೆ ಉಂಟಾಗಬೇಕು. ಅಧ್ಯಾಪಕರು, ಪ್ರಿನ್ಸಿಪಾಲರುಗಳು, ಆಡಳಿತಗಾರರು, ಸಲಹೆಗಾರರು, ವಿದ್ಯಾರ್ಥಿಗಳು ಮೊದಲಾಗಿ ಶಾಲಾಶಿಕ್ಷಣ ವ್ಯವಸ್ಥೆಯಲ್ಲಿ ಭಾಗಿಗಳಾಗುವ ಎಲ್ಲರೂ ಎಲ್ಲ ವಿದ್ಯಾರ್ಥಿಗಳ ಬಗೆಗೆ, ಸಮಾವರ್ತನೆ ಮತ್ತು ಸಮಾನತೆ ಈ ಪರಿಕಲ್ಪನೆಗಳ ಬಗೆಗೆ, ಎಲ್ಲ ವ್ಯಕ್ತಿಗಳ ಗೌರವಾದರಗಳ ಮತ್ತು ಖಾಸಗಿತನಗಳ ಬಗ್ಗೆ ಸಂವೇದನಶೀಲರಾಗುವುದು ಅಗತ್ಯ. ಇಂಥ ಶೈಕ್ಷಣಿಕ ಸಂಸ್ಕೃತಿ ವಿದ್ಯಾರ್ಥಿಗಳು ಸಬಲೀಕೃತ ವ್ಯಕ್ತಿಗಳಾಗಿ ಬೆಳೆಯಲು ಅತ್ಯುತ್ತಮವಾದ ಅವಕಾಶಗಳನ್ನು ಒದಗಿಸುವ ದಾರಿದೀಪವಾಗುತ್ತದೆ. ಇಂಥ ಸಬಲೀಕರಣಗೊಂಡ ವ್ಯಕ್ತಿಗಳು ಮುಂದೆ ಸಮಾಜದಲ್ಲಿ ಅತ್ಯಂತ ಅಗತ್ಯವಿರುವ, ದುರ್ಬಲರಾದ ನಾಗರಿಕರು ಅನುಕೂಲಗಳನ್ನು ಒದಗಿಸಿಕೊಡುವ ಜವಾಬ್ದಾರಿ ಹೊರಲು ಸಮರ್ಥರಾಗಬಲ್ಲರು. ಹಾಗೆಯೆ ಅಧ್ಯಾಪಕ ಶಿಕ್ಷಣದೊಂದಿಗೆ ಸಮಾವರ್ತನೆ ಅಥವಾ ಒಳಗೊಳ್ಳುವಿಕೆ ಮತ್ತು ಸಮಾನತೆಗಳನ್ನು

ಪ್ರಮುಖವಾದ ಕೀಲಿಕೈ ಸಂಗತಿಗಳಾಗಿ ಪರಿಗಣಿಸಲಾಗುವುದು. (ಅಂತೆಯೆ ಶಾಲೆಗಳಿಗಾಗಿ ಬೇಕಾಗುವ ಎಲ್ಲ ಬಗೆಯ ಮುಂದಾಳುತನ, ಆಡಳಿತ ಸಂಬಂಧವಾದ ಮತ್ತು ಇನ್ನಿತರ ಸ್ಥಾನಗಳಿಗೆ ಈ ಬಗೆಯ ತರಬೇತಿಯನ್ನು ಜಾರಿಗೊಳಿಸಲಾಗುವುದು). ವಿದ್ಯಾರ್ಥಿಗಳ ಸಲುವಾಗಿ ಆದರ್ಶರಾದ ಅಧ್ಯಾಪಕರನ್ನು ಮತ್ತು ಶಾಲಾ ಆಡಳಿತಗಾರರನ್ನು ರೂಪಿಸುವ ಉದ್ದೇಶದಿಂದ ಎಸ್.ಇ.ಡಿ.ಜಿ. ವರ್ಗಗಳಿಗೆ ಸೇರಿದ ಮೇಲುಮಟ್ಟದ ಅರ್ಹತೆಯುಳ್ಳ ಅಧ್ಯಾಪಕರನ್ನು ಮತ್ತು ಮುಂದಾಳುಗಳನ್ನು ನೇಮಕ ಮಾಡಿಕೊಳ್ಳುವ ಪ್ರಯತ್ನ ಮಾಡಲಾಗುವುದು.

6.20 ಅಧ್ಯಾಪಕರು, ತರಬೇತಿ ಪಡೆದ ಸಮಾಜ ಕಾರ್ಯಕರ್ತರು ಹಾಗೂ ಸಲಹೆಗಾರರು ಇವರ ಮೂಲಕ ಮಾತ್ರವಲ್ಲದೆ ತದನುಸಾರವಾಗಿ ಉಂಟಾಗುತ್ತಿರುವ ಬದಲಾವಣೆಗಳ ದೃಷ್ಟಿಯಿಂದಲೂ ವಿದ್ಯಾರ್ಥಿಗಳನ್ನು ಹೆಚ್ಚು ಸಂವೇದನಶೀಲರಾಗುವಂತೆ ಮಾಡಲಾಗುವುದು. ಸಮಾವರ್ತ ಸ್ವರೂಪದ ಶಾಲಾಪಠ್ಯಕ್ರಮವೊಂದನ್ನು ರೂಪಿಸಲು ಇದರಿಂದ ಸಾಧ್ಯವಾಗುವುದು. ಸಾಧ್ಯವಾದಷ್ಟು ಶೀಘ್ರದಲ್ಲಿ ಶಾಲಾಪಠ್ಯಕ್ರಮದಲ್ಲಿ ಎಲ್ಲ ವ್ಯಕ್ತಿಗಳಿಗೆ ಗೌರವ, ಸಹಾನುಭೂತಿ, ಸಹಿಷ್ಣುತೆ, ಮಾನವ ಹಕ್ಕುಗಳು, ಲಿಂಗಸಮಾನತೆ, ಅಹಿಂಸೆ, ಜಾಗತಿಕ ಪ್ರಜಾಭಾವನೆ, ಸಮಾವರ್ತನೆ ಮತ್ತು ಸಮಾನತೆ ಇಂಥ ಮಾನವೀಯ ಮೌಲ್ಯಗಳನ್ನು ಒಳಗೊಂಡ ಸಾಮಗ್ರಿಗಳನ್ನು ಸೇರ್ಪಡೆ ಮಾಡಲಾಗುವುದು. ಬೇರೆಬೇರೆ ಸಂಸ್ಕೃತಿಗಳು, ಧರ್ಮಗಳು, ಭಾಷೆಗಳು, ಲಿಂಗಅಸ್ಮಿತೆಗಳು ಇವೇ ಮುಂತಾದ ಬಗೆಯ ವೈವಿಧ್ಯಗಳ ವಿಚಾರವಾಗಿ ಸಂವೇದನಶೀಲರಾಗಲು ಮತ್ತು ಅವುಗಳ ಬಗೆಗೆ ಶ್ರದ್ಧಾಸಕ್ತಿಗಳನ್ನು ಬೆಳೆಸುವ ದಿಶೆಯಲ್ಲಿ ಇನ್ನೂ ಹೆಚ್ಚು ವಿವರವಾದ ಅರಿವಿನ ಮಾಹಿತಿಗಳನ್ನು ಪಠ್ಯಕ್ರಮದಲ್ಲಿ ಸೇರಿಸಲಾಗುವುದು. ಶಾಲಾ ಪಠ್ಯಕ್ರಮದಲ್ಲಿ ಕಂಡುಬರುವ ಯಾವುದೇ ಬಗೆಯ ವಿವಾದಾಸ್ಪದ ಮತ್ತು ಚರ್ವಿತಚರ್ವಣವಾದ ವಿಷಯಗಳನ್ನು ತೆಗೆದು ಹಾಕಲಾಗುವುದು ಹಾಗೂ ಎಲ್ಲ ಸಮುದಾಯಗಳಿಗೂ ಸಂಗತವಾಗುವ ಮತ್ತು ಸಂಬಂಧಪಡಬಹುದಾದ ಸಾಮಗ್ರಿಗಳನ್ನು ಪಠ್ಯಕ್ರಮದಲ್ಲಿ ಅಳವಡಿಸಲಾಗುವುದು.

7. ಶಾಲಾ ಸಂಕೀರ್ಣಗಳ/ಸಮುಚ್ಚಯಗಳ ಮೂಲಕ ಸಮರ್ಥವಾದ ಸಂಪನ್ಮೂಲ ಯೋಜನೆ ಮತ್ತು ಸಮರ್ಥ ಆಡಳಿತ ನಿರ್ವಹಣೆ.

7.1 ದೇಶಾದ್ಯಂತ ಎಲ್ಲ ಪ್ರದೇಶಗಳಲ್ಲೂ ಪ್ರಾಥಮಿಕ ಶಾಲೆಗಳನ್ನು ಸ್ಥಾಪಿಸಿರುವುದರಿಂದ - ಇದು ಸರ್ವ ಶಿಕ್ಷಣ ಅಭಿಯಾನದ (ಎಸ್.ಎಸ್.ಎ.) ಅಡಿಯಲ್ಲಿ ಚಾಲಿತವಾಗಿದ್ದು ಈಗ ಸಮಗ್ರ ಶಿಕ್ಷಾ ಯೋಜನೆ ಹಾಗೂ ರಾಜ್ಯ ಸರ್ಕಾರಗಳ ವಿವಿಧ ಬಗೆಯ ಪ್ರಮುಖವಾದ ಪ್ರಯತ್ನಗಳಿಂದಾಗಿ - ಪ್ರಾಥಮಿಕ ಶಾಲಾಶಿಕ್ಷಣ ಬಹುಮಟ್ಟಿಗೆ ಸಾರ್ವತ್ರಿಕವಾಗಿ ಎಲ್ಲರಿಗೂ ಲಭ್ಯವಾದಂತಾಗಿದೆ. ಆದರೆ ಇದರಿಂದಾಗಿ ತುಂಬಾ ಸಣ್ಣದಾದ ಶಾಲೆಗಳು ಅಸಂಖ್ಯಾತವಾಗಿ ಅಸ್ತಿತ್ವಕ್ಕೆ ಬಂದಿವೆ. ಯು-ಡಿ.ಐ.ಎಸ್.ಇ. 2016-17 ದತ್ತಾಂಶಗಳ ಪ್ರಕಾರ ಭಾರತದ ಸಾರ್ವಜನಿಕ ಪ್ರಾಥಮಿಕ ಶಾಲೆಗಳ ಶೇ.28 ರಷ್ಟು ಹಾಗೂ ಭಾರತದ ಉನ್ನತ ಪ್ರಾಥಮಿಕ ಶಾಲೆಗಳ ಶೇಕಡ 14.8 ರಷ್ಟು ಭಾಗ 30ಕ್ಕೂ ಕಡಿಮೆ ಸಂಖ್ಯೆಯ ವಿದ್ಯಾರ್ಥಿಗಳನ್ನು ಹೊಂದಿವೆ. ಮೂಲಭೂತ ಶಾಲಾ ವ್ಯವಸ್ಥೆಯಲ್ಲಿ ಪ್ರತಿಯೊಂದು ಗ್ರೇಡಿನಲ್ಲಿ ಕಂಡುಬರುವ ಸರಾಸರಿ ವಿದ್ಯಾರ್ಥಿಗಳ ಸಂಖ್ಯೆ (ಪ್ರಾಥಮಿಕ ಮತ್ತು ಉನ್ನತ ಪ್ರಾಥಮಿಕ, ಅಂದರೆ ಗ್ರೇಡುಗಳು 1- 8) 14 ಆಗಿದ್ದು ಕೆಲವೆಡೆಗಳಲ್ಲಿ ತುಂಬ ಕಡಿಮೆ ಎಂದರೆ 6ಕ್ಕೆ ಇಳಿದಿದೆ. 2016-17ರಲ್ಲಿ 1,08,017ರಷ್ಟು ಒಬ್ಬರೇ ಅಧ್ಯಾಪಕರಿರುವ ಶಾಲೆಗಳು ಕಂಡುಬಂದಿದ್ದು ಅವುಗಳಲ್ಲಿ ಬಹುಪಾಲು (85743) ಗ್ರೇಡುಗಳು 1-5ರವರೆಗೆ ಇರುವ ಪ್ರಾಥಮಿಕ ಶಾಲೆಗಳಾಗಿದ್ದವು.

7.2 ಇಷ್ಟು ಸಣ್ಣ ಸಣ್ಣ ಸಂಖ್ಯೆಯ ವಿದ್ಯಾರ್ಥಿಗಳಿರುವ ಶಾಲೆಗಳ ಆರ್ಥಿಕ ನಿರ್ವಹಣೆ ಸಾಕಷ್ಟು ದುಸ್ತರವಾಗಿದ್ದು, ಆಡಳಿತಾತ್ಮಕವಾಗಿ ಕೂಡ ಒಳ್ಳೆಯ ಶಾಲೆಗಳನ್ನು ನಡೆಸುವುದು ಸಂಕೀರ್ಣ ಸಮಸ್ಯೆಗಳಿಂದ ಕೂಡಿದೆ. ಇಂತಹ ಶಾಲೆಗಳಿಗೆ ಅಧ್ಯಾಪಕರನ್ನು ನಿಯೋಜಿಸುವುದು ಹಾಗೂ ಅತ್ಯಾವಶ್ಯಕವಾದ ಭೌತಿಕ ಸಂಪನ್ಮೂಲಗಳನ್ನು ಸೂಕ್ತವಾಗಿ ಒದಗಿಸುವುದು ಕಷ್ಟಕರವಾಗಿದೆ. ಅಧ್ಯಾಪಕರು ಒಂದೇ ವೇಳೆಯಲ್ಲಿ ಬೇರೆ ಬೇರೆ ಗ್ರೇಡುಗಳಿಗೆ ಪಾಠ ಹೇಳಬೇಕಾಗಿ ಬಂದಿದೆ, ಬೇರೆ ಬೇರೆ ವಿಷಯಗಳನ್ನು ಬೋಧಿಸಬೇಕಾಗಿ ಬಂದಿದೆ, ತಮಗೆ ಅರಿವಿಲ್ಲದಿರುವ, ಹಿನ್ನೆಲೆಯಿಲ್ಲದಿರುವ ವಿಷಯಗಳನ್ನು ಕೂಡ ನಿರ್ವಹಿಸಬೇಕಾಗಿ ಬಂದಿದೆ. ಸಂಗೀತ, ಕಲೆಗಳು, ಕ್ರೀಡೆಗಳು ಇಂಥ ಪ್ರಮುಖ ವಿಷಯಗಳನ್ನು ಕೂಡ ಬೋಧಿಸದೆ ಕೈ ಬಿಡುವ ಪರಿಸ್ಥಿತಿ ಎದುರಾಗಿದೆ. ಹಾಗೆಯೆ ಪ್ರಯೋಗಶಾಲೆಗಳು, ಕ್ರೀಡಾ ಸಲಕರಣೆಗಳು ಮತ್ತು ಗ್ರಂಥಾಲಯದ ಪುಸ್ತಕಗಳು ಇಂಥ ಭೌತಿಕ ಸಂಪನ್ಮೂಲಗಳು ಕೂಡ ಬಹಳಷ್ಟು ಶಾಲೆಗಳಲ್ಲಿ ಇಲ್ಲವಾಗಿವೆ.

7.3 ಸಣ್ಣ ಸಣ್ಣ ಶಾಲೆಗಳು ಪ್ರತ್ಯೇಕವಾಗಿ ದೂರದಲ್ಲಿರುವುದು ಶಿಕ್ಷಣದ ಮೇಲೆ ಮತ್ತು ಬೋಧನೆ- ಕಲಿಕೆಯ ಪ್ರಕ್ರಿಯೆಯ ಮೇಲೆ ನಕಾರಾತ್ಮಕ ಪರಿಣಾಮಗಳನ್ನು ಉಂಟುಮಾಡಿದೆ. ಅಧ್ಯಾಪಕರು ಒಟ್ಟು ಸಮುದಾಯಗಳಲ್ಲಿ, ತಂಡಗಳಲ್ಲಿ ಉತ್ತಮವಾಗಿ ಕೆಲಸ ನಿರ್ವಹಿಸಬಲ್ಲರು. ವಿದ್ಯಾರ್ಥಿಗಳ ವಿಷಯದಲ್ಲೂ ಈ ಮಾತು ಸತ್ಯ. ಅಂತೆಯೆ ಸಣ್ಣಸಣ್ಣ ಶಾಲೆಗಳು ಆಡಳಿತ ಮತ್ತು ನಿರ್ವಹಣೆ ಇವುಗಳ ದೃಷ್ಟಿಯಿಂದಲೂ ವ್ಯವಸ್ಥಾಸಂಬಂಧವಾದ ಸಮಸ್ಯೆಗಳನ್ನು ಒಡ್ಡುತ್ತವೆ. ಭೌಗೋಳಿಕವಾಗಿ ಚೆದುರಿಹೋಗಿರುವುದು, ಸುಲಭವಾಗಿ ತಲುಪಲು ಸಾಧ್ಯವಾಗದಂತಹ ಸ್ಥಿತಿಗತಿಗಳು ಹಾಗೂ ಅಪಾರ ಸಂಖ್ಯೆಯ ಶಾಲೆಗಳು ಇಂತಹ ಕಾರಣಗಳಿಂದ ಎಲ್ಲ ಶಾಲೆಗಳಿಗೂ ಸಮಾನವಾದ

ಸೌಕರ್ಯಗಳನ್ನು ಒದಗಿಸುವುದು ಕಷ್ಟಸಾಧ್ಯವಾಗಿದೆ. ಶಾಲೆಗಳ ಸಂಖ್ಯೆ ಹೆಚ್ಚಾಗಿ ಇರುವ ಅಥವಾ ಸಮಗ್ರ ಶಿಕ್ಷಾ ಯೋಜನೆಯ ಏಕೀಕೃತ ವಿನ್ಯಾಸದ ಕಾರಣದಿಂದಾಗಿ ಇಂತಹ ಶಾಲೆಗಳ ಆಡಳಿತಾತ್ಮಕ ವಿನ್ಯಾಸದಲ್ಲಿ ಏಕರೂಪತೆಯನ್ನು ಕಂಡುಕೊಳ್ಳಲು, ರೂಢಿಸಲು ಸಾಧ್ಯವಾಗುತ್ತಿಲ್ಲ.

7.4 ಇಂತಹ ಶಾಲೆಗಳನ್ನು ಒಟ್ಟುಗೂಡಿಸಬೇಕೆಂಬ ವಿಚಾರ ಅನೇಕ ವೇಳೆ ಚರ್ಚೆಗೆ ಒಳಗಾಗಿರುವ ಸಂಗತಿಯಾದರೂ ಈ ಆಯ್ಕೆಯನ್ನು ತುಂಬ ವಿವೇಚನೆಯಿಂದ ಕೈಗೊಳ್ಳಬೇಕು. ಇಂಥ ಶಾಲೆಗಳನ್ನು ತಲುಪುವುದರ ಮೇಲೆ ಇದರಿಂದ ಗಂಭೀರ ಪರಿಣಾಮ ಆಗುವುದಿಲ್ಲವೆಂದು ದೃಢಪಡಿಸಿಕೊಂಡು ಈ ಕೆಲಸಕ್ಕೆ ಕೈಹಾಕಬೇಕು. ಒಂದು ವೇಳೆ ಇಂತಹ ಕ್ರಮಗಳನ್ನು ಕೈಗೊಂಡರೂ ಇದರ ಪರಿಣಾಮ ಸೀಮಿತ ಸಂಖ್ಯೆಯಲ್ಲಿ ಶಾಲೆಗಳನ್ನು ಒಟ್ಟುಗೂಡಿಸುವುದು ಆಗುತ್ತದೆಯೆ ವಿನಾ ಹೆಚ್ಚು ಸಂಖ್ಯೆಯಲ್ಲಿರುವ ಸಣ್ಣ ಸಣ್ಣ ಶಾಲೆಗಳು ಮುಂದೊಡ್ಡುವ ಸಂರಚನೆಗೆ ಸಂಬಂಧಪಟ್ಟ ಸಮಸ್ಯೆಗಳಿಗೆ ಮತ್ತು ಸವಾಲುಗಳಿಗೆ ಇದರಿಂದ ಪರಿಹಾರ ದೊರೆಯಲಾರದೇನೊ.

7.5 ರಾಜ್ಯಸರ್ಕಾರಗಳಿಂದ/ಕೇಂದ್ರಾಡಳಿತ ಪ್ರದೇಶಗಳಿಂದ ಈ ಸವಾಲುಗಳು 2025ರ ವೇಳೆಗೆ ಶಾಲೆಗಳನ್ನು ಒಟ್ಟುಗೂಡಿಸುವ ಅಥವಾ ಸೂಕ್ತವಾಗಿ ವರ್ಗೀಕರಿಸುವ ನವನವೀನ ಕ್ರಮಗಳ ಮೂಲಕ ಪರಿಹಾರವನ್ನು ಕಂಡುಕೊಳ್ಳಲಿವೆ. ಈ ರೀತಿಯ ಕ್ರಮಗಳನ್ನು ಕೈಗೊಳ್ಳುವ ಉದ್ದೇಶದಿಂದ ಸಾಧಿಸಬಹುದಾದ ಸಂಗತಿಗಳು ಏನೆಂದರೆ ಪ್ರತಿಯೊಂದು ಶಾಲೆಯಲ್ಲಿಯೂ (ಅ) ಕಲೆ, ಸಂಗೀತ, ವಿಜ್ಞಾನ, ಕ್ರೀಡೆಗಳು, ಭಾಷೆಗಳು, ವೃತ್ತಿಕೌಶಲ ಸಂಬಂಧವಾದ ವಿಷಯಗಳು ಇವೇ ಮುಂತಾದ ಎಲ್ಲ ವಿಷಯಗಳನ್ನು ಬೋಧಿಸುವ (ಹಂಚಿಕೆ ಆಧಾರದ ಮೇಲಾಗಲಿ ಅಥವಾ ಬೇರೆ ರೀತಿಯಿಂದಾಗಲಿ) ಸಲಹೆಗಾರರು/ ತರಬೇತಿ ಪಡೆದ ಸಮಾಜ ಕಾರ್ಯಕರ್ತರು ಮತ್ತು ಅಧ್ಯಾಪಕರು ಇರುವಂತೆ ನೋಡಿಕೊಳ್ಳಲಾಗುತ್ತದೆ. (ಆ) ಗ್ರಂಥಾಲಯ, ವಿಜ್ಞಾನ ಪ್ರಯೋಗಶಾಲೆಗಳು, ಕಂಪ್ಯೂಟರ್ ಪ್ರಯೋಗಶಾಲೆಗಳು, ಕೌಶಲ ಪ್ರಯೋಗಶಾಲೆಗಳು, ಆಟದ ಮೈದಾನಗಳು, ಕ್ರೀಡಾ ಸಲಕರಣೆಗಳು ಮತ್ತಿತರ ಸೌಲಭ್ಯಗಳು ಮತ್ತು ಸಂಪನ್ಮೂಲಗಳು (ಹಂಚಿಕೆ ಆಧಾರದ ಮೇಲಾಗಲಿ ಅಥವಾ ಬೇರೆ ಯಾವುದೇ ರೀತಿಯಿಂದಾಗಲಿ) ಲಭ್ಯವಾಗುವಂತೆ ವ್ಯವಸ್ಥೆ ಮಾಡಲಾಗುತ್ತದೆ. (ಇ) ಅಧ್ಯಾಪಕರು, ವಿದ್ಯಾರ್ಥಿಗಳು ಮತ್ತು ಶಾಲೆಗಳು ಒಬ್ಬಂಟಿ ಎಂಬ ಮನೋಭಾವ ವನ್ನು ತೊಡೆದುಹಾಕುವಂತೆ ಅನುಕೂಲ ಮಾಡಿಕೊಡುವ ಸಲುವಾಗಿ ಜಂಟಿ ವೃತ್ತಿಪರ ಅಭಿವೃದ್ಧಿ ಕಾರ್ಯಕ್ರಮಗಳು, ಬೋಧನ-ಕಲಿಕೆ ಸಾಮಗ್ರಿಗಳ ಹಂಚಿಕೆ, ಕಲೆ ಮತ್ತು ವಿಜ್ಞಾನ ಪ್ರದರ್ಶನಗಳಂತಹ ಜಂಟಿ ಹಾಗೂ ಸಾಮೂಹಿಕ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು, ಜಂಟಿ ಸಾಮಗ್ರಿ ಸಿದ್ಧತೆ, ಕ್ರೀಡಾ ಕೂಟಗಳು, ಕ್ವಿಜ್‌ಗಳು ಮತ್ತು ಚರ್ಚಾ ಸ್ಪರ್ಧೆಗಳು, ವಿಶೇಷ ಪ್ರದರ್ಶನ ಕಾರ್ಯಕ್ರಮಗಳು, ಇಂಥವನ್ನು ಏರ್ಪಡಿಸುವುದರ ಮೂಲಕ ಸಾಮುದಾಯಿಕ ಮನೋಭಾವವನ್ನು ಕಟ್ಟಿಕೊಡುವ ಪ್ರಯತ್ನ ಮಾಡಲಾಗುತ್ತದೆ. (ಈ) ಶಾರೀರಿಕ ನ್ಯೂನತೆಗಳನ್ನು ಹೊಂದಿರುವ ಮಕ್ಕಳ ಶಿಕ್ಷಣಕ್ಕಾಗಿ ಬೇರೆಬೇರೆ ಶಾಲೆಗಳ ನಡುವೆ ಸಹಕಾರ ಮತ್ತು ಬೆಂಬಲ ಗಳನ್ನು ಏರ್ಪಡಿಸುವುದು ಹಾಗೂ (ಉ) ಶಾಲಾ ವ್ಯವಸ್ಥೆಯ ಆಡಳಿತ ವ್ಯವಸ್ಥೆಯಲ್ಲಿ ಸುಧಾರಣೆ ತರುವ ಉದ್ದೇಶದಿಂದ ಎಲ್ಲ ಸೂಕ್ಷ್ಮಸ್ವರೂಪದ ತೀರ್ಮಾನಗಳನ್ನು ಪ್ರತಿಯೊಂದು ಶಾಲಾಸಮೂಹದೊಳಗೆ ಸೇವೆ ಸಲ್ಲಿಸುತ್ತಿರುವ ಪ್ರಿನ್ಸಿಪಾಲರುಗಳು, ಅಧ್ಯಾಪಕರು ಮತ್ತು ಇತರ ಮಧ್ಯಸ್ಥಗಾರರು (Stakeholders) ಕೈಗೊಳ್ಳಲು ಸಾಧ್ಯವಾಗುವಂತೆ ವಿಕೇಂದ್ರಿಸಿ ಅನುಕೂಲ ಮಾಡಿಕೊಡಲಾಗುವುದು. ಈ ಕ್ರಮವನ್ನು ಒಂದು ಸಮಾಕಲಿತ ಅರ್ಧ-ಸ್ವಾಯತ್ತ ಘಟಕವೆಂಬಂತೆ ಪರಿಗಣಿಸಿ ತಳಹದಿ ಹಂತದಿಂದ ಸೆಕಂಡರಿ ಹಂತದವರೆಗೆ ಅನ್ವಯಿಸಲಾಗುವುದು.

7.6 ಮೇಲೆ ಹೇಳಿರುವುದನ್ನು ಈಡೇರಿಸಬೇಕಾದರೆ ಸಾಧ್ಯವಾಗಬಹುದಾದ ಒಂದು ತಂತ್ರ ಎಂದರೆ ಶಾಲಾ ಸಂಕೀರ್ಣ ಎಂಬ ಹೆಸರಿನಲ್ಲಿ ಶಾಲೆಗಳನ್ನು ಜೋಡಣೆ ಮಾಡುವುದು. ಈ ಜೋಡಣೆಯಲ್ಲಿ ಐದರಿಂದ ಹತ್ತು ಕಿಲೋಮೀಟರುಗಳು ಇರುವಷ್ಟು ಪ್ರದೇಶವ್ಯಾಪ್ತಿಯಲ್ಲಿ ಒಂದು ಸೆಕಂಡರಿ ಶಾಲೆ ಮತ್ತು ಅದರ ಸುತ್ತಮುತ್ತಲೂ ಇರುವ, ಅಂಗನವಾಡಿಗಳೂ ಸೇರಿದಂತೆ, ಸೆಕಂಡರಿ ಹಂತಕ್ಕಿಂತ ಕಡಿಮೆ ಗ್ರೇಡುಗಳನ್ನು ಬೋಧಿಸುವ ಎಲ್ಲ ಶಾಲೆಗಳನ್ನು ಒಟ್ಟುಗೂಡಿಸಲಾಗುವುದು. ಈ ಸಲಹೆಯನ್ನು ಶಿಕ್ಷಣ ಆಯೋಗ (1964- 66) ಮೊದಲಿಗೆ ಮಾಡಿದ್ದು ಅದನ್ನು ಕಾರ್ಯರೂಪಕ್ಕೆ ತಂದಿರಲಿಲ್ಲ. ಸಾಧ್ಯವಾದೆಡೆಯಲ್ಲೆಲ್ಲಾ ಇಂತಹ ಸಂಕೀರ್ಣಗಳನ್ನು/ಜೋಡಣೆಗಳನ್ನು ಮಾಡುವ ವಿಚಾರವನ್ನು ಪ್ರಸಕ್ತ ಶಿಕ್ಷಣ ನೀತಿ ಒತ್ತಾಯಪೂರ್ವಕವಾಗಿ ಅನುಮೋದಿಸುತ್ತದೆ. ಹೆಚ್ಚು ಸಂಪನ್ಮೂಲ ಸಾಮರ್ಥ್ಯ, ಹೆಚ್ಚು ಪರಿಣಾಮಕಾರಿಯಾದ ಕಾರ್ಯನಿರ್ವಹಣೆ, ಸಹಯೋಗ, ಮುಂದಾಳುತನ, ಆಡಳಿತ ಸುಸೂತ್ರತೆ ಹಾಗೂ ಸಂಕೀರ್ಣದಲ್ಲಿರುವ ಶಾಲೆಗಳ ಉತ್ತಮ ನಿರ್ವಹಣೆ ಇವು ಶಾಲಾ ಸಂಕೀರ್ಣಗಳನ್ನು/ ಜೋಡಣೆಗಳನ್ನು ಮಾಡುವ ಉದ್ದೇಶವಾಗಿದೆ.

7.7 ಶಾಲಾ ಸಂಕೀರ್ಣಗಳನ್ನು/ಜೋಡಣೆಗಳನ್ನು ಸ್ಥಾಪಿಸಿ ಇಂತಹ ಸಂಕೀರ್ಣಗಳ ನಡುವೆ ಸಂಪನ್ಮೂಲಗಳನ್ನು ಹಂಚಿಕೆಮಾಡುವ ಕ್ರಮದಿಂದ ಇನ್ನೂ ಹಲವಾರು ಬಗೆಯ ಪ್ರಯೋಜನಗಳು ದೊರಕುತ್ತವೆ. ಶಾರೀರಿಕ ನ್ಯೂನತೆಗಳನ್ನು ಹೊಂದಿರುವ ಮಕ್ಕಳಿಗೆ ಸುಧಾರಿಸಿದ ಹಾಗೂ ಇನ್ನೂ ಹೆಚ್ಚಿನ ಪ್ರಮಾಣದ ಬೆಂಬಲವನ್ನು ನೀಡುವುದು, ಶಾಲಾ ಸಂಕೀರ್ಣಗಳ ನಡುವೆ ಕೂಡ ವಿಷಯ-ಕೇಂದ್ರಿತ ಕ್ಲಬ್ಬುಗಳನ್ನು ಮತ್ತು ಶೈಕ್ಷಣಿಕ/ಕ್ರೀಡಾ/ಕಲಾ/ಕೌಶಲ ಸಂಬಂಧಿತವಾದ ಚಟುವಟಿಕೆಗಳನ್ನು ಏರ್ಪಡಿಸುವುದು, ಬೇರೆಬೇರೆ ಅಧ್ಯಾಪಕರ ಸೇವೆಯನ್ನು ಹಂಚಿಕೆಯ ಮೂಲಕ ದೊರಕಿಸಿಕೊಂಡು ಕಲೆ, ಸಂಗೀತ, ಭಾಷೆ, ವೃತ್ತಿಪರ ವಿಷಯಗಳು, ದೈಹಿಕ ಶಿಕ್ಷಣ ಮತ್ತಿತರ ವಿಷಯಗಳನ್ನು ತರಗತಿಗಳನ್ನು ನಡೆಸುವುದು, ವರ್ಚ್ಯುಯಲ್ ತರಗತಿಗಳನ್ನು ನಡೆಸುವ ಸಲುವಾಗಿ ಮಾಹಿತಿ ಮತ್ತು

ತಂತ್ರಜ್ಞಾನಾಧಾರಿತ ಉಪಕರಣಗಳನ್ನು (ICT tools) ಬಳಕೆ ಮಾಡುವುದು, ಸಾಮಾಜಿಕ ಕಾರ್ಯಕರ್ತರು ಮತ್ತು ಸಲಹೆಗಾರರ ನೆರವನ್ನು ಉಪಯೋಗಿಸಿಕೊಳ್ಳುವುದರ ಮೂಲಕ ಉತ್ತಮ ರೀತಿಯಲ್ಲಿ ವಿದ್ಯಾರ್ಥಿಗಳಿಗೆ ಬೆಂಬಲ ನೀಡುವುದು, ಅವರನ್ನು ಶಾಲೆಗಳಿಗೆ ಸೇರಿಸಿಕೊಳ್ಳುವುದು, ಹಾಜರಾತಿ ಹಾಗೂ ಸೂಕ್ತವಾದ ರೀತಿಯಲ್ಲಿ ಓದುಬರೆಹಗಳ ನಿರ್ವಹಣೆ ಇವನ್ನೆಲ್ಲ ಮಾಡಲು ಸಾಧ್ಯವಾಗುವುದು. ಅಂತೆಯೆ, ಈ ಮೊದಲಿಗೆ ಇದ್ದ ಕೇವಲ ಶಾಲಾ ವ್ಯವಸ್ಥಾಪನ ಸಮಿತಿಗಳ (School Management Committees) ಬದಲಾಗಿ ಶಾಲಾಸಂಕೀರ್ಣ ವ್ಯವಸ್ಥಾಪನ ಸಮಿತಿಗಳನ್ನು (School Complex Management Committees) ಸ್ಥಾಪನೆ ಮಾಡಿ ಇನ್ನೂ ಉತ್ತಮವಾದ ರೀತಿಯಲ್ಲಿ ಶಾಲೆಗಳ ಆಡಳಿತ, ಉಸ್ತುವಾರಿ, ಒಟ್ಟಾರೆ ಮೇಲ್ವಿಚಾರಣೆ, ಹೊಸ ಬಗೆಯ ಆಲೋಚನಾ ಕ್ರಮಗಳು, ಅವುಗಳ ಕಾರ್ಯಾಚರಣೆ ಇಂಥವನ್ನೆಲ್ಲ ಇವುಗಳ ಹಿತಾಸಕ್ತಿಗಳ ಬಗೆಗೆ ಕಾಳಜಿ ಇರುವ ಸ್ಥಳೀಯರ ನೆರವಿನಿಂದ ನಡೆಸಿಕೊಂಡು ಹೋಗಲು ಅನುಕೂಲವಾಗುತ್ತದೆ. ಶಾಲೆಗಳ, ಶಾಲಾ ಮುಖಂಡರುಗಳ, ಅಧ್ಯಾಪಕರ, ವಿದ್ಯಾರ್ಥಿಗಳ, ಬೆಂಬಲ ಒದಗಿಸುವ ಸಿಬ್ಬಂದಿಯ, ತಂದೆತಾಯಿಗಳ ಮತ್ತು ಪೋಷಕರ ಹಾಗೂ ಸ್ಥಳೀಯ ನಾಗರಿಕರ ಸಹಯೋಗದಿಂದ ಇಂತಹ ವಿಸ್ತೃತವಾದ ಶಾಲಾ ಸಮುದಾಯಗಳನ್ನು ಏರ್ಪಡಿಸುವುದರಿಂದ ಶಾಲಾ ವ್ಯವಸ್ಥೆಗೆ ಸಮರ್ಥವಾದ ರೀತಿಯಲ್ಲಿ ಸಂಪನ್ಮೂಲಗಳನ್ನು ಬಳಸಿಕೊಳ್ಳುವುದರ ಮೂಲಕ ಹೆಚ್ಚಿನ ಶಕ್ತಿ ಸಾಮರ್ಥ್ಯಗಳು ಮೂಡಿದಂತಾಗುತ್ತದೆ.

7.8 ಶಾಲಾ ಸಂಕೀರ್ಣಗಳನ್ನು/ಜೋಡಣೆಗಳನ್ನು ಮಾಡುವುದರಿಂದ ಶಾಲೆಗಳ ಆಡಳಿತ ನಿರ್ವಹಣೆ ಉತ್ತಮವಾಗುತ್ತದೆ ಮತ್ತು ಇನ್ನೂ ಹೆಚ್ಚು ಪರಿಣಾಮಕಾರಿಯಾಗುತ್ತದೆ. ಮೊಟ್ಟಮೊದಲಿಗೆ, ಡಿ.ಎಸ್.ಇ. ಶಾಲಾ ಸಂಕೀರ್ಣ/ಜೋಡಣೆಗೆ ಅಧಿಕಾರವನ್ನು ವರ್ಗಾಯಿಸುವುದು ಹಾಗೂ ಇದರಿಂದ ಆ ಸಂಕೀರ್ಣ/ಜೋಡಣೆ ಒಂದು ಅರ್ಧ-ಸ್ವಾಯತ್ತ ಘಟಕದಂತೆ ಕೆಲಸ ಮಾಡತೊಡಗುವುದು. ಜಿಲ್ಲಾ ಶಿಕ್ಷಣಾಧಿಕಾರಿ (ಡಿ.ಇ.ಓ.) ಮತ್ತು ಕ್ಷೇತ್ರ ಶಿಕ್ಷಣ ಅಧಿಕಾರಿ (ಬಿ.ಇ.ಓ) ಇವರು ಪ್ರತಿಯೊಂದು ಶಾಲಾಸಂಕೀರ್ಣ/ಜೋಡಣೆ ಭೇಟಿನೀಡಿ ಅದನ್ನು ಒಂದು ಪ್ರತ್ಯೇಕ ಘಟಕವಾಗಿ ಪರಿಗಣಿಸಿ ಅದರ ಕಾರ್ಯನಿರ್ವಹಣೆಯನ್ನು ಸುಗಮಗೊಳಿಸುವರು. ಡಿ. ಎಸ್.ಇ.ಯಿಂದ ವಹಿಸಿಕೊಡಲಾದ ಕೆಲವು ಕೆಲಸಗಳನ್ನು ಸಂಕೀರ್ಣ ತಾನೇ ಸ್ವತಃ ನಿರ್ವಹಿಸಿ ತನ್ನ ವ್ಯಾಪ್ತಿಯಲ್ಲಿರುವ ಶಾಲೆಗಳ ವ್ಯವಹಾರವನ್ನು ನೋಡಿಕೊಳ್ಳುವುದು. ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (National Curricular Framework- NCF) ಮತ್ತು ರಾಜ್ಯ ಪಠ್ಯಕ್ರಮ ಚೌಕಟ್ಟು (State Curricular Framework-SCF) ಇವುಗಳ ನೀತಿನಿಯಮಗಳಿಗೆ ಒಳಪಟ್ಟು ಸಂಯೋಜಿತ ಶಿಕ್ಷಣವನ್ನು ಒದಗಿಸುವ ಹಾಗೂ ಬೋಧನಾಕ್ರಮಗಳು, ಪಠ್ಯಕ್ರಮಗಳು ಇವೇ ಮುಂತಾದವುಗಳ ಸಂಬಂಧವಾಗಿ ಹೊಸ ಪ್ರಯೋಗಗಳೆ ಮುಂತಾದುವುಗಳನ್ನು ನಡೆಸುವ ನಿಟ್ಟಿನಲ್ಲಿ ಡಿ.ಎಸ್.ಇ. ವತಿಯಿಂದ ಶಾಲಾಸಂಕೀರ್ಣಗಳಿಗೆ/ಜೋಡಣೆಗಳಿಗೆ ಗಮನಾರ್ಹ ಪ್ರಮಾಣದ ಸ್ವಾಯತ್ತತೆಯನ್ನು ನೀಡಲಾಗುವುದು. ಈ ಬಗೆಯ ಹೊಸ ವ್ಯವಸ್ಥೆಯಿಂದಾಗಿ ಶಾಲೆಗಳು ಹೆಚ್ಚು ಸಶಕ್ತವಾಗುತ್ತವೆ, ಹೆಚ್ಚಿನ ಸ್ವಾತಂತ್ರ್ಯ ವಹಿಸುವ ಸವಲತ್ತುಗಳನ್ನು ಪಡೆದುಕೊಳ್ಳುತ್ತವೆ ಮತ್ತು ಸಂಕೀರ್ಣ ಹೆಚ್ಚು ನವನವೀನ ಚಿಂತನೆಯೊಡನೆ ಪ್ರತಿಕ್ರಿಯಾತ್ಮಕವಾಗಿ ಕೆಲಸ ಮಾಡುವ ನಿಟ್ಟಿನಲ್ಲಿ ತನ್ನ ಕಡೆಯಿಂದ ಕೊಡುಗೆ ನೀಡಲು ಸಮರ್ಥವಾಗುತ್ತದೆ. ಇದೇ ಸಮಯದಲ್ಲಿ ಡಿ.ಎಸ್.ಇ. ಒಟ್ಟಾರೆಯಾದ ಮಟ್ಟದಲ್ಲಿ ಸಾಧನೆಮಾಡಿ ಗುರಿ ಸಾಧಿಸುವ ದಿಶೆಯಲ್ಲಿ ಕೆಲಸಮಾಡಿ ಇಡೀ ವ್ಯವಸ್ಥೆ ಪರಿಣಾಮಕಾರಿಯಾಗಿ ಕಾರ್ಯತತ್ಪರವಾಗುವಂತೆ ಮಾಡುತ್ತದೆ.

7.9 ಈ ಶಾಲಾಸಂಕೀರ್ಣಗಳ/ಜೋಡಣೆಗಳ ಮೂಲಕ ಅಲ್ಪಾವಧಿಯ ಮತ್ತು ದೀರ್ಘಾವಧಿಯ ಯೋಜನೆಗನುಗುಣವಾಗಿ ಕಾರ್ಯನಿರ್ವಹಿಸುವ ಸಂಸ್ಕೃತಿಯೊಂದನ್ನು ರೂಪಿಸಲಾಗುವುದು. ಶಾಲೆಗಳು ತಮ್ಮ ಎಸ್.ಎಂ.ಸಿ.ಗಳ ಸಹಭಾಗಿತ್ವದಲ್ಲಿ ತಮ್ಮ ಯೋಜನೆಗಳನ್ನು (ಎಸ್.ಡಿ.ಪಿ.ಗಳನ್ನು) ಅಭಿವೃದ್ಧಿಪಡಿಸುತ್ತವೆ. ಈ ಯೋಜನೆಗಳು ಅನಂತರದಲ್ಲಿ ಶಾಲಾಸಂಕೀರ್ಣಗಳನ್ನು/ಜೋಡಣೆಗಳನ್ನು ಅಭಿವೃದ್ಧಿಪಡಿಸುವ ಯೋಜನೆಗಳನ್ನು (ಎಸ್.ಸಿ.ಡಿ.ಪಿ.ಗಳನ್ನು) ರೂಪಿಸಲು ನೆಲೆಗಟ್ಟನ್ನು ಒದಗಿಸುತ್ತವೆ. ಶಾಲಾಸಂಕೀರ್ಣಕ್ಕೆ ಸೇರಿದ ವೃತ್ತಿಪರ ಶಿಕ್ಷಣಸಂಸ್ಥೆಗಳೇ ಮುಂತಾದವನ್ನು ಒಳಗೊಂಡಂತೆ ಅದರಲ್ಲಿರುವ ಎಲ್ಲ ಸಂಸ್ಥೆಗಳ ಯೋಜನೆಗಳನ್ನು ಎಸ್.ಸಿ.ಡಿ.ಪಿ. ಅಳವಡಿಸಿಕೊಳ್ಳುವುದು. ಇವುಗಳನ್ನು ಆಯಾ ಶಾಲಾ ಸಂಕೀರ್ಣದ ಪ್ರಾಂಶುಪಾಲರು ಮತ್ತು ಅಧ್ಯಾಪಕರು ಎಸ್.ಸಿ.ಎಂ.ಸಿ. ಸಹಯೋಗದಲ್ಲಿ ರೂಪಿಸುವರು ಹಾಗೂ ಇವು ಸಾರ್ವಜನಿಕವಾಗಿ ಲಭ್ಯವಾಗುವಂತೆ ಏರ್ಪಾಟು ಮಾಡಲಾಗುವುದು. ಈ ಯೋಜನೆಗಳಲ್ಲಿ ಮಾನವ ಸಂಪನ್ಮೂಲಗಳು, ಕಲಿಕೆಯ ಸಂಪನ್ಮೂಲಗಳು, ಭೌತಿಕ ಸಂಪನ್ಮೂಲಗಳು ಮತ್ತು ಮೂಲ ಸೌಕರ್ಯಗಳು, ಉತ್ತಮಪಡಿಸುವ ಉಪಕ್ರಮಗಳು, ಹಣಕಾಸು ಸಂಪನ್ಮೂಲಗಳು, ಶಾಲಾ ಸಂಸ್ಕೃತಿ ಉಪಕ್ರಮಗಳು, ಅಧ್ಯಾಪಕ ಅಭಿವೃದ್ಧಿ ಯೋಜನೆಗಳು ಹಾಗೂ ಶೈಕ್ಷಣಿಕ ಫಲಿತಗಳು ಇವೆಲ್ಲಾ ಸೇರಿರುತ್ತವೆ. ಜಾಗರೂಕ ಮತ್ತು ಸ್ಪಂದನಶೀಲ ಕಲಿಕಾ ಸಮುದಾಯಗಳನ್ನು ಅಭಿವೃದ್ಧಿಪಡಿಸುವಲ್ಲಿ ಶಾಲಾ ಸಂಕೀರ್ಣದಲ್ಲಿರುವ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಒಟ್ಟು ಸೇರಿ ಸಾಧನಾ ನಿರತರಾಗಿರಲು ಇವು ಅವಕಾಶಗಳನ್ನು ಕಲ್ಪಿಸಿಕೊಡುತ್ತವೆ. ಡಿ.ಎಸ್.ಇ. ಸಹ ಸೇರಿದಂತೆ ಶಾಲೆಯ ಹಿತಾಸಕ್ತಿಯನ್ನು ಬಯಸುವ ಮತ್ತು ಅದಕ್ಕಾಗಿ ಕೆಲಸ ಮಾಡುವ ಎಲ್ಲ ಮಂದಿಯನ್ನು ಒಟ್ಟುಗೂಡಿಸುವ ಪ್ರಾಥಮಿಕ ಕಾರ್ಯಾಚರಣೆಯ ಸಾಧಕಗಳಾಗಿ ಎಸ್.ಡಿ.ಪಿ. ಮತ್ತು ಎಸ್.ಸಿ.ಡಿ.ಪಿ. ಇವು ಕೆಲಸಮಾಡಲಿವೆ. ಎಸ್.ಎಂ.ಸಿ. ಮತ್ತು ಎಸ್.ಸಿ. ಎಂ.ಸಿ.ಗಳು ಶಾಲೆಯ ಕಾರ್ಯನಿರ್ವಹಣೆ ಮತ್ತು ಅದರ ಬೆಳೆವಣಿಗೆಯ ದಿಕ್ಕನ್ನು ಗುರುತಿಸಲು ಎಸ್.ಡಿ.ಪಿ. ಮತ್ತು ಎಸ್.ಸಿ.ಡಿ.ಪಿ. ಇವುಗಳನ್ನು ಬಳಕೆ ಮಾಡಿಕೊಳ್ಳುತ್ತವೆ ಹಾಗೂ ಆ ಮೂಲಕ ಈ

ಯೋಜನೆಗಳ ನಿರ್ವಹಣೆಯಲ್ಲಿ ನೆರವಾಗುತ್ತವೆ. ಡಿ.ಎಸ್.ಇ. ತನ್ನ ಸೂಕ್ತ ಅಧಿಕಾರಿಯ, ಉದಾಹರಣೆಗೆ ಬಿ.ಇ.ಓ. ಮೂಲಕ ಪ್ರತಿಯೊಂದು ಶಾಲಾಸಂಕೀರ್ಣದ ಎಸ್.ಸಿ.ಡಿ.ಪಿ.ಯನ್ನು ಅಂಗೀಕರಿಸಿ ದೃಢೀಕರಣ ಮಾಡುತ್ತದೆ. ಅನಂತರ ಅದು ಅಲ್ಪಾವಧಿ (1 ವರ್ಷ) ಮತ್ತು ದೀರ್ಘಾವಧಿ (3-5 ವರ್ಷಗಳು) ಎಸ್.ಸಿ.ಡಿ.ಪಿ.ಗಳನ್ನು ಸಾಧಿಸಲು ಅಗತ್ಯವಾದ ಸಂಪನ್ಮೂಲಗಳನ್ನು (ಆರ್ಥಿಕ, ಮಾನವ, ಭೌತಿಕ ಇತ್ಯಾದಿ) ಒದಗಿಸಿಕೊಡುತ್ತದೆ. ಹಾಗೆಯೆ ಅದು ಶಾಲಾಸಂಕೀರ್ಣಗಳಿಗೆ ತಮ್ಮ ತಮ್ಮ ಶೈಕ್ಷಣಿಕ ಫಲಿತಗಳನ್ನು ಸಾಧಿಸುವ ನಿಟ್ಟಿನಲ್ಲಿ ಇತರ ಎಲ್ಲ ಬಗೆಯ ಸೂಕ್ತ ಬೆಂಬಲವನ್ನು ಒದಗಿಸಲಿದೆ. ಡಿ.ಎಸ್.ಇ. ಮತ್ತು ಎಸ್.ಸಿ.ಇ.ಆರ್.ಟಿ., ಎಲ್ಲ ಶಾಲೆಗಳಿಗೂ ಸಂಬಂಧಪಟ್ಟಂತೆ ಅಭಿವೃದ್ಧಿ ಸಾಧಿಸುವ ಸಲುವಾಗಿ ನಿರ್ದಿಷ್ಟ ಮಾನದಂಡಗಳನ್ನು (ಉದಾಹರಣೆಗೆ ಹಣಕಾಸು, ಸಿಬ್ಬಂದಿ, ಪ್ರಕ್ರಿಯೆ ಇತ್ಯಾದಿ) ಮತ್ತು ಚೌಕಟ್ಟುಗಳನ್ನು ಕುರಿತ ಅಂಕಿಅಂಶಗಳನ್ನು ಮತ್ತು ಮಾಹಿತಿಗಳನ್ನು ಹಂಚಿಕೆ ಮಾಡಿಕೊಳ್ಳಬಹುದು. ಇವುಗಳನ್ನು ಕಾಲಕಾಲಕ್ಕೆ ಮರುಪರಿಶೀಲನೆ ಸಹ ಮಾಡಿಕೊಳ್ಳಬಹುದಾಗಿರುತ್ತದೆ.

7.10 ಶಾಲೆಗಳ ನಡುವೆ ಸಹಕಾರ ಮತ್ತು ಇತ್ಯಾತ್ಮಕವಾದ ಸಹಯೋಗವನ್ನು ಇನ್ನೂ ಹೆಚ್ಚು ಅಭಿವೃದ್ಧಿ ಪಡಿಸುವ ದೃಷ್ಟಿಯಿಂದ, ಸಾರ್ವಜನಿಕ/ಸರ್ಕಾರಿ ಮತ್ತು ಖಾಸಗಿ ಶಾಲೆಗಳನ್ನೂ ಸೇರಿಸಿಕೊಂಡಂತೆ, ಇಡೀ ದೇಶಾದ್ಯಂತ ಒಂದು ಸರ್ಕಾರಿ ಶಾಲೆಯನ್ನು ಒಂದು ಖಾಸಗಿ ಶಾಲೆಗೆ ಜೋಡಣೆ ಮಾಡುವ ಕೆಲಸವನ್ನು ಕೈಗೆತ್ತಿಕೊಳ್ಳಲಾಗುವುದು. ಇದರಿಂದಾಗಿ ಹೀಗೆ ಜೋಡಣೆ ಮಾಡಲಾದ ಶಾಲೆಗಳು ಒಂದರೊಡನೆ ಇನ್ನೊಂದು ಸಂಪರ್ಕಿಸಬಹುದು/ವಿಚಾರ ವಿನಿಮಯ ಮಾಡಿಕೊಳ್ಳಬಹುದು, ಒಂದರಿಂದ ಇನ್ನೊಂದು ಕಲಿಯಬಹುದು ಹಾಗೂ ಸಾಧ್ಯವಾದರೆ ಸಂಪನ್ಮೂಲಗಳನ್ನು ಕೂಡ ಹಂಚಿಕೆ ಮಾಡಿಕೊಳ್ಳಬಹುದು. ಖಾಸಗಿ ಶಾಲೆಗಳಲ್ಲಿ ಕಂಡುಬರುವ ಅತ್ಯುತ್ತಮ ಅಭ್ಯಾಸ ಕ್ರಮಗಳನ್ನು ಸಾಧ್ಯವಾದೆಡೆಗಳಲ್ಲೆಲ್ಲ ದಾಖಲಿಸಲಾಗುವುದು ಹಾಗೂ ಇವುಗಳನ್ನು ಸರ್ಕಾರಿ ಶಾಲೆಗಳೊಡನೆ ಹಂಚಿಕೊಳ್ಳಲಾಗುವುದು ಹಾಗೂ ಅಳವಡಿಸಿಕೊಳ್ಳಲಾಗುವುದು. ಅದೇ ರೀತಿಯಲ್ಲಿ ಸರ್ಕಾರಿ ಶಾಲೆಗಳಲ್ಲಿ ಕಂಡುಬರುವ ಇಂತಹದೇ ಉತ್ತಮವಾದ ಅಭ್ಯಾಸ ಕ್ರಮಗಳನ್ನು ಖಾಸಗಿ ಶಾಲೆಗಳಲ್ಲೂ ಅಳವಡಿಸಿಕೊಳ್ಳಲು ಪ್ರಯತ್ನ ಮಾಡಲಾಗುವುದು.

7.11 ಪ್ರತಿಯೊಂದು ರಾಜ್ಯದಲ್ಲೂ ಅದರಲ್ಲಿರುವ 'ಬಾಲಭವನ'ಗಳನ್ನು ಸಶಕ್ತವಾಗಿ ಮಾಡಲಾಗುವುದು ಅಥವಾ ಅಗತ್ಯವಾದಲ್ಲಿ ಹೊಸದಾಗಿ ಬಾಲಭವನಗಳನ್ನು ಸ್ಥಾಪನೆ ಮಾಡಲಾಗುವುದು. ಎಲ್ಲ ವಯಸ್ಸಿನ ಮಕ್ಕಳು ವಾರಕ್ಕೆ ಒಮ್ಮೆ (ಉದಾಹರಣೆಗೆ ವಾರಾಂತ್ಯಗಳಲ್ಲಿ) ಅಥವಾ ಅದಕ್ಕಿಂತ ಹೆಚ್ಚು ಬಾರಿ ಇಲ್ಲಿಗೆ ಭೇಟಿ ನೀಡಬಹುದಾಗಿರುತ್ತದೆ. ಒಂದು ವಿಶೇಷವಾದ ಹಗಲಿನ ಬೋರ್ಡಿಂಗ್ ಶಾಲೆ'ಯಾಗಿ ಪರಿಗಣಿಸಿ ಇಲ್ಲಿ ಕಲಾ ಸಂಬಂಧವಾದ, ವೃತ್ತಿಕೌಶಲಸಂಬಂಧವಾದ ಮತ್ತು ಕ್ರೀಡಾಸಂಬಂಧವಾದ ಚಟುವಟಿಕೆಗಳನ್ನು ನಡೆಸಬಹುದಾಗಿರುತ್ತದೆ. ಸಾಧ್ಯವಾದಲ್ಲಿ, ಇಂತಹ ಬಾಲಭವನಗಳನ್ನು ಶಾಲಾಸಂಕೀರ್ಣಗಳ/ಜೋಡಣೆಗಳ ಒಂದು ಭಾಗವಾಗಿ ಸೇರ್ಪಡೆ ಮಾಡಿಕೊಳ್ಳಬಹುದು.

7.12 ಶಾಲೆ ಎಂಬುದು ಇಡೀ ಸಮುದಾಯದ ಪಾಲಿಗೆ ಒಂದು ಸಂಭ್ರಮದ ಮತ್ತು ಗೌರವದ ನೆಲೆಯಾಗಿರಬೇಕು. ಶಾಲೆಯ ಘನತೆ ಗೌರವಗಳನ್ನು ಕಾಪಾಡಿಕೊಳ್ಳಬೇಕು ಹಾಗೂ ಶಾಲಾಸ್ಥಾಪನೆಯ ದಿನವನ್ನು ಇಡೀ ಸಮುದಾಯದ ಜನರೊಡಗೂಡಿ ವಾರ್ಷಿಕೋತ್ಸವದ ರೂಪದಲ್ಲಿ ಆಚರಣೆ ಮಾಡಬೇಕು. ಆ ಶಾಲೆಗೆ ಸೇರಿದ ಬಹುಮುಖ್ಯರಾದ ಹಳೆಯ ವಿದ್ಯಾರ್ಥಿಗಳ ಹೆಸರುಗಳನ್ನು ಪ್ರದರ್ಶನ ಫಲಕದಲ್ಲಿ ಹಾಕಬೇಕು ಮತ್ತು ಅವರನ್ನು ಗೌರವಿಸಬೇಕು. ಅಷ್ಟೇ ಅಲ್ಲದೆ, ಶಾಲೆಯಲ್ಲಿ ಲಭ್ಯವಿರುವ ಉಪಯೋಗಿಸದ ಮೂಲಸೌಕರ್ಯಗಳನ್ನು ಸಮುದಾಯದ ಸಾಮಾಜಿಕ, ಬೌದ್ಧಿಕ ಮತ್ತು ಸ್ವಯಂಸೇವಾ ಚಟುವಟಿಕೆಗಳನ್ನು ನಡೆಸಲು ಅವಕಾಶ ಮಾಡಿಕೊಡಬೇಕು. ಈ ಮೂಲಕ ಶಾಲಾವೇಳೆಯನ್ನು/ಬೋಧನವೇಳೆಯನ್ನು ಹೊರತುಪಡಿಸಿ ಉಳಿದ ವೇಳೆಯಲ್ಲಿ ಸಾಮಾಜಿಕ ಬಂಧವನ್ನು ಹೆಚ್ಚು ಪರಿಣಾಮಕಾರಿಯಾಗಿ ಬೆಸೆಯಲು ಅವಕಾಶ ಕಲ್ಪಿಸಿಕೊಡಬೇಕು. ಶಾಲೆಯನ್ನು 'ಸಾಮಾಜಿಕ ಚೇತನ ಕೇಂದ್ರ'ವಾಗಿ ಬಳಸಿಕೊಳ್ಳಬಹುದು.

8. ಶಾಲಾ ಶಿಕ್ಷಣಕ್ಕಾಗಿ ಮಾನಕಗಳನ್ನು ರೂಪಿಸುವುದು ಮತ್ತು ಮೌಲ್ಯಾಂಕನ ವ್ಯವಸ್ಥೆ

8.1 ಶಾಲಾಶಿಕ್ಷಣವನ್ನು ನಿಯಂತ್ರಣಕ್ಕೆ ಒಳಪಡಿಸುವ ವ್ಯವಸ್ಥೆಯ ಗುರಿ ಶೈಕ್ಷಣಿಕ ಫಲಿತಗಳನ್ನು ನಿರಂತರವಾಗಿ ಉತ್ತಮಪಡಿಸುತ್ತಾ ಹೋಗುವುದಾಗಿರುತ್ತದೆ. ಅದು ಯಾವುದೇ ರೀತಿಯಲ್ಲಿ ಶಾಲೆಗಳ ಮೇಲೆ ಇಲ್ಲಸಲ್ಲದ ನಿರ್ಬಂಧಗಳನ್ನು ಹೇರುವಂತಹ, ಹೊಸ ಬಗೆಯ ಆಲೋಚನಾ ಕ್ರಮಕ್ಕೆ ತಡೆಯೊಡ್ಡುವ ಅಥವಾ ಅಧ್ಯಾಪಕರ, ಪ್ರಿನ್ಸಿಪಾಲರುಗಳ ಮತ್ತು ವಿದ್ಯಾರ್ಥಿಗಳ ನೈತಿಕ ಸ್ಥೈರ್ಯವನ್ನು ಕುಂದಿಸುವ ವಾತಾವರಣವನ್ನು ಸೃಷ್ಟಿಸಬಾರದು. ಒಟ್ಟಾರೆಯಾಗಿ ಹೇಳುವುದಾದರೆ ನಿಯಂತ್ರಣ ಕ್ರಮಗಳ ಉದ್ದೇಶ ಅಧ್ಯಾಪಕರಲ್ಲಿ ಮತ್ತು ವಿದ್ಯಾರ್ಥಿಗಳಲ್ಲಿ ಅವುಗಳ ಬಗೆಗೆ ನಂಬಿಕೆ ಮೂಡಿಸುವಂತಾಗಬೇಕು, ಅವರು ಅತ್ಯುತ್ತಮ ಸಾಧನೆ ಮಾಡುವಂತೆ ಅವರನ್ನು ಹುರಿದುಂಬಿಸುವಂತಿರಬೇಕು, ಶ್ರೇಷ್ಠತೆಯನ್ನು ಗಳಿಸಿಕೊಳ್ಳಲು ಉತ್ತೇಜನ ನೀಡು ವಂತಿರಬೇಕು. ಹಾಗೆಯೇ ಅದು ಸಂಪೂರ್ಣ ಪಾರದರ್ಶಕ ವಾತಾವರಣವನ್ನು ಸೃಷ್ಟಿಸುವ ಮತ್ತು ಎಲ್ಲ ಬಗೆಯ ಹಣಕಾಸು ವಿಚಾರಗಳನ್ನು, ವಿಧಾನಗಳನ್ನು ಮತ್ತು ಶೈಕ್ಷಣಿಕ ಫಲಿತಗಳನ್ನು ಮುಕ್ತವಾಗಿ ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡುವುದರ ಮೂಲಕ ಇಡೀ ವ್ಯವಸ್ಥೆಯನ್ನು ಸಂಘಟಿಸುವಂತೆ ಇರಬೇಕು.

8.2 ಹಾಲಿ ಇರುವಂತೆ, ಶಾಲಾಶಿಕ್ಷಣದ ಎಲ್ಲ ಬಗೆಯ ಪ್ರಮುಖ ಆಡಳಿತ ನಿರ್ವಹಣೆ ಮತ್ತು ನಿಯಂತ್ರಣ ವ್ಯವಸ್ಥೆಗಳು - ಉದಾಹರಣೆಗೆ ಸಾರ್ವಜನಿಕ ಶಿಕ್ಷಣವನ್ನು ಒದಗಿಸುವುದು, ಶಿಕ್ಷಣ ಸಂಸ್ಥೆಗಳನ್ನು ನಿಯಂತ್ರಿಸುವುದು ಹಾಗೂ ನೀತಿನಿರೂಪಣೆ ಇಂಥವು - ಶಾಲಾಶಿಕ್ಷಣ ಇಲಾಖೆ ಹಾಗೂ ಅದರ ಅಂಗ ವಿಭಾಗಗಳೆಂಬ ಏಕೈಕ ಮೂಲದಿಂದ ನಡೆಯುತ್ತಿವೆ. ಇದರಿಂದ ವ್ಯವಸ್ಥೆಯ ಹಿತಾಸಕ್ತಿಗಳ ನಡುವೆ ಏರುಪೇರು ಉಂಟಾಗುತ್ತದೆ; ಶಕ್ತಿ ಮತ್ತು ಅಧಿಕಾರ ಹೆಚ್ಚಾಗಿ ಒಂದು ಕಡೆಯಲ್ಲೇ ಕೇಂದ್ರೀಕರಣಗೊಳ್ಳುತ್ತವೆ; ಅಷ್ಟೇ ಅಲ್ಲ ಇದರಿಂದ ಶಾಲಾವ್ಯವಸ್ಥೆಯ ಅಸಮರ್ಪಕ ನಿರ್ವಹಣೆ ಉಂಟಾಗುವ ಸಾಧ್ಯತೆಯಿರುತ್ತದೆ. ಏಕೆಂದರೆ ಶಾಲಾ ಶಿಕ್ಷಣ ಇಲಾಖೆಗಳು ಆಡಳಿತ ಮತ್ತು ನಿಯಂತ್ರಣ ಇವೇ ಮುಂತಾದ ಪಾತ್ರಗಳನ್ನು ನಿರ್ವಹಿಸುವ ಕಡೆಗೆ ಹೆಚ್ಚಿನ ಗಮನ ಹರಿಸಬಹುದಾದುದರಿಂದ ಶಿಕ್ಷಣದ ಗುಣಸಾಧನೆಯ ವಿಚಾರದಲ್ಲಿ ಹೆಚ್ಚಿನ ಗಮನ ಹರಿಸಲಾಗದೆ ಅನೇಕವೇಳೆ ಅದು ದುರ್ಬಲವಾಗುತ್ತದೆ.

8.3 ಪ್ರಸ್ತುತ ಜಾರಿಯಲ್ಲಿರುವ ಶೈಕ್ಷಣಿಕ ನಿರ್ವಹಣ ವ್ಯವಸ್ಥೆ ಹಲವಾರು ಲಾಭಕೋರ ಖಾಸಗಿ ಶಿಕ್ಷಣ ಸಂಸ್ಥೆಗಳು ಶಿಕ್ಷಣವನ್ನು ವಾಣಿಜ್ಯೀಕರಣಗೊಳಿಸುತ್ತಿರುವುದು ಮತ್ತು ತಂದೆತಾಯಿಗಳನ್ನು ಆರ್ಥಿಕವಾಗಿ ಸುಲಿಗೆ ಮಾಡುತ್ತಿರುವುದು ಇಂಥ ವಿದ್ಯಮಾನಗಳನ್ನು ತಡೆಯಲು ಸಮರ್ಥವಾಗಿಲ್ಲ. ಹಾಗೆಯೇ ಬೇಕೋ ಬೇಡವೊ, ಉದ್ದೇಶ ಇದ್ದೋ ಇಲ್ಲದೆಯೊ ಸಾರ್ವಜನಿಕ/ಸರ್ಕಾರಿ ಶಾಲೆಗಳನ್ನು ಮತ್ತು ಖಾಸಗಿ/ದಾನಿ ಸಂಸ್ಥೆಗಳ ಆಶ್ರಯದಲ್ಲಿ ನಡೆಯುವ ಶಿಕ್ಷಣಸಂಸ್ಥೆಗಳನ್ನು ನಿರುತ್ಸಾಹಗೊಳಿಸುತ್ತಿದೆ. ಹಾಗಾಗಿ ಸರ್ಕಾರಿ/ಸಾರ್ವಜನಿಕ ಶಾಲೆಗಳನ್ನು ಮತ್ತು ಖಾಸಗಿ ಶಾಲೆಗಳನ್ನು ನಿಯಂತ್ರಿಸುವ ವಿಚಾರದಲ್ಲಿ ಅಸಮತೆ ತಲೆದೋರುತ್ತಿದೆ. ಎರಡೂ ಬಗೆಯ ಶಾಲೆಗಳ ಪ್ರಮುಖವಾದ ಉದ್ದೇಶ ಉತ್ತಮ ಗುಣಮಟ್ಟದ ಶಿಕ್ಷಣವನ್ನು ಒದಗಿಸುವುದೇ ಆದರೂ ಈ ಬಗೆಯ ಭಿನ್ನದೃಷ್ಟಿಗಳು ಎದುರಾಗುತ್ತಿವೆ.

8.4 ಸಾರ್ವಜನಿಕ ಶಿಕ್ಷಣ ವ್ಯವಸ್ಥೆ ಎಂಬುದು ಜೀವಂತಿಕೆಯಿಂದ ಮಿಡಿಯುತ್ತಿರುವ ಒಂದು ಪ್ರಜಾಪ್ರಭುತ್ವವನ್ನು ಆಧರಿಸಿದ ಸಮಾಜದ ಅಡಿಗಲ್ಲು. ರಾಷ್ಟ್ರದ ಸಲುವಾಗಿ ಅತ್ಯುತ್ತಮ ಶೈಕ್ಷಣಿಕ ನಿರ್ವಹಣೆಯ ಫಲಿತಾಂಶಗಳನ್ನು ಸಾಧಿಸಬೇಕಾದರೆ ಅದು ಈಗ ಕಾರ್ಯಪ್ರವೃತ್ತವಾಗಿರುವ ವಿಧಾನವನ್ನು ಬದಲಾಯಿಸಬೇಕು, ಅದರಲ್ಲಿ ನವಚೇತನವನ್ನು ತುಂಬಬೇಕು. ಅದೇ ವೇಳೆಯಲ್ಲಿ, ಖಾಸಗಿಯಾಗಿ/ ದಾನದತ್ತಿಗಳ ಮೂಲಕ ನಡೆಯುವ ಶಿಕ್ಷಣ ಸಂಸ್ಥೆಗಳು ಕೂಡ ಗಮನಾರ್ಹವಾದ ಮತ್ತು ಪ್ರಯೋಜನಕರವಾದ ಪಾತ್ರ ನಿರ್ವಹಿಸಲು ಸಾಧ್ಯವಾಗುವಂತೆ ಅವುಗಳನ್ನು ಸಶಕ್ತಗೊಳಿಸಿ ಉತ್ತೇಜನ ನೀಡಬೇಕು.

8.5 ರಾಜ್ಯ ಶಾಲಾ ಶಿಕ್ಷಣ ವ್ಯವಸ್ಥೆಯ ಮತ್ತು ಅದರೊಳಗಡೆ ಇರುವ ಸ್ವತಂತ್ರ ಜವಾಬ್ದಾರಿಗಳ ನಿರ್ವಹಣೆ ಮತ್ತು ಅವುಗಳನ್ನು ನಿರ್ವಹಿಸುವ ರೀತಿನೀತಿಗಳು ಇವುಗಳನ್ನು ಕುರಿತಂತೆ ಪ್ರಸಕ್ತ ಶಿಕ್ಷಣನೀತಿಯಲ್ಲಿ ಪ್ರಸ್ತುತಪಡಿಸಲಾಗಿರುವ ಪ್ರಮುಖವಾದ ತತ್ತ್ವಗಳು ಮತ್ತು ಶಿಫಾರಸುಗಳು ಈ ಕೆಳಕಂಡಂತೆ ಇವೆ:

(ಅ) ಶಾಲಾಶಿಕ್ಷಣ ಕುರಿತಂತೆ ರಾಜ್ಯಮಟ್ಟದಲ್ಲಿ ಮುಂಚೂಣಿಯಲ್ಲಿರುವ ಕಾರ್ಯನಿರ್ವಹಣ ಸಂಸ್ಥೆಯಾದ ಶಾಲಾಶಿಕ್ಷಣ ಇಲಾಖೆ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯ ನಿರಂತರ ಸುಧಾರಣೆಯ ದೃಷ್ಟಿಯಿಂದ ಒಟ್ಟಾರೆಯಾಗಿ ಮೇಲ್ವಿಚಾರಣೆ ಮತ್ತು ನೀತಿನಿರೂಪಣೆ ಮಾಡುವ ಸಂಸ್ಥೆಯಾಗಿರುತ್ತದೆ. ಶಾಲೆಗಳಿಗೆ ಅಗತ್ಯವಾದ ಸೌಕರ್ಯಗಳನ್ನು ಒದಗಿಸುವುದು ಮತ್ತು ಅವುಗಳ ನಿರ್ವಹಣೆ ಇಂಥ ಜವಾಬ್ದಾರಿಗಳಿಗೆ ಅದನ್ನು ಒಳಪಡಿಸದೆ ಅದು ಸಾರ್ವಜನಿಕ ಶಾಲೆಗಳನ್ನು ಉತ್ತಮಪಡಿಸುವ ಹಾಗೂ ಹಿತಾಸಕ್ತಿಗಳ ನಡುವೆ ಉಂಟಾಗುವ ಏರುಪೇರುಗಳನ್ನು ತೊಡೆದುಹಾಕುವ ನಿಟ್ಟಿನಲ್ಲಿ ಗಮನವನ್ನು ಕೇಂದ್ರೀಕರಿಸಲು ಸಾಧ್ಯವಾಗುವಂತೆ ಅವಕಾಶ ಮಾಡಿಕೊಡಲಾಗುವುದು.

(ಆ) ಇಡೀ ರಾಜ್ಯಕ್ಕೆ ಅನ್ವಯಿಸುವಂತೆ ಸಾರ್ವಜನಿಕ ಶಾಲಾಶಿಕ್ಷಣ ವ್ಯವಸ್ಥೆಯ ಶೈಕ್ಷಣಿಕ ಸಂಬಂಧವಾದ ಕಾರ್ಯಾಚರಣೆಗಳನ್ನು ಮತ್ತು ಸೇವಾವಿಚಾರಗಳನ್ನು (ಡಿ.ಇ.ಓ., ಬಿ.ಇ.ಓ. ಇತ್ಯಾದಿ ಕಚೇರಿಗಳೂ ಸೇರಿದಂತೆ) ನಿರ್ವಹಿಸುವ ಹೊಣೆಗಾರಿಕೆ ಶಾಲಾಶಿಕ್ಷಣ ನಿರ್ದೇಶನಾಲಯದ್ದಾಗಿರುತ್ತದೆ; ಶೈಕ್ಷಣಿಕ ಕಾರ್ಯಾಚರಣೆಗಳು ಮತ್ತು ಆ ಸಂಬಂಧವಾದ ಅವಕಾಶಗಳನ್ನು ಕುರಿತಾದ ನೀತಿಗಳನ್ನು ಜಾರಿಮಾಡುವ ಕೆಲಸಗಳನ್ನು ಅದು ಸ್ವತಂತ್ರವಾಗಿ ನಿರ್ವಹಿಸುತ್ತದೆ.

(ಇ) ಸರ್ಕಾರಿ, ಖಾಸಗಿ ಮತ್ತು ದಾನದತ್ತಿ ಸಂಸ್ಥೆಗಳೂ ಸೇರಿದಂತೆ ಎಲ್ಲ ಹಂತಗಳಲ್ಲೂ ನಿರ್ವಹಿಸಲಾಗುವ (ಪೂರ್ವ ಶಾಲಾಶಿಕ್ಷಣ ಸಹ ಒಳಗೊಂಡಂತೆ) ಶಿಕ್ಷಣದ ಗುಣಮಟ್ಟವನ್ನು ಕಾಪಾಡಿಕೊಳ್ಳಲು ಪರಿಣಾಮಕಾರಿಯಾದ ಒಂದು ಗುಣ ಸ್ವನಿಯಂತ್ರಣ ಹಾಗೂ ಮೌಲ್ಯಾಂಕನ ವ್ಯವಸ್ಥೆಯನ್ನು ರೂಪಿಸಲಾಗುವುದು. ಶಿಕ್ಷಣಕ್ಕೆ ಅಗತ್ಯವಾದ ಉತ್ತಮ ಗುಣಮಟ್ಟವನ್ನು ಸಾಧಿಸಲಾಗುತ್ತಿದೆಯೆ ಎಂಬುದನ್ನು ಇದರ ಮೂಲಕ ಖಾತರಿಪಡಿಸಿಕೊಳ್ಳಲಾಗುವುದು. ಎಲ್ಲಾ ಶಾಲೆಗಳೂ ಕಡೆಯಪಕ್ಷ ಕನಿಷ್ಠಮಟ್ಟದ ವೃತ್ತಿಪರವಾದ ಮತ್ತು ಗುಣಾಧಾರಿತವಾದ ಮಟ್ಟವನ್ನು ಕಾಪಾಡಿಕೊಂಡು ಬರುತ್ತಿವೆಯೆ ಎಂಬುದನ್ನು ದೃಢಪಡಿಸಿಕೊಳ್ಳುವ ಸಲುವಾಗಿ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳು ರಾಜ್ಯ ಶಾಲಾ ಮಾನಕ ಪ್ರಾಧಿಕಾರ (State School Standards Authority - SSSA) ಎಂಬ ಸ್ವತಂತ್ರವಾದ ಮತ್ತು ರಾಜ್ಯವ್ಯಾಪಿಯಾದ ಸಂಸ್ಥೆಯನ್ನು ಸ್ಥಾಪಿಸಿಕೊಳ್ಳುವುವು. ಕೆಲವು ಬಗೆಯ ಆವಶ್ಯಕ ಅಂಶಗಳನ್ನು ಕುರಿತಾಗಿ (ಉದಾಹರಣೆಗೆ ಸುರಕ್ಷತೆ, ಭದ್ರತೆ, ತುಂಬ ಅಗತ್ಯವಾದ ಮೂಲಸೌಕರ್ಯಗಳು, ಬೇರೆ ಬೇರೆ ವಿಷಯಗಳಿಗೆ ಮತ್ತು ಗ್ರೇಡುಗಳಿಗೆ ಬೇಕಾದ ಅಧ್ಯಾಪಕರುಗಳು, ಹಣಕಾಸು ವೆಚ್ಚದಲ್ಲಿ ಸಂಯಮಶೀಲತೆ, ಉತ್ತಮ ಆಡಳಿತ ಪ್ರಕ್ರಿಯೆ ಇತ್ಯಾದಿ)

ಎಸ್.ಎಸ್.ಎಸ್.ಎ. ಕನಿಷ್ಠ ಪ್ರಮಾಣದ ಮಾನದಂಡಗಳನ್ನು ರೂಪಿಸಲಿದ್ದು ಇವುಗಳನ್ನು ಎಲ್ಲಾ ಶಾಲೆಗಳು ಅನುಸರಿಸುತ್ತವೆ. ಇಂತಹ ಆವಶ್ಯಕ ಅಂಶಗಳ ಚೌಕಟ್ಟೊಂದನ್ನು ವಿಶೇಷವಾಗಿ ಅಧ್ಯಾಪಕರು ಮತ್ತು ಶಾಲೆಗಳು ಸೇರಿಕೊಂಡಂತೆ ವಿವಿಧ ಬಗೆಯ ಹಿತಾಸಕ್ತರ ಜೊತೆ ಸಮಾಲೋಚನೆ ನಡೆಸಿ ಎಸ್. ಸಿ. ಇ.ಆರ್.ಟಿ. ರೂಪಿಸಲಿದೆ.

ಎಸ್.ಎಸ್.ಎಸ್.ಎ. ನಿರೂಪಿಸಿದಂತೆ ಎಲ್ಲ ಮೂಲಭೂತ ನಿಯಂತ್ರಕ ಅಂಶಗಳನ್ನು ಸಾರ್ವಜನಿಕರ ಸಲುವಾಗಿ ಪಾರದರ್ಶಕವಾಗಿ ಮುಕ್ತವಾಗಿಡಲಾಗುವುದು ಹಾಗೂ ಇವುಗಳನ್ನು ಸಾರ್ವಜನಿಕ ಪರಿಶೀಲನೆ ಮತ್ತು ಜವಾಬ್ದಾರಿಗಳ ಸಲುವಾಗಿ ವ್ಯಾಪಕವಾಗಿ ಬಳಕೆ ಮಾಡಲಾಗುವುದು. ಇಂತಹ ಮಾಹಿತಿಗಳನ್ನು ಸ್ವತಃ ಸಾರ್ವಜನಿಕ ಪರಿಶೀಲನೆಗಾಗಿ ತೆರೆದಿಡುವುದಕ್ಕೆ ಸಂಬಂಧಪಟ್ಟ ಆಯಾಮಗಳನ್ನು ಹಾಗೂ ಅದನ್ನು ಯಾವ ನಮೂನೆಯಲ್ಲಿ ಅನಾವರಣಗೊಳಿಸುವುದು ಎಂಬುದನ್ನು ಕುರಿತ ರೂಪುರೇಷೆಗಳನ್ನು ಎಸ್.ಎಸ್.ಎಸ್.ಎ. ವಿಶ್ವಾದ್ಯಂತ ಲಭ್ಯವಿರುವ ಶಾಲಾಮಾನದಂಡಗಳ ನಿರೂಪಣೆಯನ್ನು ಆಧರಿಸಿ ಸಿದ್ಧಪಡಿಸುವುದು. ಈ ಮಾಹಿತಿಯನ್ನು ಎಲ್ಲಾ ಶಾಲೆಗಳು ನಿರ್ದಿಷ್ಟವಾಗಿ ಸಿದ್ಧಪಡಿಸುವುದರ ಜೊತೆಗೆ ಕಾಲಕಾಲಕ್ಕೆ ಸೂಕ್ತವಾಗಿ ಅಪ್ಡೇಟ್ ಮಾಡುತ್ತಿರಬೇಕು. ಹಾಗೆಯೆ ಈ ಮಾಹಿತಿಯನ್ನು ಕಾಲಕಾಲಕ್ಕೆ ಪರಿಷ್ಕರಿಸುತ್ತಾ ಎಸ್.ಎಸ್. ಎಸ್.ಎ. ವೆಬ್ಸೈಟ್ ಮೇಲೆ ಹಾಗೂ ಶಾಲೆಗಳ ವೆಬ್ಸೈಟುಗಳ ಮೇಲೆ ಪ್ರಚುರಪಡಿಸುತ್ತಕ್ಕದ್ದು. ಈ ಸಾರ್ವಜನಿಕ ಡೊಮೈನ್ ಹೊಂದಿರುವ ವೆಬ್ ಸೈಟಿನಲ್ಲಿ ಪ್ರಚುರಪಡಿಸಿರುವ ಯಾವುದೇ ಮಾಹಿತಿಯನ್ನು ಕುರಿತಂತೆ ವ್ಯಕ್ತವಾಗುವ ಕುಂದುಕೊರತೆಗಳನ್ನು ಅಥವಾ ಆರೋಪಗಳನ್ನು ಕುರಿತು ಎಸ್.ಎಸ್.ಎಸ್.ಎ. ತೀರ್ಮಾನ ಕೈಗೊಳ್ಳತಕ್ಕದ್ದು. ಯಾದೃಚ್ಛಿಕವಾಗಿ ಆಯ್ಕೆ ಮಾಡಲಾದ ವಿದ್ಯಾರ್ಥಿಗಳಿಂದ ಪಡೆದುಕೊಂಡ ಫೀಡ್ಬ್ಯಾಕ್ ಮಾಹಿತಿಯನ್ನು ಆನ್ಲೈನ್ ರೀತಿಯಾಗಿ ಜಾಹೀರುಪಡಿಸುವುದರ ಮೂಲಕ ಕಾಲಕಾಲಕ್ಕೆ ಉಪಯುಕ್ತವಾದ ಮಾಹಿತಿ ಲಭ್ಯವಾಗುವಂತೆ ಮಾಡಲಾಗುವುದು. ಎಸ್.ಎಸ್.ಎಸ್.ಎ. ಕೈಗೊಳ್ಳುವ ಎಲ್ಲಾ ಕೆಲಸ ಕಾರ್ಯಗಳಲ್ಲೂ ಅವುಗಳ ಸಾಮರ್ಥ್ಯ ಹೆಚ್ಚಿಸಲು ಮತ್ತು ಪಾರದರ್ಶಕತೆಯನ್ನು ಕಾಪಾಡಿಕೊಳ್ಳಲು ತಂತ್ರಜ್ಞಾನವನ್ನು ಸೂಕ್ತವಾಗಿ ಬಳಕೆ ಮಾಡಿಕೊಳ್ಳಲಾಗುವುದು. ಇಂತಹ ಕ್ರಮಗಳಿಂದಾಗಿ ಶಾಲೆಗಳ ಮೇಲೆ ಸದ್ಯದ ಪರಿಸ್ಥಿತಿಯಲ್ಲಿ ಅನಿವಾರ್ಯ ನಿಯಂತ್ರಣಗಳ ಹೊರೆ ಗಮನಾರ್ಹವಾಗಿ ಕಡಿಮೆಯಾಗುವುದು.

(ಈ) ರಾಜ್ಯದಲ್ಲಿ ಶೈಕ್ಷಣಿಕ ಮಾನದಂಡಗಳು ಮತ್ತು ಪಠ್ಯಕ್ರಮಗಳು ಸಹ ಸೇರಿದಂತೆ ಶೈಕ್ಷಣಿಕ ಸಂಬಂಧವಾದ ವಿಚಾರಗಳನ್ನು ಎಸ್.ಸಿ.ಇ.ಆರ್.ಟಿ. (ಎನ್.ಸಿ.ಇ.ಆರ್.ಟಿ. ಜೊತೆಯಲ್ಲಿ ಆಪ್ತ ಸಮಾಲೋಚನೆ ಮತ್ತು ಸಹಯೋಗ ನಡೆಸುವುದರ ಮೂಲಕ) ನೇತೃತ್ವದಲ್ಲಿ ನಿರ್ವಹಿಸಲಾಗುತ್ತದೆ. ಈ ಮೂಲಕ ಎಸ್.ಸಿ.ಇ.ಆರ್.ಟಿ.ಯನ್ನು ಒಂದು ಸಬಲೀಕೃತ ಸಂಸ್ಥೆಯಾಗಿ ಮಾರ್ಪಡಿಸಲಾಗುವುದು. ಎಸ್.ಸಿ.ಇ.ಆರ್.ಟಿ. ಸಂಸ್ಥೆಯು ಎಲ್ಲ ಬಗೆಯ ಶಾಲಾ ಹಿತಾಸಕ್ತಿದಾರರ ಜೊತೆಯಲ್ಲಿ ಸಮಾಲೋಚನೆ ನಡೆಸುವುದರ ಮೂಲಕ ಒಂದು ಶಾಲಾ ಗುಣಮಟ್ಟ, ಮೌಲ್ಯಾಂಕನ ಮತ್ತು ಪ್ರಮಾಣೀಕರಣ ಚೌಕಟ್ಟನ್ನು (School Quality Assessment and Accreditation Framework) ಅಭಿವೃದ್ಧಿಪಡಿಸುವುದು. ಸಿ.ಆರ್.ಸಿ.ಗಳ, ಬಿ.ಆರ್.ಸಿ.ಗಳ ಮತ್ತು ಡಿ.ಐ.ಇ.ಟಿ.ಗಳ ಮರುಚೇತನಕ್ಕಾಗಿ ಎಸ್.ಸಿ.ಇ.ಆರ್.ಟಿ. ಒಂದು "ಬದಲಾವಣೆ ನಿರ್ವಹಣ ಪ್ರಕ್ರಿಯೆ"ಯನ್ನು (Change Management Process) ಹಮ್ಮಿಕೊಂಡು ಅದರ ನೇತೃತ್ವ ವಹಿಸುವುದು. ಈ ಪ್ರಕ್ರಿಯೆ ಇಂಥ ಎಲ್ಲ ಸಂಸ್ಥೆಗಳ ಸಾಮರ್ಥ್ಯ ಮತ್ತು ಕಾರ್ಯನಿರ್ವಹಣ ಸಂಸ್ಕೃತಿಯನ್ನು ಮೂರು ವರ್ಷಗಳ ಅವಧಿಯ ಒಳಗಡೆ ಬದಲಾವಣೆ ಮಾಡಿ ಅವುಗಳನ್ನು ಶ್ರೇಷ್ಠ ಮತ್ತು ಸಂವೇದನಶೀಲ ಸಂಸ್ಥೆಗಳಾಗಿ ಅಭಿವೃದ್ಧಿಪಡಿಸುವುದು. ಇದೇ ವೇಳೆಗೆ ಶಾಲೆಗಳಿಂದ ಹೊರಬರುವ ಹಂತದಲ್ಲಿರುವ ವಿದ್ಯಾರ್ಥಿಗಳ ಸಾಮರ್ಥ್ಯ ಮತ್ತು ಕ್ಷಮತೆ ಕುರಿತ ಪ್ರಮಾಣೀಕರಣ ಕುರಿತಂತೆ ಕಾರ್ಯನಿರ್ವಹಿಸುವ ಜವಾಬ್ದಾರಿಯನ್ನು ಪ್ರತಿಯೊಂದು ರಾಜ್ಯದಲ್ಲೂ ಅಲ್ಲಿಯ ಮೌಲ್ಯಾಂಕನ/ಪರೀಕ್ಷಾ ಮಂಡಳಿ ನಿರ್ವಹಿಸಲಿದೆ.

8.6 ಶಾಲೆಗಳಿಗೆ, ವಿದ್ಯಾಸಂಸ್ಥೆಗಳಿಗೆ, ಅಧ್ಯಾಪಕರಿಗೆ, ಉದ್ಯೋಗಿಗಳಿಗೆ, ಸಮುದಾಯಗಳಿಗೆ ಮತ್ತಿತರ ಹಿತಾಸಕ್ತಿಧಾರಿಗಳಲ್ಲಿ ಅವರನ್ನು ಸಶಕ್ತರನ್ನಾಗಿ ಮಾಡುವ ಹಾಗೂ ಸಾಕಷ್ಟು ಸಂಪನ್ಮೂಲ ಒದಗಿಸುವ ಸಂಸ್ಕೃತಿ, ವಿನ್ಯಾಸ ಮತ್ತು ವ್ಯವಸ್ಥೆ ಇವುಗಳೊಟ್ಟಿಗೆ ಸೂಕ್ತವಾದ ಜವಾಬ್ದಾರಿ ಭಾವನೆಯನ್ನು ಕೂಡ ಉಂಟುಮಾಡುವುದು. ಶಿಕ್ಷಣ ವ್ಯವಸ್ಥೆಯಲ್ಲಿ ಕಂಡುಬರುವ ಪ್ರತಿಯೊಬ್ಬ ಹಿತಾಸಕ್ತಿಧಾರಿ ಮತ್ತು ಭಗಿ ತಮ್ಮ ತಮ್ಮ ಪಾತ್ರವನ್ನು ಅತ್ಯುನ್ನತ ಮಟ್ಟದ ಏಕತೆ ಮತ್ತು ಅಖಂಡತೆ, ಸಂಪೂರ್ಣ ಬದ್ಧತೆ ಮತ್ತು ಆದರ್ಶಪ್ರಾಯವಾದ ಕಾರ್ಯನೀತಿ ಮುಂತಾದ ಗುಣಗಳೊಡನೆ ನಿರ್ವಹಿಸುವ ಜವಾಬ್ದಾರಿ ಹೊಂದಿರುತ್ತಾರೆ. ಹಾಗೆಯೆ ಶಿಕ್ಷಣವ್ಯವಸ್ಥೆಯಲ್ಲಿರುವ ಪ್ರತಿಯೊಬ್ಬರ ಪಾತ್ರಕ್ಕೂ ನಿರ್ದಿಷ್ಟವಾದ ಧ್ಯೇಯೋದ್ದೇಶಗಳು ಮತ್ತು ನಿರೀಕ್ಷೆಗಳು ಇರುತ್ತವೆ ಹಾಗೂ ಈ ಬಗೆಯ ನಿರೀಕ್ಷೆ ಮತ್ತು ಕಾರ್ಯಸಾಧನೆಗಳ ಹಿನ್ನೆಲೆಯಲ್ಲಿ ಇವುಗಳನ್ನು ಕುರಿತಂತೆ ಗಂಭೀರವಾದ ಮೌಲ್ಯಾಂಕನ ನಡೆಯುತ್ತದೆ. ಈ ಮೌಲ್ಯಾಂಕನ ಪದ್ಧತಿ ವಸ್ತುನಿಷ್ಠವಾಗಿರುತ್ತದೆಯಲ್ಲದೆ ವಿಕಾಸೋನ್ಮುಖಿಯಾಗಿದ್ದು ಇದರಲ್ಲಿ ಜವಾಬ್ದಾರಿಯನ್ನು ದೃಢೀಕರಿಸುವ ತಾತ್ವಿಕತೆ ಒಳವಟ್ಟಿರುತ್ತದೆ. ಅದಕ್ಕೆ ಫೀಡ್ಬ್ಯಾಕ್ ನೀಡಲು ಮತ್ತು ಮೌಲ್ಯಾಂಕನ ಮಾಡಲು ಹಲವಾರು ಮೂಲಗಳಿದ್ದು ಒಟ್ಟಾರೆ ಕಾರ್ಯಸಾಧನೆ ಕೇವಲ ವಿದ್ಯಾರ್ಥಿಗಳ 'ಅಂಕ'ಗಳನ್ನು ಪರಿಗಣನೆಗೆ ತೆಗೆದುಕೊಳ್ಳುವುದು ಮುಂತಾದ ಸರಳ ವಿಧಾನಗಳಿಗೆ ಸೀಮಿತವಾಗಿರುವುದಿಲ್ಲ. ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆ ಎಂಬಂತಹ ಫಲಿತಗಳಿಗೆ ಹಲವಾರು ಮುಖಗಳಿರುತ್ತವೆ, ಹಲವಾರು ಹೊರಗಿನ ಪ್ರಭಾವಗಳಿರುತ್ತವೆ

ಎಂಬುದನ್ನು ಈ ಮೌಲ್ಯಾಂಕನ ಪರಿಗಣನೆಗೆ ತೆಗೆದುಕೊಳ್ಳುತ್ತದೆ. ಶಿಕ್ಷಣ ಎಂಬುದಕ್ಕೆ ತಂಡದಲ್ಲಿ ಮಾಡುವ ಕೆಲಸ (team work) ಅಗತ್ಯ, ಅದರಲ್ಲೂ ನಿರ್ದಿಷ್ಟವಾಗಿ ಶಾಲಾಹಂತದಲ್ಲಿ ಇದು ಇನ್ನೂ ಹೆಚ್ಚು ಅಗತ್ಯ ಎಂಬುದನ್ನು ಕೂಡ ಈ ಮೌಲ್ಯಾಂಕನ ಗಣನೆಗೆ ತೆಗೆದುಕೊಳ್ಳುತ್ತದೆ. ಈ ರೀತಿಯ ನಿರ್ವಹಣ ಮೌಲ್ಯಾಂಕನದ (performance assessment) ಮೇಲೆ ಎಲ್ಲಾ ವ್ಯಕ್ತಿಗಳ ಬಡ್ತಿ, ಮನ್ನಣೆ ಹಾಗೂ ಜವಾಬ್ದಾರಿ ಇವು ಅಧಾರಗೊಂಡಿರುತ್ತವೆ. ಈ ಅಭಿವೃದ್ಧಿ, ಸಾಧನೆ, ಹಾಗೂ ಜವಾಬ್ದಾರಿ ಇವುಗಳೊಂದೊಡಗೂಡಿರುವ ವ್ಯವಸ್ಥೆಯನ್ನು ಅತ್ಯಂತ ಹೆಚ್ಚು ಏಕತೆ ಮತ್ತು ಅಖಂಡತೆಯೊಡನೆ, ಸಮರ್ಪಕವಾಗಿ, ಅವುಗಳ ನಿಯಂತ್ರಣ ವ್ಯಾಪ್ತಿಯೊಳಗೆ ಇದಕ್ಕೆ ಸಂಬಂಧಪಟ್ಟಂತೆ ಕೆಲಸ ಮಾಡುವ ಎಲ್ಲರೂ ಜವಾಬ್ದಾರಿಯುತವಾಗಿ ನಡೆಸಿಕೊಂಡು ಹೋಗುತ್ತಿದ್ದಾರೆ ಎಂಬುದನ್ನು ದೃಢೀಕರಿಸಬೇಕಾಗಿದೆ.

8.7 ಸಾರ್ವಜನಿಕ/ಸರ್ಕಾರಿ ಹಾಗೂ ಖಾಸಗಿ ಶಾಲೆಗಳು (ಕೇಂದ್ರ ಸರ್ಕಾರದ ವತಿಯಿಂದ ನಿರ್ವಹಿಸಲಾಗುತ್ತಿರುವ/ನೆರವು ಪಡೆಯುತ್ತಿರುವ/ನಿಯಂತ್ರಣಕ್ಕೆ ಒಳಪಟ್ಟಿರುವ ಶಾಲೆಗಳನ್ನು ಹೊರತುಪಡಿಸಿ) ಇವೇ ನಿರ್ಧಾರಕ ಅಂಶಗಳ, ಮಾನದಂಡಗಳ ಮತ್ತು ಪ್ರಕ್ರಿಯೆಗಳ ಆಧಾರದ ಮೇಲೆ ಮೌಲ್ಯಾಂಕನ ಮತ್ತು ಪ್ರಮಾಣೀಕರಣಗಳಿಗೆ ಒಳಪಡುತ್ತವೆ. ಇಲ್ಲಿ ಸಾರ್ವಜನಿಕವಾಗಿ ಮಾಹಿತಿಗಳನ್ನು ಆನ್ಲೈನ್ ಮತ್ತು ಆಫ್ಲೈನ್ ವಿಧಾನಗಳಂತೆ ಅನಾವರಣಗೊಳಿಸುವುದರ ಮೇಲೆ ಕೂಡ ಒತ್ತನ್ನು ನೀಡಿ ಸಾರ್ವಜನಿಕ ಹಿತಾಸಕ್ತಿಯನ್ನು ಉತ್ತೇಜಿಸುವ ಖಾಸಗಿ ಶಾಲೆಗಳಿಗೆ ಪ್ರೋತ್ಸಾಹ ನೀಡುವ, ಯಾವುದೇ ರೀತಿಯಲ್ಲಿ ಅವು ಉಸಿರುಗಟ್ಟದಂತೆ ನೋಡಿಕೊಳ್ಳುವ ವಾತಾವರಣ ಮೂಡುವಂತೆ ದೃಢೀಕರಣ ಮಾಡಿಕೊಳ್ಳಬೇಕಾಗಿದೆ. ಉತ್ತಮ ಗುಣಮಟ್ಟದ ಶಿಕ್ಷಣವನ್ನು ಪ್ರೋತ್ಸಾಹಿಸುವ ಸಲುವಾಗಿ ಖಾಸಗಿ ನೆಲೆಯ ಜನೋಪಕಾರಿ ಪ್ರಯತ್ನಗಳಿಗೆ ಉತ್ತೇಜನ ನೀಡಲಾಗುವುದು. ಇದು ಶಿಕ್ಷಣ ಎಷ್ಟರಮಟ್ಟಿಗೆ ಸಾರ್ವಜನಿಕರ ಒಳಿತಿಗೆ ಕಾರಣಾಂಶವಾಗಬಲ್ಲದು ಎಂಬುದನ್ನು ದೃಢೀಕರಿಸುತ್ತದೆ. ಅಂತೆಯೆ ಅಡ್ಡಾದಿದ್ದಿಯಾಗಿ ಏರಿಸಲಾಗುವ ಶಿಕ್ಷಣ ಶುಲ್ಕದ ಹೊರೆಯಿಂದ ತಂದೆತಾಯಿಗಳನ್ನು ಮತ್ತು ಸಮುದಾಯವನ್ನು ರಕ್ಷಣೆ ಮಾಡುತ್ತದೆ. ಸರ್ಕಾರಿ ಮತ್ತು ಖಾಸಗಿ ಶಾಲೆಗಳು ಇವೆರಡಕ್ಕೂ ಸಂಬಂಧಪಟ್ಟಂತೆ ಶಾಲಾ ವೆಬ್ಸೈಟಿನಲ್ಲಿ ಮತ್ತು ಎಸ್.ಎಸ್.ಎಸ್.ಎ ವೆಬ್ಸೈಟಿನಲ್ಲಿ ಸಾರ್ವಜನಿಕ ಉಪಯೋಗಕ್ಕಾಗಿ ಪ್ರಚುರಪಡಿಸುವ ಮಾಹಿತಿಗಳಲ್ಲಿ (ಕಡೆಯಪಕ್ಷ) ಶಾಲೆಯಲ್ಲಿ ಎಷ್ಟು ತರಗತಿ ಕೊಠಡಿಗಳಿವೆ, ವಿದ್ಯಾರ್ಥಿಗಳ ಮತ್ತು ಅಧ್ಯಾಪಕರ ಸಂಖ್ಯೆ ಎಷ್ಟು, ಏನೇನು ವಿಷಯಗಳನ್ನು ಕಲಿಸಿಕೊಡಲಾಗುತ್ತದೆ, ಯಾವುದೇ ಶುಲ್ಕ ಪಾವತಿ, ಎನ್.ಎ.ಎಸ್. ಮತ್ತು ಎಸ್.ಎ.ಎಸ್. ಇಂತಹ ಮಾನಕೀಕೃತ ಮೌಲ್ಯಮಾಪನದ ಆಧಾರದ ಮೇಲೆ ಒಟ್ಟಾರೆಯಾಗಿ ವಿದ್ಯಾರ್ಥಿಗಳ ಸಾಧನೆ ಹೇಗಿದೆ ಇಂತಹ ಸಂಗತಿಗಳು ಸೇರಿರಬೇಕಾಗುತ್ತದೆ. ಕೇಂದ್ರಸರ್ಕಾರದ ಮೂಲಕ ನಿಯಂತ್ರಿಸಲಾಗುತ್ತಿರುವ/ ನಿರ್ವಹಿಸಲಾಗುತ್ತಿರುವ/ನೆರವು ಪಡೆಯುತ್ತಿರುವ ಶಾಲೆಗಳ ವಿಚಾರದಲ್ಲಿ, ಸಿ.ಬಿ.ಎಸ್.ಇ. ಸಂಸ್ಥೆ ಎಂ.ಎಚ್. ಆರ್.ಡಿ. ಜೊತೆಯಲ್ಲಿ ಸಮಾಲೋಚನೆ ನಡೆಸಿ ಅಗತ್ಯವಾದ ಚೌಕಟ್ಟನ್ನು ತಯಾರಿಸುವುದು. ಎಲ್ಲಾ ಶಿಕ್ಷಣ ಸಂಸ್ಥೆಗಳನ್ನು ಇದೇ ಬಗೆಯ ಕಾರ್ಯಪರಿಶೀಲನೆ ಮತ್ತು ಮಾಹಿತಿ ಹಂಚಿಕೆಯ ಪ್ರಕ್ರಿಯೆಗೆ 'ಲಾಭಕ್ಕಾಗಿ ಅಲ್ಲ' (not-for-profit) ಎಂಬ ತತ್ತ್ವದ ಆಧಾರದ ಮೇಲೆ ಒಳಪಡಿಸಲಾಗುವುದು. ಒಂದು ವೇಳೆ ಏನಾದರೂ ಹೆಚ್ಚಿನ ಸಂಪನ್ಮೂಲಗಳು ಲಭ್ಯವಾದಲ್ಲಿ, ಅವುಗಳನ್ನು ಶಿಕ್ಷಣ ಕ್ಷೇತ್ರದಲ್ಲಿ ಮರು ಹೂಡಿಕೆ ಮಾಡಲಾಗುವುದು.

8.8 ಶಾಲೆಯ ನಿಯಂತ್ರಣ, ಪ್ರಮಾಣೀಕರಣ ಮತ್ತು ಆಡಳಿತ ಇವುಗಳಿಗೆ ಮಾನದಂಡಗಳನ್ನು ರೂಪಿಸುವುದು/ನಿಯಂತ್ರಕ ಚೌಕಟ್ಟನ್ನು ಸಿದ್ಧಪಡಿಸುವುದು ಹಾಗೂ ಅನುಕೂಲಕರವಾದ ವ್ಯವಸ್ಥೆಯನ್ನು ಏರ್ಪಡಿಸುವುದು ಇಂತಹ ಕ್ರಮಗಳನ್ನು ಕಳೆದ ಒಂದು ದಶಕದ ಅವಧಿಯಲ್ಲಿ ಮಾಡಿದ ಕಲಿಕೆ ಮತ್ತು ಗಳಿಸಿದ ಅನುಭವ ಇವುಗಳ ಆಧಾರದ ಮೇಲೆ ಕೈಗೊಳ್ಳಲಾಗುವುದು. ಈ ಬಗೆಯ ಪರಿಶೀಲನೆಯಿಂದ ಎಲ್ಲ ವಿದ್ಯಾರ್ಥಿಗಳು, ಅದರಲ್ಲೂ ಕಡಿಮೆ ಸವಲತ್ತುಗಳನ್ನು ಹೊಂದಿರುವ ಹಾಗೂ ಅನನುಕೂಲಗಳಿಂದ ಕೂಡಿರುವ ಸಮುದಾಯಗಳಿಂದ ಬಂದಿರುವ ವಿದ್ಯಾರ್ಥಿಗಳು, ಬಾಲ್ಯದ ಮೊದಲಿನಿಂದಲೇ ಸಾರ್ವತ್ರಿಕವಾದ, ಮುಕ್ತವಾದ ಮತ್ತು ಅನಿವಾರ್ಯವಾದ ಉನ್ನತ ಗುಣಮಟ್ಟ ಮತ್ತು ಸಮಾನತೆಯಿಂದ ಕೂಡಿದ ಶಿಕ್ಷಣ ಪಡೆಯುವ ಅವಕಾಶಗಳನ್ನು ಖಂಡಿತವಾಗಿ ಗಳಿಸಿಕೊಳ್ಳುತ್ತಾರೆಂದು ಆಶಿಸಬಹುದು. ಅಂಥ ವಿದ್ಯಾರ್ಥಿಗಳು ಮೊದಲ ಬಾಲ್ಯಕಾಲದ ಆರೈಕೆಯನ್ನು ಮತ್ತು ಶಿಕ್ಷಣವನ್ನು (3ನೇ ವರ್ಷದಿಂದ ಮುಂದಕ್ಕೆ) ಪಡೆದುಕೊಳ್ಳಬೇಕೆಂಬುದು ಇಲ್ಲಿಯ ಗುರಿಯಾಗಿದೆ. ಈ ಅನುಕೂಲಗಳನ್ನು ಅವರು ಅಲ್ಲಿಂದ ಮುಂದೆ ಉನ್ನತ ಸೆಕಂಡರಿ ಶಾಲಾ ಶಿಕ್ಷಣದವರೆಗೆ (ಅಂದರೆ ಗ್ರೇಡ್ 12 ರವರೆಗೆ) ಪಡೆದುಕೊಳ್ಳಬೇಕೆಂಬುದು ಇಲ್ಲಿಯ ಉದ್ದೇಶವಾಗಿದೆ. ಈ ನಿಟ್ಟಿನಲ್ಲಿ ಅಗತ್ಯವಾಗುವ ಸೌಕರ್ಯಗಳ ಮೇಲೆ ಹಾಗೂ ಅವು ಇಂತಿಷ್ಟೇ ಇರಬೇಕೆಂದು ನಿಗದಿಪಡಿಸುವುದರ ಮೇಲೆ ಒತ್ತು ಹಾಕುವುದನ್ನು ಬದಲಾಯಿಸಲಾಗುವುದು. ಭೌತಿಕ ಮತ್ತು ಮೂಲಭೂತ ಸೌಕರ್ಯಗಳಿಗೆ ಸಂಬಂಧಿಸಿದ ಅಂಕಿಅಂಶಗಳನ್ನು ವಾಸ್ತವ ಲಭ್ಯತೆ ಆಧಾರದ ಮೇಲೆ ಪರಿಗಣಿಸಲಾಗುವುದು. ಉದಾಹರಣೆಗೆ ಲಭ್ಯವಿರುವ ಪ್ರದೇಶಗಳ ವಿಸ್ತಾರ, ಕೊಠಡಿಗಳ ಅಳತೆ, ನಗರಪ್ರದೇಶಗಳಲ್ಲಿ ನಿಜಕ್ಕೂ ಲಭ್ಯವಾಗಬಹುದಾದಂತೆ ಆಟದ ಮೈದಾನಗಳ ವಿಸ್ತೀರ್ಣ ಇಂತಹ ಅಂಶಗಳನ್ನು ವಾಸ್ತವದ ನೆಲೆಗಟ್ಟಿನಲ್ಲಿ ಪರಿಶೀಲಿಸಲಾಗುವುದು. ಗೊತ್ತುಪಡಿಸಲಾದ ಇಂತಹ ಅಂಕಿಅಂಶಗಳನ್ನು ಪ್ರತಿಯೊಂದು ಶಾಲೆಯು ತನ್ನ ಸ್ಥಳೀಯ ಅಗತ್ಯಗಳು ಮತ್ತು ನಿರ್ಬಂಧಗಳು ಇವುಗಳಿಗೆ ತಕ್ಕಂತೆ ಹೊಂದಾಣಿಕೆ ಮಾಡಿಕೊಳ್ಳಲು, ಸ್ವಲ್ಪ ಸಡಿಲ ಮಾಡಿಕೊಂಡು ಪರಿಗಣಿಸಲು ಅವಕಾಶ ಮಾಡಿಕೊಡಲಾಗುವುದು. ಆದರೆ ಇಂತೆಡೆಗಳಲ್ಲಿ ಭದ್ರತೆ, ಸುರಕ್ಷತೆಗಳನ್ನು

ಕಾಯ್ದುಕೊಳ್ಳುವುದರ ಜೊತೆಯಲ್ಲಿ ಉಲ್ಲಾಸಕರವಾದ ಮತ್ತು ಉತ್ಪಾದಕವಾದ ಸ್ಥಳಾವಕಾಶ ಕಲಿಕೆಯ ಉದ್ದೇಶಕ್ಕಾಗಿ ದೊರೆಯುತದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವುದು. ಎಲ್ಲಾ ಬಗೆಯ ಹಣಕಾಸು ಸಂಬಂಧವಾದ, ಶೈಕ್ಷಣಿಕ ಮತ್ತು ಕಾರ್ಯನಿರ್ವಹಣೆ ಕುರಿತಾದ ಸಂಗತಿಗಳನ್ನು ಹಾಗೂ ಶೈಕ್ಷಣಿಕ ಫಲಿತಗಳನ್ನು ಪಾರದರ್ಶಕವಾಗಿ ಒದಗಿಸುವ ವಿಚಾರಕ್ಕೆ ಅಗತ್ಯವಾದ ಪ್ರಾಮುಖ್ಯತೆಯನ್ನು ನೀಡಲಾಗುವುದು. ಹಾಗೆಯೆ ಇವುಗಳನ್ನು ಶಾಲೆಯ ಮೌಲ್ಯಾಂಕನ ಕಾರ್ಯದಲ್ಲಿ ಸೂಕ್ತವಾಗಿ ಅಳವಡಿಸಿಕೊಳ್ಳಲಾಗುವುದು. ಎಲ್ಲ ಮಕ್ಕಳಿಗೂ ಮುಕ್ತವಾದ, ಸಮಾನವಾದ, ಉತ್ತಮ ಗುಣಮಟ್ಟದ ಪ್ರಾಥಮಿಕ ಮತ್ತು ಸೆಕಂಡರಿ ಶಿಕ್ಷಣ ಖಂಡಿತವಾಗಿ ದೊರಕಬೇಕೆಂಬ ಸುಸ್ಥಿರ ಅಭಿವೃದ್ಧಿ ಗುರಿ 4 (ಎಸ್.ಡಿ.ಜಿ.4) ಇದರ ನಿಟ್ಟಿನಲ್ಲಿ ಭಾರತದ ಮುನ್ನಡೆಯ ಸಂಭಾವ್ಯತೆಯನ್ನು ಇದು ಇನ್ನೂ ಹೆಚ್ಚಾಗಿ ದೃಢೀಕರಿಸುತ್ತದೆ.

8.9 ಸಾರ್ವಜನಿಕ ಶಾಲಾ ವ್ಯವಸ್ಥೆಯ ಉದ್ದೇಶ ಅತ್ಯುನ್ನತ ಗುಣಮಟ್ಟದ ಶಿಕ್ಷಣವನ್ನು ನೀಡುವುದಾಗಿದ್ದು ಇದು ಬದುಕಿನ ಎಲ್ಲ ಕ್ಷೇತ್ರಗಳಲ್ಲಿ ಕಾರ್ಯನಿರತರಾಗಿರುವ ತಂದೆತಾಯಿಗಳಿಗೆ ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸಬೇಕಾದ ನಿಟ್ಟಿನಲ್ಲಿ ಅತ್ಯಂತ ಆಕರ್ಷಕ ಆಯ್ಕೆಯನ್ನಾಗಿ ಪರಿಗಣಿಸುವಂತೆ ಮಾಡಬೇಕಾದ ಗುರಿ ಹೊಂದಿದೆ.

8.10 ಕಾಲಕಾಲಕ್ಕೆ ಈ ಇಡೀ ವ್ಯವಸ್ಥೆಯ 'ಆರೋಗ್ಯ ತಪಾಸಣೆ' ಮಾಡುವ ಉದ್ದೇಶದಿಂದ, ವಿದ್ಯಾರ್ಥಿಗಳ ಕಲಿಕೆಯ ಮಟ್ಟವನ್ನು ಅಭ್ಯಸಿಸುವ ಒಂದು ಮಾದರಿ-ಆಧಾರಿತ ರಾಷ್ಟ್ರೀಯ ಸಾಧನಾ ಸರ್ವೇಕ್ಷಣೆಯನ್ನು (Sample based National Achievement Survey-NAS) ಕೈಗೊಳ್ಳಲಾಗುವುದು. ಹೊಸದಾಗಿ ಪ್ರಸ್ತಾಪಿಸಲಾಗಿರುವ ರಾಷ್ಟ್ರೀಯ ಮೌಲ್ಯಾಂಕನ ಕೇಂದ್ರ ಪರಖ್ (National Assessment Centre- PARAKH), ಎನ್.ಸಿ.ಇ.ಆರ್.ಟಿ. ಮತ್ತಿತರ ಸರ್ಕಾರಿ ಸಂಸ್ಥೆಗಳ ಸಹಯೋಗದಲ್ಲಿ ಇದು ನೆರವೇರಲಿದೆ. ಮೌಲ್ಯಾಂಕನ ವಿಧಾನಗಳು ಮತ್ತು ದತ್ತಾಂಶಗಳ ವಿಶ್ಲೇಷಣೆ ಈ ವಿಷಯಗಳನ್ನು ಕುರಿತಂತೆ ಈ ಸಂಸ್ಥೆಗಳು ಸರ್ವೇಕ್ಷಣೆಗಾಗಿ ನೆರವು ನೀಡಬಹುದಾಗಿರುತ್ತದೆ. ಸರ್ಕಾರಿ ಮತ್ತು ಖಾಸಗಿ ಶಾಲೆಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಈ ಸರ್ವೇಕ್ಷಣೆ ಅನ್ವಯವಾಗಲಿದೆ. ರಾಜ್ಯಗಳು ಸಹ ತಮ್ಮದೇ ಆದ ಜನಸಂಖ್ಯಾ-ಆಧಾರಿತ ರಾಜ್ಯ ಮೌಲ್ಯಾಂಕನ ಸರ್ವೇಕ್ಷಣೆಯನ್ನು (State Assessment Survey-SAS) ಕೈಗೊಳ್ಳಬಹುದಾಗಿದ್ದು ಇದರ ಫಲಿತಾಂಶಗಳನ್ನು ಕೇವಲ ಅಭಿವೃದ್ಧಿ ಸಂಬಂಧವಾದ ಉದ್ದೇಶಗಳಿಗಾಗಿ, ಶಾಲೆಗಳು ತಮ್ಮ ಒಟ್ಟಾರೆಯಾದ ಹಾಗೂ ಹೆಸರುಗಳನ್ನು ಬಹಿರಂಗಪಡಿಸದಂತೆ ಮಾಡಲಾಗುವ ವಿದ್ಯಾರ್ಥಿಗಳ ಸಾಧನೆ ಕುರಿತಾದ ವಿವರಗಳನ್ನು ಸಾರ್ವಜನಿಕವಾಗಿ ಪ್ರಕಟಪಡಿಸುವ ಸಲುವಾಗಿ, ಶಾಲಾ ಶಿಕ್ಷಣ ವ್ಯವಸ್ಥೆಯನ್ನು ನಿರಂತರವಾಗಿ ಉತ್ತಮಪಡಿಸುವ ಉದ್ದೇಶದ ಈಡೇರಿಕೆಗಾಗಿ ಬಳಸಿಕೊಳ್ಳಬಹುದಾಗಿರುತ್ತದೆ. ಉದ್ದೇಶಿತ ರಾಷ್ಟ್ರೀಯ ಮೌಲ್ಯಾಂಕನ ಕೇಂದ್ರ, ಪರಖ್ ಸ್ಥಾಪನೆಗೊಳ್ಳುವವರೆಗೆ ಎನ್.ಸಿ.ಇ.ಆರ್.ಟಿ. ಈ ಎನ್.ಎ.ಎಸ್. ಸರ್ವೇಕ್ಷಣ ಕಾರ್ಯಕ್ರಮವನ್ನು ಕೈಗೊಳ್ಳಬಹುದಾಗಿದೆ.

8.11 ಅಂತಿಮವಾಗಿ ಹೇಳಬೇಕಾದುದೇನೆಂದರೆ, ಶಾಲೆಗಳಲ್ಲಿ ಪ್ರವೇಶಾತಿ ಪಡೆಯುವ ಮಕ್ಕಳನ್ನು ಮತ್ತು ಹದಿಹರೆಯದವರನ್ನು ಈ ಇಡೀ ಪ್ರಕ್ರಿಯೆಯಲ್ಲಿ ಮರೆಯುವಂತಿಲ್ಲ. ಏಕೆಂದರೆ ಶಾಲಾವ್ಯವಸ್ಥೆ ಎಂಬುದನ್ನು ಏರ್ಪಡಿಸಿರುವುದೇ ಅವರ ಸಲುವಾಗಿ. ಹಾಗಾಗಿ ಅವರ, ಅದರಲ್ಲೂ ವಿಶೇಷವಾಗಿ ಹೆಣ್ಣುಮಕ್ಕಳ, ಭದ್ರತೆ, ಸುರಕ್ಷತೆ ಹಾಗೂ ಹಕ್ಕುಗಳ ಕಡೆಗೆ ಹೆಚ್ಚಿನ ಗಮನ ಹರಿಸುವಂತೆ, ಎಚ್ಚರವಹಿಸಬೇಕು. ಹದಿಹರೆಯದ ಮಕ್ಕಳು ಎದುರಿಸಬಹುದಾದ ಮಾದಕದ್ರವ್ಯ ಸೇವನೆಯ ಚಟ, ಹಿಂಸೆ ಸಹ ಸೇರಿದಂತೆ ಕಿರುಕುಳ ಮತ್ತು ಭೇದಭಾವ ಇಂತಹ ಪಿಡುಗುಗಳನ್ನು ಸ್ಪಷ್ಟವಾದ, ಸುರಕ್ಷಿತವಾದ ಮತ್ತು ಸಮರ್ಥವಾದ ವಿಧಾನಗಳಿಂದ ಪತ್ತೆ ಹಚ್ಚಿ ಅವುಗಳಿಗೆ ಸೂಕ್ತ ರೀತಿಯಲ್ಲಿ ಪರಿಹಾರ ಮಾಡಬೇಕು. ಅಂತೆಯೇ ಮಕ್ಕಳ ಹಾಗೂ ಹದಿಹರೆಯದವರ ಹಕ್ಕುಗಳ ಸಂರಕ್ಷಣೆ ಮತ್ತು ಸುರಕ್ಷತೆ ಕುರಿತಾದ ಯಾವುದೇ ಬಗೆಯ ಕಾನೂನಿನ ಭಂಗವನ್ನು ತೀವ್ರವಾಗಿ ಪರಿಗಣಿಸಿ ಪರಿಹಾರ ಒದಗಿಸಬೇಕು. ಪರಿಣಾಮಕಾರಿಯಾಗಿದ, ಸಕಾಲಕ್ಕೆ ಒದಗಬಹುದಾದ ಮತ್ತು ಎಲ್ಲ ವಿದ್ಯಾರ್ಥಿಗಳ ಅರಿವಿಗೆ ಸ್ಪಷ್ಟವಾಗಿ ಬರಬಹುದಾದಂತಹ ಈ ನಿಟ್ಟಿನ ಕ್ರಮಗಳ ಮತ್ತು ವಿಧಾನಗಳ ಅಭಿವೃದ್ಧಿಗಾಗಿ ಅತ್ಯಂತ ಹೆಚ್ಚಿನ ಆದ್ಯತೆ ನೀಡಲಾಗುವುದು.

ಭಾಗ- II ಉನ್ನತ ಶಿಕ್ಷಣ

9. ಗುಣಮಟ್ಟದ ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳು: ಭಾರತದ ಉನ್ನತ ಶಿಕ್ಷಣ ವ್ಯವಸ್ಥೆಗೆ ಹೊಸ ಹಾಗೂ ಪ್ರಗತಿಪರ ದೃಷ್ಟಿಕೋನ.

9.1 ಮನುಷ್ಯನ ಉನ್ನತಿಯ ಜೊತೆಗೆ ಸಮಾಜದ ಸ್ವಾಸ್ಥ್ಯವನ್ನು ಕಾಯ್ದುಕೊಳ್ಳುವಲ್ಲಿ ಹಾಗೂ ಸಂವಿಧಾನದ ಕಲ್ಪನೆಗೆ ತಕ್ಕಂತೆ ಭಾರತವನ್ನು ಅಭಿವೃದ್ಧಿಪಡಿಸುವಲ್ಲಿ ಉನ್ನತ ಶಿಕ್ಷಣದ ಪಾತ್ರ ಅತ್ಯಂತ ಮಹತ್ವದ್ದು. ಒಂದು ಪ್ರಜಾಸತ್ತಾತ್ಮಕ, ಅಷ್ಟೇ ಸಾಮಾಜಿಕವಾಗಿ

ಜಾಗೃತವಾಗಿರುವ, ಸುಸಂಸ್ಕೃತವಂತ ಮತ್ತು ಸ್ವಾತಂತ್ರ, ಸಮಾನತೆ, ಭ್ರಾತೃತ್ವ ಮತ್ತು ಎಲ್ಲರಿಗೂ ನ್ಯಾಯದ ಮೌಲ್ಯವನ್ನು ಎತ್ತಿ ಹಿಡಿಯುವ ಮಾನವಿಕ ರಾಷ್ಟ್ರವಾಗಿ ರೂಪಿಸುವಲ್ಲಿಯೂ ಅದು ನಿರ್ಣಾಯಕ ಪಾತ್ರ ವಹಿಸುತ್ತದೆ.

9.1.1 21ನೇ ಶತಮಾನದ ಅಗತ್ಯಗಳಿಗೆ ಅನುಗುಣವಾಗಿ ಗುಣಮಟ್ಟದ ಉನ್ನತ ಶಿಕ್ಷಣವು ಉತ್ತಮ, ಚಿಂತನಶೀಲ, ಸುಸಂಗತವಾದ ಮತ್ತು ಕ್ರಿಯಾಶೀಲ ವ್ಯಕ್ತಿಗಳನ್ನು ಅಭಿವೃದ್ಧಿಪಡಿಸುವ ಗುರಿಯನ್ನು ಹೊಂದಿರಬೇಕಾಗುತ್ತದೆ. ಒಬ್ಬ ವ್ಯಕ್ತಿಯು ಆಸಕ್ತಿಯ ಒಂದು ಅಥವಾ ಅದಕ್ಕಿಂತ ಹೆಚ್ಚು ವಿಶೇಷ ಕ್ಷೇತ್ರಗಳಲ್ಲಿ ಆದ್ಯಂತವಾಗಿ ಅಧ್ಯಯನ ಮಾಡಲು ಅವಕಾಶವಾಗಬೇಕು. ಇದರ ಜೊತೆಗೆ ವಿಶಿಷ್ಟ ಗುಣಗಳು, ನೈತಿಕ ಹಾಗೂ ಸಾಂವಿಧಾನಿಕವಾದ ಮೌಲ್ಯಗಳು, ಬೌದ್ಧಿಕ ಕುತೂಹಲ, ವೈಜ್ಞಾನಿಕ ಮನೋಭಾವ, ಕ್ರಿಯಾಶೀಲತೆ, ಸೇವಾಸ್ಫೂರ್ತಿಯನ್ನು ಬೆಳೆಸಿಕೊಳ್ಳಬೇಕು. ವಿಜ್ಞಾನ, ಸಾಮಾಜಿಕ ವಿಜ್ಞಾನ, ಕಲೆ, ಮಾನವೀಯತೆ, ಭಾಷೆಯ ಜೊತೆಗೆ ವೃತ್ತಿಪರತೆ, ತಾಂತ್ರಿಕ ಮತ್ತು ಔದ್ಯೋಗಿಕ ವಿಷಯಗಳನ್ನು ಕರಗತ ಮಾಡಿಕೊಳ್ಳಬೇಕು. ಒಂದು ಗುಣಮಟ್ಟದ ಶಿಕ್ಷಣ ಎಂದರೆ ಅದು ವೈಯಕ್ತಿಕ ಪರಿಪೂರ್ಣತೆ ಮತ್ತು ತಿಳುವಳಿಕೆಯನ್ನು ಸಾಧ್ಯವಾಗಿಸಬೇಕು, ಸಾರ್ವಜನಿಕ ಕ್ಷೇತ್ರಗಳಲ್ಲಿ ರಚನಾತ್ಮಕವಾಗಿ ತೊಡಗಿಸಿಕೊಳ್ಳವುದು ಮತ್ತು ಸಮಾಜಕ್ಕೆ ರಚನಾತ್ಮಕವಾದ ಕೊಡುಗೆಯನ್ನು ನೀಡುವಂತೆ ಮಾಡಬೇಕು. ಅದು ವಿದ್ಯಾರ್ಥಿಗಳನ್ನು ಹೆಚ್ಚು ಅರ್ಥಪೂರ್ಣ ಹಾಗೂ ತೃಪ್ತ ಜೀವನಕ್ಕೆ ಅಣಿಗೊಳಿಸಬೇಕು ಹಾಗೂ ಕೆಲಸದ ಮಾದರಿ ಮತ್ತು ಆರ್ಥಿಕ ಸ್ವಾವಲಂಬನೆಯನ್ನು ಸಾಧಿಸುವಂತೆ ಮಾಡಬೇಕು.

9.1.2 ಒಬ್ಬ ವ್ಯಕ್ತಿಯನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವ ಉದ್ದೇಶದಿಂದ, ಪ್ರಿ-ಸ್ಕೂಲ್‌ನಿಂದ ಉನ್ನತ ಶಿಕ್ಷಣದ ತನಕ ಪ್ರತಿ ಹಂತದ ಕಲಿಕೆಯಲ್ಲಿ ನಿರ್ದಿಷ್ಟವಾದ ಕೌಶಲಗಳು ಮತ್ತು ಮೌಲ್ಯಗಳನ್ನು ಅಳವಡಿಸಿಕೊಳ್ಳುವುದು ಮುಖ್ಯವಾಗುತ್ತದೆ.

9.1.3 ಸಾಮಾಜಿಕ ಮಟ್ಟದಲ್ಲಿ, ಉನ್ನತ ಶಿಕ್ಷಣವು ಜಾಗೃತಾವಸ್ಥೆಯ, ಸಾಮಾಜಿಕ ಪ್ರಜ್ಞಾವಂತಿಕೆಯನ್ನು ಹೊಂದಿರುವ, ಪ್ರಾಜ್ಞ ಮತ್ತು ಕೌಶಲಪೂರ್ಣ ರಾಷ್ಟ್ರದ ಅಭಿವೃದ್ಧಿಯನ್ನು ಸಾಧ್ಯವಾಗಿಸಬೇಕು. ಇಂತಹ ರಾಷ್ಟ್ರವು ತನ್ನ ಸಮಸ್ಯೆಗಳಿಗೆ ಭರಪೂರವಾದ ಪರಿಹಾರಗಳನ್ನು ಕಂಡುಕೊಳ್ಳಲು ಮತ್ತು ಅವುಗಳನ್ನು ಅನುಷ್ಠಾನಗೊಳಿಸಲು ಅರ್ಹತೆಯನ್ನು ಪಡೆದುಕೊಳ್ಳುತ್ತದೆ. ಜ್ಞಾನದ ಸೃಷ್ಟಿ ಮತ್ತು ಹೊಸ ಆವಿಷ್ಕಾರಕ್ಕೆ ಉನ್ನತ ಶಿಕ್ಷಣವು ತಳಹದಿಯಾದಾಗ ರಾಷ್ಟದ ಆರ್ಥಿಕ ಬೆಳವಣಿಗೆಗೆ ಅದ್ಭುತವಾದ ಕೊಡುಗೆ ನೀಡಲು ಸಾಧ್ಯವಾಗುತ್ತದೆ. ಹಾಗಾಗಿ ಗುಣಮಟ್ಟದ ಉನ್ನತ ಶಿಕ್ಷಣದ ಉದ್ದೇಶ ಕೇವಲ ವ್ಯಕ್ತಿಗಳ ಉದ್ಯೋಗಕ್ಕೆ ಉತ್ತಮ ಅವಕಾಶಗಳನ್ನು ಸೃಷ್ಟಿಸುವುದು ಮಾತ್ರ ಆಗಬಾರದು. ಅತ್ಯಂತ ಚಲನಶೀಲ, ಸಾಮಾಜಿಕವಾಗಿ ತೊಡಗಿಸಿಕೊಂಡ, ಸಾಮುದಾಯಿಕ ಸಹಕಾರಕ್ಕೆ ನಾಂದಿಯಾಗಬೇಕು ಮತ್ತು ಆ ಮೂಲಕ ಸಂತೃಪ್ತ, ಸಂಘಟನಾತ್ಮಕ, ಸಾಂಸ್ಕೃತಿಕ, ಉತ್ಪಾದಕ, ನವೀನ, ಪ್ರಗತಿಪರ ಮತ್ತು ಉಜ್ವಲ ರಾಷ್ಟ್ರದ ನಿರ್ಮಾಣಕ್ಕೆ ದಾರಿ ಮಾಡಿಕೊಡಬೇಕು.

9.2 ಪ್ರಸ್ತುತ ಭಾರತದಲ್ಲಿ ಉನ್ನತ ಶಿಕ್ಷಣ ವ್ಯವಸ್ಥೆ ಎದುರಿಸುತ್ತಿರುವ ಕೆಲವು ಪ್ರಮುಖ ಸಮಸ್ಯೆಗಳಲ್ಲಿ ಈ ಕೆಳಗಿನವು ಸೇರಿವೆ:

(ಎ) ಛಿದ್ರ ಛಿದ್ರವಾಗಿರುವ ಉನ್ನತ ಶಿಕ್ಷಣದ ಪರಿಸರ ವ್ಯವಸ್ಥೆ;

(ಬಿ) ಜ್ಞಾನಗ್ರಹಣದ ಕೌಶಲಗಳು ಮತ್ತು ಕಲಿಕಾ ಫಲಿತಾಂಶಗಳ ಅಭಿವೃದ್ಧಿಯ ಕಡೆಗೆ ಕಡಿಮೆ ಆದ್ಯತೆ;

(ಸಿ) ಅವಧಿಗೆ ಮುನ್ನವೇ ಪರಿಣತಿ ಮತ್ತು ತೀರಾ ಸಂಕುಚಿತವಾದ ದಾರಿಯಲ್ಲಿ ವಿದ್ಯಾರ್ಥಿಗಳು ಸಾಗುವಂತೆ ಮಾಡುವುದರೊಂದಿಗೆ ಶೈಕ್ಷಣಿಕ ವಿಭಾಗಗಳ ಸಂಕೀರ್ಣ ವಿಯೋಜನೆ,

(ಡಿ) ಸ್ಥಳೀಯ ಭಾಷೆಗಳಲ್ಲಿ ಬೋಧಿಸುವ ಕೆಲವೇ ಕೆಲವು ಎಚ್.ಇ.ಐ.ಗಳೊಂದಿಗೆ ಸಮಾಜೋ-ಆರ್ಥಿಕವಾಗಿ ಹಿಂದುಳಿದಿರುವ ಕ್ಷೇತ್ರದಲ್ಲಿ ತೀರಾ ಸೀಮಿತ ಅವಕಾಶ;

(ಇ) ಸೀಮಿತ ಸಂಖ್ಯೆಯ ಶಿಕ್ಷಕರು ಮತ್ತು ಸಾಂಸ್ಥಿಕ ಸ್ವಾಯತ್ತತೆ;

(ಎಫ್) ಅರ್ಹತೆ ಆಧಾರಿತ ಉದ್ಯೋಗ ನಿರ್ವಹಣೆ ಮತ್ತು ಬೋಧನಾ ವಿಭಾಗದ ಪ್ರಗತಿಯ ಅಸಮರ್ಪಕ ವ್ಯವಸ್ಥೆ;

(ಜಿ) ಬಹುತೇಕ ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳಲ್ಲಿ ಸಂಶೋಧನೆಗೆ ನೀಡದ ಆದ್ಯತೆ, ಮತ್ತು ಎಲ್ಲ ಶೈಕ್ಷಣಿಕ ವಿಭಾಗಗಳಲ್ಲಿ ಸಂಶೋಧನಾ ಹಣಕಾಸಿನ ವಿಚಾರದಲ್ಲಿ ಸ್ಪರ್ಧಾತ್ಮಕ ತಜ್ಞ ಪರಾಮರ್ಶೆಯ ಕೊರತೆ;

(ಎಚ್) ಎಚ್.ಇ.ಐ.ಗಳ ಹಿತಕರವಲ್ಲದ ಆಡಳಿತ ಮತ್ತು ನಾಯಕತ್ವ

(ಐ) ಪರಿಣಾಮಕಾರಿಯಲ್ಲದ ನಿಯಂತ್ರಣ ವ್ಯವಸ್ಥೆ; ಮತ್ತು

(ಜೆ) ಪದವಿಪೂರ್ವ ಶಿಕ್ಷಣದ ಕಳಪೆ ಗುಣಮಟ್ಟಕ್ಕೆ ಕಾರಣವಾದ ಬೃಹತ್ ಸಂಖ್ಯೆಯ ಮಾನ್ಯತೆ ನೀಡುವ ವಿಶ್ವವಿದ್ಯಾಲಯಗಳು.

9.3 ಈ ಸವಾಲುಗಳನ್ನು ಮೀರುವ ದೃಷ್ಟಿಯಿಂದ ಉನ್ನತ ಶಿಕ್ಷಣ ವ್ಯವಸ್ಥೆಯನ್ನು ಕೂಲಂಕಷವಾಗಿ ಪರಾಮರ್ಶೆ ನಡೆಸಲು ಹಾಗೂ ಪುನಶ್ಚೇತನಗೊಳಿಸಲು ಈ ನೀತಿ ಪರ್ಯಾಲೋಚನೆ ಅತ್ಯಗತ್ಯವಾಗಿದೆ ಮತ್ತು ಈ ಮೂಲಕ ಸಮಾನತೆ ಮತ್ತು ಒಳಗೊಳ್ಳುವಿಕೆಯೊಂದಿಗೆ ಅತ್ಯುತ್ತಮ ಗುಣಮಟ್ಟದ ಉನ್ನತ ಶಿಕ್ಷಣವನ್ನು ನೀಡಬೇಕಾಗಿದೆ. ಈ ನೀತಿಯ ದೃಷ್ಟಿಕೋನದಲ್ಲಿ ಈಗಿರುವ ವ್ಯವಸ್ಥೆಗೆ ತರಬಹುದಾದ ಪ್ರಮುಖ ಬದಲಾವಣೆಗಳಲ್ಲಿ ಈ ಕೆಳಗಿನವು ಸೇರಿವೆ;

(ಎ) ಬೃಹತ್, ಬಹುಶಿಸ್ತೀಯ ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳನ್ನು ಒಳಗೊಂಡ ಉನ್ನತ ಶಿಕ್ಷಣ ವ್ಯವಸ್ಥೆಯನ್ನು ಕಟ್ಟುವ ನಿಟ್ಟಿನಲ್ಲಿ, ಭಾರತದಾದ್ಯಂತ ಕನಿಷ್ಠ ಒಂದು ಅಥವಾ ಪ್ರತಿ ಜಿಲ್ಲೆಯಲ್ಲಿ ಮತ್ತು ಹೆಚ್ಚು ಎಚ್.ಇ.ಐ.ಗಳು ಸ್ಥಳೀಯ/ಭಾರತೀಯ ಭಾಷೆಯಲ್ಲಿ ಬೋಧನಾ ಮಾಧ್ಯಮವನ್ನು ಅಥವಾ ಕಾರ್ಯಕ್ರಮವನ್ನು (ಕೋರ್ಸ್) ನೀಡುವಂತಾಗಬೇಕು.

(ಬಿ) ಹೆಚ್ಚು ಬಹುಶಿಸ್ತೀಯ ಪದವಿಪೂರ್ವ ಶಿಕ್ಷಣದತ್ತ ಹೆಜ್ಜೆ;

(ಸಿ) ಬೋಧನಾ ವಿಭಾಗ ಮತ್ತು ಸಾಂಸ್ಥಿಕ ಸ್ವಾಯತ್ತತೆಯತ್ತ ಹೆಜ್ಜೆ;

(ಡಿ) ಪಠ್ಯಕ್ರಮ, ಬೋಧನಾಕ್ರಮ, ಮೌಲ್ಯಮಾಪನದ ಪುನಶ್ಚೇತನ ಮತ್ತು ವಿದ್ಯಾರ್ಥಿ ಅನುಭಗಳನ್ನು ಹೆಚ್ಚಿಸಲು ವಿದ್ಯಾರ್ಥಿ ಬೆಂಬಲ;

(ಇ) ಬೋಧನೆ, ಸಂಶೋಧನೆ ಮತ್ತು ಸೇವೆಗಳ ಆಧಾರದಲ್ಲಿ ಅರ್ಹತಾನುಸಾರ ನೇಮಕಾತಿಗಳು ಮತ್ತು ಉದ್ಯೋಗ ಪ್ರಗತಿಯ ಮೂಲಕ ಬೋಧನೆ ಮತ್ತು ಸಾಂಸ್ಥಿಕ ನಾಯಕತ್ವದ ಸ್ಥಾನಗಳ ಸಮಗ್ರತೆಯನ್ನು ಮರುದೃಢೀಕರಿಸುವುದು;

(ಎಫ್) ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳಲ್ಲಿ ಅಭೂತಪೂರ್ವವಾದ ತಜ್ಞ-ಪರಾಮರ್ಶೆಯ ಸಂಶೋಧನೆ ಮತ್ತು ಸಕ್ರಿಯ ಶ್ರೇಯಾಂಕದ ಸಂಶೋಧನೆಗೆ ಹಣಕಾಸು ಸೌಲಭ್ಯವನ್ನು ಕಲ್ಪಿಸಲು ರಾಷ್ಟ್ರೀಯ ಸಂಶೋಧನಾ ಪ್ರತಿಷ್ಠಾನವನ್ನು ಸ್ಥಾಪಿಸುವುದು;

(ಜಿ) ಶೈಕ್ಷಣಿಕ ಹಾಗೂ ಆಡಳಿತಾತ್ಮಕ ಸ್ವಾಯತ್ತತೆಯೊಂದಿಗೆ ಅರ್ಹ ಸ್ವತಂತ್ರ ಮಂಡಳಿಗಳಿಂದ ಎಚ್.ಇ.ಐ.ಗಳ ನಿರ್ವಹಣೆಯನ್ನು ನಡೆಸುವುದು;

(ಎಚ್) ಉನ್ನತ ಶಿಕ್ಷಣಕ್ಕೆ ಏಕ ನಿಯಂತ್ರಕರ ಮೂಲಕ 'ಸರಳ ಆದರೆ ಕಟ್ಟುನಿಟ್ಟಿನ' ನಿಯಂತ್ರಣ;

(ಐ) ಅಭೂತಪೂರ್ವವಾದ ಸಾರ್ವಜನಿಕ ಶಿಕ್ಷಣಕ್ಕೆ ಉತ್ತಮ ಅವಕಾಶಗಳು; ಅವಕಾಶ ವಂಚಿತ ಹಾಗೂ ದುರ್ಬಲ ವರ್ಗದ ವಿದ್ಯಾರ್ಥಿಗಳಿಗೆ ಖಾಸಗಿ/ಮಾನವಿಕ ವಿಶ್ವವಿದ್ಯಾಲಯಗಳಿಂದ ವಿದ್ಯಾರ್ಥಿ ವೇತನ; ಆನ್‌ಲೈನ್ ಶಿಕ್ಷಣ, ಮತ್ತು ಮುಕ್ತ ದೂರ ಶಿಕ್ಷಣ (ಓ.ಡಿ.ಎಲ್); ಮತ್ತು ವಿಕಲಾಂಗರಿಗೆ ಲಭ್ಯವಿರುವ ಮತ್ತು ಅವಕಾಶವಿರುವ ಎಲ್ಲ ಕಲಿಕಾ ವಸ್ತುಗಳ ಮತ್ತು ಮೂಲಸೌಕರ್ಯಗಳನ್ನು ಕಲ್ಪಿಸುವಂತಹ ಸರಣಿ ಕ್ರಮಗಳ ಮೂಲಕ ಅವಕಾಶ, ಸಮಾನತೆ ಮತ್ತು ಒಳಗೊಳ್ಳುವ ಕೆಲಸಗಳನ್ನು ಇನ್ನಷ್ಟು ಹೆಚ್ಚಿಸುವುದು;

10. ಸಾಂಸ್ಥಿಕ ಪುನಾರಚನೆ ಮತ್ತು ಬಲವರ್ಧನೆ

10.1 ಉನ್ನತ ಶಿಕ್ಷಣ ವ್ಯವಸ್ಥೆಯನ್ನು ಛಿದ್ರಛಿದ್ರಗೊಳಿಸುವ ಕೆಲಸಕ್ಕೆ ಕೊನೆ ಹಾಡಬೇಕು ಎಂಬುದು ಈ ನೀತಿಯ ಮುಖ್ಯ ಉದ್ದೇಶ. ಉನ್ನತ ಶಿಕ್ಷಣ ಸಂಸ್ಥೆಗಳನ್ನು ಬೃಹತ್ ಬಹುಶಿಸ್ತೀಯ ವಿಶ್ವವಿದ್ಯಾಲಯ, ಕಾಲೇಜುಗಳಾಗಿ ಮತ್ತು ಎಚ್.ಇ.ಐ ಕ್ಲಸ್ಟರ್/ಜ್ಞಾನದ ಕೇಂದ್ರಗಳಾಗಿ ಪರಿವರ್ತನೆ ಮಾಡುವುದು, ಪ್ರತಿಯೊಂದರಲ್ಲೂ 3000 ಅಥವಾ ಅದಕ್ಕೂ ಹೆಚ್ಚು ವಿದ್ಯಾರ್ಥಿಗಳು ಪ್ರಯೋಜನ ಪಡೆಯುವಂತೆ ಮಾಡುವುದು ಇದರ ಗುರಿ. ಇದರಿಂದ ವಿದ್ವಾಂಸರು ಮತ್ತು ತಜ್ಞರ ಚಲನಶೀಲ ಸಮೂಹವನ್ನು ಕಟ್ಟಲು, ಅಪಾಯಕಾರಿಯಾದ ಪ್ರಭೃತಿಗಳನ್ನು ಹದ್ದುಬಸ್ತಿನಲ್ಲಿಡಲು, ವಿದ್ಯಾರ್ಥಿಗಳು ಕ್ರೀಡೆಯನ್ನೂ ಒಳಗೊಂಡಂತೆ ಕಲಾತ್ಮಕ, ರಚನಾತ್ಮಕ ಮತ್ತು ವಿಶ್ಲೇಷಣಾತ್ಮಕ ವಿಷಯಗಳು ಸೇರಿದಂತೆ ಎಲ್ಲ ಶೈಕ್ಷಣಿಕ ವಿಭಾಗಗಳಲ್ಲಿ ಸುಸಂಗತವಾದ ಜ್ಞಾನವನ್ನು ಬೆಳೆಸಿಕೊಳ್ಳುವಂತೆ ಮಾಡಲು ಸಹಾಯವಾಗುತ್ತದೆ. ಇದರ ಜೊತೆಗೆ ಎಲ್ಲ ಶೈಕ್ಷಣಿಕ ವಿಭಾಗಗಳ ಸಂಶೋಧನೆಯೂ ಸೇರಿದಂತೆ ಸಕ್ರಿಯ ಸಂಶೋಧನಾ ಸಮೂಹಗಳನ್ನು ರೂಪಿಸಲು ಮತ್ತು ಉನ್ನತ ಶಿಕ್ಷಣದ ಎಲ್ಲ ಹಂತಗಳಲ್ಲಿ ವಸ್ತು ಮತ್ತು ಮಾನವ ಸಂಬಂಧಿ ಸಂಪನ್ಮೂಲದ ದಕ್ಷತೆಯನ್ನು ಹೆಚ್ಚಿಸಲು ಇದರಿಂದ ಸಾಧ್ಯವಾಗುತ್ತದೆ.

10.2 ಉನ್ನತ ಶಿಕ್ಷಣವನ್ನು ರೂಪಿಸುವ ಈ ಕೆಲಸದಲ್ಲಿ ಬೃಹತ್ ಬಹುಶಿಸ್ತೀಯ ವಿಶ್ವವಿದ್ಯಾಲಯಗಳು ಮತ್ತು ಎಚ್.ಇ.ಐ. ಕ್ಲಸ್ಟರ್‌ಗಳಿಗೆ ಇದನ್ನು ವಿಸ್ತರಿಸುವುದು ಈ ನೀತಿಯ ಆದ್ಯತೆಗಳಾಗಬೇಕು. ಅತ್ಯಂತ ಚಲನಶೀಲ ಬಹುಶಿಸ್ತೀಯ ಪರಿಸರದಲ್ಲಿ ಅಧ್ಯಯನ ಮಾಡುತ್ತಿರುವ ಭಾರತ ಹಾಗೂ ವಿಶ್ವದ ಅನೇಕ ಭಾಗಗಳ ಸಾವಿರಾರು ವಿದ್ಯಾರ್ಥಿಗಳನ್ನು ಹೊಂದಿರುವ ತಕ್ಷಶಿಲಾ, ನಳಂದಾ, ವಲ್ಲಭಿ ಮತ್ತು ವಿಕ್ರಮಶಿಲಾದಂತಹ ಭಾರತದ ಪ್ರಾಚೀನ ವಿಶ್ವವಿದ್ಯಾಲಯಗಳ ಗಮನಕ್ಕೂ ಇದನ್ನು ತರಬಹುದಾಗಿದೆ. ಇಲ್ಲಿನ ವಿದ್ಯಾರ್ಥಿಗಳು ಬೃಹತ್ ಬಹುಶಿಸ್ತೀಯ ಸಂಶೋಧನೆ ಮತ್ತು ಬೋಧನಾ ವಿಶ್ವವಿದ್ಯಾಲಯಗಳಲ್ಲಿ ಬಹುದೊಡ್ಡ ಯಶಸ್ಸನ್ನು ಸಾಧಿಸಿರುತ್ತಾರೆ. ಸುಸಂಗತವಾದ ಮತ್ತು ಪರಿವರ್ತನಶೀಲ ವ್ಯಕ್ತಿಗಳನ್ನು ಸೃಷ್ಟಿಸಲು ಭಾರತವು ಈ ಶ್ರೇಷ್ಠ ಭಾರತೀಯ ಸಂಪ್ರದಾಯವನ್ನು ಮತ್ತೆ ಜಾರಿಗೆ ತರಬೇಕಾಗಿದೆ. ಇದು ಈಗಾಗಲೇ ಇತರ ರಾಷ್ಟ್ರಗಳನ್ನು ಶೈಕ್ಷಣಿಕ ಹಾಗೂ ಆರ್ಥಿಕವಾಗಿ ರೂಪಾಂತರಗೊಳಿಸಿದೆ.

10.3 ಉನ್ನತ ಶಿಕ್ಷಣದ ಈ ದೃಷ್ಟಿಕೋನಕ್ಕೆ, ವಿಶೇಷವಾಗಿ ಹೊಸ ಪರಿಕಲ್ಪನೆಯ/ಗ್ರಹಿಕೆ ಒಂದು ಉನ್ನತ ಶಿಕ್ಷಣ ಸಂಸ್ಥೆ (ಎಚ್.ಇ.ಐ.), ಅಂದರೆ ವಿಶ್ವವಿದ್ಯಾಲಯ ಅಥವಾ ಕಾಲೇಜು ಏನನ್ನು ಒಳಗೊಂಡಿರಬೇಕು ಎಂಬ ಅರಿವು ಇರಬೇಕಾಗುತ್ತದೆ. ಒಂದು ವಿಶ್ವವಿದ್ಯಾಲಯ ಎಂದರೆ ಉನ್ನತ ಕಲಿಕೆಯ ಬಹುಶಿಸ್ತೀಯ ಸಂಸ್ಥೆಯಾಗಿದ್ದು, ಅದು ಪದವಿ ಪೂರ್ವ ಮತ್ತು ಪದವಿ ಕಾರ್ಯಕ್ರಮಗಳನ್ನು ನೀಡುವುದು ಮಾತ್ರವಲ್ಲದೆ ಉನ್ನತ ಗುಣಮಟ್ಟದ ಬೋಧನೆ, ಸಂಶೋಧನೆ ಮತ್ತು ಸಮುದಾಯದ ತೊಡಗಿಸಿಕೊಳ್ಳುವಿಕೆಯನ್ನು ಅಪೇಕ್ಷಿಸುತ್ತದೆ. ಹಾಗಾಗಿ ಈ ವಿಶ್ವವಿದ್ಯಾಲಯದ ವ್ಯಾಖ್ಯಾನದಲ್ಲಿ ಬೋಧನೆ ಮತ್ತು ಸಂಶೋಧನೆಗೆ ಸಮಾನವಾದ ಒತ್ತು ನೀಡುವಂತಹ ಸಂಸ್ಥೆಗಳ

ಸಮೂಹಕ್ಕೆ ಅವಕಾಶ ನೀಡುತ್ತದೆ. ಇಲ್ಲಿ ಸಂಶೋಧನೆಯ ಬಗೆಗೆ ತುಡಿತ ಇರುವ ವಿಶ್ವವಿದ್ಯಾಲಯಗಳು ಎಂದರೆ, ಬೋಧನೆಗೆ ಹೆಚ್ಚು ಒತ್ತು ನೀಡುವುದರ ಜೊತೆ ಜೊತೆಗೇ ಅತ್ಯಂತ ಗಮನಾರ್ಹವಾದ ಸಂಶೋಧನೆಯನ್ನು ಕೈಗೊಳ್ಳುವುದಾಗಿದೆ. ಈ ಮಧ್ಯೆ, ಒಂದು ಸ್ವಾಯತ್ತ ಪದವಿ ಅನುದಾನ ಕಾಲೇಜು (ಎ.ಸಿ.), ಪದವಿ ಪೂರ್ವ ಡಿಗ್ರಿಗಳನ್ನು ಮಂಜೂರು ಮಾಡುವ ಹಾಗೂ ಕೇವಲ ಪದವಿಪೂರ್ವ ಬೋಧನೆಗೆ ಮಾತ್ರ ನಿರ್ಬಂಧ ವಿಧಿಸದೇ ಇದ್ದರೂ ಕೂಡ ಪದವಿಪೂರ್ವ ಬೋಧನೆಯ ಮೇಲೆ ಪ್ರಾಥಮಿಕ ಆದ್ಯತೆಯನ್ನು ಹೊಂದಿರುವ ಉನ್ನತ ಕಲಿಕೆಯ ಬೃಹತ್ ಬಹುಶಿಸ್ತೀಯ ಸಂಸ್ಥೆಗೆ ಅದನ್ನು ಸೂಚಿಸುತ್ತದೆ.

10.4 ಶ್ರೇಣೀಕೃತ ಮಾನ್ಯತೆಯ, ಪಾರದರ್ಶಕ ವ್ಯವಸ್ಥೆಯ ಮೂಲಕ ಕಾಲೇಜುಗಳಿಗೆ ಶ್ರೇಣೀಕೃತವಾದ ಸ್ವಾಯತ್ತತೆಯನ್ನು ನೀಡಲು ಹಂತ ಹಂತವಾದ ವ್ಯವಸ್ಥೆಯನ್ನು ರೂಪಿಸಲಾಗುವುದು. ಮಾನ್ಯತೆಯನ್ನು ಪಡೆಯಲು ಪ್ರತಿ ಹಂತದಲ್ಲಿಯೂ ಅಗತ್ಯವಾದ ಕನಿಷ್ಠ ಅರ್ಹತೆಯನ್ನು ಕ್ರಮೇಣ ಪಡೆಯುವಂತಾಗಲು ಕಾಲೇಜುಗಳಿಗೆ ಉತ್ತೇಜನ, ಮಾರ್ಗದರ್ಶನ, ಬೆಂಬಲ ನೀಡಲಾಗುವುದು. ಕಾಲಕ್ರಮೇಣ, ಪ್ರತಿಯೊಂದು ಕಾಲೇಜು ಕೂಡ ಪದವಿಯನ್ನು ಮಂಜೂರು ಮಾಡುವ ಒಂದು ಸ್ವಾಯತ್ತ ಕಾಲೇಜಾಗಿ ಅಥವಾ ವಿಶ್ವವಿದ್ಯಾಲಯದ ಅಧೀನ ಕಾಲೇಜಾಗಿ ಅಭಿವೃದ್ಧಿ ಮಾಡಲು ಒತ್ತು ನೀಡಲಾಗುವುದು-ಮುಂದಿನ ಹಂತದಲ್ಲಿ ಈ ಕಾಲೇಜು ಸಂಪೂರ್ಣವಾಗಿ ವಿಶ್ವವಿದ್ಯಾಲಯದ ಭಾಗವೇ ಆಗಿಬಿಡುತ್ತದೆ. ಸೂಕ್ತ ದೃಢೀಕರಣದ ಮೂಲಕ ಪದವಿ ಮಂಜೂರು ಮಾಡುವ ಸ್ವಾಯತ್ತ ಕಾಲೇಜುಗಳು ಅಪೇಕ್ಷೆಪಟ್ಟರೆ ಸಂಶೋಧನಾ ಕೇಂದ್ರೀಕೃತ ಅಥವಾ ಬೋಧನಾ ಕೇಂದ್ರೀಕೃತ ವಿಶ್ವವಿದ್ಯಾಲಯಗಳಾಗಿ ರೂಪುಗೊಳ್ಳಲು ಸಾಧ್ಯವಿದೆ.

10.5 ಇಲ್ಲಿ ಸ್ಪಷ್ಟವಾಗಿ ತಿಳಿಸಲಾಗಿರುವ ಅಂಶ ಏನೆಂದರೆ ಈ ಮೂರು ವಿಶಾಲ ತಳಹದಿಯ ಸಂಸ್ಥೆಗಳು ಯಾವುದೇ ಕಾರಣಕ್ಕೂ ಸಂಕೀರ್ಣ, ಬಹಿಷ್ಕೃತವಾದ ವರ್ಗೀಕರಣವನ್ನು ಹೊಂದಿರದೇ ಅವಿಚ್ಛಿನ್ನವಾಗಿರಬೇಕು. ಉನ್ನತ ಶಿಕ್ಷಣ ಸಂಸ್ಥೆಗಳು ತಮ್ಮದೇ ಆದ ಯೋಜನೆಗಳು, ಕ್ರಮಗಳು ಮತ್ತು ಪರಿಣಾಮಕಾರಿತ್ವದ ಆಧಾರದಲ್ಲಿ ಕ್ರಮೇಣ ಒಂದು ವಿಭಾಗದಿಂದ ಇನ್ನೊಂದಕ್ಕೆ ವರ್ಗಾವಣೆ ಹೊಂದಲು ಸ್ವಾಯತ್ತತೆ ಮತ್ತು ಸ್ವಾತಂತ್ರ್ಯವನ್ನು ಹೊಂದಿರುತ್ತದೆ. ಇಂತಹ ಸಂಸ್ಥೆಗಳ ಪಾಲಿಗೆ ಹೆಗ್ಗುರುತಾಗಿರುವುದು ಏನೆಂದರೆ ಅವು ತಮ್ಮ ಗುರಿಗಳು ಮತ್ತು ಕೆಲಸದ ಮೇಲೆ ಗಮನವನ್ನು ಕೇಂದ್ರೀಕರಿಸುವುದು. ಮಾನ್ಯತೆ ನೀಡುವ ವ್ಯವಸ್ಥೆಯು, ಎಚ್.ಇ.ಐ.ಗಳ ಈ ವಲಯದ ಉದ್ದಕ್ಕೂ ಸೂಕ್ತವಾದ ವಿಭಿನ್ನ ಹಾಗೂ ಸುಸಂಗತ ನಿಯಮಗಳನ್ನು ಅಭಿವೃದ್ಧಿಪಡಿಸಲಿದೆ. ಆದರೆ ಎಲ್ಲ ಉನ್ನತ ಶಿಕ್ಷಣ ಸಂಸ್ಥೆಗಳ ಬೋಧನೆ-ಕಲಿಕೆಯಲ್ಲಿ ಉನ್ನತ ಗುಣಮಟ್ಟದ ಶಿಕ್ಷಣವನ್ನು ನಿರೀಕ್ಷಿಸುವುದರಲ್ಲಿ ಮಾತ್ರ ಯಾವುದೇ ಬದಲಾವಣೆ ಇಲ್ಲ.

10.6 ಬೋಧನೆ ಮತ್ತು ಸಂಶೋಧನೆಯ ಜೊತೆಗೆ ಉನ್ನತ ಶಿಕ್ಷಣ ಸಂಸ್ಥೆಗಳು ಇತರ ನಿರ್ಣಾಯಕ ಜವಾಬ್ದಾರಿಗಳನ್ನು ನಿಭಾಯಿಸಬೇಕಾಗಿದೆ. ಇವುಗಳನ್ನು ಈ ಸಂಸ್ಥೆಗಳು ಸಮರ್ಪಕವಾದ ಸಂಪನ್ಮೂಲ, ಪ್ರೋತ್ಸಾಹ ಮತ್ತು ರಚನಾತ್ಮಕತೆಯ ಮೂಲಕ ನಿರ್ವಹಿಸಲಿದೆ. ಇವುಗಳಲ್ಲಿ ತಮ್ಮ ಅಭಿವೃದ್ಧಿ, ಸಮುದಾಯ ಕಾರ್ಯಕ್ರಮಗಳು ಮತ್ತು ಸೇವೆಯಲ್ಲಿ ಇತರ ಎಚ್.ಇ.ಐ.ಗಳಿಗೆ ಬೆಂಬಲ ನೀಡುವುದು, ನಾನಾ ಕ್ಷೇತ್ರಗಳ ಆಚರಣೆಗಳಲ್ಲಿ ಕೊಡುಗೆ, ಉನ್ನತ ಶಿಕ್ಷಣಕ್ಕೆ ಬೋಧನಾ ಕ್ರಮವನ್ನು ಅಭಿವೃದ್ಧಿಪಡಿಸುವುದು ಮತ್ತು ಶಾಲಾ ಶಿಕ್ಷಣಕ್ಕೆ ಬೆಂಬಲ ನೀಡುವುದು ಸೇರಿದೆ.

10.7 2040ರ ಹೊತ್ತಿಗೆ ಎಲ್ಲ ಉನ್ನತ ಶಿಕ್ಷಣ ಸಂಸ್ಥೆಗಳು (ಎಚ್.ಇ.ಐ.ಗಳು) ಬಹುಶಿಸ್ತೀಯ ಸಂಸ್ಥೆಗಳಾಗುವ ಗುರಿಯನ್ನು ಹೊಂದಿರಬೇಕು ಮತ್ತು ಬೃಹತ್ ಸಂಖ್ಯೆಯ, ಬಹುತೇಕ ಸಾವಿರ ಸಂಖ್ಯೆಗಳಲ್ಲಿ ವಿದ್ಯಾರ್ಥಿಗಳ ನೋಂದಣಿ, ಮೂಲಸೌಕರ್ಯಗಳು ಮತ್ತು ಸಂಪನ್ಮೂಲಗಳ ಭರಪೂರ ಬಳಕೆ ಮತ್ತು ಚಲನಶೀಲವಾದ ಬಹುಶಿಸ್ತೀಯ ಸಮುದಾಯಗಳನ್ನು ಸೃಷ್ಟಿಸುವ ಗುರಿ ಹೊಂದಿರಬೇಕು. ಇಂತಹುದೊಂದು ಪ್ರಕ್ರಿಯೆಗೆ ಸಾಕಷ್ಟು ಸಮಯ ಬೇಕಾಗುವುದರಿಂದ ಎಲ್ಲ ಎಚ್.ಇ.ಐ.ಗಳು 2030ರ ಹೊತ್ತಿಗೆ ಬಹುಶಿಸ್ತೀಯ ವ್ಯವಸ್ಥೆಗೆ ಒಳಪಡುವ ಯೋಜನೆ ರೂಪಿಸಬೇಕು. ಆ ಬಳಿಕ ವಿದ್ಯಾರ್ಥಿಗಳ ಸಾಮರ್ಥ್ಯವನ್ನು ಕ್ರಮೇಣ ಅಪೇಕ್ಷಿತ ಮಟ್ಟಕ್ಕೆ ಹೆಚ್ಚಿಸಬೇಕು.

10.8 ಪೂರ್ಣ ಪ್ರವೇಶಾವಕಾಶ, ಸಮಾನತೆ ಮತ್ತು ಒಳಗೊಳ್ಳುವ ಪ್ರಕ್ರಿಯೆಯನ್ನು ಖಾತರಿಪಡಿಸುವ ಸಲುವಾಗಿ ಹಿಂದುಳಿದ ಪ್ರದೇಶಗಳಲ್ಲಿ ಹೆಚ್ಚು ಎಚ್.ಇ.ಐ.ಗಳನ್ನು ಸ್ಥಾಪಿಸಿ ಅಭಿವೃದ್ಧಿಪಡಿಸಬೇಕು. ಅದು ಸಾಧ್ಯವಾದರೆ 2030ರ ಹೊತ್ತಿಗೆ ಸರಿಸುಮಾರು ಪ್ರತಿ ಜಿಲ್ಲೆಯಲ್ಲಿ ಕನಿಷ್ಠ ಒಂದು ಬೃಹತ್ ಬಹುಶಿಸ್ತೀಯ ಎಚ್.ಇ.ಐ.ಗಳನ್ನು ಹೊಂದಲು ಸಾಧ್ಯವಾಗುತ್ತದೆ. ಸ್ಥಳೀಯ/ ಭಾರತೀಯ ಭಾಷೆಗಳ ಅಥವಾ ದ್ವಿಭಾಷೆಗಳಲ್ಲಿ ಬೋಧನ ಮಾಧ್ಯಮವನ್ನು ಹೊಂದಿರುವ ಸರ್ಕಾರಿ ಮತ್ತು ಖಾಸಗಿ ಎರಡೂ ಕ್ಷೇತ್ರಗಳಲ್ಲಿ ಉನ್ನತ ಗುಣಮಟ್ಟದ ಉನ್ನತ ಶಿಕ್ಷಣ ಸಂಸ್ಥೆಗಳನ್ನು ಅಭಿವೃದ್ಧಿಪಡಿಸಲು ಕ್ರಮಗಳನ್ನು ಕೈಗೊಳ್ಳಬೇಕು. 2035ರ ಹೊತ್ತಿಗೆ ವೃತ್ತಿಪರ ಶಿಕ್ಷಣವೂ ಸೇರಿದಂತೆ ಉನ್ನತ ಶಿಕ್ಷಣದಲ್ಲಿನ ಒಟ್ಟು ನೋಂದಣಿ ಅನುಪಾತವನ್ನು ಶೇ. 26.3 (2018)ರಿಂದ ಶೇ.50ಕ್ಕೆ ಏರಿಸುವ ಗುರಿ ಹೊಂದಿರಬೇಕು. ಈ ಗುರಿಗಳನ್ನು ಸಾಧಿಸಲು ಸಾಕಷ್ಟು ಸಂಖ್ಯೆಯಲ್ಲಿ ಹೊಸ ಸಂಸ್ಥೆಗಳನ್ನು ಅಭಿವೃದ್ಧಿಪಡಿಸುವುದರ ಜೊತೆಗೆ ಕ್ರೋಢೀಕರಣ, ಗಣನೀಯ ವಿಸ್ತರಣೆ ಮತ್ತು ಈಗಿರುವ ಎಚ್.ಇ.ಐ.ಗಳನ್ನು ಸುಧಾರಿಸುವ ಮೂಲಕ ಈ ಸಾಮರ್ಥ್ಯ ವೃದ್ಧಿಯನ್ನು ಸಾಧ್ಯವಾಗಿಸಬೇಕಿದೆ.

10.9 ಬೃಹತ್ ಸಂಖ್ಯೆಯಲ್ಲಿ ಶ್ರೇಷ್ಠವಾದ ಸಾರ್ವಜನಿಕ ಸಂಸ್ಥೆಗಳನ್ನು ಅಭಿವೃದ್ಧಿಪಡಿಸುವ ಬಲವಾದ ಆಕಾಂಕ್ಷೆಯೊಂದಿಗೆ ಸಾರ್ವಜನಿಕ ಹಾಗೂ ಖಾಸಗಿ ಸಂಸ್ಥೆಗಳೆರಡರಲ್ಲೂ ಪ್ರಗತಿ ಕಾಣುವಂತಾಗಬೇಕು. ಸಾರ್ವಜನಿಕ ಎಚ್.ಇ.ಐ.ಗಳಿಗೆ ಸರ್ಕಾರಿ ನಿಧಿಯ ಬೆಂಬಲದ

ನಿರ್ಧಾರಕ್ಕೆ ನ್ಯಾಯಯುತ ಹಾಗೂ ಪಾರದರ್ಶಕ ವ್ಯವಸ್ಥೆ ಇರುತ್ತದೆ. ಈ ವ್ಯವಸ್ಥೆಯು ಎಲ್ಲ ಸಾರ್ವಜನಿಕ ಸಂಸ್ಥೆಗಳು ಬೆಳೆಯಲು ಸಮಾನವಾದ ಅವಕಾಶವನ್ನು ಕಲ್ಪಿಸುತ್ತದೆ. ಇವೆಲ್ಲವೂ ಮಾನ್ಯತೆ ನೀಡುವ ವ್ಯವಸ್ಥೆಯ ನಿಯಮಗಳ ವ್ಯಾಪ್ತಿಯಲ್ಲಿಯೇ ಪಾರದರ್ಶಕ ಹಾಗೂ ಪೂರ್ವ ಪ್ರಕಟಿತ ಮಾನದಂಡಗಳಿಗೆ ತಕ್ಕಂತೆ ಇರುತ್ತವೆ. ಈ ನೀತಿಯಲ್ಲಿ ತಿಳಿಸಲಾದ ಅತ್ಯುನ್ನತ ಗುಣಮಟ್ಟಕ್ಕೆ ತಕ್ಕಂತೆ ಎಚ್.ಇ.ಐ.ಗಳು ನೀಡುವ ಶಿಕ್ಷಣಕ್ಕೆ ಅವುಗಳ ಸಾಮರ್ಥ್ಯವನ್ನು ವಿಸ್ತರಿಸುವಲ್ಲಿ ಉತ್ತೇಜನ ನೀಡಲಾಗುತ್ತದೆ.

10.10 ಮುಕ್ತ ದೂರ ಶಿಕ್ಷಣ (ಓ.ಡಿ.ಎಲ್) ಮತ್ತು ಆನ್‌ಲೈನ್ ಕಾರ್ಯಕ್ರಮಗಳನ್ನು ನಡೆಸಲು ಸಂಸ್ಥೆಗಳಿಗೆ ಆಯ್ಕೆ ಇರುತ್ತದೆ; ಅದಕ್ಕೆ ಸಂಬಂಧಿಸಿದ ಮಾನ್ಯತೆಯನ್ನು ಅವುಗಳು ಪಡೆದಿರಬೇಕು. ಪ್ರವೇಶಾವಕಾಶವನ್ನು ಹೆಚ್ಚಿಸಲು, ಅದನ್ನು ಇನ್ನಷ್ಟು ಸುಧಾರಿಸಲು, ಜಿ.ಇ.ಆರ್.ಅನ್ನು ಹೆಚ್ಚಿಸಲು ಮತ್ತು ಜೀವನಪೂರ್ತಿ ಕಲಿಕೆ (ಎಸ್.ಡಿ.ಜಿ)ಗೆ ಅವಕಾಶಗಳನ್ನು ಒದಗಿಸುವ ನಿಟ್ಟಿನಲ್ಲಿ ಈ ಆಯ್ಕೆಗಳನ್ನು ಕೈಗೆತ್ತಿಕೊಳ್ಳಬಹುದಾಗಿದೆ. ಯಾವುದೇ ಡಿಪ್ಲೊಮಾ ಅಥವಾ ಪದವಿಗೆ ದಾರಿ ಮಾಡಿಕೊಡಬಲ್ಲ ಎಲ್ಲ ಓ.ಡಿ.ಎಲ್ ಕಾರ್ಯಕ್ರಮಗಳು ಮತ್ತು ಅವುಗಳ ವಿಭಾಗಗಳ ಗುಣಮಟ್ಟಗಳು ಮತ್ತು ಮಾನದಂಡಗಳು ಉನ್ನತ ಶಿಕ್ಷಣ ಸಂಸ್ಥೆಗಳು ತಮ್ಮ ಕ್ಯಾಂಪಸ್‌ನಲ್ಲಿ ನಡೆಸುವ ಉನ್ನತ ಗುಣಮಟ್ಟದ ಕಾರ್ಯಕ್ರಮಗಳಿಗೆ ಸಮಾನವಾಗಿರಬೇಕು. ಓ.ಡಿ.ಎಲ್. ಕಾರ್ಯಕ್ರಮಕ್ಕೆ ಮಾನ್ಯತೆಯನ್ನು ಪಡೆದುಕೊಂಡ ಅಗ್ರಗಣ್ಯ ಸಂಸ್ಥೆಗಳಿಗೆ ಉತ್ತೇಜನ ಮತ್ತು ಉನ್ನತ ಗುಣಮಟ್ಟದ ಆನ್‌ಲೈನ್ ಕೋರ್ಸ್‌ಗಳನ್ನು ಅಭಿವೃದ್ಧಿಪಡಿಸಲು ಬೆಂಬಲ ನೀಡಲಾಗುವುದು. ಇಂತಹ ಗುಣಮಟ್ಟದ ಆನ್‌ಲೈನ್ ಕೋರ್ಸ್‌ಗಳನ್ನು ಎಚ್.ಇ.ಐ.ಗಳ ಪಠ್ಯಕ್ರಮದೊಂದಿಗೆ ಸೂಕ್ತ ರೀತಿಯಲ್ಲಿ ಒಳಗೊಳ್ಳುವಂತೆ ಮಾಡಲಾಗುವುದು ಮತ್ತು ಅದರೊಂದಿಗೆ ಸಂಯೋಜನೆಗೊಳಿಸಲು ಆದ್ಯತೆ ನೀಡಲಾಗುವುದು.

10.11 ಏಕಮುಖ ಉನ್ನತ ಶಿಕ್ಷಣ ಸಂಸ್ಥೆಗಳನ್ನು ಹಂತ ಹಂತವಾಗಿ ಕಡಿಮೆ ಮಾಡಲಾಗುವುದು. ಇವೆಲ್ಲವೂ ಅತ್ಯಂತ ಚಲನಶೀಲವಾದ ಬಹುಶಿಸ್ತೀಯ ಸಂಸ್ಥೆಗಳಾಗುವತ್ತ ಮುಂದಡಿ ಇಡುತ್ತವೆ ಅಥವಾ ಚಲನಶೀಲ ಬಹುಶಿಸ್ತೀಯ ಎಚ್.ಇ.ಐ ಕ್ಲಸ್ಟರ್‌ಗಳ ಭಾಗವಾಗುತ್ತವೆ. ಇದರಿಂದ ಎಲ್ಲ ಕ್ಷೇತ್ರಗಳಲ್ಲಿ ಉನ್ನತ ಗುಣಮಟ್ಟದ ಬಹುಶಿಸ್ತೀಯ ಮತ್ತು ಎಲ್ಲ ಶೈಕ್ಷಣಿಕ ವಿಭಾಗಗಳ ಬೋಧನೆ ಮತ್ತು ಸಂಶೋಧನೆ ಸಾಧ್ಯವಾಗುತ್ತದೆ ಮತ್ತು ಅದಕ್ಕೆ ಉತ್ತೇಜನ ನೀಡಲಾಗುತ್ತದೆ. ಏಕಮುಖ ಉನ್ನತ ಶಿಕ್ಷಣ ಸಂಸ್ಥೆಗಳು ವಿಶೇಷವಾಗಿ ನಾನಾ ಕ್ಷೇತ್ರಗಳಾದ್ಯಂತ ವಿಭಾಗಗಳನ್ನು ಸೇರ್ಪಡೆ ಮಾಡುತ್ತವೆ; ಇದು ಅವು ಪ್ರಸ್ತುತ ಸೇವೆ ಸಲ್ಲಿಸುತ್ತಿರುವ ಏಕಮುಖವನ್ನು ಬಲಗೊಳಿಸುತ್ತದೆ. ಸೂಕ್ತ ಮಾನ್ಯತೆಗಳನ್ನು ಪಡೆದುಕೊಳ್ಳುವ ಮೂಲಕ ಎಲ್ಲ ಎಚ್.ಇ.ಐ.ಗಳು ಕ್ರಮೇಣ, ಶೈಕ್ಷಣಿಕ ಹಾಗೂ ಆಡಳಿತಾತ್ಮಕ ವಿಚಾರದಲ್ಲಿ ಚಲನಶೀಲ ಸಂಸ್ಕೃತಿಯನ್ನು ಸಾಧ್ಯವಾಗಿಸುವ ಹಿನ್ನೆಲೆಯಲ್ಲಿ ಪೂರ್ಣ ಸ್ವಾಯತ್ತತೆಯತ್ತ ಮುನ್ನಡೆಯುತ್ತವೆ. ಸಮರ್ಪಕವಾದ ಸರ್ಕಾರಿ ಹಣಕಾಸು ಬೆಂಬಲ ಮತ್ತು ಸ್ಥಿರತೆಯ ಮೂಲಕ ಸಾರ್ವಜನಿಕ ಸಂಸ್ಥೆಗಳ ಸ್ವಾಯತ್ತತೆಯನ್ನು ಬೆಂಬಲಿಸಲಾಗುತ್ತದೆ. ಉನ್ನತ ಗುಣಮಟ್ಟದ ಸಮದರ್ಶಿ ಶಿಕ್ಷಣದ ವಿಚಾರದಲ್ಲಿ ಸಾರ್ವಜನಿಕ-ಸ್ಫೂರ್ತಿಯ ಬದ್ಧತೆಯನ್ನು ಹೊಂದಿರುವ ಖಾಸಗಿ ಸಂಸ್ಥೆಗಳಿಗೆ ಪ್ರೋತ್ಸಾಹ ನೀಡಲಾಗುವುದು.

10.12 ಈ ನೀತಿಯ ಮೂಲಕ ಪರ್ಯಾಲೋಚಿಸಲಾಗಿರುವ ಹೊಸ ನಿಯಂತ್ರಣ ವ್ಯವಸ್ಥೆಯು ಸಬಲೀಕರಣ ಮತ್ತು ಸ್ವಾಯತ್ತತೆಯ ಒಟ್ಟಾರೆ ಸಂಸ್ಕೃತಿಯನ್ನು ಪೋಷಿಸಲಿದೆ. ಮುಂದಿನ ಹದಿನೈದು ವರ್ಷಗಳ ಅವಧಿಯಲ್ಲಿ ಶ್ರೇಣೀಕೃತ ಸ್ವಾಯತ್ತ ವ್ಯವಸ್ಥೆಯ ಮೂಲಕ 'ಅಂಗೀಕೃತ ಕಾಲೇಜುಗಳು' ಎಂಬ ವ್ಯವಸ್ಥೆಯನ್ನು ಹಂತ ಹಂತವಾಗಿ ತೆಗೆದುಹಾಕುವುದು ಕೂಡ ಈ ಆವಿಷ್ಕಾರ ಪ್ರಕ್ರಿಯೆಯಲ್ಲಿ ಒಳಗೊಂಡಿದೆ ಮತ್ತು ಇದನ್ನು ಸವಾಲಿನ ರೂಪದಲ್ಲಿ ಜಾರಿಗೆ ತರಲಾಗುತ್ತದೆ. ಈಗ ಅಸ್ತಿತ್ವದಲ್ಲಿರುವ, ತನ್ನ ವ್ಯಾಪ್ತಿಯಲ್ಲಿ ಅಂಗೀಕೃತ ಕಾಲೇಜುಗಳನ್ನು ಹೊಂದಿರುವ ಪ್ರತಿಯೊಂದು ವಿಶ್ವವಿದ್ಯಾಲಯಗಳು ಇಂತಹ ಕಾಲೇಜುಗಳ ಮೇಲ್ವಿಚಾರಣೆ ಜವಾಬ್ದಾರಿಯನ್ನು ಹೊಂದಿರುತ್ತವೆ. ಇದರಿಂದ ಈ ಕಾಲೇಜುಗಳು ತಮ್ಮ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳಲು ಮತ್ತು ಶೈಕ್ಷಣಿಕ ಹಾಗೂ ಪಠ್ಯಕ್ರಮದ ವಿಷಯಗಳಾದ ಬೋಧನೆ ಮತ್ತು ಮೌಲ್ಯಮಾಪನ; ಆಡಳಿತದಲ್ಲಿ ಸುಧಾರಣೆ; ಹಣಕಾಸಿನ ಸಶಕ್ತತೆ ಮತ್ತು ಆಡಳಿತಾತ್ಮಕ ದಕ್ಷತೆಯಲ್ಲಿ ಕನಿಷ್ಠ ಸಾಧನೆಗಳನ್ನು ಮಾಡಲು ಸಾಧ್ಯವಾಗುತ್ತದೆ. ಪ್ರಸ್ತುತ ವಿಶ್ವವಿದ್ಯಾಲಯದ ಎಲ್ಲ ಅಂಗೀಕೃತ ಕಾಲೇಜುಗಳು ಕಾಲಕ್ರಮೇಣ ನಿಗದಿತ ದೃಢೀಕರಣದ ಅರ್ಹತೆಯನ್ನು ಗಳಿಸಲು ಅಗತ್ಯವಿರುವ ಮಾನದಂಡಗಳನ್ನು ಪಡೆದುಕೊಂಡು ಅಂತಿಮವಾಗಿ ಡಿಗ್ರಿ ನೀಡುವ ಸ್ವಾಯತ್ತ ಕಾಲೇಜುಗಳಾಗುತ್ತವೆ. ಸೂಕ್ತ ಮೇಲ್ವಿಚಾರಣೆ ಮತ್ತು ಸರ್ಕಾರದ ಬೆಂಬಲವನ್ನು ಒಳಗೊಂಡ ಯೋಜಿತ ರಾಷ್ಟ್ರೀಯ ಪ್ರಯತ್ನದ ಮೂಲಕ ಇದನ್ನು ಸಾಧಿಸಲಾಗುತ್ತದೆ.

10.13 ವೃತ್ತಿಪರ ಹಾಗೂ ಔದ್ಯೋಗಿಕ ಶಿಕ್ಷಣ ಒಳಗೊಂಡಂತೆ ಒಟ್ಟಾರೆ ಉನ್ನತ ಶಿಕ್ಷಣ ವಲಯವನ್ನು ಸಮಗ್ರ ಉನ್ನತ ಶಿಕ್ಷಣ ವ್ಯವಸ್ಥೆಯನ್ನಾಗಿ ರೂಪಿಸುವುದು ಈ ನೀತಿಯ ಗುರಿಯಾಗಿದೆ. ಈಗಿರುವ ಎಲ್ಲ ಎಚ್.ಇ.ಐ.ಗಳಿಗೆ ಈ ನೀತಿ ಮತ್ತು ಅದರ ವಿಧಾನವು ಸಮಾನವಾಗಿ ಅನ್ವಯವಾಗುತ್ತದೆ ಮತ್ತು ಇವೆಲ್ಲವೂ ಉನ್ನತ ಶಿಕ್ಷಣದ ಸಂಯೋಜಿತ ವ್ಯವಸ್ಥೆಯಲ್ಲಿ ವಿಲೀನ ಹೊಂದುತ್ತವೆ.

10.14 ವಿಶ್ವದಾದ್ಯಂತ ವಿಶ್ವವಿದ್ಯಾಲಯ ಎಂದರೆ, ಪಧವಿ ಪೂರ್ವ, ಪದವಿ ಮತ್ತು ಪಿ.ಎಚ್.ಡಿ. ಕಾರ್ಯಕ್ರಮಗಳನ್ನು ನಡೆಸುವ ಮತ್ತು ಉನ್ನತ ಗುಣಮಟ್ಟದ ಬೋಧನೆ ಮತ್ತು ಸಂಶೋಧನೆಯಲ್ಲಿ ತೊಡಗಿಸಿಕೊಂಡಿರುವ ಉನ್ನತ ಕಲಿಕೆಯ ಬಹುಶಿಸ್ತೀಯ ಸಂಸ್ಥೆ. ಪ್ರಸ್ತುತ

ರಾಷ್ಟ್ರದಲ್ಲಿ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಇರುವ ಸಂಕೀರ್ಣ ನಾಮಕರಣ ವ್ಯವಸ್ಥೆಗಳಾದ 'ಪರಿಗಣಿತ ವಿಶ್ವವಿದ್ಯಾಲಯ', 'ಮಾನ್ಯತೆ ನೀಡುವ ವಿಶ್ವವಿದ್ಯಾಲಯ', 'ಮಾನ್ಯತೆ ನೀಡುವ ತಾಂತ್ರಿಕ ವಿಶ್ವವಿದ್ಯಾಲಯ', 'ಏಕೀಕೃತ ವಿಶ್ವವಿದ್ಯಾಲಯ' ಎಲ್ಲವೂ ಬದಲಾಗಿ ನಿಯಮಗಳ ಪ್ರಕಾರ ಮಾನದಂಡಗಳನ್ನು ಪೂರೈಸುವ ಕೇವಲ 'ವಿಶ್ವವಿದ್ಯಾಲಯ' ಮಾತ್ರ ಉಳಿದುಕೊಳ್ಳುತ್ತದೆ.

11. ಸಮಗ್ರ ದೃಷ್ಟಿಕೋನ ಮತ್ತು ಬಹುಶಿಸ್ತೀಯ ಶಿಕ್ಷಣದತ್ತ ಹೆಜ್ಜೆ

11.1 ಸಮಗ್ರ ಹಾಗೂ ಬಹುಶಿಸ್ತೀಯ ಕಲಿಕೆಯಲ್ಲಿ ಭಾರತಕ್ಕೆ ಅತ್ಯಂತ ಸುದೀರ್ಘವಾದ ಸಂಪ್ರದಾಯವಿದೆ. ತಕ್ಷಶಿಲಾ ಮತ್ತು ನಳಂದಾದಂತಹ ವಿಶ್ವವಿದ್ಯಾಲಯಗಳಿಂದ ಆರಂಭಿಸಿ ಅನೇಕ ಕ್ಷೇತ್ರಗಳಲ್ಲಿನ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಭಾರತದ ವಿಶಾಲ ವ್ಯಾಪ್ತಿಯನ್ನು ಹೊಂದಿರುವ ಸಾಹಿತ್ಯಗಳ ತನಕ ಇದು ವಿಸ್ತರಿಸುತ್ತದೆ. ಪ್ರಾಚೀನ ಭಾರತದ ಸಾಹಿತ್ಯಿಕ ಕೃತಿಗಳಾದ ಬಾಣಭಟ್ಟನ ಕಾದಂಬರಿ 64 ಕಲೆಗಳ ಜ್ಞಾನ ಭಂಡಾರ ಎಂದು ವಿಶ್ಲೇಷಿಸಲಾಗಿದೆ; ಹಾಡುವುದು ಮತ್ತು ಚಿತ್ರಕಲೆಗಳಂಥವು ಸೇರಿದ ಈ 64 ಕಲೆಗಳು ಕೇವಲ ವಿಷಯಗಳಾಗಿರಲಿಲ್ಲ, ಬದಲಾಗಿ ಭೌತಶಾಸ್ತ್ರ ಮತ್ತು ಗಣಿತಶಾಸ್ತ್ರಗಳಂತಹ 'ವೈಜ್ಞಾನಿಕ' ಕ್ಷೇತ್ರಗಳು, ಮರಗೆಲಸ ಮತ್ತು ವಸ್ತ್ರಗಳನ್ನು ಹೊಲಿಯುವುದು ಮುಂತಾದ 'ಔದ್ಯೋಗಿಕ' ಕ್ಷೇತ್ರಗಳು, ವೈದ್ಯಕೀಯ ಹಾಗೂ ಎಂಜಿನಿಯರಿಂಗ್ ನಂತಹ 'ವೃತ್ತಿಪರ' ಕ್ಷೇತ್ರಗಳು, ಸಂಪರ್ಕ, ಚರ್ಚೆ ಮತ್ತು ಸಂವಾದದಂತಹ 'ಬೌದ್ಧಿಕ ಕೌಶಲ'ವನ್ನು ಕೂಡ ಒಳಗೊಂಡಿತ್ತು. ಗಣಿತಶಾಸ್ತ್ರ, ವಿಜ್ಞಾನ, ಔದ್ಯೋಗಿಕ ವಿಷಯಗಳು, ವೃತ್ತಿಪರ ವಿಷಯಗಳು ಮತ್ತು ಬೌದ್ಧಿಕ ಕಲೆಗಳು ಸೇರಿ ಮಾನವನ ಕ್ರಿಯಾತ್ಮಕ ಪ್ರಯತ್ನದ ಎಲ್ಲ ಶಾಖೆಗಳನ್ನೂ 'ಕಲೆಗಳು' ಎಂದು ಕರೆಯಲಾಗುತ್ತದೆ ಮತ್ತು ಇವೆಲ್ಲವೂ ನಿಸ್ಸಂದೇಹವಾಗಿ ಭಾರತೀಯ ಮೂಲವನ್ನು ಹೊಂದಿವೆ. 'ಅನೇಕ ಕಲೆಗಳ ಜ್ಞಾನ'ದ ರಾಷ್ಟ್ರವಾಗಿರುವ ಇದು ಅಥವಾ ಆಧುನಿಕ ಕಾಲದಲ್ಲಿ ಪದೆಪದೇ ಕರೆಯಲಾಗುವ 'ಉದಾರ ಕಲೆ'ಗಳನ್ನು (ಉದಾ: ಕಲೆಗಳ ಉದಾರ ರಾಷ್ಟ್ರ) ಮತ್ತೆ ಭಾರತದ ಶಿಕ್ಷಣ ವ್ಯವಸ್ಥೆಗೆ ಮರಳಿ ತರಬೇಕಾಗಿದೆ. 21ನೇ ಶತಮಾನಕ್ಕೆ ಅಗತ್ಯವಿರುವುದು ಇಂತಹುದೊಂದು ಶಿಕ್ಷಣವೇ ಆಗಿದೆ.

11.2 ವಿಜ್ಞಾನ, ತಂತ್ರಜ್ಞಾನ, ಇಂಜಿನಿಯರಿಂಗ್ ಮತ್ತು ಗಣಿತಶಾಸ್ತ್ರ (ಎಸ್.ಟಿ.ಇ.ಎಂ) ಗಳೊಂದಿಗೆ ಮಾನವೀಯತೆ ಮತ್ತು ಕಲೆಗಳನ್ನು ಜೋಡಿಸುವ ಪದವಿ ಪೂರ್ವ ಶಿಕ್ಷಣದಲ್ಲಿನ ಶೈಕ್ಷಣಿಕ ವಿಧಾನಗಳ ಮೌಲ್ಯಮಾಪನವು ನಿರಂತರವಾಗಿ ಧನಾತ್ಮಕ ಕಲಿಕಾ ಫಲಿತಾಂಶಗಳನ್ನು ತೋರಿಸಿದೆ. ಇವುಗಳಲ್ಲಿ ಕ್ರಿಯಾಶೀಲತೆ ಮತ್ತು ಹೊಸ ಆವಿಷ್ಕಾರ, ತೀಕ್ಷ್ಣವಾದ ಚಿಂತನೆ ಮತ್ತು ಉದಾತ್ತವಾದ ಯೋಚನಾ ಸಾಮರ್ಥ್ಯಗಳು, ಸಮಸ್ಯೆಗಳನ್ನು ಪರಿಹರಿಸುವ ಸಾಮರ್ಥ್ಯಗಳು, ತಂಡವಾಗಿ ಕೆಲಸ ಮಾಡುವುದು, ಸಂವಹನ ಕೌಶಲ, ಗಹನವಾದ ಕಲಿಕೆ ಮತ್ತು ಎಲ್ಲ ಕ್ಷೇತ್ರಗಳ ಪಠ್ಯಕ್ರಮದಲ್ಲಿ ಪಾಂಡಿತ್ಯ, ಸಾಮಾಜಿಕ ಹಾಗೂ ನೈತಿಕ ಜಾಗೃತಿಗಳಲ್ಲಿ ಹೆಚ್ಚಿನ ಅರಿವು ಇತ್ಯಾದಿ ಸೇರಿವೆ. ಇವೆಲ್ಲದರ ಜೊತೆಗೆ ಸಾಮಾನ್ಯ ಕಾರ್ಯಕ್ರಮ ಮತ್ತು ಕಲಿಕಾ ಸಂತೋಷ ಕೂಡ ಸೇರಿರುತ್ತದೆ. ಸಮಗ್ರ ಮತ್ತು ಬಹುಶಿಸ್ತೀಯ ಶಿಕ್ಷಣ ವಿಧಾನದಿಂದ ಸಂಶೋಧನೆಯೂ ಸುಧಾರಣೆ ಹೊಂದಿದೆ.

11.3 ಸಮಗ್ರ ಮತ್ತು ಬಹುಶಿಸ್ತೀಯ ಶಿಕ್ಷಣವು ಮನುಷ್ಯನ ಎಲ್ಲ ಸಾಮರ್ಥ್ಯಗಳನ್ನು ಅಭಿವೃದ್ಧಿಪಡಿಸುವ ಗುರಿಯನ್ನು ಹೊಂದಿದೆ. ಬೌದ್ಧಿಕ, ಕಲಾತ್ಮಕ, ಸಾಮಾಜಿಕ, ದೈಹಿಕ, ಭಾವನಾತ್ಮಕ ಮತ್ತು ನೈತಿಕ ಹೀಗೆ ಸಮಗ್ರ ರೀತಿಯಲ್ಲಿ ಅಭಿವೃದ್ಧಿ ಮಾಡುವುದು ಇದರ ಗುರಿ. ಕಲೆ, ಮಾನವಿಕ, ಭಾಷೆ, ವಿಜ್ಞಾನ, ಸಮಾಜ ವಿಜ್ಞಾನ ಮತ್ತು ವೃತ್ತಿಪರ, ತಾಂತ್ರಿಕ ಮತ್ತು ಔದ್ಯೋಗಿಕ ಕ್ಷೇತ್ರಗಳಲ್ಲಿ; ಸಾಮಾಜಿಕ ಬದ್ಧತೆಯ ನೈತಿಕತೆ, ಬೌದ್ಧಿಕ ಕೌಶಲಗಳಾದ ಸಂವಹನ, ಮಾತುಕತೆ ಮತ್ತು ಸಂವಾದ; ಹಾಗೂ ಆಯ್ಕೆ ಮಾಡಿದ ಕ್ಷೇತ್ರ ಅಥವಾ ಕ್ಷೇತ್ರಗಳಲ್ಲಿ ಕಠಿಣ ಪ್ರಾಜ್ಞತೆ ಸೇರಿದಂತೆ ಎಲ್ಲ ಕ್ಷೇತ್ರಗಳಲ್ಲಿ 21ನೇ ಶತಮಾನದ ಸಾಮರ್ಥ್ಯಗಳಿಗೆ ಅಗತ್ಯವಾದ ಸುಸಂಗತ ವ್ಯಕ್ತಿಗಳ ಅಭಿವೃದ್ಧಿಗೆ ಇಂತಹುದೊಂದು ಶಿಕ್ಷಣ ನೆರವಾಗಲಿದೆ. ಇಂತಹ ಸಮಗ್ರ ಸ್ವರೂಪದ ಶಿಕ್ಷಣವು ಸುದೀರ್ಘಾವಧಿಯಲ್ಲಿ, ವೃತ್ತಿಪರ, ತಾಂತ್ರಿಕ ಮತ್ತು ಔದ್ಯೋಗಿಕ ವಿಭಾಗಗಳೂ ಸೇರಿದಂತೆ ಎಲ್ಲ ಪದವಿಪೂರ್ವ ಕಾರ್ಯಕ್ರಮಗಳಲ್ಲಿ ವಿಸ್ತರಿಸಲಾಗುವುದು.

11.4 ಪ್ರಾಚೀನ ಭಾರತದಲ್ಲಿ ಅತ್ಯಂತ ಸುಂದರವಾಗಿ ವಿಶ್ಲೇಷಿಸಲಾಗಿರುವ ಸಮಗ್ರ ಹಾಗೂ ಬಹುಶಿಸ್ತೀಯ ಶಿಕ್ಷಣವು 21ನೇ ಶತಮಾನಕ್ಕೆ ಮತ್ತು ನಾಲ್ಕನೆ ಕೈಗಾರಿಕಾ ಕ್ರಾಂತಿಯತ್ತ ಮುನ್ನಡೆಯುತ್ತಿರುವ ಭಾರತದಂತಹ ರಾಷ್ಟ್ರದ ಶಿಕ್ಷಣಕ್ಕೆ ಅತ್ಯಗತ್ಯವಾಗಿದೆ. ಐ.ಐ.ಟಿ.ಗಳಂತಹ ಎಂಜಿನಿಯರಿಂಗ್ ಸಂಸ್ಥೆಗಳು ಕೂಡ ಹೆಚ್ಚು ಕಲೆ ಮತ್ತು ಮಾನವೀಯ ಮುಖಗಳೊಂದಿಗೆ ಸಮಗ್ರ ಹಾಗೂ ಬಹುಶಿಸ್ತೀಯ ಶಿಕ್ಷಣದತ್ತ ಮುನ್ನಡೆಯಲಿವೆ. ಕಲೆ ಮತ್ತು ಮಾನವಿಕ ವಿಷಯಗಳನ್ನು ಅಧ್ಯಯನ ಮಾಡುವ ವಿದ್ಯಾರ್ಥಿಗಳು ವಿಜ್ಞಾನವನ್ನು ಹೆಚ್ಚು ಅರಿತುಕೊಳ್ಳುವ ಗುರಿಯನ್ನು ಹೊಂದುತ್ತಾರೆ ಮತ್ತು ಇವೆಲ್ಲವೂ ಇನ್ನೂ ಹೆಚ್ಚಿನ ಔದ್ಯೋಗಿಕ ವಿಷಯಗಳು ಮತ್ತು ಬೌದ್ಧಿಕ ಕೌಶಲಗಳನ್ನು ಸೇರ್ಪಡೆಗೊಳಿಸುವ ಪ್ರಯತ್ನವಾಗಲಿದೆ.

11.5 ಕಲ್ಪನಾತ್ಮಕ ಮತ್ತು ಹೊಂದಾಣಿಕೆ ಮಾಡಿಕೊಳ್ಳಬಹುದಾದ ಪಠ್ಯಕ್ರಮದ ಸ್ವರೂಪವು ಅಧ್ಯಯನಕ್ಕೆ ಅಗತ್ಯವಾದ ಶಿಸ್ತಿನ ರಚನಾತ್ಮಕ ಸಂಯೋಜನೆಗಳನ್ನು ಸಾಧ್ಯವಾಗಿಸಲಿದೆ ಮತ್ತು ಇದರಿಂದ ಬಹು ಪ್ರವೇಶಿಕೆ ಮತ್ತು ನಿರ್ಗಮನಕ್ಕೆ ಅವಕಾಶ

ಮಾಡಿಕೊಡಲಿದೆ, ಆ ಮೂಲಕ ಈಗ ಅಸ್ತಿತ್ವದಲ್ಲಿರುವ ಸಂಕೀರ್ಣವಾದ ಗಡಿಗಳನ್ನು ತೆಗೆದುಹಾಕಿ ಜೀವಮಾನದ ಕಲಿಕೆಗೆ ಹೊಸ ಸಾಧ್ಯತೆಗಳನ್ನು ಸೃಷ್ಟಿಸಲಿದೆ. ಕಠಿಣ ಸಂಶೋಧನೆ ಆಧಾರಿತ ಪರಿಣತಿಯನ್ನು ಕಲ್ಪಿಸುವುದರಿಂದ ಪದವಿ ಮಟ್ಟದ, ಸ್ನಾತಕೋತ್ತರ ಮತ್ತು ಡಾಕ್ಟರೇಟ್ ಶಿಕ್ಷಣವು, ಶೈಕ್ಷಣಿಕ, ಸರ್ಕಾರ ಮತ್ತು ಕೈಗಾರಿಕೆ ಸೇರಿದಂತೆ ಬಹುಶಿಸ್ತೀಯ ಕೆಲಸಕ್ಕೆ ಅವಕಾಶಗಳನ್ನು ಒದಗಿಸಲಿದೆ.

11.6 ಬೃಹತ್ ಬಹುಶಿಸ್ತೀಯ ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳು ಉನ್ನತ ಗುಣಮಟ್ಟದ ಸಮಗ್ರ ಹಾಗೂ ಬಹುಶಿಸ್ತೀಯ ಶಿಕ್ಷಣವನ್ನು ಕಲ್ಪಿಸುವತ್ತ ಮುನ್ನಡೆಯಲಿವೆ. ಒಂದು ವಿಷಯ ಅಥವಾ ವಿಷಯಗಳಲ್ಲಿ ಕಠಿಣವಾದ ಪ್ರಾಜ್ಞತೆಯನ್ನು ಗಳಿಸುವುದರ ಜೊತೆಗೆ ವಿದ್ಯಾರ್ಥಿಗಳಿಗೆ ಪಠ್ಯಕ್ರಮ ಮತ್ತು ಹೊಸತನದಲ್ಲಿ ಮತ್ತು ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಳ್ಳುವಲ್ಲಿ ಮುಕ್ತ ಸ್ವಾತಂತ್ರ್ಯ. ಪಠ್ಯಕ್ರಮದ ವ್ಯವಸ್ಥೆಯಲ್ಲಿ ಬೋಧನೆ ಮತ್ತು ಸಾಂಸ್ಥಿಕ ಸ್ವಾಯತ್ತತೆಯನ್ನು ಹೆಚ್ಚಿಸುವ ಮೂಲಕ ಇದಕ್ಕೆ ಹೆಚ್ಚಿನ ಉತ್ತೇಜನವನ್ನು ನೀಡಲಾಗುತ್ತದೆ. ಶಿಕ್ಷಣದ ಎಲ್ಲ ವಿಭಾಗಗಳಲ್ಲಿ ಮತ್ತು ಶೈಕ್ಷಣಿಕ ವಿಭಾಗಗಳ ನಡುವಿನ ಚಿಂತನೆಯಲ್ಲಿ, ಸಂವಹನ, ಚರ್ಚೆ, ಸಂವಾದ, ಸಂಶೋಧನೆ ಮತ್ತು ಅವಕಾಶಗಳ ಬಗೆಗೆ ಅಧ್ಯಾಪನಶಾಸ್ತ್ರದಲ್ಲಿ ಹೆಚ್ಚಿನ ಒತ್ತು ನೀಡಲಾಗುತ್ತದೆ.

11.7 ಎಲ್ಲ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಇರುವ ಭಾಷೆ, ಸಾಹಿತ್ಯ, ಸಂಗೀತ, ಸಿದ್ಧಾಂತ, ಭಾರತಾಧ್ಯಯನ, ಕಲೆ, ನೃತ್ಯ, ರಂಗಭೂಮಿ, ಶಿಕ್ಷಣ, ಗಣಿತಶಾಸ್ತ್ರ, ಸಂಖ್ಯಾಶಾಸ್ತ್ರ, ಶುದ್ಧ ಮತ್ತು ಅನ್ವಯಿಕ ವಿಜ್ಞಾನ, ಸಮಾಜಶಾಸ್ತ್ರ, ಅರ್ಥಶಾಸ್ತ್ರ, ಕ್ರೀಡೆ, ಅನುವಾದ ಮತ್ತು ವ್ಯಾಖ್ಯಾನ, ಮತ್ತು ಬಹುಶಿಸ್ತೀಯ, ಉತ್ತೇಜನದಾಯಕ ಭಾರತೀಯ ಶಿಕ್ಷಣ ಹಾಗೂ ಪರಿಸರಕ್ಕೆ ಅಗತ್ಯವಾದ ಅಂತಹ ಇತರ ವಿಷಯಗಳಿಗೆ ಇನ್ನಷ್ಟು ಬಲವನ್ನು ನೀಡಲಾಗುವುದು. ಉನ್ನತ ಶಿಕ್ಷಣ ಸಂಸ್ಥೆಯ ತರಗತಿಗಳಲ್ಲಿ ಕಲ್ಪಿಸಲಾಗದೆ ವಿಭಾಗಗಳಿಂದ ಅಥವಾ ಓ.ಡಿ.ಎಲ್. ಮೂಲಕ ಈ ವಿಷಯಗಳನ್ನು ನೀಡಿದರೆ ಎಲ್ಲ ಸ್ನಾತಕ ಪದವಿ ಕಾರ್ಯಕ್ರಮಗಳಲ್ಲಿ ಮನ್ನಣೆಯನ್ನು ನೀಡಲಾಗುವುದು.

11.8 ಇಂತಹ ಸಮಗ್ರ ಮತ್ತು ಬಹುಶಿಸ್ತೀಯ ಶಿಕ್ಷಣವನ್ನು ಪಡೆದುಕೊಳ್ಳುವ ನಿಟ್ಟಿನಲ್ಲಿ ಎಲ್ಲ ಎಚ್.ಇ.ಐ.ಗಳ ಮುಕ್ತ ಸ್ವಾತಂತ್ರ್ಯದ ಮತ್ತು ವಿನೂತನ ಪಠ್ಯಕ್ರಮದಲ್ಲಿ ಸಮುದಾಯದ ತೊಡಗಿಸಿಕೊಳ್ಳುವಿಕೆ ಮತ್ತು ಸೇವೆ, ಪರಿಸರ ಶಿಕ್ಷಣ ಮತ್ತು ಮೌಲ್ಯ-ಆಧಾರಿತ ಶಿಕ್ಷಣ ವಿಷಯಗಳಲ್ಲಿ ಮನ್ನಣೆ-ಆಧಾರಿತ ಕೋರ್ಸ್ ಮತ್ತು ಯೋಜನೆಗಳನ್ನು ಒಳಗೊಂಡಿರುತ್ತದೆ. ಪರಿಸರ ಶಿಕ್ಷಣದ ವ್ಯಾಪ್ತಿಯಲ್ಲಿ ಹವಾಮಾನ ಬದಲಾವಣೆ, ಮಾಲಿನ್ಯ, ತ್ಯಾಜ್ಯ ನಿರ್ವಹಣೆ, ನೈರ್ಮಲ್ಯ, ಜೀವ ವೈವಿಧ್ಯತೆಯ ಸಂರಕ್ಷಣೆ, ಜೈವಿಕ ಸಂಪನ್ಮೂಲಗಳು ಮತ್ತು ಜೀವ ವೈವಿಧ್ಯತೆಯ ನಿರ್ವಹಣೆ, ಅರಣ್ಯ ಮತ್ತು ವನ್ಯಜೀವಿಗಳ ಸಂರಕ್ಷಣೆ ಹಾಗೂ ಸುಸ್ಥಿರ ಜೀವನ ಮತ್ತು ಅಭಿವೃದ್ಧಿಯಂತಹ ವಿಷಯಗಳು ಒಳಗೊಂಡಿರುತ್ತವೆ. ಮೌಲ್ಯ-ಆಧಾರಿತ ಶಿಕ್ಷಣದಲ್ಲಿ ಮಾನವತಾವಾದದ ಅಭಿವೃದ್ಧಿ, ನೈತಿಕ, ಸಾಂವಿಧಾನಿಕ ಹಾಗೂ ಸಾರ್ವತ್ರಿಕ ಮಾನವ ಮೌಲ್ಯಗಳಾದ ಸತ್ಯ, ಧರ್ಮ, ಶಾಂತಿ, ಪ್ರೇಮ, ಅಹಿಂಸೆ, ವೈಜ್ಞಾನಿಕ ಮನೋಭಾವ, ನಾಗರಿಕತೆಯ ಮೌಲ್ಯಗಳು, ಮತ್ತು ಜೀವನ-ಕೌಶಲಗಳು; ಸೇವೆ ಮತ್ತು ಸಮುದಾಯ ಸೇವಾ ಕಾರ್ಯಕ್ರಮಗಳಲ್ಲಿ ಭಾಗವಹಿಸುವಿಕೆ ಮುಂತಾದ ವಿಷಯಗಳನ್ನು ಸಮಗ್ರ ಶಿಕ್ಷಣದ ಅವಿಭಾಜ್ಯ ಅಂಗವಾಗಿ ಮಾಡಲು ಪರಿಶೀಲಿಸಲಾಗುತ್ತದೆ. ವಿಶ್ವವು ಹೆಚ್ಚು ಹೆಚ್ಚು ಅನ್ಯೋನ್ಯ ಸಂಬಂಧವನ್ನು ಪಡೆದುಕೊಳ್ಳುತ್ತಿರುವ ಹಿನ್ನೆಲೆಯಲ್ಲಿ ಸಮಕಾಲೀನ ಜಾಗತಿಕ ಸವಾಲುಗಳನ್ನು ಎದುರಿಸಲು ಜಾಗತಿಕ ನಾಗರಿಕ ಶಿಕ್ಷಣ (ಜಿ.ಸಿ.ಇ.ಡಿ)ವನ್ನು ನೀಡಲಾಗುವುದು. ಇದರಿಂದ ಕಲಿಕಾರ್ಥಿಗಳು ಜಾಗತಿಕ ವಿಷಯಗಳನ್ನು ಅರಿತುಕೊಳ್ಳಲು ಸಾಧ್ಯವಾಗುತ್ತದೆ ಮತ್ತು ಹೆಚ್ಚು ಶಾಂತಿಯುತ, ಸಂಯಮ, ಸಹಭಾಗಿತ್ವ, ಸುಭದ್ರ ಮತ್ತು ಸುಸ್ಥಿರ ಸಮಾಜಗಳಲ್ಲಿ ಸಕ್ರಿಯ ಪ್ರಾಯೋಜಕರಾಗಲು ಅವಕಾಶವಾಗುತ್ತದೆ. ಅಂತಿಮವಾಗಿ, ಸಮಗ್ರ ಶಿಕ್ಷಣದ ಭಾಗವಾಗಿ ಎಲ್ಲ ಉನ್ನತ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳಿಗೆ ಸ್ಥಳೀಯ ಕೈಗಾರಿಕೆ, ಉದ್ಯಮಗಳು, ಕಲಾವಿದರು ಮತ್ತು ಕುಶಲಕರ್ಮಿಗಳು ಮತ್ತಿತರರ ಬಳಿ ಇಂಟರ್ನ್-ಶಿಪ್‌ಗೆ ಅವಕಾಶಗಳನ್ನು ಕಲ್ಪಿಸಲಾಗಿತ್ತದೆ. ಇದರ ಜೊತೆಗೆ ವಿದ್ಯಾರ್ಥಿಗಳು ತಾವಾಗಿಯೇ ಬೋಧಕರು ಮತ್ತು ಸಂಶೋಧಕರ ಜೊತೆ ಅಥವಾ ಇತರ ಎಚ್.ಇ.ಐ./ಸಂಶೋಧನಾ ಸಂಸ್ಥೆಗಳಲ್ಲಿ ಸಂಶೋಧನಾ ಇಂಟರ್ನ್-ಶಿಪ್ ಮಾಡಬಹುದಾಗಿದೆ. ಇಂತಹ ಒಂದು ಅವಕಾಶದಿಂದ ವಿದ್ಯಾರ್ಥಿಗಳು ತಮ್ಮ ಕಲಿಕೆಯ ಪ್ರಾಯೋಗಿಕ ಕ್ಷೇತ್ರದಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಬಹುದು ಮತ್ತು ಈ ಕ್ರಮದಿಂದ ಅವರ ಉದ್ಯೋಗಾರ್ಹತೆಯೂ ಇನ್ನಷ್ಟು ಸುಧಾರಿಸುತ್ತದೆ.

11.9 ಪದವಿ ಕಾರ್ಯಕ್ರಮಗಳ ಸ್ವರೂಪ ಮತ್ತು ಅವಧಿಯನ್ನು ಅವುಗಳಿಗೆ ಅನುಗುಣವಾಗಿ ಹೊಂದಾಣಿಕೆ ಮಾಡಲಾಗುವುದು. ಪದವಿಪೂರ್ವ ಡಿಗ್ರಿಯು 3 ಅಥವಾ 4 ವರ್ಷಗಳ ಅವಧಿಯದ್ದಾಗಿದ್ದು, ಸೂಕ್ತ ಪ್ರಮಾಣಪತ್ರಗಳೊಂದಿಗೆ ಈ ಅವಧಿಯ ಒಳಗೇ ಬಹು ನಿರ್ಗಮನ ಆಯ್ಕೆಗಳು ಇರುತ್ತವೆ. ಉದಾ: ಒಂದು ಶೈಕ್ಷಣಿಕ ವಿಭಾಗದಲ್ಲಿ ಅಥವಾ ಔದ್ಯೋಗಿಕ ಅಥವಾ ವೃತ್ತಿಪರ ಕ್ಷೇತ್ರಗಳು ಸೇರಿದಂತೆ ಆಯಾ ಕ್ಷೇತ್ರದಲ್ಲಿ ಒಂದು ವರ್ಷ ಮುಕ್ತಾಯಗೊಂಡ ಬಳಿಕ ಪ್ರಮಾಣಪತ್ರ ನೀಡುವುದು ಅಥವಾ ಎರಡು ವರ್ಷಗಳ ಅಧ್ಯಯನದ ಬಳಿಕ ಡಿಪ್ಲೊಮಾ ಅಥವಾ 3 ವರ್ಷಗಳ ಕಾರ್ಯಕ್ರಮದ ಬಳಿಕ ಸ್ನಾತಕ ಪದವಿ. ಆದರೆ ನಾಲ್ಕು ವರ್ಷಗಳ ಬಹುಶಿಸ್ತೀಯ ಸ್ನಾತಕ ಕಾರ್ಯಕ್ರಮ ಆದ್ಯತೆಯ ಆಯ್ಕೆಯಾಗಿರುತ್ತದೆ. ಯಾಕೆಂದರೆ ಇದು ಸಮಗ್ರ ಮತ್ತು ಬಹುಶಿಸ್ತೀಯ ಶಿಕ್ಷಣದ ಪೂರ್ಣ ಶ್ರೇಣಿಯ ಅನುಭವ ಪಡೆಯಲು ಅವಕಾಶ ಒದಗಿಸುತ್ತದೆ. ಇದರ ಜೊತೆಗೆ ವಿದ್ಯಾರ್ಥಿಗಳ ಆಯ್ಕೆಯ ಆಧಾರದಲ್ಲಿ ಮೇಜರ್ ಮತ್ತು ಮೈನರ್ ವಿಷಯದ ಮೇಲೆ ಗಮನ ಕೇಂದ್ರೀಕರಿಸಲು ಸಾಧ್ಯವಾಗುತ್ತದೆ. ಶೈಕ್ಷಣಿಕ ಜಮಾ ಬ್ಯಾಂಕ್ (ಎ.ಬಿ.ಸಿ)ಯೊಂದನ್ನು ಸ್ಥಾಪಿಸಲಾಗುವುದು. ಇದರಲ್ಲಿ ಮಾನ್ಯತೆ ಪಡೆದ ನಾನಾ ಎಚ್.ಐ.ಇ.ಗಳಿಂದ ಗಳಿಸಲಾದ ಶೈಕ್ಷಣಿಕ ಮನ್ನಣೆಗಳನ್ನು ಡಿಜಿಟಲ್ ರೂಪದಲ್ಲಿ ಸಂಗ್ರಹಿಸಬಹುದು. ಇದರಿಂದಾಗಿ ಈ

ಖಾತೆಯಲ್ಲಿ ಜಮಾ ಆದ (ಗಳಿಸಲಾದ) ಮನ್ನಣೆಗಳನ್ನು ಗಣನೆಗೆ ತೆಗೆದುಕೊಂಡು ಒಂದು ಉನ್ನತ ಶಿಕ್ಷಣ ಸಂಸ್ಥೆಯಿಂದ ಪದವಿಗಳನ್ನು ನೀಡಬಹುದು. ವಿದ್ಯಾರ್ಥಿಗಳು ಎಚ್.ಇ.ಐ.ಗಳು ನಿಗದಿಪಡಿಸಿದ ಅಧ್ಯಯನದ ಪ್ರಮುಖ ಕ್ಷೇತ್ರ(ಗಳಲ್ಲಿ)ದಲ್ಲಿ ಕಠಿಣವಾದ ಸಂಶೋಧನಾ ಯೋಜನೆಯನ್ನು ಪೂರ್ಣಗೊಳಿಸಿದರೆ ನಾಲ್ಕು ವರ್ಷಗಳ ಕಾರ್ಯಕ್ರಮವು 'ಸಂಶೋಧನೆಯೊಂದಿಗಿನ' ಪದವಿಯಾಗಿ ಪರಿವರ್ತನೆ ಹೊಂದಬಹುದು.

11.10 ನಾನಾ ರೀತಿಯ ಸ್ನಾತಕೋತ್ತರ ಕಾರ್ಯಕ್ರಮಗಳನ್ನು ಒದಗಿಸುವ ಸ್ವಾತಂತ್ರ್ಯವನ್ನು ಎಚ್.ಇ.ಐ.ಗಳು ಹೊಂದಿರುತ್ತವೆ; (ಎ) ಮೂರು ವರ್ಷಗಳ ಸ್ನಾತಕ ಕೋರ್ಸ್ ಮುಗಿಸಿದವರಿಗೆ ಎರಡನೇ ವರ್ಷವನ್ನು ಸಂಪೂರ್ಣವಾಗಿ ಸಂಶೋಧನೆಗೆ ಮುಡಿಪಾಗಿಡುವ ಎರಡು ವರ್ಷದ ಕೋರ್ಸ್ ಒದಗಿಸಬಹುದು; (ಬಿ) ಸಂಶೋಧನೆಯೊಂದಿಗೆ 4-ವರ್ಷಗಳ ಸ್ನಾತಕ ಕೋರ್ಸ್ ಮುಗಿಸಿದ ವಿದ್ಯಾರ್ಥಿಗಳಿಗೆ ಒಂದು ವರ್ಷದ ಸ್ನಾತಕೋತ್ತರ ಕೋರ್ಸ್ ನಿಗದಿ ಮಾಡಬಹುದು; ಮತ್ತು (ಸಿ) ಐದು ವರ್ಷಗಳ ಸಮಗ್ರ ಸ್ನಾತಕ/ಸ್ನಾತಕೋತ್ತರ ಕೋರ್ಸ್ ನಿಗದಿ ಮಾಡಬಹುದು. ಪಿಎಚ್.ಡಿಯನ್ನು ಕೈಗೊಳ್ಳಲು ಸ್ನಾತಕೋತ್ತರ ಪದವಿ ಅಥವಾ ಸಂಶೋಧನೆಯೊಂದಿಗೆ 4 ವರ್ಷಗಳ ಸ್ನಾತಕ ಡಿಗ್ರಿ ಮಾಡಬಹುದು. ಎಂಫಿಲ್ ಕೋರ್ಸ್ ಗೆ ಅವಧಿಯ ಮಿತಿ ಇರುವುದಿಲ್ಲ.

11.11 ಐ.ಐ.ಟಿ.ಗಳು, ಐ.ಐ.ಎಂ.ಗಳು ಇತ್ಯಾದಿಗಳಿಗೆ ಸಮಾನವಾಗಿ ಸಮಗ್ರ ಹಾಗೂ ಬಹುಶಿಸ್ತೀಯ ಶಿಕ್ಷಣಕ್ಕೆ ಮಾದರಿ ಸಾರ್ವಜನಿಕ ವಿಶ್ವವಿದ್ಯಾಲಯವಾಗಿ ಮೇರು (MERU-ಬಹುಶಿಸ್ತೀಯ ಶಿಕ್ಷಣ ಮತ್ತು ಸಂಶೋಧನಾ ವಿಶ್ವವಿದ್ಯಾಲಯಗಳು)ವನ್ನು ಸ್ಥಾಪಿಸಲಾಗುತ್ತದೆ ಮತ್ತು ಇದರ ಮೂಲಕ ಗುಣಮಟ್ಟದ ಶಿಕ್ಷಣದಲ್ಲಿ ಅತ್ಯುನ್ನತ ಜಾಗತಿಕ ಗುಣಮಟ್ಟಗಳನ್ನು ಪಡೆಯುವ ಗುರಿ ಹೊಂದಲಾಗುವುದು. ಇವು ಭಾರತದಾದ್ಯಂತ ಬಹುಶಿಸ್ತೀಯ ಶಿಕ್ಷಣಕ್ಕೆ ಉನ್ನತ ಗುಣಮಟ್ಟಗಳನ್ನು ನಿಗದಿ ಮಾಡುವಲ್ಲಿಯೂ ನೆರವಾಗುತ್ತವೆ.

11.12 ಸ್ಟಾರ್ಟ್-ಅಪ್ ಮನನ ಕೇಂದ್ರಗಳು; ತಂತ್ರಜ್ಞಾನ ಅಭಿವೃದ್ಧಿ ಕೇಂದ್ರಗಳು; ಸಂಶೋಧನೆಯ ಮುಂಚೂಣಿ ಪ್ರದೇಶಗಳಲ್ಲಿನ ಕೇಂದ್ರಗಳು; ಹೆಚ್ಚಿನ ಕೈಗಾರಿಕೆ-ಶೈಕ್ಷಣಿಕ ಸಂಪರ್ಕಗಳು ಮತ್ತು ಮಾನವಿಕ ಹಾಗೂ ಸಮಾಜ ವಿಜ್ಞಾನ ಸಂಶೋಧನೆಯನ್ನು ಒಳಗೊಂಡ ಅಂತರ್-ಶಿಸ್ತೀಯ ಸಂಶೋಧನೆಯನ್ನು ಆರಂಭಿಸುವ ಮೂಲಕ ಉನ್ನತ ಶಿಕ್ಷಣ ಸಂಸ್ಥೆಗಳು ಸಂಶೋಧನೆ ಮತ್ತು ಆವಿಷ್ಕಾರಗಳಿಗೆ ಹೆಚ್ಚಿನ ಗಮನವನ್ನು ನೀಡಲಿದೆ. ಇತ್ತೀಚಿನ ಸಾಂಕ್ರಾಮಿಕ ಮತ್ತು ವ್ಯಾದಿಗಳ ವಿದ್ಯಮಾನಗಳ ಹಿನ್ನೆಲೆಯಲ್ಲಿ, ಸೋಂಕುಕಾರಕ ರೋಗಗಳು, ಸಾಂಕ್ರಾಮಿಕಶಾಸ್ತ್ರ, ವೈರಾಣುಶಾಸ್ತ್ರ, ರೋಗನಿರ್ಣಯ, ಉಪಕರಣ ವಿಜ್ಞಾನ, ಲಸಿಕೆಶಾಸ್ತ್ರ ಮತ್ತು ಇತರ ಸಂಬಂಧಪಟ್ಟ ಕ್ಷೇತ್ರಗಳಲ್ಲಿ ಎಚ್.ಇ.ಐ.ಗಳು ಸಂಶೋಧನೆಯನ್ನು ಕೈಗೊಳ್ಳಲು ನಿರ್ಣಾಯಕ ಪಾತ್ರವಹಿಸುವುದು ಅಗತ್ಯವಾಗಿದೆ. ವಿದ್ಯಾರ್ಥಿ ಸಮುದಾಯಗಳ ನಡುವೆ ಆವಿಷ್ಕಾರವನ್ನು ಪ್ರಾಯೋಜಿಸಲು ಎಚ್.ಇ.ಐ.ಗಳು ನಿರ್ದಿಷ್ಟ ಕೈಯಾಸರೆಯಾಗುವಂತಹ ವ್ಯವಸ್ಥೆಗಳನ್ನು ಅಭಿವೃದ್ಧಿಪಡಿಸಲಿದೆ ಮತ್ತು ಸ್ಪರ್ಧೆಗಳನ್ನು ಏರ್ಪಡಿಸಲಿದೆ. ಎಚ್.ಇ.ಐ.ಗಳು, ಸಂಶೋಧನಾ ಪ್ರಯೋಗಾಲಯಗಳು ಮತ್ತು ಇತರ ಸಂಶೋಧನಾ ಸಂಘಟನೆಗಳಲ್ಲಿ ಕೈಗೊಳ್ಳುವ ಇಂತಹ ವಿಭಿನ್ನ ಸಂಶೋಧನೆ ಮತ್ತು ಆವಿಷ್ಕಾರ ಸಾಧ್ಯವಾಗಿಸಲು ಮತ್ತು ಬೆಂಬಲ ನೀಡುವ ರೀತಿಯಲ್ಲಿ ಎನ್.ಆರ್.ಎಫ್. ಕಾರ್ಯನಿರ್ವಹಿಸಲಿದೆ.

12. ಅತ್ಯುತ್ತಮ ಕಲಿಕಾ ವ್ಯವಸ್ಥೆ ಮತ್ತು ವಿದ್ಯಾರ್ಥಿಗಳಿಗೆ ಬೆಂಬಲ

12.1 ಪರಿಣಾಮಕಾರಿ ಕಲಿಕೆಗೆ ಸಮಗ್ರವಾದ ದೃಷ್ಟಿಕೋನ, ವಿಧಾನಕ್ರಮ ಬೇಕಾಗುತ್ತದೆ; ಇದರಲ್ಲಿ ಸಮರ್ಪಕವಾದ ಪಠ್ಯಕ್ರಮ, ಆಕರ್ಷಕವಾದ ಅಧ್ಯಯನಶಾಸ್ತ್ರ, ನಿರಂತರ ರೂಪಾತ್ಮಕ ಮೌಲ್ಯಮಾಪನ ಮತ್ತು ಸೂಕ್ತ ವಿದ್ಯಾರ್ಥಿ ಬೆಂಬಲವು ಒಳಗೊಂಡಿದೆ. ಪಠ್ಯಕ್ರಮವು ಆಸಕ್ತಿಪೂರ್ಣ ಹಾಗೂ ಸುಸಂಗತವಾಗಿರಬೇಕು ಮತ್ತು ಇತ್ತೀಚಿನ ಜ್ಞಾನದ ಅಗತ್ಯಗಳು ಮತ್ತು ನಿರ್ದಿಷ್ಟ ಕಲಿಕಾ ಫಲಿತಾಂಶಗಳನ್ನು ಪೂರೈಸಲು ಆಗಾಗ ಪರಿಷ್ಕರಣೆಗೆ ಒಳಪಟ್ಟಿರಬೇಕು. ಹಾಗಾಗಿ ವಿದ್ಯಾರ್ಥಿಗಳಿಗೆ ಪಠ್ಯಕ್ರಮದ ವಿಷಯಗಳನ್ನು ಯಶಸ್ವಿಯಾಗಿ ಒಪ್ಪಿಸಲು ಉನ್ನತ ಗುಣಮಟ್ಟದ ಅಧ್ಯಾಪನಶಾಸ್ತ್ರದ ಅಗತ್ಯವಿರುತ್ತದೆ; ಅಧ್ಯಾಪನಶಾಸ್ತ್ರ ಅಭ್ಯಾಸಗಳು ವಿದ್ಯಾರ್ಥಿಗಳಿಗೆ ಒದಗಿಸಲಾಗುವ ಕಲಿಕಾ ಅನುಭವಗಳನ್ನು ನಿರ್ಧರಿಸುತ್ತವೆ; ಆ ಮೂಲಕ ಅದು ವಿದ್ಯಾರ್ಥಿಗಳ ಕಲಿಕಾ ಫಲಿತಗಳ (learning outcomes) ಮೇಲೆ ನೇರವಾಗಿ ಪ್ರಭಾವ ಬೀರುತ್ತದೆ. ಮೌಲ್ಯಮಾಪನ ಪದ್ಧತಿಗಳು ವೈಜ್ಞಾನಿಕವಾಗಿರಬೇಕು; ಅದು ಕಲಿಕೆಯನ್ನು ನಿರಂತರವಾಗಿ ಸುಧಾರಿಸುವಂತೆ ಮತ್ತು ಜ್ಞಾನದ ಬಳಕೆಯನ್ನು ಪರೀಕ್ಷೆಗೆ ಒಳಪಡಿಸುವಂತೆ ವಿನ್ಯಾಸಗೊಳಿಸಿರಬೇಕು. ಇವೆಲ್ಲಕ್ಕೆ ಕಳಶಪ್ರಾಯವಾಗಿರುವಂತೆ ಕಟ್ಟಕಡೆಯದಾಗಿ, ವಿದ್ಯಾರ್ಥಿಯ ಸ್ವಾಸ್ಥ್ಯವನ್ನು ಉತ್ತೇಜಿಸುವ ಸಾಮರ್ಥ್ಯಗಳ ಸುಧಾರಣೆಯೂ ಕೂಡ ಅಷ್ಟೇ ಮುಖ್ಯವಾಗುತ್ತದೆ; ಅದಕ್ಕಾಗಿ ದೈಹಿಕ ಸದೃಢತೆ, ಉತ್ತಮ ಆರೋಗ್ಯ, ಮಾನಸಿಕ-ಸಾಮಾಜಿಕ ಸ್ವಾಸ್ಥ್ಯ ಮತ್ತು ಅತ್ಯುತ್ತಮ ನೈತಿಕ ಹಿನ್ನೆಲೆ ಉನ್ನತ ಶಿಕ್ಷಣದ ಕಲಿಕೆಯಲ್ಲಿ ನಿರ್ಣಾಯಕವಾಗಿವೆ. ಹಾಗಾಗಿ ಪಠ್ಯಕ್ರಮ, ಅಧ್ಯಾಪನಶಾಸ್ತ್ರ, ನಿರಂತರ ಮೌಲ್ಯಮಾಪನ ಮತ್ತು ವಿದ್ಯಾರ್ಥಿಗಳ ಬೆಂಬಲ ಇವೆಲ್ಲವೂ ಗುಣಮಟ್ಟದ ಕಲಿಕೆಗೆ ಮೈಲುಗಲ್ಲುಗಳಾಗಿವೆ. ಗುಣಮಟ್ಟದ ಗ್ರಂಥಾಲಯಗಳು, ತರಗತಿಗಳು, ಪ್ರಯೋಗಾಲಯಗಳು, ತಂತ್ರಜ್ಞಾನ, ಕ್ರೀಡೆ/ಮನರಂಜನಾ ತಾಣಗಳು, ವಿದ್ಯಾರ್ಥಿ ಚರ್ಚಾ ತಾಣಗಳು ಮತ್ತು ಭೋಜನ ಸ್ಥಳಗಳಂತಹ ಸೂಕ್ತ ಸಂಪನ್ಮೂಲಗಳು ಮತ್ತು ಮೂಲ ಸೌಕರ್ಯಗಳನ್ನು ಒದಗಿಸುವುದರ ಜೊತೆಗೆ, ಕಲಿಕಾ ವಾತಾವರಣ ಕೂಡ ಆಕರ್ಷಕ ಮತ್ತು

ಪೂರಕವಾಗಿರಲು ಹಾಗೂ ಎಲ್ಲ ವಿದ್ಯಾರ್ಥಿಗಳು ಯಶಸ್ಸನ್ನು ಹೊಂದಲು ಸಾಧ್ಯವಾಗುವಂತೆ ಅನೇಕ ಉಪಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ.

12.2 ಮೊದಲನೆಯದಾಗಿ ಕ್ರಿಯಾಶೀಲತೆಯನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ, ಸಂಸ್ಥೆಗಳು ಮತ್ತು ಬೋಧಕರು ಪಠ್ಯಕ್ರಮ, ಅಧ್ಯಯನಶಾಸ್ತ್ರ ಮತ್ತು ಮೌಲ್ಯಮಾಪನದ ವಿಷಯಗಳಲ್ಲಿ ಹೊಸತನ್ನು ಅಳವಡಿಸುವ ಸ್ವಾತಂತ್ರ್ಯವನ್ನು ಹೊಂದಿರುತ್ತಾರೆ. ಎಲ್ಲಾ ಸಂಸ್ಥೆಗಳು ಮತ್ತು ಕಾರ್ಯಕ್ರಮಗಳಲ್ಲಿ ಹಾಗೂ ಎಲ್ಲ ಓ.ಡಿ.ಎಲ್, ಆನ್ಲೈನ್ ಮತ್ತು ಸಾಂಪ್ರದಾಯಿಕ ತರಗತಿ ವ್ಯವಸ್ಥೆಯಲ್ಲಿ ಸ್ಥಾಯಿತ್ವವನ್ನು ಖಾತರಿಪಡಿಸುವ ಉನ್ನತ ಶಿಕ್ಷಣದ ಅರ್ಹತೆಗಳ ವಿಶಾಲ ಚೌಕಟ್ಟಿನ ಮಿತಿಯಲ್ಲಿಯೇ ಈ ಅವಕಾಶ ಲಭ್ಯವಾಗಿರುತ್ತದೆ. ಇದಕ್ಕೆ ತಕ್ಕಂತೆ, ಎಲ್ಲಾ ವಿದ್ಯಾರ್ಥಿಗಳಿಗೆ ಉತ್ತೇಜನಕಾರಿಯಾದ ಮತ್ತು ಆಕರ್ಷಕವಾಗಿ ಕಲಿಕಾ ಅನುಭವವನ್ನು ನೀಡಲು ಸಂಸ್ಥೆಗಳು ಹಾಗೂ ಪ್ರೇರೇಪಿತ ಬೋಧಕರು ಪಠ್ಯಕ್ರಮ ಮತ್ತು ಅಧ್ಯಾಪನಶಾಸ್ತ್ರವನ್ನು ವಿನ್ಯಾಸಗೊಳಿಸಿರುತ್ತಾರೆ ಮತ್ತು ಪ್ರತಿ ಕಾರ್ಯಕ್ರಮದ ಗುರಿಯನ್ನು ಸಾಧಿಸಲು ನಿರಂತರ ರೂಪಾತ್ಮಕ ಮೌಲ್ಯಮಾಪನವನ್ನು ಬಳಸಲಾಗುತ್ತದೆ. ಅಂತಿಮ ಪ್ರಮಾಣೀಕರಣಕ್ಕೆ ಕಾರಣವಾಗುವುದೂ ಸೇರಿದಂತೆ ಎಲ್ಲ ಮೌಲ್ಯಮಾಪನ ವ್ಯವಸ್ಥೆಗಳ ಬಗೆಗೆ ಉನ್ನತ ಶಿಕ್ಷಣ ಸಂಸ್ಥೆ ನಿರ್ಧರಿಸುತ್ತದೆ. ಹೊಸತನ ಮತ್ತು ಸ್ವಾತಂತ್ರ್ಯವನ್ನು ತುಂಬುವ ಕ್ರಮವಾಗಿ ಆಯ್ಕೆ ಆಧಾರಿತ ಮನ್ನಣೆ ವ್ಯವಸ್ಥೆ (ಸಿಬಿಸಿಎಸ್)ಯನ್ನು ಪುನಾರಚಿಸಲಾಗುವುದು. ವ್ಯವಸ್ಥೆಯನ್ನು ನ್ಯಾಯಸಮ್ಮತವಾಗಿ ಮತ್ತು ಫಲಿತಗಳು ಹೆಚ್ಚು ತುಲನಾತ್ಮಕವಾಗಿ ಮಾಡಲು, ಪ್ರತಿ ಕಾರ್ಯಕ್ರಮದ ಕಲಿಕಾ ಗುರಿಗಳ ಆಧಾರದಲ್ಲಿ ವಿದ್ಯಾರ್ಥಿಗಳ ಸಾಧನೆಯನ್ನು ಅಳೆಯಲು ಉನ್ನತ ಶಿಕ್ಷಣ ಸಂಸ್ಥೆಗಳು ಅರ್ಹತೆ-ಆಧಾರದ ಶ್ರೇಯಾಂಕ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲಿದೆ. ಹೆಚ್ಚು ನಿರಂತರ ಮತ್ತು ಸಮಗ್ರ ಮೌಲ್ಯಮಾಪನದ ಕಡೆಗೆ ಹೊರಳುವ ದೃಷ್ಟಿಯಿಂದ ಅತ್ಯುನ್ನತ ದರ್ಜೆಯ ಪರೀಕ್ಷೆಗಳಿಂದಲೂ ಎಚ್.ಇ.ಐ.ಗಳು ದೂರ ಉಳಿಯಲಿವೆ.

12.3 ಎರಡನೆಯದಾಗಿ, ಪ್ರತಿಯೊಂದು ಸಂಸ್ಥೆಯೂ ಕೂಡ ಪಠ್ಯಕ್ರಮದ ಸುಧಾರಣೆಯಿಂದ ಕ್ಲಾಸ್‌ರೂಮ್ ಕಲಾಪಗಳ ಗುಣಮಟ್ಟ ಮತ್ತು ತನ್ನ ಬೃಹತ್ ಸಾಂಸ್ಥಿಕ ಅಭಿವೃದ್ಧಿ ಯೋಜನೆ (ಐ.ಡಿ.ಪಿ) ತನಕ ತನ್ನ ಶೈಕ್ಷಣಿಕ ಯೋಜನೆಗಳನ್ನು ರೂಪಿಸುತ್ತವೆ. ವಿದ್ಯಾರ್ಥಿಗಳ ಸಮಗ್ರ ಅಭಿವೃದ್ಧಿಗೆ ಮತ್ತು ಶೈಕ್ಷಣಿಕ ಹಾಗೂ ಸಾಮಾಜಿಕ ಡೊಮೇನ್ಗಳಲ್ಲಿ ವೈವಿಧ್ಯಮಯ ವಿದ್ಯಾರ್ಥಿ ಕೂಟಗಳಿಗೆ ಬೆಂಬಲ ನೀಡಲು ಸದೃಢವಾದ ಆಂತರಿಕೆ ವ್ಯವಸ್ಥೆಗಳನ್ನು ಸೃಷ್ಟಿಸಲು ಪ್ರತಿಯೊಂದು ಸಂಸ್ಥೆಯೂ ಬದ್ಧವಾಗಿರುತ್ತದೆ. ಉದಾಹರಣೆಗೆ, ವಿಷಯ ಕೇಂದ್ರಿತವಾದ ಕ್ಲಬ್ಗಳು ಮತ್ತು ಬೋಧಕರು ಹಾಗೂ ಇತರ ತಜ್ಞರ ನೆರವಿನೊಂದಿಗೆ ವಿದ್ಯಾರ್ಥಿಗಳು ಸಂಘಟಿಸಿದ ವಿಜ್ಞಾನ, ಗಣಿತಶಾಸ್ತ್ರ, ಕವಿತೆ, ಭಾಷೆ, ಸಾಹಿತ್ಯ, ಚರ್ಚೆ, ಸಂಗೀತ, ಕ್ರೀಡೆ ಇತ್ಯಾದಿ ಚಟುವಟಿಗಳಿಗೆ ನಿಧಿಯನ್ನು ಒದಗಿಸಲು ಎಲ್ಲಾ ಎಚ್.ಇ.ಐಗಳು ವ್ಯವಸ್ಥೆಯನ್ನು ಮಾಡಿಕೊಳ್ಳಲಿವೆ ಮತ್ತು ಅವಕಾಶಗಳನ್ನು ಒದಗಿಸಲಿವೆ. ಕಾಲಕ್ರಮೇಣ, ಸೂಕ್ತ ಬೋಧಕ ತಜ್ಞರು ಹಾಗೂ ಕ್ಯಾಂಪಸ್ ವಿದ್ಯಾರ್ಥಿ ಬೇಡಿಕೆ ಹೆಚ್ಚಿದ ಬಳಿಕ ಇಂತಹ ಚಟುವಟಿಕೆಗಳನ್ನು ಪಠ್ಯಕ್ರಮಕ್ಕೇ ಅಳವಡಿಸಬಹುದಾಗಿದೆ. ಬೋಧಕ ವೃಂದವೂ ಕೂಡ ಕೇವಲ ಶಿಕ್ಷಕರಾಗಿ ಮಾತ್ರವಲ್ಲದೆ ಮಾರ್ಗದರ್ಶಕರಾಗಿ ವಿದ್ಯಾರ್ಥಿಗಳನ್ನು ಸಮೀಪಿಸುವ ಸಾಮರ್ಥ್ಯ ಮತ್ತು ತರಬೇತಿಯನ್ನು ಪಡೆದುಕೊಂಡಿರಬೇಕು.

12.4 ಮೂರನೆಯದಾಗಿ, ಸಾಮಾಜಿಕ ಹಾಗೂ ಆರ್ಥಿಕವಾಗಿ ಹಿಂದುಳಿದ ಹಿನ್ನೆಲೆಗಳಿಂದ ಬಂದ ವಿದ್ಯಾರ್ಥಿಗಳ ಉನ್ನತ ಶಿಕ್ಷಣ ಪಯಣ ಯಶಸ್ವಿಯಾಗಿ ಸಾಗಲು ಅವರಿಗೆ ಉತ್ತೇಜನ ಹಾಗೂ ಬೆಂಬಲ ನೀಡಬೇಕಾದ ಅಗತ್ಯವಿರುತ್ತದೆ. ಇದನ್ನು ಅತ್ಯಂತ ಪರಿಣಾಮಕಾರಿಯಾಗಿ ಜಾರಿಗೆ ತರಲು ಸಾಧ್ಯವಾಗುವಂತೆ ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳು ಉನ್ನತ ದರ್ಜೆಯ ಬೆಂಬಲ ಕೇಂದ್ರಗಳನ್ನು ರಚಿಸಬೇಕು ಮತ್ತು ಸಾಕಷ್ಟು ಹಣಕಾಸು ಸೌಲಭ್ಯ ಹಾಗೂ ಶೈಕ್ಷಣಿಕ ಸಂಪನ್ಮೂಲಗಳನ್ನು ನೀಡಲಾಗುತ್ತದೆ. ಎಲ್ಲಾ ವಿದ್ಯಾರ್ಥಿಗಳಿಗೆ ಹಾಗೂ ಕೌನ್ಸೆಲರ್ಗಳಿಗೆ ದೈಹಿಕ, ಮಾನಸಿಕ ಮತ್ತು ಭಾವನಾತ್ಮಕ ಯೋಗಕ್ಷೇಮವನ್ನು ಖಾತರಿಪಡಿಸಲು ವೃತ್ತಿಪರ ಶೈಕ್ಷಣಿಕ ಮತ್ತು ಉದ್ಯೋಗ ಕೌನ್ಸೆಲಿಂಗ್ ಕೂಡ ಲಭ್ಯವಿರುತ್ತದೆ.

12.5 ನಾಲ್ಕನೆಯದಾಗಿ, ಗುಣಮಟ್ಟದ ಉನ್ನತ ಶಿಕ್ಷಣಕ್ಕೆ ಪ್ರವೇಶವನ್ನು ಹೆಚ್ಚಿಸಲು ಓ.ಡಿ.ಎಲ್ ಮತ್ತು ಆನ್‌ಲೈನ್ ಶಿಕ್ಷಣವು ಸಹಜ ಪಥವನ್ನು ಕಲ್ಪಿಸಬೇಕು. ಓ.ಡಿ.ಎಲ್ನ ಸಾಮರ್ಥ್ಯ ಸಂಪೂರ್ಣ ದೊರೆಯುವಂತೆ ಮಾಡಲು ಅದನ್ನು ಯೋಜಿತ, ಪುರಾವೆ ಆಧಾರಿತ ಪ್ರಯತ್ನಗಳ ಮೂಲಕ ನವೀಕರಿಸಬೇಕು ಮತ್ತು ಗುಣಮಟ್ಟವನ್ನು ಕಾಯ್ದುಕೊಳ್ಳುವ ಬಗ್ಗೆ ಸ್ಪಷ್ಟವಾದ ಭರವಸೆಯನ್ನು ನೀಡಬೇಕು. ಓ.ಡಿ.ಎಲ್ ಕೋರ್ಸ್ಗಳು ಲಭ್ಯವಿರುವ ತರಗತಿ ಆಧಾರಿತ ಕೋರ್ಸ್ಗಳ ಅತ್ಯುನ್ನತ ಗುಣಮಟ್ಟಕ್ಕೆ ಸಮಾನವಾಗಿರುವ ಗುರಿಯನ್ನು ಹೊಂದಿರುತ್ತವೆ. ಓ.ಡಿ.ಎಲ್ ನ ವ್ಯವಸ್ಥಿತ ಅಭಿವೃದ್ಧಿಗೆ ಅಗತ್ಯವಿರುವ ನಿಯಮಗಳು, ಮಾನದಂಡಗಳು ಮತ್ತು ಮಾರ್ಗಸೂಚಿಗಳು, ನಿಬಂಧನೆಗಳು ಹಾಗೂ ಮಾನ್ಯತೆಯನ್ನು ಸಿದ್ಧಪಡಿಸಲಾಗುವುದು ಮತ್ತು ಎಲ್ಲ ಎಚ್.ಇ.ಐಗಳಿಗೆ ಅಂಗೀಕಾರಾರ್ಹವಾಗಿರುವ ಓ.ಡಿ.ಎಲ್ನ ಗುಣಮಟ್ಟಕ್ಕೆ ಬೇಕಾದ ಚೌಕಟ್ಟನ್ನು ಅಭಿವೃದ್ಧಿಪಡಿಸಲಾಗುತ್ತದೆ.

12.6 ಅಂತಿಮವಾಗಿ, ತರಗತಿ ಆಧಾರಿತ, ಆನ್ಲೈನ್ ಮತ್ತು ಓ.ಡಿ.ಎಲ್ ಮಾದರಿಗಳು ಸೇರಿದಂತೆ ಎಲ್ಲ ವಿಷಯಗಳ ಎಲ್ಲ ಕಾರ್ಯಕ್ರಮಗಳು, ಕೋರ್ಸ್, ಪಠ್ಯಕ್ರಮ ಮತ್ತು ಅಧ್ಯಯನಶಾಸ್ತ್ರದ ಜೊತೆಗೆ ವಿದ್ಯಾರ್ಥಿ ಬೆಂಬಲವು ಜಾಗತಿಕ ಗುಣಮಟ್ಟವನ್ನು ಸಾಧಿಸುವ ಗುರಿಯನ್ನು ಹೊಂದಿರಲಿದೆ.

ಅಂತಾರಾಷ್ಟ್ರೀಕರಣ:

12.7 ಮೇಲೆ ಪ್ರಸ್ತಾಪಿಸಲಾದ ಅನೇಕ ಉಪಕ್ರಮಗಳು ಭಾರತದಲ್ಲಿ ಅಧ್ಯಯನ ಮಾಡುತ್ತಿರುವ ಬೃಹತ್ ಸಂಖ್ಯೆಯ ಅಂತಾರಾಷ್ಟ್ರೀಯ ವಿದ್ಯಾರ್ಥಿಗಳಿಗೂ ಸಹಾಯವಾಗಲಿದೆ ಮತ್ತು ವಿದೇಶದಲ್ಲಿರುವ ಸಂಸ್ಥೆಗಳಿಗೆ ಭೇಟಿ ನೀಡುವ, ಅಲ್ಲಿ ಅಧ್ಯಯನ ಮಾಡುವ, ಮನ್ನಣೆಯನ್ನು ಅವರಿಗೆ ವರ್ಗಾವಣೆ ಮಾಡುವ ಅಥವಾ ಅಲ್ಲಿ ಸಂಶೋಧನೆಯನ್ನು ನಡೆಸುವ ಬಯಕೆಯನ್ನು ಹೊಂದಿರಬಹುದಾದ ಭಾರತದಲ್ಲಿರುವ ವಿದ್ಯಾರ್ಥಿಗಳಿಗೆ ಅಪೂರ್ವವಾದ ಗತಿಶೀಲತೆಯನ್ನು ಒದಗಿಸಲಿದೆ. ವಿದೇಶದಲ್ಲಿ ಅಧ್ಯಯನ ಮಾಡುತ್ತಿರುವ ಬೃಹತ್ ಸಂಖ್ಯೆಯ ವಿದ್ಯಾರ್ಥಿಗಳಿಗೂ ಇದು ಸಹಾಯವಾಗಲಿದೆ. ಭಾರತಾಧ್ಯಯನ, ಭಾರತೀಯ ಭಾಷೆಗಳು, ಆಯುಷ್ ಔಷಧ ಪದ್ಧತಿ, ಯೋಗ, ಕಲೆ, ಸಂಗೀತ, ಇತಿಹಾಸ, ಸಂಸ್ಕೃತಿ ಮತ್ತು ಆಧುನಿಕ ಭಾರತದಂತಹ ವಿಷಯಗಳಲ್ಲಿನ ಕೋರ್ಸ್‌ಗಳು ಮತ್ತು ಕಾರ್ಯಕ್ರಮಗಳು ಹಾಗೂ ವಿಜ್ಞಾನ, ಸಮಾಜ ವಿಜ್ಞಾನದಲ್ಲಿ ಅಂತಾರಾಷ್ಟ್ರೀಯವಾಗಿ ಪ್ರಸ್ತುತ ಪಠ್ಯಕ್ರಮ ಮತ್ತು ಅದನ್ನೂ ಮೀರಿದ ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಲು ಅರ್ಥಪೂರ್ಣ ಅವಕಾಶಗಳು, ಗುಣಮಟ್ಟದ ವಾಸಯೋಗ್ಯ ಸೌಲಭ್ಯಗಳು ಮತ್ತು ಕ್ಯಾಂಪಸ್ನಲ್ಲಿ ದೊರೆಯುವ ಬೆಂಬಲ ಇತ್ಯಾದಿಗಳನ್ನು ಜಾಗತಿಕ ಗುಣಮಟ್ಟದ ಮಾನದಂಡಗಳ ಗುರಿ ಸಾಧನೆಗೆ, ಸಾಕಷ್ಟು ಸಂಖ್ಯೆಯ ಅಂತಾರಾಷ್ಟ್ರೀಯ ವಿದ್ಯಾರ್ಥಿಗಳನ್ನು ಆಕರ್ಷಿಸಲು ಮತ್ತು 'ತವರೂರಿನಲ್ಲೇ ಅಂತಾರಾಷ್ಟ್ರೀಕರಣ'ದ ಗುರಿಯನ್ನು ಸಾಧಿಸಲು ಆಧರಿಸಲಾಗುತ್ತದೆ.

12.8 ಕೈಗೆಟುಕಬಲ್ಲ ವೆಚ್ಚದಲ್ಲಿ ಶ್ರೇಷ್ಠ ಶಿಕ್ಷಣವನ್ನು ಒದಗಿಸುವುದರ ಮೂಲಕ ಭಾರತವನ್ನು ಜಾಗತಿಕ ಅಧ್ಯಯನ ತಾಣವಾಗಿ ಪ್ರೋತ್ಸಾಹಿಸಲಾಗುವುದು ಮತ್ತು ಆ ಮೂಲಕ ಅದರ ವಿಶ್ವಗುರು ಸ್ಥಾನವನ್ನು ಮರಳಿ ಪಡೆಯಲು ಸಹಾಯ ಮಾಡಲಾಗುವುದು. ಪ್ರತಿಯೊಂದು ಉನ್ನತ ಶಿಕ್ಷಣ ಸಂಸ್ಥೆಯಲ್ಲಿ ವಿದೇಶಿ ವಿದ್ಯಾರ್ಥಿಗಳಿಗಾಗಿ ಅಂತಾಷ್ಟ್ರೀಯ ವಿದ್ಯಾರ್ಥಿಗಳ ಕಚೇರಿಯನ್ನು ಸ್ಥಾಪಿಸಲಾಗುತ್ತದೆ ಮತ್ತು ವಿದೇಶದಿಂದ ಬರುವ ವಿದ್ಯಾರ್ಥಿಗಳನ್ನು ಸ್ವಾಗತಿಸುವ ಮತ್ತು ಬೆಂಬಲಿಸುವುದಕ್ಕೆ ಸಂಬಂಧಿಸಿದ ಎಲ್ಲ ವಿಚಾರಗಳನ್ನು ಇಲ್ಲಿ ನಿರ್ವಹಿಸಲಾಗುತ್ತದೆ. ಅತ್ಯುನ್ನತ ಗುಣಮಟ್ಟದ ವಿದೇಶಿ ಸಂಸ್ಥೆಗಳ ಜೊತೆ ಸಂಶೋಧನೆ/ಬೋಧನೆ ಸಹಯೋಗ ಮತ್ತು ಬೋಧನೆ/ವಿದ್ಯಾರ್ಥಿ ವಿನಿಮಯಗಳಿಗೆ ಅನುಕೂಲ ಕಲ್ಪಿಸಲಾಗುವುದು ಮತ್ತು ಇದಕ್ಕೆ ಸಂಬಂಧಿಸಿದಂತೆ ವಿದೇಶಗಳ ಜೊತೆ ಪರಸ್ಪರ ಪ್ರಯೋಜನವಾಗಬಲ್ಲ ಎಂ.ಓ.ಯುಗಳಿಗೆ ಸಹಿ ಹಾಕಲಾಗುವುದು. ಅತ್ಯುತ್ತಮ ನಿರ್ವಹಣೆ ತೋರುವ ಭಾರತೀಯ ವಿಶ್ವವಿದ್ಯಾಲಯಗಳು ಇತರ ರಾಷ್ಟ್ರಗಳಲ್ಲಿ ಕ್ಯಾಂಪಸ್ಗಳನ್ನು ರಚಿಸಲು ಉತ್ತೇಜನ ನೀಡಲಾಗುವುದು ಮತ್ತು ಅದೇ ರೀತಿ, ವಿಶ್ವದ 100 ಅಗ್ರಗಣ್ಯ ವಿಶ್ವವಿದ್ಯಾಲಯಗಳಲ್ಲಿ ಆಯ್ದ ಕೆಲವು ವಿಶ್ವವಿದ್ಯಾಲಯಗಳು ಭಾರತದಿಂದ ಕಾರ್ಯನಿರ್ವಹಿಸಲು ಅವಕಾಶ ಕಲ್ಪಿಸಲಾಗುವುದು. ಇಂತಹ ಪ್ರವೇಶಕ್ಕೆ ಅನುವು ಮಾಡಿಕೊಡುವ ಶಾಸನಾತ್ಮಕ ಚೌಕಟ್ಟನ್ನು ರೂಪಿಸಲಾಗುವುದು ಮತ್ತು ಇಂತಹ ವಿಶ್ವವಿದ್ಯಾಲಯಗಳಿಗೆ ನಿಬಂಧನೆ, ಆಡಳಿತ ಮತ್ತು ವಿಷಯ ನಿಯಮಗಳಿಗೆ ಸಂಬಂಧಿಸಿ ಭಾರತದ ಇತರ ಸ್ವಾಯತ್ತ ಸಂಸ್ಥೆಗಳಿಗೆ ಸಮಾನವಾಗಿ ವಿಶೇಷ ಹಂಚಿಕೆಯನ್ನು ನೀಡಲಾಗುವುದು. ಇಷ್ಟು ಮಾತ್ರವಲ್ಲದೆ ಭಾರತೀಯ ಸಂಸ್ಥೆಗಳು ಮತ್ತು ಜಾಗತಿಕ ಸಂಸ್ಥೆಗಳ ನಡುವೆ ಸಂಶೋಧನಾ ಸಹಯೋಗ ಮತ್ತು ವಿದ್ಯಾರ್ಥಿ ವಿನಿಮಯಗಳನ್ನು ವಿಶೇಷ ಪ್ರಯತ್ನಗಳ ಮೂಲಕ ಉತ್ತೇಜಿಸಲಾಗುತ್ತದೆ. ವಿದೇಶಿ ವಿಶ್ವವಿದ್ಯಾಲಗಳಲ್ಲಿ ಗಳಿಸಲಾದ ಮನ್ನಣೆಗಳಿಗೆ (ಅಂಕಗಳು) ಪ್ರತಿಯೊಂದು ಎಚ್.ಇ.ಐನ ಅಗತ್ಯಗಳಿಗೆ ಅನುಗುಣವಾಗಿ ಸೂಕ್ತ ರೀತಿಯಲ್ಲಿ ಅನುಮತಿ ನೀಡಲಾಗುವುದು ಹಾಗೂ ಪದವಿಯನ್ನು ನೀಡುವ ಸಂದರ್ಭದಲ್ಲಿ ಇದನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತದೆ.

ವಿದ್ಯಾರ್ಥಿ ಚಟುವಟಿಕೆ ಮತ್ತು ಸಹಯೋಗ

12.9 ಶಿಕ್ಷಣ ವ್ಯವಸ್ಥೆಯಲ್ಲಿ ವಿದ್ಯಾರ್ಥಿಗಳೇ ಬಹುಮುಖ್ಯ ಹಕ್ಕುದಾರರು. ಉನ್ನತ ಗುಣಮಟ್ಟದ ಬೋಧನೆ-ಕಲಿಕೆ ಪ್ರಕ್ರಿಯೆಯಲ್ಲಿ ಅತ್ಯಂತ ಚಲನಶೀಲವಾದ ಕ್ಯಾಂಪಸ್ ಜೀವನ ಅತ್ಯಗತ್ಯವಾದುದಾಗಿದೆ. ವಿಶ್ವವಿದ್ಯಾಲಯದ ಕಡೆಯಿಂದ ಕ್ರೀಡೆ, ಸಂಸ್ಕೃತಿ/ಕಲೆ, ಕ್ಲಬ್, ಪರಿಸರ ಕ್ಲಬ್, ಕಾರ್ಯಚಟುವಟಿಕೆಗೆ ಸಂಬಂಧಿಸಿದ ಕ್ಲಬ್, ಸಮುದಾಯ ಸೇವಾ ಯೋಜನೆಗಳು ಇತ್ಯಾದಿ ಕ್ಷೇತ್ರಗಳಲ್ಲಿ ಭಾಗವಹಿಸಲು ಬಹಳಷ್ಟು ಅವಕಾಶಗಳನ್ನು ನೀಡಲಾಗುವುದು. ಪ್ರತಿಯೊಂದು ಶಿಕ್ಷಣ ಸಂಸ್ಥೆಯಲ್ಲಿಯೂ ಒತ್ತಡ ಮತ್ತು ಭಾವನಾತ್ಮಕ ಹೊಂದಾಣಿಕೆಗಳನ್ನು ನಿರ್ವಹಿಸಲು ಕೌನ್ಸೆಲಿಂಗ್ ವ್ಯವಸ್ಥೆ ಇರಲಿದೆ. ಇದರ ಜೊತೆಗೆ, ಗ್ರಾಮೀಣ ಪ್ರದೇಶಗಳಿಂದ ಬಂದ ವಿದ್ಯಾರ್ಥಿಗಳಿಗೆ ಅಗತ್ಯವಿರುವ ಬೆಂಬಲವನ್ನು ನೀಡಲು ವ್ಯವಸ್ಥಿತವಾದ ಏರ್ಪಾಡುಗಳನ್ನು ಮಾಡಲಾಗುವುದು; ಅಗತ್ಯವಿರುವ ಹಾಸ್ಟೆಲ್ ಸೌಕರ್ಯಗಳನ್ನು ಹೆಚ್ಚಿಸುವುದು ಕೂಡ ಇದರಲ್ಲಿ ಸೇರಿರುತ್ತದೆ. ಎಲ್ಲ ಎಚ್.ಇ.ಐಗಳು ತಮ್ಮ ಸಂಸ್ಥೆಗಳಲ್ಲಿ ಎಲ್ಲ ವಿದ್ಯಾರ್ಥಿಗಳಿಗೆ ಗುಣಮಟ್ಟದ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಲಿವೆ.

ವಿದ್ಯಾರ್ಥಿಗಳಿಗೆ ಹಣಕಾಸು ಬೆಂಬಲ

12.10 ಹತ್ತು ಹಲವು ಕ್ರಮಗಳ ಮೂಲಕ ವಿದ್ಯಾರ್ಥಿಗಳಿಗೆ ಹಣಕಾಸು ನೆರವು ಲಭ್ಯವಾಗುವಂತೆ ಮಾಡಲಾಗುತ್ತದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳು ಮತ್ತು ಇತರ ಎಸ್.ಇ.ಡಿ.ಜಿ.ಗಳಿಗೆ ಸೇರಿದ ವಿದ್ಯಾರ್ಥಿಗಳ ಅರ್ಹತೆಗೆ ಪ್ರೋತ್ಸಾಹಧನ ನೀಡಲು

ಪ್ರಯತ್ನಗಳನ್ನು ಮಾಡಲಾಗುವುದು. ವಿದ್ಯಾರ್ಥಿ ವೇತನಗಳನ್ನು ಪಡೆಯುವ ವಿದ್ಯಾರ್ಥಿಗಳ ಪ್ರಗತಿಯನ್ನು ಪರಿಶೀಲನೆ ಮಾಡಲು ಮತ್ತು ಅಂತಹ ವಿದ್ಯಾರ್ಥಿಗಳಿಗೆ ಬೆಂಬಲ, ಪೋಷಣೆ ನೀಡಲು ರಾಷ್ಟ್ರೀಯ ವಿದ್ಯಾರ್ಥಿ ವೇತನ ಪೋರ್ಟಲ್‌ಅನ್ನು ವಿಸ್ತರಿಸಲಾಗುತ್ತದೆ. ತಮ್ಮ ವಿದ್ಯಾರ್ಥಿಗಳಿಗೆ ಬೃಹತ್ ಸಂಖ್ಯೆಯಲ್ಲಿ ಶುಲ್ಕ ವಿನಾಯ್ತಿ ಮತ್ತು ವಿದ್ಯಾರ್ಥಿ ವೇತನಗಳನ್ನು ನೀಡುವ ಖಾಸಗಿ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಪ್ರೋತ್ಸಾಹ ನೀಡಲಾಗುವುದು.

13. ಸ್ಫೂರ್ತಿದಾಯಕ, ಶಕ್ತಿದಾಯಕ ಹಾಗೂ ಸಮರ್ಥ ಸಿಬ್ಬಂದಿ

13.1 ಉನ್ನತ ಶಿಕ್ಷಣ ಸಂಸ್ಥೆಗಳ ಯಶಸ್ಸಿನಲ್ಲಿ ಬಹುಮುಖ್ಯ ಪಾತ್ರ ವಹಿಸುವ ಮುಖ್ಯ ಅಂಶವೆಂದರೆ ಉತ್ತಮ ಗುಣಮಟ್ಟದ ಸಿಬ್ಬಂದಿಯ ನಿಯೋಜನೆ. ನೇಮಕಾತಿ ಹಾಗೂ ವೃತ್ತಿಪರತೆ ವೃದ್ಧಿ ಪ್ರಕ್ರಿಯೆಯನ್ನು ವ್ಯವಸ್ಥಿತಗೊಳಿಸಲು, ಬಾಡಿಗೆ ಸಿಬ್ಬಂದಿ ನಿಯೋಜನೆ ವಿಷಯದಲ್ಲಿ ವಿವಿಧ ವರ್ಗಗಳ ಸಮಾನ ಪ್ರಾತಿನಿಧ್ಯವನ್ನು ಖಾತ್ರಿಗೊಳಿಸಲು ಕಳೆದ ಕೆಲವು ವರ್ಷಗಳಿಂದ ಈ ನಿಟ್ಟಿನಲ್ಲಿ ಹಲವಾರು ಕ್ರಮಗಳನ್ನು ಕೈಗೊಳ್ಳಲಾಗಿದೆ. ಸರ್ಕಾರಿ ಸಂಸ್ಥೆಗಳ ಕಾಯಂ ಸಿಬ್ಬಂದಿಯ ಪರಿಹಾರ ಮಟ್ಟಗಳನ್ನು ಗಣನೀಯವಾಗಿ ಹೆಚ್ಚಿಸಲಾಗಿದೆ. ಸಿಬ್ಬಂದಿಯ ವೃತ್ತಿಪರತೆ ವೃದ್ಧಿಗೆ ಅವಕಾಶ ಕಲ್ಪಿಸಲು ಹಲವಾರು ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ. ಶೈಕ್ಷಣಿಕ ವೃತ್ತಿಪರತೆಯ ಮಟ್ಟದಲ್ಲಿ ಬೆಳವಣಿಗೆಯ ಹೊರತಾಗಿಯೂ, ಸಿಬ್ಬಂದಿ ಉತ್ತೇಜನ ಕಾರ್ಯದಲ್ಲಿ ಉನ್ನತ ಶಿಕ್ಷಣ ಸಂಸ್ಥೆಗಳು (ಎಚ್.ಇ.ಐ) ನಿರೀಕ್ಷಿತ ಯಶಸ್ಸು ಸಾಧಿಸಿಲ್ಲ. ಬೋಧನೆ, ಸಂಶೋಧನೆ ಹಾಗೂ ಸೇವಾ ವಿಷಯಗಳಲ್ಲಿ ಅದರ ಸಿಬ್ಬಂದಿ ಉತ್ತೇಜನಾ ಸಾಧನೆ ನಿರೀಕ್ಷಿತ ಮಟ್ಟಕ್ಕಿಂತ ಕಡಿಮೆಯೇ ಆಗಿದೆ. ಈ ಕಳಪೆ ಸಾಧನೆಗೆ ಕಾರಣವಾದ ಅಂಶಗಳನ್ನು ಕಂಡುಕೊಳ್ಳಲು, ತನ್ನ ವಿದ್ಯಾರ್ಥಿ, ಸಂಸ್ಥೆ ಹಾಗೂ ವೃತ್ತಿಯನ್ನು ಉನ್ನತ ಮಟ್ಟದತ್ತ ಕರೆದೊಯ್ಯಲ ಸಂಸ್ಥೆಯ ಪ್ರತಿಯೊಬ್ಬ ಸಿಬ್ಬಂದಿ ಉತ್ಸುಕನಾಗಿದ್ದಾನೆಯೇ ಎಂಬುದನ್ನು ಖಾತ್ರಿಗೊಳಿಸಲು, ಅತ್ಯುತ್ತಮ, ಉತ್ಸಾಹಿ ಹಾಗೂ ಸಮರ್ಥ ಸಿಬ್ಬಂದಿಯನ್ನು ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ನಿಯೋಜಿಸಲು ಕಾಯಿದೆಯು ಈ ಕೆಳಗಿನ ಶಿಫಾರಸುಗಳನ್ನು ಮಾಡಿದೆ.

13.2 ಇದರಲ್ಲಿ ಮೊದಲನೆಯ ಅತಿ ಮುಖ್ಯ ಸಲಹೆಯೆಂದರೆ, ಎಲ್ಲಾ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಬೇಕು. ಅಂದರೆ ಶುದ್ಧವಾದ ಕುಡಿಯುವ ನೀರು, ಸ್ವಚ್ಛವಾಗಿ ಕಾರ್ಯನಿರ್ವಹಿಸುವ ಶೌಚಾಲಯಗಳು, ಕರಿಹಲಗೆ, ಕಚೇರಿಗಳು, ಬೋಧನಾ ಸಾಮಗ್ರಿಗಳು, ವಾಚನಾಲಯ, ಪ್ರಯೋಗಾಲಯ, ಹಿತಕರವಾದ, ವಿಶಾಲ ತರಗತಿ ಕೊಠಡಿಗಳು, ಆವರಣ ಮುಂತಾದ ವ್ಯವಸ್ಥೆಯನ್ನು ಒದಗಿಸಬೇಕು. ವಿದ್ಯಾರ್ಥಿಗಳ ಕಲಿಕಾ ಅನುಭವಗಳನ್ನು ಉತ್ತಮಗೊಳಿಸುವ ವಿನೂತನ ಶೈಕ್ಷಣಿಕ ತಂತ್ರಜ್ಞಾನದ ಸೌಲಭ್ಯವನ್ನು ಪ್ರತಿ ತರಗತಿಗೂ ನೀಡಬೇಕು.

13.3 ಶಿಕ್ಷಕರ ಬೋಧನಾ (ಕರ್ತವ್ಯದ) ಅವಧಿಯು ಅನಗತ್ಯವಾಗಿ ಮೀರುವಂತಿಲ್ಲ. ವಿದ್ಯಾರ್ಥಿ ಮತ್ತು ಶಿಕ್ಷಕರ ನಡುವಿನ ಅನುಪಾತ ಮಿತವಾಗಿರಬೇಕು. ಇದರಿಂದ ಬೋಧನಾ ಪ್ರಕ್ರಿಯೆಯು ಹಿತಕರವಾಗಿರುತ್ತದೆ ಹಾಗೂ ವಿದ್ಯಾರ್ಥಿಗಳೊಂದಿಗೆ ಸಂವಹನ ನಡೆಸಲು ಸಾಧ್ಯವಾಗುತ್ತದೆ. ಸಂಶೋಧನೆ, ಇನ್ನಿತರ ಚಟುವಟಿಕೆಗಳನ್ನು ನಡೆಸಲು ಅನುಕೂಲವಾಗುತ್ತದೆ. ನಿರ್ದಿಷ್ಟ ಸಂಸ್ಥೆಗಾಗಿ ಮಾತ್ರ ಸಿಬ್ಬಂದಿಯನ್ನು ನಿಯೋಜಿಸಲಾಗುತ್ತದೆ. ಅವರನ್ನು ಸಂಸ್ಥೆಯಿಂದ ಸಂಸ್ಥೆಗೆ ವರ್ಗಾಯಿಸುವಂತಿಲ್ಲ. ಇದರಿಂದ ಸಿಬ್ಬಂದಿ ತಮ್ಮ ಸಂಸ್ಥೆ ಹಾಗೂ ವಿದ್ಯಾರ್ಥಿ ಸಮುದಾಯದೊಂದಿಗೆ ನೈಜ ಬಾಂಧವ್ಯ ಹೊಂದಲು, ಸಂಸ್ಥೆಗೆ ಬದ್ಧರಾಗಿರುವಂತೆ ನೋಡಿಕೊಳ್ಳಲು ಸಾಧ್ಯವಾಗುತ್ತದೆ.

13.4 ಪಠ್ಯಪುಸ್ತಕ, ಬೋಧನಾ ಸಾಮಗ್ರಿ ಆಯ್ಕೆ, ವಿದ್ಯಾರ್ಥಿಗಳಿಗೆ ನೀಡುವ ಪಠ್ಯಚಟುವಟಿಕೆ, ಅವುಗಳ ಮೌಲ್ಯಮಾಪನ ಮುಂತಾದ ವಿಷಯಗಳೂ ಸೇರಿದಂತೆ, ಪಠ್ಯಕ್ರಮ ಹಾಗೂ ಶಿಕ್ಷಣ ನೀತಿಯ ನಿಲುವುಗಳ ಬಗ್ಗೆ ಯೋಜಿತ ಚೌಕಟ್ಟಿನಲ್ಲಿ ನಿಯಮ ರೂಪಿಸಲು ಸಿಬ್ಬಂದಿಗೆ ಸ್ವಾತಂತ್ರ್ಯವಿರಲಿದೆ. ವಿನೂತನ ಮಾದರಿಯ ಬೋಧನೆ, ಸಂಶೋಧನೆ ಹಾಗೂ ಸೇವೆ ಸಲ್ಲಿಸಲು ಸಿಬ್ಬಂದಿಗೆ ಅವಕಾಶ ಸಿಗಲಿದೆ. ಬೋಧಕರನ್ನು ಪ್ರೋತ್ಸಾಹಿಸುವ ಸಲುವಾಗಿ ಸೃಜನಾತ್ಮಕ, ಅತ್ಯುತ್ತಮ ಕಾರ್ಯಗಳನ್ನು ನಿರ್ವಹಿಸುವ ಸಿಬ್ಬಂದಿಗಳನ್ನು ಗುರುತಿಸುವ ಕಾರ್ಯ ನಡೆಯಲಿದೆ.

13.5 ಸೂಕ್ತ ಬಹುಮಾನ, ಭಡ್ತಿ, ಗುರುತಿಸುವಿಕೆ ಹಾಗೂ ಸಾಂಸ್ಥಿಕ ನಾಯಕತ್ವ ನೀಡುವ ಮೂಲಕ ಶ್ರೇಷ್ಠ ಸಾಧಕರನ್ನು ಉತ್ತೇಜಿಸಲಾಗುವುದು. ಮೂಲಭೂತ ನಿಯಮಗಳನ್ನು ಮೀರದ ಬೋಧಕರಿಗೆ ಜವಾಬ್ದಾರಿ ವಹಿಸಲಾಗುವುದು.

13.6 ಸ್ವಾಯತ್ತ ಸಂಸ್ಥೆಗಳ ಹಿತವನ್ನು ಗಮನದಲ್ಲಿರಿಸಿಕೊಂಡು, ಸಿಬ್ಬಂದಿ ನೇಮಕಾತಿ ವಿಷಯದಲ್ಲಿ ಉನ್ನತ ಶಿಕ್ಷಣ ಸಂಸ್ಥೆಗಳು ಸ್ಪಷ್ಟ, ಸ್ವತಂತ್ರ ಹಾಗೂ ಪಾರದರ್ಶಕ ಪ್ರಕ್ರಿಯೆ ಹಾಗೂ ಮಾರ್ಗಸೂಚಿಗಳನ್ನು ಹೊಂದಲಿವೆ. ಸದ್ಯ ಚಾಲ್ತಿಯಲ್ಲಿರುವ ನೇಮಕಾತಿ ಪ್ರಕ್ರಿಯೆಯನ್ನು ಮುಂದುವರಿಸಲಾಗುವುದು. ಗುಣಮಟ್ಟ ಹೆಚ್ಚಿಸುವ ಸಲುವಾಗಿ ಸೂಕ್ತ ರೀತಿಯ ಪರೀಕ್ಷಾ(ಪ್ರೊಬೇಷನರಿ) ಕಾಲಮಿತಿಯನ್ನು ನಿಗದಿಪಡಿಸಲಾಗುವುದು. ಪರಿಣಾಮಕಾರಿ ಸಂಶೋಧನೆ ಹಾಗೂ ಕೊಡುಗೆಗಳನ್ನು ಗುರುತಿಸಿ ತ್ವರಿತ ಗತಿಯ ಭಡ್ತಿ ನೀಡಲಾಗುವುದು. ಸಾಧನೆಯ ಸೂಕ್ತ ಮೌಲ್ಯಮಾಪನ, ಪರೀಕ್ಷಾವಧಿ ನಂತರ ಉದ್ಯೋಗ ಖಾತ್ರಿ, ವೇತನ ಹೆಚ್ಚಳಕ್ಕಾಗಿ ಬಹು ಮಾನದಂಡ ನೀತಿಯನ್ನು

ಜಾರಿಗೊಳಿಸಲಾಗುವುದು. ಶಿಕ್ಷಣ ತಜ್ಞರ ಹಾಗೂ ವಿದ್ಯಾರ್ಥಿಗಳ ಸಮೀಕ್ಷೆ, ಬೋಧನೆ ಮತ್ತು ಶಿಕ್ಷಣ ನೀತಿಯಲ್ಲಿ ನಡೆಸಿದ ವಿನೂತನ ಪ್ರಯೋಗ, ಸಂಶೋಧನೆಯ ಗುಣಮಟ್ಟ ಹಾಗೂ ಪರಿಣಾಮ, ಕೌಶಲ್ಯಾಭಿವೃದ್ಧಿ ಚಟುವಟಿಗಳು, ಸಂಸ್ಥೆ ಹಾಗೂ ಶಿಕ್ಷಣಕ್ಷೇತ್ರಕ್ಕೆ ಮಾಡಿದ ಇನ್ನಿತರ ಸೇವೆಗಳ ಮೂಲಕ ಬೋಧಕರ ಸಾಧನೆಯನ್ನು ಗುರುತಿಸಲಾಗುವುದು ಎಂಬ ವಿಷಯಗಳನ್ನು ಉನ್ನತ ಶಿಕ್ಷಣ ಸಂಸ್ಥೆಗಳು ತಮ್ಮ ಸಾಂಸ್ಥಿಕ ಅಭಿವೃದ್ಧಿ ಯೋಜನೆಯಲ್ಲಿ ಸ್ಪಷ್ಟವಾಗಿ ವಿವರಿಸಲಿವೆ.

13.7 ಶ್ರೇಷ್ಠತೆ ಹಾಗೂ ಆವಿಷ್ಕಾರ ಪ್ರವೃತ್ತಿಯನ್ನು ಬೆಳೆಸುವ ಅತ್ಯುತ್ತಮ, ಉತ್ಸಾಹೀ ಸಾಂಸ್ಥಿಕ ನಾಯಕರು ಇಂದಿನ ತುರ್ತು ಅಗತ್ಯ. ಅತ್ಯುತ್ತಮ ಹಾಗೂ ಪರಿಣಾಮಕಾರಿ ನಾಯಕತ್ವ ಒಂದು ಸಂಸ್ಥೆ ಹಾಗೂ ಅದರ ಸಿಬ್ಬಂದಿಯ ಯಶಸ್ಸಿಗೆ ಅತ್ಯಗತ್ಯ. ಉನ್ನತ ಶೈಕ್ಷಣಿಕ ಅರ್ಹತೆ ಹೊಂದಿದ ಹಾಗೂ ಸೇವಾ ಮನೋಧರ್ಮವುಳ್ಳ, ನಾಯಕತ್ವ ಹಾಗೂ ನಿರ್ವಹಣಾ ಕೌಶಲ್ಯ ಹೊಂದಿದ ಬೋಧಕರನ್ನು ಆರಂಭದಲ್ಲೇ ಗುರುತಿಸಿ, ನಾಯಕತ್ವ ಸ್ಥಾನದ ವಿವಿಧ ಹಂತಗಳಲ್ಲಿ ತರಬೇತಿ ನೀಡಲಾಗುವುದು. ನಾಯಕತ್ವದ ಸ್ಥಾನವನ್ನು ಖಾಲಿ ಉಳಿಸುವಂತಿಲ್ಲ. ಸಂಸ್ಥೆಯ ಸರಾಗ ಕಾರ್ಯನಿರ್ವಹಣೆಯ ಉದ್ದೇಶದಿಂದ, ಕಾಲಾನುಕ್ರಮದಲ್ಲಿ ನಾಯಕತ್ವ ಬದಲಾವಣೆ ಮಾಡುವ ನೀತಿಯನ್ನು ಜಾರಿಗೊಳಿಸಬಹುದಾಗಿದೆ. ಅತ್ಯುತ್ತಮ ಹಾಗೂ ವಿನೂತನ ಬೋಧನೆ, ಸಂಶೋಧನೆ, ಸಾಂಸ್ಥಿಕ ಸೇವೆಗಳನ್ನು ಗುರುತಿಸಿ ಪ್ರೋತ್ಸಾಹಿಸುವಂತಹ ಶ್ರೇಷ್ಠ ಸಂಸ್ಕೃತಿಯನ್ನು ಹುಟ್ಟುಹಾಕುವುದೇ ಸಾಂಸ್ಥಿಕ ನಾಯಕರ ಮುಖ್ಯ ಗುರಿಯಾಗಿರಬೇಕು. ಅವರು ಉನ್ನತ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರು ಹಾಗೂ ಸಿಬ್ಬಂದಿಯಿಂದ ಅಂತರ ಕಾಯ್ದುಕೊಳ್ಳಬೇಕು.

14. ಉನ್ನತ ಶಿಕ್ಷಣಕ್ಕೆ ಸೇರ್ಪಡೆ

14.1 ಉತ್ತಮ ಗುಣಮಟ್ಟದ ಉನ್ನತ ಶಿಕ್ಷಣಕ್ಕೆ ಪ್ರವೇಶ ಪಡೆಯುವುದರಿಂದ ಪ್ರಗತಿಯ ವಿವಿಧ ಬಾಗಿಲುಗಳು ತೆರೆಯಲಿವೆ. ಸಂಕಷ್ಟಗಳ ಸುಳಿಯಲ್ಲಿ ಸಿಲುಕಿರುವ ವ್ಯಕ್ತಿ ಹಾಗೂ ಸಮುದಾಯಗಳನ್ನು ಮೇಲಕ್ಕೆತ್ತಲು ಇದರಿಂದ ಸಾಧ್ಯವಾಗಲಿದೆ. ಹಾಗಾಗಿ, ಪ್ರತಿ ವ್ಯಕ್ತಿಗೂ ಉತ್ತಮ ಗುಣಮಟ್ಟದ ಶಿಕ್ಷಣಾವಕಾಶ ಕಲ್ಪಿಸುವುದು ಅತ್ಯಂತ ಆದ್ಯತೆಯ ವಿಷಯಗಳಲ್ಲಿ ಒಂದಾಗಿದೆ. ಎಲ್ಲ ವಿದ್ಯಾರ್ಥಿಗಳಿಗೂ ಅದರಲ್ಲೂ ಮುಖ್ಯವಾಗಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳೂ ಸೇರಿದಂತೆ ಎಲ್ಲರಿಗೂ ಉತ್ತಮ ಗುಣಮಟ್ಟದ ಶಿಕ್ಷಣಾವಕಾಶ ಒದಗಿಸುವ ಕಲ್ಪನೆಯನ್ನು ಈ ಯೋಜನೆ ಹೊಂದಿದೆ.

ಹಿಂದುಳಿದ ವರ್ಗಗಳ ಮಕ್ಕಳು ಶಿಕ್ಷಣ ಕ್ಷೇತ್ರದಿಂದ ದೂರವಿದ್ದಾರೆ. ಶಾಲೆ ಹಾಗೂ ಉನ್ನತ ಶಿಕ್ಷಣ ಕೇಂದ್ರಗಳಿಂದ ಅವರು ಹೊರಗುಳಿದಿದ್ದಾರೆ. ಹಾಗಾಗಿ ಎಲ್ಲಾ ಶಾಲೆ ಹಾಗೂ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಏಕರೀತಿಯ ಸಮಾನ - ಸೇರ್ಪಡೆ ನಿಲುವು ಅಗತ್ಯವಾಗಿದೆ. ಸುಸ್ಥಿರ ಸುಧಾರಣೆಗಳನ್ನು ಖಾತ್ರಿಗೊಳಿಸಲು ಶಿಕ್ಷಣದ ವಿವಿಧ ಹಂತಗಳಲ್ಲಿ ನಿರಂತರತೆ ಕಾಯ್ದುಕೊಳ್ಳಬೇಕಾಗಿದೆ. ಸಮಾನ ಉನ್ನತ ಶಿಕ್ಷಣಾವಕಾಶ ಗುರಿ ಹೊಂದಿದ ಈ ಯೋಜನಾ ಕ್ರಮಗಳನ್ನು ಪ್ರಾಥಮಿಕ ಶಿಕ್ಷಣಕ್ಕೂ ಅನ್ವಯಿಸಬೇಕಿದೆ.

14.3 ಉನ್ನತ ಶಿಕ್ಷಣದಿಂದ ವಿಮುಖವಾಗಲು ಹಲವಾರು ಕಾರಣಗಳಿವೆ. ಉನ್ನತ ಶಿಕ್ಷಣಾವಕಾಶದ ಕುರಿತ ಅರಿವಿನ ಕೊರತೆ, ಆರ್ಥಿಕ ಅವಕಾಶ ವೆಚ್ಚ, ಆರ್ಥಿಕ ಮುಗ್ಗಟ್ಟು, ಪ್ರವೇಶ ಪ್ರಕ್ರಿಯೆಗಳು, ಭೌಗೋಳಿಕ ಹಾಗೂ ಭಾಷಾ ಅಡೆತಡೆಗಳು, ಉನ್ನತ ಶಿಕ್ಷಣ ಯೋಜನೆಗಳ ಲಾಭವನ್ನು ಅನುಷ್ಠಾನಗೊಳಿಸುವಲ್ಲಿನ ಅಸಾಮರ್ಥ್ಯ ಹಾಗೂ ವಿದ್ಯಾರ್ಥಿಗಳನ್ನು ಬೆಂಬಲಿಸುವ ಸೂಕ್ತ ವ್ಯವಸ್ಥೆಯ ಕೊರತೆ ಮುಂತಾದವುಗಳನ್ನು ನಿರ್ದಿಷ್ಟವಾಗಿ ಪರಿಹರಿಸಬಹುದಾಗಿದೆ.

14.4 ಅದಕ್ಕಾಗಿ, ನಿರ್ದಿಷ್ಟವಾಗಿ ಉನ್ನತ ಶಿಕ್ಷಣಕ್ಕಾಗಿಯೇ ಹೆಚ್ಚುವರಿ ಕ್ರಮಗಳನ್ನು ಎಲ್ಲಾ ಸರ್ಕಾರಿ ಹಾಗೂ ಉನ್ನತ ಶಿಕ್ಷಣ ಸಂಸ್ಥೆಗಳು ಕೈಗೊಳ್ಳಲಿವೆ.

14.1.1 ಸರ್ಕಾರಗಳು ಕೈಗೊಳ್ಳಬೇಕಾದ ಕ್ರಮಗಳು:

ಅ. ಹಿಂದುಳಿದ ವರ್ಗಗಳ ಶಿಕ್ಷಣಕ್ಕಾಗಿ ಸೂಕ್ತ ಸರ್ಕಾರಿ ನಿಧಿಗಳನ್ನು ಸ್ಥಾಪಿಸುವುದು.

ಆ. ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಒಟ್ಟು ಪ್ರವೇಶ ಅನುಪಾತದ ವೃದ್ಧಿಗೆ ಗುರಿ ನಿಗದಿಪಡಿಸುವುದು.

ಇ. ಉನ್ನತ ಶಿಕ್ಷಣ ಸಂಸ್ಥೆಗಳ ಪ್ರವೇಶ ಪ್ರಕ್ರಿಯೆಯಲ್ಲಿ ಲಿಂಗ ಸಮತೋಲನಕ್ಕೆ ಆದ್ಯತೆ

ಈ. ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿರುವ ಜಿಲ್ಲೆ ಹಾಗೂ ವಿಶೇಷ ಶೈಕ್ಷಣಿಕ ವಲಯಗಳಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ಅವರಿಗೆ ಶಿಕ್ಷಣಾವಕಾಶ ಕಲ್ಪಿಸುವುದು.

ಉ. ಸ್ಥಳೀಯ/ಭಾರತೀಯ ಅಥವಾ ದ್ವಿಭಾಷಾ ನೀತಿಯನ್ನು ಅನುಸರಿಸುವ ಉತ್ತಮ ಗುಣಮಟ್ಟದ ಉನ್ನತ ಶಿಕ್ಷಣ ಕೇಂದ್ರಗಳನ್ನು ಅಭಿವೃದ್ಧಿಪಡಿಸುವುದು ಹಾಗೂ ಅವುಗಳಿಗೆ ಪ್ರೋತ್ಸಾಹ ನೀಡುವುದು.

ಊ. ಸರ್ಕಾರಿ ಹಾಗೂ ಖಾಸಗಿ ಉನ್ನತ ಶಿಕ್ಷಣ ಕೇಂದ್ರಗಳಲ್ಲಿನ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಇನ್ನೂ ಹೆಚ್ಚಿನ ಆರ್ಥಿಕ ನೆರವು ಹಾಗೂ ವಿದ್ಯಾರ್ಥಿ ವೇತನವನ್ನು ನೀಡುವುದು.

ಋ. ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಕಲ್ಯಾಣಕ್ಕಾಗಿ ಯೋಜನೆಗಳನ್ನು ಹಮ್ಮಿಕೊಳ್ಳುವುದು.

ೠ. ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಭಾಗವಹಿಸುವಿಕೆ ಹಾಗೂ ಶೈಕ್ಷಣಿಕ ಫಲಶ್ರುತಿಯನ್ನು ಹೆಚ್ಚಿಸಲು ತಂತ್ರಜ್ಞಾನ ಬಳಕೆಗೆ ಹೆಚ್ಚಿನ ಉತ್ತೇಜನ ನೀಡುವುದು.

14.4.2 ಉನ್ನತ ಶಿಕ್ಷಣ ಸಂಸ್ಥೆಗಳು ಕೈಗೊಳ್ಳಬೇಕಾದ ಕ್ರಮಗಳು:

ಅ. ಉನ್ನತ ಶಿಕ್ಷಣ ಮುಂದುವರೆಸಲು ಅನುಕೂಲವಾಗುವಂತೆ ಅವಕಾಶ ವೆಚ್ಚ ಹಾಗೂ ಶುಲ್ಕವನ್ನು ಕಡಿಮೆಗೊಳಿಸುವುದು.

ಆ. ಸಾಮಾಜಿಕ- ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಹೆಚ್ಚಿನ ಆರ್ಥಿಕ ನೆರವು ಹಾಗೂ ವಿದ್ಯಾರ್ಥಿ ವೇತನವನ್ನು ನೀಡುವುದು.

ಇ. ಉನ್ನತ ಶಿಕ್ಷಣ ಅವಕಾಶ ಹಾಗೂ ವಿದ್ಯಾರ್ಥಿ ವೇತನಗಳ ಕುರಿತು ಅರಿವು ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳುವುದು.

ಈ. ಸಮಗ್ರ ಶುಲ್ಕ ಪ್ರಕ್ರಿಯೆಯನ್ನು ಅಳವಡಿಸಿಕೊಳ್ಳುವುದು.

ಉ. ಸಮಗ್ರ ಪಠ್ಯಕ್ರಮದ ಅಳವಡಿಕೆ.

ಊ. ಉನ್ನತ ಶಿಕ್ಷಣ ಯೋಜನೆಗಳ ಅನುಷ್ಠಾನ ಸಾಮರ್ಥ್ಯವನ್ನು ವೃದ್ಧಿಸುವುದು.

ಋ. ಭಾರತೀಯ ಭಾಷೆ ಮತ್ತು ದ್ವಿಭಾಷೆಗಳಲ್ಲಿ ನೀಡುವ ಪದವಿ ಕೋರ್ಸುಗಳನ್ನು ಉತ್ತೇಜಿಸುವುದು.

ಎ. ಉನ್ನತ ಶಿಕ್ಷಣ ಸಂಸ್ಥೆಗಳ ಕಟ್ಟಡಗಳು ಹಾಗೂ ಅಲ್ಲಿನ ಸೌಕರ್ಯಗಳು ವಿಶೇಷಚೇತನರಿಗೆ ಪೂರಕವಾಗಿದೆಯೇ ಎಂಬುದನ್ನು ಖಾತ್ರಿಪಡಿಸುವುದು.

ಏ. ಕಡಿಮೆ ಶೈಕ್ಷಣಿಕ ಹಿನ್ನೆಲೆಯಿಂದ ಬಂದ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಸೇತುಬಂಧ ಅಭಿವೃದ್ಧಿಪಡಿಸುವುದು.

ಐ. ಅಂಥ ವಿದ್ಯಾರ್ಥಿಗಳಿಗೆ ಸೂಕ್ತ ಆಪ್ತಸಮಾಲೋಚನೆ ಹಾಗೂ ಮಾರ್ಗದರ್ಶನ ಕಾರ್ಯಕ್ರಮಗಳ ಮೂಲಕ ಸಾಮಾಜಿಕ-ಭಾವನಾತ್ಮಕ- ಶೈಕ್ಷಣಿಕ ಬೆಂಬಲ ನೀಡುವುದು.

ಒ. ಲಿಂಗಾಧಾರಿತ (ಲಿಂಗ- ಗುರುತು) ವಿಷಯಗಳಲ್ಲಿ ಸಿಬ್ಬಂದಿ, ಆಪ್ತಸಮಾಲೋಚಕರು ಹಾಗೂ ವಿದ್ಯಾರ್ಥಿಗಳು ಸೂಕ್ಷ್ಮತೆ ಕಾಯ್ದುಕೊಳ್ಳುವಂತೆ ನೋಡಿಕೊಳ್ಳುವುದು. ಪಠ್ಯಕ್ರಮ ಸೇರಿದಂತೆ ಎಲ್ಲಾ ವಿಭಾಗಗಳಲ್ಲೂ ಈ ವಿಷಯವನ್ನು ಅಳವಡಿಸಿಕೊಳ್ಳುವಂತೆ ನೋಡಿಕೊಳ್ಳುವುದು.

ಓ. ತಾರತಮ್ಯರಹಿತ ಹಾಗೂ ಶೋಷಣಾ ವಿರೋಧಿ ನೀತಿಯನ್ನು ಕಟ್ಟುನಿಟ್ಟಾಗಿ ಪಾಲಿಸುವುದು.

ಔ. ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಸಹಭಾಗಿತ್ವವನ್ನು ವೃದ್ಧಿಗೊಳಿಸುವ ಉದ್ದೇಶಕ್ಕೆ ಪೂರಕವಾದ ಕ್ರಮಗಳನ್ನು ಒಳಗೊಂಡಿರುವ ಸಾಂಸ್ಥಿಕ ಅಭಿವೃದ್ಧಿ ಯೋಜನೆಗಳನ್ನು ಅಭಿವೃದ್ಧಿಪಡಿಸುವುದು.

15. ಬೋಧಕ ಶಿಕ್ಷಣ

15.1 ಮುಂದಿನ ಪೀಳಿಗೆಯನ್ನು ರೂಪಿಸುವಂತಹ ಶಿಕ್ಷಕ ಸಮುದಾಯವನ್ನು ಸೃಷ್ಟಿಸುವಲ್ಲಿ ಬೋಧಕ ಶಿಕ್ಷಣದ ಪಾತ್ರ ಬಹು ಮುಖ್ಯವಾದದ್ದು. ಶಿಕ್ಷಕರನ್ನು ಸೃಷ್ಟಿಸುವ ಕಾರ್ಯ, ಬಹುಕೌಶಲ್ಯ ದೃಷ್ಟಿಕೋನಗಳು ಹಾಗೂ ಜ್ಞಾನ, ಮೌಲ್ಯಗಳ ರಚನೆ ಹಾಗೂ ಅತ್ಯುತ್ತಮ ಮಾರ್ಗದರ್ಶಕರಿಂದ ತರಬೇತಿ ಪಡೆಯುವುದು ಮುಂತಾದ ಅಂಶಗಳನ್ನು ಒಳಗೊಂಡಿರುತ್ತದೆ. ಶಿಕ್ಷಕರು ಭಾರತೀಯ ಮೌಲ್ಯಗಳ, ಭಾಷೆಗಳ, ಜ್ಞಾನದ, ಹುರುಪಿನ, ಬುಡಕಟ್ಟು ಜನಾಂಗದ ಸಂಪ್ರದಾಯ ಸೇರಿದಂತೆ ಎಲ್ಲ ಸಂಪ್ರದಾಯಗಳ ಭದ್ರ ಬುನಾದಿಯಾಗಿರಬೇಕು. ಜೊತೆಗೆ ಶಿಕ್ಷಣ ಹಾಗೂ ಶಿಕ್ಷಣಶಾಸ್ತ್ರದ ನೂತನ ಬೆಳವಣಿಗಳ ಅರಿವು ಹೊಂದಿರಬೇಕು.

15.2 ಹತ್ತು ಸಾವಿರಕ್ಕೂ ಹೆಚ್ಚಿನ ಸಂಖ್ಯೆಯಲ್ಲಿರುವ ಅತ್ಯುತ್ತಮ ಬೋಧಕ ಶಿಕ್ಷಣ ಸಂಸ್ಥೆಗಳು ಬೋಧಕ ಶಿಕ್ಷಣವನ್ನು ಗಂಭೀರವಾಗಿ ಪರಿಗಣಿಸುವ ಪ್ರಯತ್ನವನ್ನೇ ಮಾಡುತ್ತಿಲ್ಲ. ದುಡ್ಡಿಗಾಗಿ ಪದವಿಗಳನ್ನು ಮಾರುತ್ತಿವೆ ಎಂದು ಸರ್ವೋಚ್ಚ ನ್ಯಾಯಲಯದಿಂದ ನೇಮಕವಾದ ನ್ಯಾಯಮೂರ್ತಿ ಜೆ.ಎಸ್. ವರ್ಮಾ ಆಯೋಗ (2012) ಹೇಳಿದೆ. ಇಲ್ಲಿವರೆಗೆ ಚಾಲ್ತಿಯಲ್ಲಿರುವ ನಿಯಂತ್ರಕ ಕ್ರಮಗಳು ಈ ವ್ಯವಸ್ಥೆಯಲ್ಲಿರುವ ಅವ್ಯವಹಾರಗಳನ್ನು ನಿಯಂತ್ರಿಸಲು ಶಕ್ತವಾಗಿಲ್ಲ. ಮೂಲಭೂತ ಗುಣಮಟ್ಟ ಜಾರಿಗೊಳಿಸುವಲ್ಲಿ ಯಶಸ್ವಿಯಾಗಿಲ್ಲ. ಬದಲಾಗಿ ಶಿಕ್ಷಣ ವ್ಯವಸ್ಥೆಯಲ್ಲಿನ ಶ್ರೇಷ್ಠತೆ ವೃದ್ಧಿ ಹಾಗೂ ಹೊಸ ಪ್ರಯೋಗ ಪ್ರಕ್ರಿಯೆಗಳನ್ನು ಕುಂಠಿತಗೊಳಿಸುವ ಮೂಲಕ ಋಣಾತ್ಮಕ ಪರಿಣಾಮ ಬೀರಿದೆ ಎಂದು ಆಯೋಗ ಅಭಿಪ್ರಾಯಪಟ್ಟಿದೆ. ಬೋಧಕ ಶಿಕ್ಷಣ ವ್ಯವಸ್ಥೆಯ ಗುಣಮಟ್ಟ ಹೆಚ್ಚಿಸಲು, ಅದರ ಸಮಗ್ರತೆ, ವಿಶ್ವಾಸಾರ್ಹತೆ, ಪರಿಣಾಮಕಾರಿಯಾಗಿ ಹಾಗೂ ಅತ್ಯುನ್ನತ ಗುಣಮಟ್ಟ ಪುನಸ್ಥಾಪಿಸಲು, ಶಿಕ್ಷಣ ವ್ಯವಸ್ಥೆ ಹಾಗೂ ಅದರ ನಿಯಂತ್ರಣಾ ಕ್ರಮಗಳನ್ನು ಆಮೂಲಾಗ್ರವಾಗಿ ಪುನರುಜ್ಜೀವನಗೊಳಿಸುವ ತುರ್ತು ಅಗತ್ಯವಿದೆ ಎಂದು ಆಯೋಗ ಹೇಳಿದೆ.

15.3 ಶಿಕ್ಷಕ ವೃತ್ತಿಯ ಪ್ರತಿಷ್ಠೆಯನ್ನು ಪುನಸ್ಥಾಪಿಸಲು ಅಗತ್ಯವಾಗಿರುವ ಸಮಗ್ರತೆ ಹಾಗೂ ವಿಶ್ವಾಸಾರ್ಹತೆಯ ಮಟ್ಟ ತಲುಪಲು ಅಗತ್ಯವಾಗಿರುವ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳುವ ಅಧಿಕಾರವನ್ನು ನಿಯಂತ್ರಕ ವ್ಯವಸ್ಥೆಗೆ ನೀಡಬೇಕಿದೆ. ನಿಯಮ

ಉಲ್ಲಂಘನೆಯನ್ನು ಸರಿಪಡಿಸಲು ಒಂದು ವರ್ಷ ಕಾಲಾವಕಾಶ ನೀಡಿಯೂ, ಮೂಲಭೂತ ಶೈಕ್ಷಣಿಕ ಮಾನದಂಡಗಳನ್ನು ಪಾಲಿಸದಿರುವ, ಗುಣಮಟ್ಟರಹಿತ ಹಾಗೂ ನಿಷ್ಕ್ರಿಯ ಬೋಧಕ ಶಿಕ್ಷಣ ಸಂಸ್ಥೆಗಳ ವಿರುದ್ಧ ನಿಯಂತ್ರಕ ವ್ಯವಸ್ಥೆ ಕಠಿಣ ಕ್ರಮಗೊಳ್ಳಬೇಕಿದೆ. 2030ರ ವೇಳೆಗೆ ಶೈಕ್ಷಣಿಕವಾಗಿ ಶಕ್ತವಾಗಿರುವ, ಬಹುಕೌಶಲ್ಯ, ಸಮಗ್ರ ಬೋಧಕ ಶಿಕ್ಷಣ ಯೋಜನೆಗಳು ಮಾತ್ರ ಜಾರಿಗೊಳ್ಳಲಿವೆ.

15.4 ಬೋಧಕ ಶಿಕ್ಷಣಕ್ಕೆ ಬಹುಕೌಶಲ್ಯ ಹಾಗೂ ಉನ್ನತ ಗುಣಮಟ್ಟದ ಆವಶ್ಯಕತೆ ಇರುವುದರಿಂದ ಎಲ್ಲಾ ಬೋಧಕ ಶಿಕ್ಷಣ ಕಾರ್ಯಕ್ರಮಗಳನ್ನು ಸಮಗ್ರ ಬಹುಕೌಶಲ್ಯ ಸಂಸ್ಥೆಯಲ್ಲಿಯೇ ಹಮ್ಮಿಕೊಳ್ಳಬೇಕು. ಈ ನಿಟ್ಟಿನಲ್ಲಿ ಎಲ್ಲಾ ಬಹುಕೌಶಲ್ಯ ವಿಶ್ವವಿದ್ಯಾನಿಲಯಗಳು ಹಾಗೂ ಕಾಲೇಜುಗಳು ಮನಶ್ಶಾಸ್ತ್ರ, ತತ್ವಶಾಸ್ತ್ರ, ಸಮಾಜಶಾಸ್ತ್ರ, ನರವಿಜ್ಞಾನ, ಭಾರತೀಯ ಭಾಷೆಗಳು, ಕಲೆ, ಸಂಗೀತ, ಇತಿಹಾಸ, ಸಾಹಿತ್ಯ. ದೈಹಿಕ ಶಿಕ್ಷಣ, ವಿಜ್ಞಾನ ಮತ್ತು ಗಣಿತಶಾಸ್ತ್ರ ವಿಭಾಗಗಳ ಸಹಭಾಗಿತ್ವದೊಂದಿಗೆ, ಅತ್ಯಾಧುನಿಕ ಸಂಶೋಧನೆಗಳನ್ನು ನಡೆಸುತ್ತಿದ್ದು, ಬಿ.ಎಡ್ ಕಾರ್ಯಕ್ರಮವನ್ನು ನಡೆಸಲಿರುವ ಶಿಕ್ಷಣ ವಿಭಾಗದ ಸ್ಥಾಪಿಸುವ ಉದ್ದೇಶ ಹೊಂದಿದೆ. ಬೋಧಕ ಶಿಕ್ಷಣ ಸಂಸ್ಥೆಗಳು ನಾಲ್ಕು ವರ್ಷದ ಅವಧಿಯ ಸಮಗ್ರ ಬೋಧಕ ತಯಾರಿಕಾ ಕಾರ್ಯಕ್ರಮಗಳನ್ನು ನೀಡಬೇಕಾಗಿರುವುದರಿಂದ 2030ರ ವೇಳೆಗೆ ಎಲ್ಲಾ ಉನ್ನತ ಮಟ್ಟದ ಬೋಧಕ ಶಿಕ್ಷಣ ಸಂಸ್ಥೆಗಳು ಬಹುಕೌಶಲ್ಯ ಸಂಸ್ಥೆಗಳಾಗಿ ಬದಲಾಗಬೇಕಿದೆ.

15.5 2030ರ ವೇಳೆಗೆ ಇಂಥ ಬಹುಕೌಶಲಲ್ಯ ಶಿಕ್ಷಣ ಸಂಸ್ಥೆಗಳಿಂದ ಪಡೆದ ನಾಲ್ಕು ವರ್ಷಗಳ ಬಿ.ಎಡ್ ಶಿಕ್ಷಣ ಪದವಿ ಶಾಲಾಶಿಕ್ಷಕರಾಗಲು ಕನಿಷ್ಠ ಅರ್ಹತೆ ಎನಿಸಲಿದೆ. ಉಭಯ- ಪ್ರಮುಖ- ಸಮಗ್ರ ಬ್ಯಾಚುಲರ್ ಡಿಗ್ರಿ ಎಂದು ಕರೆಯಲಾಗುವ ಈ ಪದವಿಯನ್ನು ಶಿಕ್ಷಣ ಮಾತ್ರವಲ್ಲದೆ ಭಾಷೆ, ಇತಿಹಾಸ, ಸಂಗೀತ, ಗಣಿತ, ಕಂಪ್ಯೂಟರ್ ಸೈನ್ಸ್, ರಸಾಯನಶಾಸ್ತ್ರ, ಅರ್ಥಶಾಸ್ತ್ರ, ಕಲೆ, ದೈಹಿಕ ಶಿಕ್ಷಣ ಮುಂತಾದ ವಿಶೇಷ ವಿಷಯಗಳಲ್ಲಿ ನೀಡಲಾಗುವುದು. ಅತ್ಯಾಧುನಿಕ ಶಿಕ್ಷಣದ ಜೊತೆ ಸಮಾಜಶಾಸ್ತ್ರ, ಇತಿಹಾಸ, ವಿಜ್ಞಾನ, ಮನೋವಿಜ್ಞಾನ, ಬಾಲ್ಯದ ಆರೈಕೆ ಮತ್ತು ಶಿಕ್ಷಣ, ಸಾಕ್ಷರತೆ ಮತ್ತು ಸಂಖ್ಯಾಶಾಸ್ತ್ರದ ತಳಹದಿ, ಭಾರತದ ಕುರಿತ ಜ್ಞಾನ, ಅದರ ಮೌಲ್ಯಗಳು/ಆಧಾರ/ಕಲೆ/ ಸಂಪ್ರದಾಯಗಳು ಮತ್ತಿತರ ವಿಷಯಗಳನ್ನು ಹೊಂದಿದೆ. ನಾಲ್ಕು ವರ್ಷಗಳ ಸಮಗ್ರ ಬಿ.ಎಡ್ ಪದವಿ ನೀಡುವಂತಹ ಉನ್ನತ ಶಿಕ್ಷಣ ಸಂಸ್ಥೆಗಳು, ವಿಶೇಷ ಪಠ್ಯವಿಷಯದಲ್ಲಿ ಈಗಾಗಲೇ ಪದವಿ ಪಡೆದಿರುವ ವಿದ್ಯಾರ್ಥಿಗಳಿಗಾಗಿ ಎರಡು ವರ್ಷದ ಬಿ.ಎಡ್ ಕೋರ್ಸು ನಡೆಸಬಹುದು. ವಿಶೇಷ ಪಠ್ಯವಿಷಯದಲ್ಲಿ ನಾಲ್ಕು ವರ್ಷಗಳ ಪದವಿಪೂರ್ವ ಶಿಕ್ಷಣ ಪಡೆದ ಅಭ್ಯರ್ಥಿಗಳಿಗಾಗಿ ಒಂದು ವರ್ಷದ ಬಿ.ಎಡ್ ಶಿಕ್ಷಣವನ್ನೂ ನೀಡಬಹುದು. ಅತ್ಯುತ್ತಮ ವಿದ್ಯಾರ್ಥಿಗಳನ್ನು ನಾಲ್ಕು ವರ್ಷದ, ಎರಡು ವರ್ಷದ ಹಾಗೂ ಒಂದು ವರ್ಷದ ಕೋರ್ಸುಗಳತ್ತ ಆಕರ್ಷಿಸಲು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ನೀಡಲಾಗುವುದು.

15.6 ಬೋಧಕ ಶಿಕ್ಷಣವನ್ನು ನೀಡುವ ಉನ್ನತ ಶಿಕ್ಷಣ ಸಂಸ್ಥೆಗಳು ವಿವಿಧ ಶ್ರೇಣಿಯ ಶಿಕ್ಷಣ ತಜ್ಞರನ್ನು, ಸಂಬಂಧಿತ ಅಧ್ಯಯನ ವಿಭಾಗಗಳನ್ನು, ವಿಶೇಷ ಪಠ್ಯವಿಷಯಗಳನ್ನು ಹೊಂದಿರಲಿದೆ. ಈ ಸಂಸ್ಥೆಗಳು ಸರ್ಕಾರೀ ಹಾಗೂ ಖಾಸಗಿ ಶಾಲೆಗಳ ಜೊತೆ ಜಾಲವ್ಯವಸ್ಥೆಯನ್ನು ಹೊಂದಲಿವೆ. ಸಮರ್ಥ ಶಾಲಾ ಶಿಕ್ಷಕರು ಬೋಧನೆಯ ಜೊತೆ ಸಮುದಾಯ ಸೇವೆ, ವಯಸ್ಕ ಹಾಗೂ ವೃತ್ತಿಪರ ಶಿಕ್ಷಣ ಮುಂತಾದ ಚಟುವಟಿಕೆಗಳಲ್ಲಿ ಭಾಗವಹಿಸಲು ಅವಕಾಶ ಒದಗಿಸಲು ಈ ವ್ಯವಸ್ಥೆ ರೂಪಿಸಲಾಗಿದೆ.

15.7 ಬೋಧಕ ಶಿಕ್ಷಣದಲ್ಲಿ ಏಕರೀತಿಯ ಮಾನದಂಡ ಕಾಯ್ದುಕೊಳ್ಳುವ ಸಲುವಾಗಿ, ರಾಷ್ಟ್ರೀಯ ಪರೀಕ್ಷಾಸಂಸ್ಥೆ ಆಯೋಜಿಸುವ ಸೂಕ್ತ ಪಠ್ಯ ಹಾಗೂ ಅರ್ಹತಾ ಪರೀಕ್ಷೆಗಳ ಮೂಲಕ ಪೂರ್ವ ಸೇವಾ ಶಿಕ್ಷಕ ತಯಾರಿ ಕಾರ್ಯಕ್ರಮಗಳಿಗೆ ಪ್ರವೇಶ ನೀಡಲಾಗುವುದು. ರಾಷ್ಟ್ರದ ಭಾಷಾ ಹಾಗೂ ಸಾಂಸ್ಕೃತಿಕ ವೈವಿಧ್ಯತೆಯನ್ನು ಗಮನದಲ್ಲಿರಿಸಿಕೊಂಡು ಮಾನದಂಡ ರೂಪಿಸಲಾಗುವುದು.

15.8 ಶಿಕ್ಷಣ ವಿಭಾಗದಲ್ಲಿ ವೈವಿಧ್ಯಕ್ಕೆ ಹೆಚ್ಚಿನ ಆದ್ಯತೆ ನೀಡಲಾಗಿದ್ದರೂ, ಬೋಧನೆ/ ಕಾರ್ಯಕ್ಷೇತ್ರ/ ಸಂಶೋಧನಾ ಅನುಭವಕ್ಕೆ ಹೆಚ್ಚಿನ ಮಾನ್ಯತೆ ನೀಡಲಾಗುವುದು. ಶಿಕ್ಷಕರ ಬಹುಕೌಶಲ್ಯ ಶಿಕ್ಷಣವನ್ನು ಸದೃಢಗೊಳಿಸುವ ಹಾಗೂ ಪರಿಕಲ್ಪನಾ ಅಭಿವೃದ್ಧಿಯಲ್ಲಿ ನಿಖರತೆ ಕಾಯ್ದುಕೊಳ್ಳುವ ಸಲುವಾಗಿ, ಶಾಲಾ ಶಿಕ್ಷಣದೊಂದಿಗೆ ನೇರ ಸಂಬಂಧ ಹೊಂದಿರುವ ಮನಶ್ಶಾಸ್ತ್ರ, ಮಕ್ಕಳ ಅಭಿವೃದ್ಧಿ, ಭಾಷಾಶಾಸ್ತ್ರ, ಸಮಾಜಶಾಸ್ತ್ರ, ತತ್ವಶಾಸ್ತ್ರ, ಅರ್ಥಶಾಸ್ತ್ರ, ರಾಜಕೀಯಶಾಸ್ತ್ರ ಮುಂತಾದ ಸಮಾಜ-ವಿಜ್ಞಾನ ವಿಷಯಗಳಲ್ಲಿ ತರಬೇತಿ ಪಡೆದಿರುವ ಬೋಧಕರನ್ನು ಆಕರ್ಷಿಸಿ ಸಂಸ್ಥೆಯಲ್ಲೇ ಉಳಿಸಿಕೊಳ್ಳಲಾಗುವುದು.

15.9 ಪಿ.ಎಚ್.ಡಿಗೆ ಪ್ರವೇಶ ಪಡೆದ ಹೊಸ ವಿದ್ಯಾರ್ಥಿಗಳು, ಅಧ್ಯಯನ ವಿಷಯ ಯಾವುದೇ ಆಗಿರಲಿ, ಡಾಕ್ಟರೇಟ್ ಪಡೆಯುವ ತರಬೇತಿ ಅವಧಿಯಲ್ಲಿ ಬೋಧನೆ/ಶಿಕ್ಷಣ/ಶಿಕ್ಷಣಶಾಸ್ತ್ರ/ ತಾವು ಆಯ್ಕೆ ಮಾಡಿದ ವಿಷಯಕ್ಕೆ ಸಂಬಂಧಿಸಿದ ಬರೆಹಗಳ ಬಗ್ಗೆ ವಿಶ್ವಾಸ- ಆಧಾರಿತ ಕೋರ್ಸುಗಳನ್ನು ಪಡೆದುಕೊಳ್ಳಬೇಕು. ಆ ಸಂಶೋಧನಾ ತಜ್ಞರೇ ಮುಂದಿನ ದಿನಗಳಲ್ಲಿ ಬೋಧಕರು, ಸಾರ್ವಜನಿಕ ಪ್ರತಿನಿಧಿಗಳು ಆಥವಾ ಸಂವಹನಕಾರರು ಆಗುವುದರಿಂದ ಡಾಕ್ಟರೇಟ್ ಪದವಿ ಆಕಾಂಕ್ಷಿತರು ಶಿಕ್ಷಣ ಶಾಸ್ತ್ರ, ಅಧ್ಯಯನ, ಪಠ್ಯಕ್ರಮ ವಿನ್ಯಾಸ, ವಿಶ್ವಾಸಾರ್ಹ ಮೌಲ್ಯಮಾಪನ ನಿಯಮ, ಸಂವಹನ ಮುಂತಾದ ವಿಷಯಗಳಲ್ಲಿ ಪರಿಣತಿ ಪಡೆಯಬೇಕಾಗುತ್ತದೆ. ಸಹಾಯಕ ಬೋಧಕರಾಗುವ ಅಥವಾ ಇನ್ನಿತರ ಮಾರ್ಗಗಳ ಮೂಲಕ ಕನಿಷ್ಠ ಗಂಟೆಗಳ ನೈಜ ಬೋಧನಾ ಅನುಭವವನ್ನು ಪಿಎಚ್‌ಡಿ ವಿದ್ಯಾರ್ಥಿಗಳು ಪಡೆಯಲಿದ್ದಾರೆ. ಇದಕ್ಕಾಗಿ ದೇಶಾದ್ಯಂತದ ವಿಶ್ವವಿದ್ಯಾನಿಲಯಗಳ ಪಿ.ಎಚ್‌ಡಿ ಕಾರ್ಯಕ್ರಮವನ್ನು ಮರುರೂಪಿಸಲಾಗಿದೆ.

15.10 ಕಾಲೇಜು ಹಾಗೂ ವಿಶ್ವವಿದ್ಯಾನಿಲಯಗಳ ಶಿಕ್ಷಕರಿಗಾಗಿ ಈಗ ಚಾಲ್ತಿಯಲ್ಲಿರುವ ಕೌಶಲ್ಯವೃದ್ಧಿ ಕಾರ್ಯಕ್ರಮ ಇದೇ ಸಾಂಸ್ಥಿಕ ವ್ಯವಸ್ಥೆಯ ಮೂಲಕ ಮುಂದುವರಿಯಲಿದೆ. ಉತ್ಕೃಷ್ಟ ಬೋಧನೆ- ಕಲಿಕೆ ಪ್ರಕ್ರಿಯೆಯ ಅಗತ್ಯವನ್ನು ಪೂರೈಸಲು ಇದೇ ಕ್ರಮಗಳನ್ನು ಸದೃಢಗೊಳಿಸಿಲಾಗುವುದು ಮತ್ತು ಗಣನೀಯವಾಗಿ ವಿಸ್ತರಿಸಲಾಗುವುದು. ಅಲ್ಪಾವಧಿಯಲ್ಲಿ ಬಹುಸಂಖ್ಯೆಯ ಶಿಕ್ಷಕರಿಗೆ ಏಕರೀತಿಯ ಶಿಕ್ಷಣ ನೀಡಲು ಅವಕಾಶ ಕಲ್ಪಿಸುವಂಥ ಸ್ವಯಂ/ ದೀಕ್ಷಾ ಮುಂತಾದ ಆನ್‌ಲೈನ್ ಶಿಕ್ಷಣ ವೇದಿಕೆಗಳ ಬಳಕೆಗೆ ಉತ್ತೇಜನ ನೀಡಲಾಗುವುದು.

15.11 ಭಾರತೀಯ ಭಾಷೆಗಳನ್ನು ಕಲಿಸುವ ಸಾಮರ್ಥ್ಯ ಹೊಂದಿರುವ, ಕಾಲೇಜು-ವಿಶ್ವವಿದ್ಯಾಲಯಗಳ ಬೋಧಕರಿಗೆ ಅಲ್ಪಾವಧಿ/ದೀರ್ಘಾವಧಿಯ ಮಾರ್ಗದರ್ಶನ ಅಥವಾ ವೃತ್ತಿಪರ ಬೆಂಬಲ ನೀಡಲು ಉತ್ಸುಕರಾಗಿರುವ ಹಿರಿಯ ತಜ್ಞರು/ನಿವೃತ್ತ ಶಿಕ್ಷಕರಗಳನ್ನೊಳಗೊಂಡ ರಾಷ್ಟೀಯ ಆಯೋಗವನ್ನು ಸ್ಥಾಪಿಸಲಾಗುವುದು.

16. ಔದ್ಯೋಗಿಕ ಶಿಕ್ಷಣದ ಮರುಕಲ್ಪನೆ

16.1 12ನೇ ಪಂಚವಾರ್ಷಿಕ ಯೋಜನೆ (2012-2017) ಅಂದಾಜು ಮಾಡಿರುವಂತೆ, 19-24ರ ವಯೋಮಾನದಲ್ಲಿರುವ ಭಾರತೀಯ ಕಾರ್ಯಪಡೆಯ ಅತ್ಯಂತ ಸಣ್ಣ ಪ್ರಮಾಣವಷ್ಟೇ (ಶೇ. 5ಕ್ಕಿಂತ ಕಡಿಮೆ) ಔಪಚಾರಿಕ ಔದ್ಯೋಗಿಕ ಶಿಕ್ಷಣವನ್ನು ಪಡೆಯುತ್ತಿದೆ. ಈ ಅಂಶವನ್ನು ಪರಿಗಣಿಸಿ ಮಿಕ್ಕ ಕೆಲ ದೇಶಗಳನ್ನು ತುಲನೆ ಮಾಡಿದಾಗ, ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಈ ಪ್ರಮಾಣ ಶೇ. 52ರಷ್ಟಿದ್ದರೆ ಜರ್ಮನಿಯಲ್ಲಿ ಶೇ. 75ರಷ್ಟು ಮತ್ತು ದಕ್ಷಿಣ ಕೊರಿಯಾದಲ್ಲಿ ಗಣನೀಯ ಎನ್ನಬಹುದಾದ ಶೇ. 96ರಷ್ಟಿದೆ. ಭಾರತದಲ್ಲಿ ಔದ್ಯೋಗಿಕ ಶಿಕ್ಷಣದ ಪ್ರಸರಣವನ್ನು ತೀವ್ರಗೊಳಿಸಬೇಕಾದ ತುರ್ತು ಅಗತ್ಯವನ್ನು ಈ ಅಂಕಿ-ಅಂಶಗಳು ಒತ್ತಿಹೇಳುತ್ತವೆ.

16.2 ಔದ್ಯೋಗಿಕ ಶಿಕ್ಷಣವನ್ನು ಪಡೆಯುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಭಾರತದಲ್ಲಿ ಕಡಿಮೆಯಾಗಿರುವುದಕ್ಕೆ ಇರುವ ಪ್ರಮುಖ ಕಾರಣಗಳಲ್ಲಿ ಒಂದೆಂದರೆ, ಹಿಂದೆಲ್ಲಾ 11-12ನೇ ತರಗತಿಗಳ ವಿದ್ಯಾರ್ಥಿಗಳ ಮೇಲೆ, 8ನೇ ತರಗತಿ ಹಾಗೂ ಮೇಲ್ಪಟ್ಟ ತರಗತಿಗಳ ಅವಧಿಯಲ್ಲಿ ಶಾಲಾ ಶಿಕ್ಷಣವನ್ನು ತೊರೆದ ವಿದ್ಯಾರ್ಥಿಗಳ ಮೇಲೆ ಔದ್ಯೋಗಿಕ ಶಿಕ್ಷಣವು ಬಹುಮಟ್ಟಿಗೆ ತನ್ನ ಗಮನಹರಿಸಿದ್ದು. ಅಷ್ಟೇ ಅಲ್ಲದೆ, ಔದ್ಯೋಗಿಕ ಶಿಕ್ಷಣದ ವಿಷಯಗಳೊಂದಿಗೆ 11-12ನೇ ತರಗತಿಗಳಿಂದ ಉತ್ತೀರ್ಣರಾದ ವಿದ್ಯಾರ್ಥಿಗಳು, ಉನ್ನತ ಶಿಕ್ಷಣದಲ್ಲಿ ತಾವು ಆಯ್ಕೆಮಾಡಿಕೊಂಡ ಕಸುಬುಗಳೊಂದಿಗೆ ಮುಂದುವರಿಯಲು ಸುಸ್ಪಷ್ಟ ಮಾರ್ಗೋಪಾಯಗಳನ್ನು ಹೊಂದಿರಲಿಲ್ಲ. ಮಾತ್ರವಲ್ಲದೆ, ಔದ್ಯೋಗಿಕ ಶಿಕ್ಷಣದ ಅರ್ಹತೆಗಳನ್ನು ಹೊಂದಿದ್ದ ವಿದ್ಯಾರ್ಥಿಗಳಿಗೆ ಉದ್ಯೋಗಾವಕಾಶಗಳನ್ನು ಒದಗಿಸುವಷ್ಟರ ಮಟ್ಟಿಗೆ ಸಾರ್ವತ್ರಿಕ ಉನ್ನತ ಶಿಕ್ಷಣದ ಪ್ರವೇಶ ಮಾನದಂಡಗಳನ್ನೂ ವಿನ್ಯಾಸಗೊಳಿಸಿರಲಿಲ್ಲ. ಇದರಿಂದಾಗಿ ಇಂಥ ವಿದ್ಯಾರ್ಥಿಗಳು, 'ಮುಖ್ಯವಾಹಿನಿ' ಶಿಕ್ಷಣ ಅಥವಾ 'ಸಾಂಪ್ರದಾಯಿಕ' ಶಿಕ್ಷಣ ಪಡೆದಿದ್ದ ತಮ್ಮ ಸಹವರ್ತಿ ವಿದ್ಯಾರ್ಥಿಗಳಿಗೆ ಹೋಲಿಸಿದಾಗ ಪ್ರತಿಕೂಲ ಪರಿಸ್ಥಿತಿಯಲ್ಲೇ ಉಳಿಯುವಂತಾಯಿತು. ಇದರಿಂದಾಗಿ, ಔದ್ಯೋಗಿಕ ಶಿಕ್ಷಣ ಪಡೆದ ವಿದ್ಯಾರ್ಥಿಗಳ ಮೇಲ್ಮುಖ ಚಲನಶೀಲತೆ ಸಂಪೂರ್ಣವಾಗಿ ಇಲ್ಲದಂತಾಯಿತು. 2013ರಲ್ಲಿ ಹೊರಬಿದ್ದ ರಾಷ್ಟ್ರೀಯ ಕೌಶಲಗಳ ಅರ್ಹತಾ ಚೌಕಟ್ಟಿನ (National Skills Qualifications Framework- ಎನ್.ಎಸ್.ಕ್ಯೂ.ಎಫ್.) ಪ್ರಕಟಣೆಯ ಮೂಲಕ ಈ ಸಮಸ್ಯೆಯ ಕಡೆಗೆ ಇತ್ತೀಚೆಗಷ್ಟೇ ಗಮನಹರಿಸಲಾಗಿದೆ.

16.3 ಮುಖ್ಯವಾಹಿನಿ ಶಿಕ್ಷಣಕ್ಕೆ ಹೋಲಿಸಿದಾಗ ಔದ್ಯೋಗಿಕ ಶಿಕ್ಷಣವು ಕೆಳದರ್ಜೆಯದ್ದು ಹಾಗೂ ಮುಖ್ಯವಾಹಿನಿ ಶಿಕ್ಷಣದೊಂದಿಗೆ ಸಮರ್ಥವಾಗಿ ಏರಲು ಅಸಮರ್ಥರಾಗಿರುವ ವಿದ್ಯಾರ್ಥಿಗಳಿಗೆ ಮಾತ್ರವೇ ಇದು ಬಹುಮಟ್ಟಿಗೆ ಮೀಸಲಾಗಿರುವಂಥದ್ದು ಎಂಬುದೊಂದು ಗ್ರಹಿಕೆಯಿದೆ. ವಿದ್ಯಾರ್ಥಿಗಳು ಮಾಡುವ ಆಯ್ಕೆಗಳ ಮೇಲೆ ಪ್ರತಿಕೂಲ ಪರಿಣಾಮವನ್ನು ಉಂಟುಮಾಡುವ ಒಂದು ಗ್ರಹಿಕೆಯಿದಾಗಿದೆ. ಕಳವಳಕಾರಿ ಅಂಶವಾಗಿದ್ದು, ಭವಿಷ್ಯದಲ್ಲಿ ವಿದ್ಯಾರ್ಥಿಗಳಿಗೆ ಔದ್ಯೋಗಿಕ ಶಿಕ್ಷಣವನ್ನು ಹೇಗೆ ನೀಡಲಾಗುತ್ತದೆ ಎಂಬುದರ ಸಂಪೂರ್ಣ ಮರುಕಲ್ಪನೆಗೆ ಒಡ್ಡಿಕೊಳ್ಳುವ ಮೂಲಕವಷ್ಟೇ ಈ ಕಳವಳವನ್ನು ನಿಭಾಯಿಸಲು ಸಾಧ್ಯ.

16.4 ಔದ್ಯೋಗಿಕ ಶಿಕ್ಷಣದೊಂದಿಗೆ ತಳುಕು ಹಾಕಿಕೊಂಡಿರುವ ಸಾಮಾಜಿಕ ಸ್ಥಾನಮಾನದ ಶ್ರೇಣಿವ್ಯವಸ್ಥೆಯನ್ನು ಜಯಿಸುವುದು ಈ ಕಾರ್ಯನೀತಿಯ ಗುರಿಯಾಗಿದ್ದು, ಇದರನ್ವಯ ಎಲ್ಲಾ ಶಿಕ್ಷಣ ಸಂಸ್ಥೆಗಳಲ್ಲಿ ಮುಖ್ಯವಾಹಿನಿ ಶಿಕ್ಷಣದೊಂದಿಗೆ ಔದ್ಯೋಗಿಕ ಶಿಕ್ಷಣದ ಕಾರ್ಯಕ್ರಮಗಳನ್ನು ಹಂತಹಂತವಾಗಿ ಸಂಯೋಜಿಸಬೇಕಾದ ಅಗತ್ಯವಿದೆ. ಮಾಧ್ಯಮಿಕ ಮತ್ತು ಪ್ರೌಢಶಾಲೆಗಳಲ್ಲಿನ ಆರಂಭಿಕ ವರ್ಷಗಳಲ್ಲೇ ಔದ್ಯೋಗಿಕ ಶಿಕ್ಷಣವನ್ನು ವಿದ್ಯಾರ್ಥಿಗಳ ಮುಂದೆ ಒಡ್ಡುವುದರೊಂದಿಗೆ ಶುರುಮಾಡಿ, ಗುಣಮಟ್ಟದ ಔದ್ಯೋಗಿಕ ಶಿಕ್ಷಣವನ್ನು ಉನ್ನತ ಶಿಕ್ಷಣದ ಕಕ್ಷೆಯೊಳಗೆ ನವಿರಾಗಿ ಸಂಯೋಜಿಸಲಾಗುತ್ತದೆ. ಪ್ರತಿಯೊಂದು ಮಗುವೂ ಕನಿಷ್ಠಪಕ್ಷ ಒಂದು ಕಸುಬನ್ನು ಕಲಿಯುವಂತೆ ಹಾಗೂ ಇನ್ನೂ ಹಲವು ಕಸುಬುಗಳಿಗೆ ಒಡ್ಡಿಕೊಳ್ಳುವಂತೆ ಆಗುವುದನ್ನು ಇದು ಖಾತ್ರಿಪಡಿಸುತ್ತದೆ. ಕಾಯಕದ ನಿಜವಾದ ಹಿರಿಮೆಗೆ, ಭಾರತೀಯ ಲಲಿತಕಲೆಗಳು ಹಾಗೂ ಕುಶಲಕರ್ಮಿತ್ವವನ್ನು ಒಳಗೊಂಡಂತೆ ಅನೇಕ ಬಗೆಯ ಕಸುಬುಗಳಿಗಿರುವ ಮಹತ್ವಕ್ಕೆ ಒತ್ತುನೀಡುವಂತಾಗುವುದಕ್ಕೆ ಇದು ಕಾರಣವಾಗುತ್ತದೆ.

16.5 2025ರ ವೇಳೆಗೆ, ಕನಿಷ್ಠಪಕ್ಷ ಶೇ. 50ರಷ್ಟು ಶಿಕ್ಷಣಾರ್ಥಿಗಳು ಶಾಲೆ ಹಾಗೂ ಉನ್ನತ ಶಿಕ್ಷಣ ವ್ಯವಸ್ಥೆಯ ಮೂಲಕ ಔದ್ಯೋಗಿಕ ಶಿಕ್ಷಣಕ್ಕೆ ಒಳಪಡಲಿದ್ದು, ಇದಕ್ಕಾಗಿ ಗುರಿಗಳು ಮತ್ತು ಕಾಲಸೂಚಿಗಳೊಂದಿಗಿನ ಒಂದು ಸ್ಪಷ್ಟ ಕ್ರಿಯಾಯೋಜನೆಯನ್ನು ಅಭಿವೃದ್ಧಿಪಡಿಸಲಾಗುವುದು. ಇದು ಸುಸ್ಥಿರ ಬೆಳವಣಿಗೆಯ ಗುರಿ 4.4ಕ್ಕೆ ಸರಿಹೊಂದುವಂತಿದ್ದು, ಭಾರತದ ಜನಸಂಖ್ಯಾ ಲಾಭಾಂಶದ ಸಂಪೂರ್ಣ ಸಾಧ್ಯತೆಯನ್ನು ನೆರವೇರಿಸಿಕೊಳ್ಳಲು ನೆರವಾಗುತ್ತದೆ. ಜಿ.ಇ.ಆರ್. ಗುರಿಗಳನ್ನು ತಲುಪುವಾಗ, ಔದ್ಯೋಗಿಕ ಶಿಕ್ಷಣದಲ್ಲಿ ತೊಡಗಿಸಿಕೊಂಡಿರುವ ವಿದ್ಯಾರ್ಥಿಗಳ ಸಂಖ್ಯೆಯನ್ನು ಪರಿಗಣಿಸಲಾಗುವುದು. ಔದ್ಯೋಗಿಕ ಶಿಕ್ಷಣದ ಸಾಮರ್ಥ್ಯಗಳ ಅಭಿವೃದ್ಧಿಯು 'ಸಾಂಪ್ರದಾಯಿಕ' ಅಥವಾ ಇತರ ಶಿಕ್ಷಣ ಪದ್ಧತಿಗಳ ಅಭಿವೃದ್ಧಿಯೊಂದಿಗೆ ಜತೆಜತೆಯಾಗಿ ಸಾಗುತ್ತದೆ. ಮುಂಬರುವ ದಶಕದೊಳಗಾಗಿ, ಎಲ್ಲ ಪ್ರೌಢಶಾಲೆಗಳ ಶೈಕ್ಷಣಿಕ ಕೊಡುಗೆಗಳಲ್ಲಿ ಔದ್ಯೋಗಿಕ ಶಿಕ್ಷಣವನ್ನು ಹಂತಹಂತವಾಗಿ ಸಂಯೋಜಿಸಲಾಗುವುದು. ಈ ಗುರಿಯ ನೆರವೇರಿಕೆಗೆ, ಐ.ಟಿ.ಐ.ಗಳು, ಪಾಲಿಟೆಕ್ನಿಕ್‌ಗಳು, ಸ್ಥಳೀಯ ಉದ್ಯಮ ಇತ್ಯಾದಿಗಳೊಂದಿಗೂ ಪ್ರೌಢಶಾಲೆಗಳು ಜತೆಗೂಡಿ ಕೆಲಸಮಾಡಲಿವೆ. 'ಹಬ್‌ಮತ್ತು ಸ್ಪೋಕ್' (Hub and Spoke) ಮಾದರಿಯಲ್ಲಿ ಕೌಶಲ ಸಂಬಂಧಿತ ಪ್ರಯೋಗಾಲಯಗಳನ್ನು ಕೂಡ ಶಾಲೆಗಳಲ್ಲಿ ಸ್ಥಾಪಿಸಿ ರೂಪಿಸಲಾಗುವುದು; ಇತರ ಶಾಲೆಗಳೂ ಈ ಸೌಕರ್ಯವನ್ನು ಬಳಸಿಕೊಳ್ಳುವುದಕ್ಕೆ ಈ ಮಾದರಿಯು ಅನುವುಮಾಡಿಕೊಡುವುದು. ಉನ್ನತ ಶಿಕ್ಷಣ ಸಂಸ್ಥೆಗಳು ಸ್ವತಂತ್ರವಾಗಿ ಅಥವಾ ಉದ್ಯಮ ಮತ್ತು ಸರ್ಕಾರೇತರ ಸಂಸ್ಥೆಗಳ (ಎನ್.ಜಿ.ಒ) ಸಹಭಾಗಿತ್ವದಲ್ಲಿ ಔದ್ಯೋಗಿಕ ಶಿಕ್ಷಣವನ್ನು ಒದಗಿಸುತ್ತವೆ. 2013ರಲ್ಲಿ ಪರಿಚಯಿಸಲಾದ B.Voc ಪದವಿಗಳ ಅಸ್ತಿತ್ವ ಮುಂದುವರಿಯಲಿವೆಯಾದರೂ, 4 ವರ್ಷಗಳ ಅವಧಿಯ ಬಹುಶಾಸ್ತ್ರೀಯ ಬ್ಯಾಚಲರ್‌ಶಿಕ್ಷಣ ಕಾರ್ಯಕ್ರಮಗಳು ಸೇರಿದಂತೆ ಇತರ ಎಲ್ಲಾ ಬ್ಯಾಚಲರ್‌ಪದವಿ ಕಾರ್ಯಕ್ರಮಗಳಲ್ಲಿ ದಾಖಲಾತಿಯಾಗಿರುವ ವಿದ್ಯಾರ್ಥಿಗಳಿಗೆ ಔದ್ಯೋಗಿಕ ಶಿಕ್ಷಣದ ಕೋರ್ಸ್‌ಗಳೂ ಲಭ್ಯವಾಗಲಿವೆ. ಬೌದ್ಧಿಕ ಕೌಶಲಗಳು (soft skills) ಸೇರಿದಂತೆ ವಿವಿಧ ಕೌಶಲಗಳಲ್ಲಿ ಅಲ್ಪಾವಧಿಯ ಸರ್ಟಿಫಿಕೇಟ್‌ಕೋರ್ಸ್‌ಗಳನ್ನು ನಡೆಸುವುದಕ್ಕೂ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಅವಕಾಶ ನೀಡಲಾಗುವುದು. ಭಾರತದಲ್ಲಿ ಅಭಿವೃದ್ಧಿಪಡಿಸಲಾದ 'ಲೋಕ ವಿದ್ಯಾ' ಎಂಬ ಔದ್ಯೋಗಿಕ ಶಿಕ್ಷಣ ಸಂಬಂಧಿತ ಜ್ಞಾನವನ್ನು, ಔದ್ಯೋಗಿಕ ಶಿಕ್ಷಣ ಕೋರ್ಸ್‌ಗಳೊಳಗೆ ಸಂಯೋಜಿಸುವ ಮೂಲಕ ವಿದ್ಯಾರ್ಥಿಗಳಿಗೆ ಲಭ್ಯವಾಗಿಸಲಾಗುವುದು. ಓ.ಡಿ.ಎಲ್. ವಿಧಾನದ ಮೂಲಕ ಔದ್ಯೋಗಿಕ ಕೋರ್ಸ್‌ಗಳನ್ನು ನೀಡುವಂಥ ಸಾಧ್ಯತೆಯನ್ನೂ ಒಳಹೊಕ್ಕು ವಿಚಾರಮಾಡಲಾಗುವುದು.

16.6 ಮುಂಬರುವ ದಶಕದೊಳಗಾಗಿ, ಎಲ್ಲ ಶಾಲೆ ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳೊಳಗೆ ಔದ್ಯೋಗಿಕ ಶಿಕ್ಷಣವನ್ನು ಹಂತಹಂತವಾಗಿ ಸಂಯೋಜಿಸಲಾಗುವುದು. ಕೌಶಲಗಳ ನಡುವಿನ ಅಂತರದ ವಿಶ್ಲೇಷಣೆಯನ್ನು ಮತ್ತು ಸ್ಥಳೀಯ ಅವಕಾಶಗಳ ಸಚಿತ್ರ ವಿವರಣೆಯನ್ನು ಆಧರಿಸಿ ಔದ್ಯೋಗಿಕ ಶಿಕ್ಷಣಕ್ಕೆ ಸಂಬಂಧಿಸಿ ಗಮನ ಕೇಂದ್ರೀಕರಿಸಬೇಕಾದ ವಿಷಯಕ್ಷೇತ್ರಗಳನ್ನು ಆರಿಸಲಾಗುವುದು. ಔದ್ಯೋಗಿಕ ಶಿಕ್ಷಣದ ಸಂಯೋಜನೆಗಾಗಿರುವ ಒಂದು ರಾಷ್ಟ್ರೀಯ ಸಮಿತಿ (ಎನ್.ಸಿ.ಐ.ವಿ.ಇ.)ಯನ್ನು ಉದ್ಯಮದ ಸಹಯೋಗದೊಂದಿಗೆ ಎಂ.ಎಚ್.ಆರ್.ಡಿ.ಯು ರೂಪಿಸಲಿದ್ದು, ಔದ್ಯೋಗಿಕ ಶಿಕ್ಷಣ ಕ್ಷೇತ್ರದಲ್ಲಿನ ಪರಿಣತರು ಹಾಗೂ ಎಲ್ಲ ಸಚಿವಖಾತೆಗಳ ಪ್ರತಿನಿಧಿಗಳನ್ನು ಈ ಸಮಿತಿ ಒಳಗೊಂಡಿರುತ್ತದೆ ಮತ್ತು ಈ ಪ್ರಯತ್ನದ ಮೇಲುಸ್ತುವಾರಿ ಅವರದಾಗಿರುತ್ತದೆ.

16.7 ಪರಿಕಲ್ಪನೆಯ ಆರಂಭಿಕ ಪರಿಗ್ರಾಹಕರಾಗಿರುವ ಏಕೋದ್ದಿಷ್ಟ ಸಂಸ್ಥೆಗಳು, ಕಾರ್ಯಕಾರಿ/ಕಾರ್ಯಸಾಧ್ಯ ಎನಿಸುವಂಥ ಮಾದರಿಗಳು ಹಾಗೂ ಪರಿಪಾಠಗಳನ್ನು ಕಂಡುಕೊಳ್ಳಲು ಹೊಸ ಮಾರ್ಪಾಡಿಗೆ ಒಡ್ಡಿಕೊಳ್ಳಬೇಕಾಗುತ್ತದೆ ಮತ್ತು ಎನ್.ಸಿ.ಐ.ವಿ.ಇ. ವತಿಯಿಂದ ಸ್ಥಾಪಿಸಲ್ಪಟ್ಟಿರುವ ಕಾರ್ಯವಿಧಾನಗಳ ಮೂಲಕ ನಂತರದಲ್ಲಿ ಅವನ್ನು ಇತರ ಸಂಸ್ಥೆಗಳೊಂದಿಗೆ ಹಂಚಿಕೊಳ್ಳಬೇಕಾಗುತ್ತದೆ. ಹೀಗೆ ಮಾಡುವುದರಿಂದ ಔದ್ಯೋಗಿಕ ಶಿಕ್ಷಣದ ವ್ಯಾಪ್ತಿಯನ್ನು ವಿಸ್ತರಿಸಲು ಸಾಧ್ಯವಾಗುತ್ತದೆ. ಉನ್ನತ ಶಿಕ್ಷಣ ಸಂಸ್ಥೆಗಳು, ಔದ್ಯೋಗಿಕ ಶಿಕ್ಷಣದ ವಿಭಿನ್ನ ಮಾದರಿಗಳನ್ನು, ಹಾಗೂ ಶಿಷ್ಯವೃತ್ತಿಗಳನ್ನು ಕೂಡ ಪ್ರಯೋಗಪರೀಕ್ಷೆಗಳಿಗೆ ಒಡ್ಡಬೇಕಾಗುತ್ತದೆ. ಉದ್ಯಮಗಳೊಂದಿಗಿನ ಸಹಭಾಗಿತ್ವದಲ್ಲಿ, ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಚಿಂತನ-ಮಂಥನ ಕೇಂದ್ರಗಳನ್ನು ಸ್ಥಾಪಿಸಲಾಗುತ್ತದೆ.

16.8 ಪ್ರತಿ ವಿದ್ಯಾವಿಭಾಗದ ಕಸುಬು ಮತ್ತು ವೃತ್ತಿಗೆ ಸಂಬಂಧಿಸಿದಂತೆ, ರಾಷ್ಟ್ರೀಯ ಕೌಶಲಗಳ ಅರ್ಹತಾ ಚೌಕಟ್ಟನ್ನು ಮತ್ತಷ್ಟು ವಿಸ್ತೃತವಾಗಿ ನಿರೂಪಿಸಲಾಗುತ್ತದೆ. ಇಷ್ಟೇ ಅಲ್ಲದೆ, ಅಂತಾರಾಷ್ಟ್ರೀಯ ಕಾರ್ಮಿಕ ಸಂಘಟನೆಯಿಂದ ನಿರ್ವಹಿಸಲ್ಪಡುತ್ತಿರುವ 'International Standard Classification of Occupations'ನ ರೂಪರೇಷೆಗಳೊಂದಿಗೆ ಭಾರತೀಯ ಮಾನದಂಡಗಳನ್ನು ಸರಿಹೊಂದಿಸಲಾಗುತ್ತದೆ. 'ಮೊದಲ ಕಲಿಕೆಯನ್ನು ಗುರುತಿಸುವಿಕೆ' (Recognition of Prior Learning) ಎಂಬ ಪರಿಕಲ್ಪನೆಗೆ ಈ ಚೌಕಟ್ಟು ತಳಹದಿಯನ್ನು ಒದಗಿಸುತ್ತದೆ. ಔಪಚಾರಿಕ ಶಿಕ್ಷಣ ವ್ಯವಸ್ಥೆಯನ್ನು ಮಧ್ಯದಲ್ಲೇ ತೊರೆದವರನ್ನು ಇದರ ಮೂಲಕ, ಶಿಕ್ಷಣವಾಹಿನಿಯೊಳಗೆ ಮರುಸಂಯೋಜಿಸಲಾಗುತ್ತದೆ; ಚೌಕಟ್ಟಿನ ಸುಸಂಬದ್ಧ ಮಟ್ಟದೊಂದಿಗೆ ಅವರ ಪ್ರಾಯೋಗಿಕ ಅನುಭವವನ್ನು ಸರಿಹೊಂದಿಸುವ ಮೂಲಕ ಇದನ್ನು ನೆರವೇರಿಸಲಾಗುತ್ತದೆ. 'ಸಾರ್ವತ್ರಿಕ' ಮತ್ತು ಔದ್ಯೋಗಿಕ ಶಿಕ್ಷಣ ವ್ಯವಸ್ಥೆಯಾದ್ಯಂತ ಚಲನಶೀಲತೆಯನ್ನೂ ಅಂಕ ಆಧಾರಿತ ಚೌಕಟ್ಟು ಅನುವುಗೊಳಿಸುತ್ತದೆ.

17. ಹೊಸ ರಾಷ್ಟ್ರೀಯ ಸಂಶೋಧನಾ ಪ್ರತಿಷ್ಠಾನದ ಮೂಲಕ ಎಲ್ಲ ಕ್ಷೇತ್ರಗಳಲ್ಲಿ ಗುಣಾತ್ಮಕ ಶೈಕ್ಷಣಿಕ ಸಂಶೋಧನೆಯ ವೇಗವೃದ್ಧಿ.

17.1 ಒಂದು ಬೃಹತ್ತಾದ ಹಾಗೂ ಚಲನಶೀಲ ಆರ್ಥಿಕತೆಯನ್ನು ಬೆಳೆಸುವಲ್ಲಿ, ಸುಸ್ಥಿರವಾಗಿ ಕಾಪಾಡುವಲ್ಲಿ, ಸಮಾಜದ ಉನ್ನತೀಕರಣದಲ್ಲಿ ಹಾಗೂ ಮಹತ್ತರ ಔನ್ನತ್ಯಗಳನ್ನು ಸಾಧಿಸುವುದಕ್ಕೆ ರಾಷ್ಟ್ರವೊಂದನ್ನು ನಿರಂತರವಾಗಿ ಪ್ರೇರೇಪಿಸುವಲ್ಲಿ ಜ್ಞಾನಸೃಷ್ಟಿ ಹಾಗೂ ಸಂಶೋಧನೆ ಎಂಬ ಎರಡು ಸಂಗತಿಗಳು ನಿರ್ಣಾಯಕ ಪಾತ್ರವನ್ನು ವಹಿಸುತ್ತವೆ. ಭಾರತ, ಮೆಸೊಪಟೇಮಿಯಾ, ಈಜಿಪ್ಟ್ ಮತ್ತು ಗ್ರೀಸ್‌ನಂಥ ಅತ್ಯಂತ ಪ್ರವರ್ಧಮಾನಕ್ಕೆ ಬರುತ್ತಿರುವ ನಾಗರಿಕತೆಗಳಿಂದ ಮೊದಲ್ಗೊಂಡು ಅಮೆರಿಕ ಸಂಯುಕ್ತ ಸಂಸ್ಥಾನಗಳು, ಜರ್ಮನಿ, ಇಸ್ರೇಲ್, ದಕ್ಷಿಣ ಕೊರಿಯಾ ಮತ್ತು ಜಪಾನ್‌ನಂಥ ಆಧುನಿಕ ಯುಗದ ನಾಗರಿಕತೆಗಳವರೆಗಿನ ಕೆಲವೊಂದು ಸಮಾಜಗಳು ಜ್ಞಾನದ ದೃಷ್ಟಿಯಿಂದ ಪ್ರಬಲವಾದ ಸಮಾಜಗಳಾಗಿದ್ದು ಬೌದ್ಧಿಕ ಮತ್ತು ಐಹಿಕ ಏಳಿಗೆಯನ್ನು ಸಾಧಿಸಿವೆ; ವಿಜ್ಞಾನ ಮಾತ್ರವಲ್ಲದೆ ಕಲೆ, ಭಾಷೆ ಮತ್ತು ಸಂಸ್ಕೃತಿಯಂಥ ಕ್ಷೇತ್ರಗಳಲ್ಲಿ ಹೊಸ ಜ್ಞಾನಕ್ಕೆ ನೀಡಲ್ಪಟ್ಟ ಪ್ರಸಿದ್ಧ ಹಾಗೂ ಮೂಲಭೂತ ಕೊಡುಗೆಗಳೇ ಇದಕ್ಕೆ ಬಹುತೇಕ ಕಾರಣ ಎಂಬುದರಲ್ಲಿ ಎರಡು ಮಾತಿಲ್ಲ. ಈ ಕೊಡುಗೆಗಳು ತಂತಮ್ಮ ನಾಗರಿಕತೆಗಳನ್ನಲ್ಲದೆ ಭೂಮಂಡಲದ ಇತರ ನಾಗರಿಕತೆಗಳನ್ನೂ ಪ್ರವರ್ಧಮಾನಕ್ಕೆ ತಂದವು, ಉದ್ಧರಿಸಿದವು ಎನ್ನಬೇಕು.

17.2 ಪ್ರಪಂಚದಲ್ಲಿ ಪ್ರಸ್ತುತ ಸಂಭವಿಸುತ್ತಿರುವ ಕ್ಷಿಪ್ರ ಬದಲಾವಣೆಗಳನ್ನು ಅಂದರೆ, ಹವಾಮಾನ ಬದಲಾವಣೆ, ಜನಸಂಖ್ಯೆಯ ಚಾಲಕಶಕ್ತಿಗಳು ಮತ್ತು ನಿರ್ವಹಣಾ ಕೌಶಲ, ಜೈವಿಕ ತಂತ್ರಜ್ಞಾನ, ವಿಸ್ತರಣೆಗೊಳ್ಳುತ್ತಲೇ ಇರುವ ಡಿಜಿಟಲ್ ಮಾರುಕಟ್ಟೆ, ಯಂತ್ರಕಲಿಕೆ ಮತ್ತು ಕೃತಕ ಬುದ್ಧಿಮತ್ತೆಯ ಉತ್ಕರ್ಷದಂಥ ಕ್ಷೇತ್ರಗಳಲ್ಲಿ ಆಗುತ್ತಿರುವ ಬದಲಾವಣೆಗಳನ್ನು ಒಮ್ಮೆ ಅವಲೋಕಿಸಿದಾಗ, ಸಂಶೋಧನೆಗೆ ಸಂಬಂಧಿಸಿದ ಸದೃಢ ಪರಿಸರ ವ್ಯವಸ್ಥೆಯೊಂದು ಪ್ರಾಯಶಃ ಹಿಂದೆಂದಿಗಿಂತಲೂ ಹೆಚ್ಚು ಮುಖ್ಯವಾಗಿದೆ ಎನಿಸುತ್ತದೆ. ಈ ವಿಭಿನ್ನ ಕ್ಷೇತ್ರಗಳಲ್ಲಿ ಭಾರತವು ಓರ್ವ ನಾಯಕನಾಗಬೇಕು ಎಂದಾದಲ್ಲಿ, ಮುಂಬರುವ ವರ್ಷಗಳು ಮತ್ತು ದಶಕಗಳಲ್ಲಿ ಒಂದು ಅಗ್ರಗಣ್ಯ ಜ್ಞಾನಸಮುದಾಯ ಎನಿಸಿಕೊಳ್ಳಲು ತನ್ನಲ್ಲಿನ ಅಗಾಧ ಪ್ರತಿಭಾ ಸಮುದಾಯದ ಸಾಮರ್ಥ್ಯದ ಪರಾಕಾಷ್ಠೆಯನ್ನು ನಿಜಾರ್ಥದಲ್ಲಿ ತಲುಪಬೇಕು ಎಂದಾದಲ್ಲಿ, ಎಲ್ಲಾ ವಿದ್ಯಾವಿಭಾಗಗಳಿಗೂ ಅನ್ವಯವಾಗುವಂತೆ ರಾಷ್ಟ್ರವು ತನ್ನ ಸಂಶೋಧನಾ ಸಾಮರ್ಥ್ಯಗಳು ಹಾಗೂ ಫಲಶೃತಿಗಳ ವಿಷಯದಲ್ಲಿ ಗಣನೀಯ ವಿಸ್ತರಣೆಗೆ ಮುಂದಾಗಬೇಕಾಗುತ್ತದೆ. ರಾಷ್ಟ್ರವೊಂದರ ಆರ್ಥಿಕ, ಬೌದ್ಧಿಕ, ಸಾಮಾಜಿಕ, ಪರಿಸರೀಯ ಹಾಗೂ ತಂತ್ರಜ್ಞಾನ ಸಂಬಂಧಿತ ಸ್ವಾಸ್ಥ್ಯ ಮತ್ತು ಪ್ರಗತಿಗಾಗಿ ಸಂಶೋಧನಾ ಕ್ಷೇತ್ರವು ನಿರ್ಣಾಯಕ ಪಾತ್ರ ವಹಿಸಬೇಕಿರುವುದು ಹಿಂದೆಂದಿಗಿಂತಲೂ ಹೆಚ್ಚು ಅಗತ್ಯವಾಗಿದೆ.

17.3 ಸಂಶೋಧನಾ ಕ್ಷೇತ್ರಕ್ಕಿರುವ ಈ ನಿರ್ಣಾಯಕ ಮಹತ್ವದ ಹೊರತಾಗಿಯೂ, ಭಾರತದಲ್ಲಿ ಸಂಶೋಧನೆ ಮತ್ತು ಹೊಸ ಮಾರ್ಪಾಡುಗಳ ಕ್ಷೇತ್ರದಲ್ಲಿ ಪ್ರಸ್ತುತ ಆಗುತ್ತಿರುವ ಹೂಡಿಕೆಯು ಜಿ.ಡಿ.ಪಿ.ಯ ಕೇವಲ ಶೇ. 0.69ರಷ್ಟಿದೆ. ಇದಕ್ಕೆ ಹೋಲಿಸಿದಾಗ ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಶೇ. 2.8ರಷ್ಟು, ಇಸ್ರೇಲ್‌ನಲ್ಲಿ ಶೇ. 4.3ರಷ್ಟು ಹಾಗೂ ದಕ್ಷಿಣ ಕೊರಿಯಾದಲ್ಲಿ ಶೇ. 4.2ರಷ್ಟು ಹೂಡಿಕೆಯಾಗುತ್ತಿದೆ.

17.4 ಭಾರತವು ಪ್ರಸ್ತುತ ಎದುರಿಸುತ್ತಿರುವ ಸಾಮಾಜಿಕ ಸವಾಲುಗಳು ಒಂದೆರಡಲ್ಲ; ತನ್ನೆಲ್ಲ ನಾಗರಿಕರಿಗೆ ಶುದ್ಧವಾದ ಕುಡಿಯುವ ನೀರು ಹಾಗೂ ನೈರ್ಮಲ್ಯ ವ್ಯವಸ್ಥೆ, ಗುಣಮಟ್ಟದ ಶಿಕ್ಷಣ ಮತ್ತು ಆರೋಗ್ಯ ರಕ್ಷಣೆ, ಸುಧಾರಿತ ಸಾರಿಗೆ ವ್ಯವಸ್ಥೆ, ಉತ್ತಮವಾದ ಗಾಳಿ, ಇಂಧನ ಮತ್ತು ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕಾದ ಸವಾಲುಗಳು ದೇಶದ ಎದುರಿದ್ದು, ಇವು ನೆರವೇರಬೇಕೆಂದರೆ ತಜ್ಞರು ಶಿಫಾರಸು ಮಾಡಿರುವ ಮಾರ್ಗೋಪಾಯಗಳು ಮತ್ತು ಪರಿಹಾರೋಪಾಯಗಳ ಅನುಷ್ಠಾನ ಅತ್ಯಗತ್ಯವಾಗಿದೆ. ಸರ್ವಶ್ರೇಷ್ಠ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳಷ್ಟೇ ಈ ಉಪಾಯಗಳನ್ನು ಸೂಚಿಸಿಲ್ಲ; ಸಮಾಜ ವಿಜ್ಞಾನ ಮತ್ತು ಮಾನವಿಕ ಶಾಸ್ತ್ರಗಳು ಮಾತ್ರವಲ್ಲದೆ ರಾಷ್ಟ್ರದ ವೈವಿಧ್ಯಮಯ ಸಮಾಜೋ-ಸಾಂಸ್ಕೃತಿಕ ಹಾಗೂ ಪರಿಸರೀಯ ಆಯಾಮಗಳಲ್ಲೂ ಈ ಮಾರ್ಗೋಪಾಯಗಳು ಬೇರುಬಿಟ್ಟಿದ್ದು ಇವುಗಳ ಆಳಗ್ರಹಿಕೆ ಈ ಕ್ಷಣದ ಅನಿವಾರ್ಯತೆಯಾಗಿದೆ. ಈ ಸವಾಲುಗಳನ್ನು ಎದುರಿಸಿ ಪರಿಹರಿಸಬೇಕೆಂದರೆ, ಎಲ್ಲಾ ಕ್ಷೇತ್ರಗಳಲ್ಲೂ ಉನ್ನತ ಗುಣಮಟ್ಟದ ಅಂತರಶಾಸ್ತ್ರೀಯ ಸಂಶೋಧನೆಯ ಅಗತ್ಯವಿದೆ. ಇಂಥ ಸಂಶೋಧನೆ ಭಾರತದಲ್ಲೇ ನಡೆಯಬೇಕೇ ವಿನಾ, ಸಲೀಸಾಗಿ ವಿದೇಶದಿಂದ ಆಮದಾಗುವಂತಾಗಬಾರದು; ತನ್ನದೇ ಆದ ಸಂಶೋಧನಾ ಸಾಮರ್ಥ್ಯವನ್ನು ಹೊಂದುವುದರಿಂದಾಗಿ ದೇಶವೊಂದು ಹೆಚ್ಚು ಸುಲಭವಾಗಿ ಸುಸಂಬದ್ಧ ವಿದೇಶೀ ಸಂಶೋಧನಾ ಜ್ಞಾನವನ್ನು ಆಮದುಮಾಡಿಕೊಂಡು ತನ್ನ ಉದ್ದೇಶಕ್ಕೆ ತಕ್ಕಂತೆ ಸರಿಹೊಂದಿಸಿಕೊಳ್ಳಲು ಸಾಧ್ಯವಾಗುತ್ತದೆ.

17.5 ಇಷ್ಟೇ ಅಲ್ಲ, ಸಾಮಾಜಿಕ ಸಮಸ್ಯೆಗಳಿಗಿರುವ ಪರಿಹಾರೋಪಾಯಗಳಲ್ಲಿ ಅವು ಹೊಂದಿರುವ ಉಪಯುಕ್ತತೆಯ ಜತೆಜತೆಗೆ, ಯಾವುದೇ ದೇಶದ ಅಸ್ಮಿತೆ, ಉನ್ನತಿ, ಆಧ್ಯಾತ್ಮಿಕ/ಬೌದ್ಧಿಕ ಅಂಗೀಕಾರ ಮತ್ತು ಸೃಜನಶೀಲತೆಯಂಥ ಸಂಗತಿಗಳೂ ಅದರ ಇತಿಹಾಸ, ಕಲೆ, ಭಾಷೆ ಮತ್ತು ಸಂಸ್ಕೃತಿಯ ಮೂಲಕ ಮಹತ್ತರವಾಗಿ ನೆರವೇರುತ್ತವೆ. ವಿಜ್ಞಾನ ವಿಷಯಗಳು ಮತ್ತು ಸಮಾಜ ವಿಜ್ಞಾನಗಳಲ್ಲಿನ

ಹೊಸ ಮಾರ್ಪಾಟುಗಳ ಜತೆಜತೆಗೆ ಕಲಾ ವಿಭಾಗ ಹಾಗೂ ಮಾನವಿಕ ಶಾಸ್ತ್ರಗಳಲ್ಲಿನ ಸಂಶೋಧನೆಗಳು ಈ ಕಾರಣದಿಂದಾಗಿ ರಾಷ್ಟ್ರವೊಂದರ ಪ್ರಗತಿ ಹಾಗೂ ಪ್ರಬುದ್ಧ ಸ್ವರೂಪಕ್ಕೆ ಅತ್ಯಂತ ಮುಖ್ಯವಾಗಿರುತ್ತವೆ.

17.6 ಭಾರತದ ಶಿಕ್ಷಣ ಸಂಸ್ಥೆಗಳಲ್ಲಿನ, ಅದರಲ್ಲೂ ನಿರ್ದಿಷ್ಟವಾಗಿ ಉನ್ನತ ಶಿಕ್ಷಣದಲ್ಲಿ ತೊಡಗಿಸಿಕೊಂಡಿರುವ ಶಿಕ್ಷಣ ಸಂಸ್ಥೆಗಳಲ್ಲಿನ ಸಂಶೋಧನೆ ಹಾಗೂ ಹೊಸ ಮಾರ್ಪಾಟುಗಳು ನಿರ್ಣಾಯಕ ಪಾತ್ರವನ್ನು ಹೊಂದಿವೆ. ಇತಿಹಾಸದುದ್ದಕ್ಕೂ ಕಾಣಬರುವ ವಿಶ್ವದ ಸರ್ವೋತ್ಕೃಷ್ಟ ವಿಶ್ವವಿದ್ಯಾಲಯಗಳಿಂದ ದಕ್ಕಿರುವ ಪುರಾವೆಗಳೇ ಹೇಳುವಂತೆ, ಎಲ್ಲೆಲ್ಲಿ ಸಂಶೋಧನೆ ಮತ್ತು ಜ್ಞಾನಸೃಷ್ಟಿಯ ಒಂದು ಪ್ರಬಲವಾದ ಸಂಸ್ಕೃತಿಯೂ ಇದೆಯೋ ಅಂಥ ಪರಿಸರಗಳಲ್ಲಿ ಉನ್ನತ ಶಿಕ್ಷಣ ಮಟ್ಟದಲ್ಲಿ ಅತ್ಯುತ್ತಮವೆನ್ನಬಹುದಾದ ಬೋಧನಾ ಮತ್ತು ಕಲಿಕಾ ಪ್ರಕ್ರಿಯೆಗಳು ಘಟಿಸುತ್ತವೆ; ಇದಕ್ಕೆ ಪ್ರತಿಯಾಗಿ, ವಿಶ್ವದಲ್ಲಿನ ಅತ್ಯುತ್ತಮ ಸಂಶೋಧನೆಗಳಲ್ಲಿ ಹೆಚ್ಚಿನವು ಬಹುಶಾಸ್ತ್ರೀಯ ವಿಶ್ವವಿದ್ಯಾಲಯದ ಪರಿಸರಗಳಲ್ಲಿ ಘಟಿಸಿವೆ.

17.7 ವಿಜ್ಞಾನ ಮತ್ತು ಗಣಿತಶಾಸ್ತ್ರದಿಂದ ಮೊದಲ್ಗೊಂಡು ಕಲೆ ಮತ್ತು ಸಾಹಿತ್ಯದವರೆಗೆ, ಧ್ವನಿವಿಜ್ಞಾನ ಮತ್ತು ಭಾಷೆಗಳಿಂದ ಮೊದಲ್ಗೊಂಡು ಔಷಧ ಮತ್ತು ಕೃಷಿಯವರೆಗಿನ ವೈವಿಧ್ಯಮಯ ವಿದ್ಯಾವಿಭಾಗಗಳಲ್ಲಿ, ಸಂಶೋಧನೆ ಮತ್ತು ಜ್ಞಾನಸೃಷ್ಟಿಗೆ ಸಂಬಂಧಿಸಿದ ಒಂದು ಸುದೀರ್ಘ ಐತಿಹಾಸಿಕ ಸಂಪ್ರದಾಯ/ಪರಂಪರೆಯನ್ನು ಭಾರತ ಹೊಂದಿದೆ. ಒಂದು ಸದೃಢ ಹಾಗೂ ಪ್ರಬುದ್ಧ ಜ್ಞಾನಸಮಾಜವಾಗಿ ಮತ್ತು ವಿಶ್ವದಲ್ಲಿನ ಮೂರು ಬೃಹತ್ ಆರ್ಥಿಕತೆಗಳಲ್ಲಿ ಒಂದೆನಿಸಿಕೊಂಡು 21ನೇ ಶತಮಾನದಲ್ಲಿ ಸಂಶೋಧನೆ ಮತ್ತು ಹೊಸ ಮಾರ್ಪಾಟುಗಳ ಕ್ಷೇತ್ರದಲ್ಲಿ ಭಾರತವು ಅಗ್ರಗಣ್ಯ ಎನಿಸಿಕೊಳ್ಳಲು ಈ ಸಂಪ್ರದಾಯ/ಪರಂಪರೆಯನ್ನು ಮತ್ತಷ್ಟು ಬಲಪಡಿಸಬೇಕಾಗಿದೆ.

17.8 ಈ ರೀತಿಯಾಗಿ, ಭಾರತದಲ್ಲಿನ ಸಂಶೋಧನಾ ಚಟುವಟಿಕೆಗಳ ಗುಣಮಟ್ಟ ಹಾಗೂ ಪರಿಮಾಣವನ್ನು ರೂಪಾಂತರಿಸಬಲ್ಲ ಸಮಗ್ರ ಮಾರ್ಗೋಪಾಯವೊಂದರ ಕುರಿತು ಈ ಕಾರ್ಯನೀತಿಯು ಪರ್ಯಾಲೋಚಿಸುತ್ತದೆ. ವೈಜ್ಞಾನಿಕ ವಿಧಾನ ಹಾಗೂ ವಿಮರ್ಶಾತ್ಮಕ ಚಿಂತನೆಯ ಮೇಲೆ ಒತ್ತುನೀಡುವುದರ ಜತೆಗೆ, ಹೆಚ್ಚಿನ ಆಟೋಟಗಳು ಹಾಗೂ ಆವಿಷ್ಕಾರ ಆಧರಿತ ಕಲಿಕಾ ಶೈಲಿಯೆಡೆಗೆ ಸಾಗುವಂತೆ ಶಾಲಾ ಶಿಕ್ಷಣದಲ್ಲಿ ನಿರ್ಣಾಯಕ ರೂಪಾಂತರಗಳನ್ನು ತರುವುದನ್ನು ಇದು ಒಳಗೊಂಡಿದೆ. ವಿದ್ಯಾರ್ಥಿಗಳ ಹಿತಾಸಕ್ತಿಗಳು ಮತ್ತು ಪ್ರತಿಭೆಗಳನ್ನು ಗುರುತಿಸುವ ನಿಟ್ಟಿನಲ್ಲಿ ಶಾಲೆಗಳಲ್ಲಿ ವೃತ್ತಿಸಂಬಂಧಿತ ಸಮಾಲೋಚನೆ ನಡೆಸುವಿಕೆ/ಮಾರ್ಗದರ್ಶನ ನೀಡುವಿಕೆ, ವಿಶ್ವವಿದ್ಯಾಲಯಗಳಲ್ಲಿ ಸಂಶೋಧನಾ ಕಾರ್ಯವನ್ನು, ಎಲ್ಲ ಉನ್ನತ ಶಿಕ್ಷಣ ಸಂಸ್ಥೆಗಳ ಬಹುಶಾಸ್ತ್ರೀಯ ಸ್ವರೂಪವನ್ನು ಉತ್ತೇಜಿಸುವಿಕೆ ಮತ್ತು ಸಮಗ್ರತಾ ದೃಷ್ಟಿಯ ಶಿಕ್ಷಣಕ್ಕೆ ಒತ್ತುನೀಡುವಿಕೆ, ಸಂಶೋಧನೆಗೆ ಯಥೋಚಿತ ಮಾನ್ಯತೆ ನೀಡುವ ಬೋಧನಾಂಗ ವೃತ್ತಿ ನಿರ್ವಹಣಾ ಕೌಶಲ ವ್ಯವಸ್ಥೆಗಳು, ಸ್ನಾತಕಪೂರ್ವ ಪಠ್ಯಕ್ರಮದಲ್ಲಿ ಸಂಶೋಧನೆ ಮತ್ತು ಇಂಟರ್ನ್‌ಶಿಪ್‌ಗಳ ಸೇರ್ಪಡೆ, ಹಾಗೂ ಸಂಶೋಧನೆ ಮತ್ತು ಹೊಸ ಮಾರ್ಪಾಟಿನ ಕ್ಷೇತ್ರಗಳ ಪರಿಸರವೊಂದಕ್ಕೆ ಉತ್ತೇಜಿಸುವಂಥ ಆಡಳಿತಾತ್ಮಕ ಮತ್ತು ನಿಯಂತ್ರಕ ಬದಲಾವಣೆಗಳನ್ನು ತರುವಿಕೆ ಇವೆಲ್ಲವೂ ಇದರಲ್ಲಿ ಸೇರಿಕೊಂಡಿವೆ. ದೇಶದಲ್ಲಿ ಸಂಶೋಧನೆ ಸಂಬಂಧಿತ ಚಿತ್ತಸ್ಥಿತಿಯೊಂದನ್ನು ಬೆಳೆಸುವಲ್ಲಿ ಈ ಎಲ್ಲ ಅಂಶಗಳು ಅತ್ಯಂತ ನಿರ್ಣಾಯಕವಾಗಿರುತ್ತವೆ.

17.9 ಈ ವೈವಿಧ್ಯಮಯ ಅಂಶಗಳನ್ನು ಸಮಷ್ಟಿ ಪರಿಣಾಮದ ವಿಧಾನವೊಂದರಲ್ಲಿ ತಳಹದಿಯಾಗಿಸಲು ಮತ್ತು ತನ್ಮೂಲಕ ರಾಷ್ಟ್ರದಲ್ಲಿ ಗುಣಾತ್ಮಕ ಸಂಶೋಧನೆಯನ್ನು ನಿಜಾರ್ಥದಲ್ಲಿ ಬೆಳೆಸಿ ವೇಗವರ್ಧಿಸಲು, ರಾಷ್ಟ್ರೀಯ ಸಂಶೋಧನಾ ಪ್ರತಿಷ್ಠಾನವೊಂದರ (National Research Foundation- NRF) ಸ್ಥಾಪನೆಗೆ ಈ ಕಾರ್ಯನೀತಿಯು ಪರ್ಯಾಲೋಚಿಸುತ್ತದೆ. ಸಂಶೋಧನಾ ಸಂಸ್ಕೃತಿಯೊಂದು ನಮ್ಮ ವಿಶ್ವವಿದ್ಯಾಲಯಗಳ ಒಳಹೊಕ್ಕು ವ್ಯಾಪಿಸುವುದಕ್ಕೆ ಅನುವುಮಾಡಿಕೊಡುವುದು ಸದರಿ ಎನ್.ಆರ್.ಎಫ್ ನ ಪ್ರಧಾನ ಗುರಿಯಾಗಿರುತ್ತದೆ. ಅದರಲ್ಲೂ ನಿರ್ದಿಷ್ಟವಾಗಿ, ಯೋಗ್ಯತೆಯನ್ನು ಆಧರಿಸಿದ ಆದರೆ ನಿಷ್ಪಕ್ಷಪಾತವಾಗಿರುವ/ಸಮದರ್ಶಿಯಾಗಿರುವ, ಸಮಾನಸ್ಕಂಧರು ಮರುಪರಿಶೀಲನೆ ನಡೆಸಿರುವ ಸಂಶೋಧನಾ ಧನಸಹಾಯಕ್ಕೆ ಒಂದು ವಿಶ್ವಾಸಾರ್ಹ ತಳಹದಿಯನ್ನು ಎನ್.ಆರ್.ಎಫ್ ಒದಗಿಸಲಿದ್ದು, ದೇಶದಲ್ಲಿ ಸಂಶೋಧನಾ ಸಂಸ್ಕೃತಿಯೊಂದನ್ನು ಬೆಳೆಸುವುದಕ್ಕೆ ಅದು ನೆರವಾಗಲಿದೆ; ಮಹೋನ್ನತವೆನಿಸಿದ ಸಂಶೋಧನೆಯನ್ನು ಗುರುತಿಸಿ ಯೋಗ್ಯ ಪ್ರೋತ್ಸಾಹಧನಗಳನ್ನು ನೀಡುವಿಕೆ, ಸಂಶೋಧನಾ ಸಾಮರ್ಥ್ಯವು ಪ್ರಸ್ತುತ ಸೀಮಿತವಾಗಿರುವ ರಾಜ್ಯ ವಿಶ್ವವಿದ್ಯಾಲಯಗಳಲ್ಲಿ ಹಾಗೂ ಇತರ ಸಾರ್ವಜನಿಕ ಸಂಸ್ಥೆಗಳಲ್ಲಿ ಸಂಶೋಧನಾ ಚಟುವಟಿಕೆಗಳಿಗೆ ಚಾಲನೆ ನೀಡಿ ಬೆಳೆಸುವಂಥ ಪ್ರಮುಖ ಉಪಕ್ರಮಗಳನ್ನು ಕೈಗೊಳ್ಳುವಿಕೆ ಇವು ಆ ಗುರಿಯಲ್ಲಿ ಸೇರಿವೆ. ಎಲ್ಲಾ ವಿದ್ಯಾವಿಭಾಗಗಳಲ್ಲಿನ ಸಂಶೋಧನಾ ಕಾರ್ಯಕ್ಕೆ ಸ್ಪರ್ಧಾತ್ಮಕ ರೀತಿಯಲ್ಲಿ ಎನ್.ಆರ್.ಎಫ್ ಧನಸಹಾಯ ಮಾಡಲಿದೆ. ಯಶಸ್ವೀ ಸಂಶೋಧನೆಗಳನ್ನು ಗುರುತಿಸಿ ಮಾನ್ಯತೆ ನೀಡುವಿಕೆ ಹಾಗೂ ಅವು ಪ್ರಸ್ತುತವಾಗಿದೆ ಎನಿಸಿದೆಡೆಗಳಲ್ಲಿ ಸರ್ಕಾರಿ ಸಂಸ್ಥೆಗಳು, ಉದ್ಯಮಗಳು, ಖಾಸಗಿ/ಲೋಕೋಪಕಾರಿ ಸಂಘಟನೆಗಳ ನಿಕಟ ಸಹಯೋಗದೊಂದಿಗೆ ಅನುಷ್ಠಾನಕ್ಕೆ ತರುವಿಕೆ ಇವು ಕೂಡ ಆ ಗುರಿಯಲ್ಲಿ ಸೇರಿಕೊಂಡಿವೆ.

17.10 ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ (ಡಿ.ಎಸ್.ಟಿ.), ಪರಮಾಣು ಶಕ್ತಿ ಇಲಾಖೆ (ಡಿ.ಎ.ಇ.), ಜೈವಿಕ ತಂತ್ರಜ್ಞಾನ ಇಲಾಖೆ (ಡಿ.ಬಿ.ಟಿ), ಭಾರತೀಯ ಕೃಷಿ ಸಂಶೋಧನಾ ಮಂಡಳಿ (ಐ.ಸಿ.ಎ.ಆರ್.), ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ

(ಐ.ಸಿ.ಎಮ್.ಆರ್.), ಭಾರತೀಯ ಐತಿಹಾಸಿಕ ಸಂಶೋಧನಾ ಮಂಡಳಿ (ಐ.ಸಿ.ಎಚ್.ಆರ್.), ಮತ್ತು ವಿಶ್ವವಿದ್ಯಾಲಯ ಧನಸಹಾಯ ಆಯೋಗ (ಯು.ಜಿ.ಸಿ.)ದಂಥ ಸಂಸ್ಥೆಗಳು ಹಾಗೂ ಅನೇಕ ಖಾಸಗಿ ಮತ್ತು ಲೋಕೋಪಕಾರಿ ಸಂಘಟನೆಗಳು ಸಾಕಷ್ಟು ಮಟ್ಟದಲ್ಲಿ ಪ್ರಸ್ತುತ ಸಂಶೋಧನಾ ಕಾರ್ಯಗಳಿಗೆ ಧನಸಹಾಯ ಮಾಡುತ್ತಿದ್ದು, ತಂತಮ್ಮ ಆದ್ಯತೆಗಳು ಮತ್ತು ಅವಶ್ಯಕತೆಗಳಿಗೆ ಅನುಸಾರವಾಗಿ ಅವು ಸಂಶೋಧನೆಗೆ ಸ್ವತಂತ್ರವಾಗಿ ಧನಸಹಾಯ ನೀಡುವುದನ್ನು ಮುಂದುವರಿಸಲಿವೆ. ಅದೇನೇ ಇರಲಿ, ಉದ್ದೇಶದ ಸಮಷ್ಟಿ ಪರಿಣಾಮವನ್ನು ಖಾತ್ರಿಪಡಿಸಲು ಹಾಗೂ ಸಂಶೋಧನಾ ಚಟುವಟಿಕೆಗಳ ಅನಗತ್ಯ ಪುನರಾವರ್ತನೆಯನ್ನು ತಡೆಯಲು, ಇತರ ಧನಸಹಾಯಕ ಸಂಸ್ಥೆಗಳೊಂದಿಗೆ ಜಾಗರೂಕವಾಗಿ ಸಹಯೋಗ ನೀಡಲಿರುವ ಎನ್.ಆರ್.ಎಫ್, ವಿಜ್ಞಾನ, ಎಂಜಿನಿಯರಿಂಗ್‌ಮತ್ತು ಇತರ ಶಿಕ್ಷಣ ವಿಷಯಗಳೊಂದಿಗೂ ಕೈಜೋಡಿಸಿ ಈ ನಿಟ್ಟಿನಲ್ಲಿ ಕೆಲಸ ಮಾಡಲಿದೆ. ಸರ್ಕಾರಿ ಕೃಪಾಶ್ರಯದ ಹಂಗಿಲ್ಲದ ಸ್ವತಂತ್ರ ಆಡಳಿತ ನಿರ್ವಹಣೆಗೆ ಎನ್.ಆರ್.ಎಫ್ ಒಳಪಡಲಿದ್ದು, ವಿವಿಧ ಕ್ಷೇತ್ರಗಳ ಅತ್ಯುತ್ತಮ ಸಂಶೋಧಕರು ಹಾಗೂ ಹೊಸತನದ ಪ್ರವರ್ತಕರನ್ನೊಳಗೊಂಡ ಆವರ್ತಕ ಆಡಳಿತ ಮಂಡಳಿಯು ಇದನ್ನು ನಿರ್ವಹಿಸಲಿದೆ.

17.11 ಎನ್.ಆರ್.ಎಫ್. ನ ಪ್ರಧಾನ ಚಟುವಟಿಕೆಗಳಲ್ಲಿ ಇವು ಸೇರಿವೆ:

(ಎ) ಎಲ್ಲ ಬಗೆಯ ಮತ್ತು ಎಲ್ಲ ವಿದ್ಯಾವಿಭಾಗಗಳಿಗೆ ಸಂಬಂಧಿಸಿದ ಸ್ಪರ್ಧಾತ್ಮಕವಾದ, ಸಮಾನಸ್ಕಂಧರು ಮರುಪರಿಶೀಲನೆ ಮಾಡಿದ ಅನುದಾನದ ಪ್ರಸ್ತಾವನೆಗಳಿಗೆ ಧನಸಹಾಯ ಮಾಡುವುದು;

(ಬಿ) ವಿಶ್ವಸನೀಯ ಸಲಹೆ ನೀಡುವ ಮೂಲಕ ಶೈಕ್ಷಣಿಕ ಸಂಸ್ಥೆಗಳಲ್ಲಿ, ಅದರಲ್ಲೂ ನಿರ್ದಿಷ್ಟವಾಗಿ ಸಂಶೋಧನೆಯೆಂಬುದು ಪ್ರಸ್ತುತ ಶೈಶವಾವಸ್ಥೆಯಲ್ಲಿರುವಂಥ ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳಲ್ಲಿ ಸಂಶೋಧನಾ ಚಟುವಟಿಕೆಗಳನ್ನು ಹುಟ್ಟುಹಾಕುವುದು, ಬೆಳೆಸುವುದು ಮತ್ತು ಅಗತ್ಯ ನೆರವು ಒದಗಿಸಿ ಸುಗಮಗೊಳಿಸುವುದು.

(ಸಿ) ಸಂಶೋಧಕರು ಮತ್ತು ಸುಸಂಬದ್ಧ ಸರ್ಕಾರಿ ವಿಭಾಗಗಳ, ಉದ್ಯಮಗಳ ನಡುವಿನ ಒಂದು ಸಂಪರ್ಕ ಕೊಂಡಿಯಾಗಿ ವರ್ತಿಸುವುದು; ತನ್ಮೂಲಕ, ಅತ್ಯಂತ ತುರ್ತಾಗಿರುವ ರಾಷ್ಟ್ರೀಯ ಸಂಶೋಧನಾ ಚರ್ಚಾವಿಷಯಗಳ ಕುರಿತಾಗಿ ಸಂಶೋಧನಾ ವಿದ್ವಾಂಸರು ಏಕಪ್ರಕಾರವಾಗಿ ಅರಿವುಳ್ಳವರಾಗಿರುವಂತೆ ನೋಡಿಕೊಳ್ಳುವುದು. ಇದರಿಂದಾಗಿ, ಸಂಶೋಧನಾ ಕ್ಷೇತ್ರದಲ್ಲಿ ಇತ್ತೀಚಿನ ಪ್ರಮುಖ ಪ್ರಗತಿಗಳ ಕುರಿತು ನೀತಿನಿರೂಪಕರು ನಿರಂತರವಾಗಿ ಅರಿಯುವುದಕ್ಕೆ ಸಾಧ್ಯವಾಗುತ್ತದೆ. ಅಷ್ಟೇ ಅಲ್ಲ, ಸದರಿ ಪ್ರಗತಿಗಳು ಕಾರ್ಯನೀತಿಯಲ್ಲಿ ಪ್ರಶಸ್ತವಾಗಿ ಅಸ್ತಿತ್ವಕ್ಕೆ ಬರುವಂತಾಗಲು ಮತ್ತು/ಅಥವಾ ಅನುಷ್ಠಾನಗೊಳ್ಳುವಂತಾಗಲು ಅದು ಅನುವುಮಾಡಿಕೊಡುತ್ತದೆ;

(ಡಿ) ಮಹೋನ್ನತವೆನಿಸಿದ ಸಂಶೋಧನೆ ಮತ್ತು ಅದರ ಪ್ರಗತಿಯನ್ನು ಗುರುತಿಸುವುದು.

18. ಉನ್ನತ ಶಿಕ್ಷಣದ ನಿಯಂತ್ರಕ ವ್ಯವಸ್ಥೆಯಲ್ಲಿ ರೂಪಾಂತರ

18.1 ಉನ್ನತ ಶಿಕ್ಷಣದ ನಿಯಂತ್ರಣವೆಂಬುದು ದಶಕಗಳಿಂದಲೂ ತೀರಾ ನಯನಾಜೂಕಿಲ್ಲದ ಬಾಬತ್ತಾಗಿಬಿಟ್ಟಿದ್ದು, ನಿಯಂತ್ರಣಕ್ಕೆ ಅತೀವ ಯತ್ನಗಳಾಗಿದ್ದರೂ ಪರಿಣಾಮ ಮಾತ್ರ ನಗಣ್ಯವೆನಿಸುವ ಮಟ್ಟದಲ್ಲಿದೆ. ಸದರಿ ನಿಯಂತ್ರಕ ವ್ಯವಸ್ಥೆಯು ಹೊಂದಿರುವ ಯಾಂತ್ರಿಕ ಮತ್ತು ನಿರುತ್ಸಾಹಗೊಳಿಸುವ ಸ್ವರೂಪದಲ್ಲಿ ತೀರಾ ಮೂಲಭೂತವೆನಿಸುವ ಸಮಸ್ಯೆಗಳು ವ್ಯಾಪಿಸಿಬಿಟ್ಟಿವೆ; ಅಧಿಕಾರವೆಂಬುದು ಕೆಲವೇ ವರ್ಗಗಳ/ಕೂಟಗಳ ಮುಷ್ಟಿಯಲ್ಲಿ ಸಿಲುಕಿಬಿಟ್ಟಿರುವುದು, ಈ ವರ್ಗಗಳು/ಕೂಟಗಳ ನಡುವೆ ಹಿತಾಸಕ್ತಿಗಳ ತಿಕ್ಕಾಟ ನಡೆಯುತ್ತಿರುವುದು ಮತ್ತು ತತ್ಪರಿಣಾಮವಾಗಿ ಉತ್ತರದಾಯಿತ್ವದ ಕೊರತೆಯಿರುವುದು ಈ ಸಮಸ್ಯೆಗಳಲ್ಲಿ ಸೇರಿವೆ. ಆದ್ದರಿಂದ, ಉನ್ನತ ಶಿಕ್ಷಣ ವಲಯವು ಪುನಃ ಶಕ್ತಿ ತುಂಬಿಕೊಂಡು ಸಮೃದ್ಧವಾಗಿ ಏಳಿಗೆಯಾಗುವಂತಾಗಲು ಸದರಿ ನಿಯಂತ್ರಕ ವ್ಯವಸ್ಥೆಯನ್ನು ಸಂಪೂರ್ಣವಾಗಿ ದುರಸ್ತಿ ಮಾಡಬೇಕಾದ ಅಗತ್ಯವಿದೆ.

18.2 ಮೇಲೆ ಉಲ್ಲೇಖಿಸಲಾದ ಸಮಸ್ಯೆಗಳೆಡೆಗೆ ಗಮನ ಹರಿಸಲೆಂದು, ನಿಯಂತ್ರಣ, ಮಾನ್ಯತೆ, ಧನಸಹಾಯ ಮತ್ತು ಶೈಕ್ಷಣಿಕ ಮಾನದಂಡದ ನಿಗದಿಯಂಥ ವಿಭಿನ್ನ ಚಟುವಟಿಕೆಗಳನ್ನು ವಿಶಿಷ್ಟ, ಸ್ವತಂತ್ರ ಮತ್ತು ವಿಧಿವತ್ತಾದ ಅಧಿಕಾರ ಹೊಂದಿದ ಆಡಳಿತ ವರ್ಗಗಳು ನಡೆಸುವಂತಾಗುವುದನ್ನು ಉನ್ನತ ಶಿಕ್ಷಣದ ನಿಯಂತ್ರಕ ವ್ಯವಸ್ಥೆಯು ಖಾತ್ರಿಪಡಿಸಲಿದೆ. ವ್ಯವಸ್ಥೆಯಲ್ಲಿ ಇತಿಮಿತಿಗಳು/ನಿರ್ಬಂಧಗಳನ್ನು ಸೃಷ್ಟಿಸಲು, ಹಿತಾಸಕ್ತಿಯ ತಿಕ್ಕಾಟಗಳನ್ನು ತಗ್ಗಿಸಲು ಹಾಗೂ ಒಂದೇ ವರ್ಗ/ಕೂಟದಲ್ಲಿ ಅಧಿಕಾರವು ಕೇಂದ್ರೀಕೃತವಾಗುವುದನ್ನು ಇಲ್ಲವಾಗಿಸಲು ಇದು ಅತ್ಯಾವಶ್ಯಕ ಎಂದು ಪರಿಗಣಿಸಲ್ಪಟ್ಟಿದೆ. ಈ ನಾಲ್ಕು ಅತ್ಯಾವಶ್ಯಕ ಚಟುವಟಿಕೆಗಳನ್ನು ನಿರ್ವಹಿಸುತ್ತಿರುವ ನಾಲ್ಕು ಸಾಂಸ್ಥಿಕ ಸ್ವರೂಪಗಳು ಸ್ವತಂತ್ರವಾಗಿ ಕಾರ್ಯನಿರ್ವಹಿಸುವಂತಾಗುವುದನ್ನು ಖಾತ್ರಿಪಡಿಸಲು ಮತ್ತು ಅದೇ ವೇಳೆಗೆ ಸರ್ವಸಮಾನ ಗುರಿಗಳೆಡೆಗೆ ಪರಸ್ಪರ ಜತೆಯಾಗಿ ಕಾರ್ಯ ನಿರ್ವಹಿಸುವಂತಾಗಲು, ಭಾರತೀಯ ಉನ್ನತ ಶಿಕ್ಷಣ ಆಯೋಗ (ಎಚ್.ಇ.ಸಿ.ಐ.) ಎಂಬ ಆಶ್ರಯಸಂಸ್ಥೆಯ ವ್ಯಾಪ್ತಿಯೊಳಗೆ ಈ ನಾಲ್ಕು ಸಾಂಸ್ಥಿಕ ಸ್ವರೂಪಗಳನ್ನು ನಾಲ್ಕು ಸ್ವತಂತ್ರ ಆಧಾರಸ್ತಂಭಗಳಾಗಿ ಸ್ಥಾಪಿಸಲಾಗುವುದು.

18.3 ರಾಷ್ಟ್ರೀಯ ಉನ್ನತ ಶಿಕ್ಷಣ ನಿಯಂತ್ರಕ ಮಂಡಳಿ (ಎನ್.ಎಚ್.ಇ.ಆರ್.ಸಿ.) ಎಂಬುದು ಎಚ್.ಇ.ಸಿ.ಐ. ಆಶ್ರಯಸಂಸ್ಥೆಯ ಮೊದಲ ಆಧಾರಸ್ತಂಭವಾಗಲಿದೆ. ಉಪಾಧ್ಯಾಯರ ಶಿಕ್ಷಣವನ್ನು ಒಳಗೊಂಡಿರುವ, ವೈದ್ಯಕೀಯ ಮತ್ತು ಕಾನೂನು ಶಿಕ್ಷಣವನ್ನು ಹೊರಗಿಟ್ಟಿರುವ ಉನ್ನತ ಶಿಕ್ಷಣ ವಲಯಕ್ಕೆ ಸಂಬಂಧಿಸಿದ ಒಂದು ಸರ್ವಸಮಾನ, ಸ್ವತಂತ್ರ ನಿಯಂತ್ರಕನಾಗಿ ಇದು ಕಾರ್ಯನಿವಹಿಸಲಿದೆ. ತನ್ಮೂಲಕ, ಅನಗತ್ಯ ಪುನರಾವರ್ತನೆ ಇಲ್ಲವಾಗುತ್ತದೆ ಹಾಗೂ ಪ್ರಸ್ತುತ ಅಸ್ತಿತ್ವದಲ್ಲಿರುವ ವಿವಿಧ ನಿಯಂತ್ರಕ ಸಂಸ್ಥೆಗಳು ಕೈಗೊಳ್ಳುವ ನಿಯಂತ್ರಕ ಪ್ರಯತ್ನಗಳ ಬೇರ್ಪಡಿಕೆ ಕೈಗೂಡುತ್ತದೆ. ಈ ಸ್ವತಂತ್ರ ನಿಯಂತ್ರಣವನ್ನು ಸಾಧ್ಯವಾಗಿಸಲು ಅಸ್ತಿತ್ವದಲ್ಲಿರುವ ಕಾಯಿದೆಗಳನ್ನು ಮರುಪರಿಶೀಲಿಸುವ ಮತ್ತು ರದ್ದುಪಡಿಸುವ ಹಾಗೂ ಅಸ್ತಿತ್ವದಲ್ಲಿರುವ ವಿವಿಧ ನಿಯಂತ್ರಕ ಸಂಸ್ಥೆಗಳಿಗೆ ಹೊಸರೂಪ ಕೊಡುವ ಅಗತ್ಯವಿದೆ. 'ಸಹನೀಯವಾಗಿರುವ ಆದರೆ ಬಿಗಿಯಾಗಿರುವ' ಮತ್ತು ಸುಗಮವಾಗಿರುವ ವಿಧಾನವೊಂದರಲ್ಲಿ ನಿಯಂತ್ರಿಸಲೆಂದು ಎನ್.ಎಚ್.ಇ.ಆರ್.ಸಿಯನ್ನು ಸ್ಥಾಪಿಸಲಾಗುವುದು; ಅಂದರೆ, ಕೆಲವೊಂದು ಮುಖ್ಯವಾದ ವಿಷಯಗಳನ್ನು, ಅದರಲ್ಲೂ ನಿರ್ದಿಷ್ಟವಾಗಿ ವಿತ್ತೀಯ ಸಾಚಾತನ, ಉತ್ತಮ ಆಡಳಿತ, ಎಲ್ಲ ಹಣಕಾಸು ಚಟುವಟಿಕೆಗಳು, ಲೆಕ್ಕ ಪರಿಶೋಧನೆಗಳು, ಕಾರ್ಯವಿಧಾನಗಳನ್ನು ಆನ್‌ಲೈನ್‌ಮತ್ತು ಆಫ್‌ಲೈನ್‌ನಲ್ಲಿ ಸಂಪೂರ್ಣವಾಗಿ ಬಹಿರಂಗವಾಗಿ ಸ್ವಯಂ-ಘೋಷಿಸುವಿಕೆ, ಮೂಲಸೌಕರ್ಯ, ಶಿಕ್ಷಕವರ್ಗ/ಸಿಬ್ಬಂದಿ, ವ್ಯಾಸಂಗ ಸರಣಿ, ಮತ್ತು ಶೈಕ್ಷಣಿಕ ಫಲಿತಾಂಶಗಳಂಥ ಸಂಗತಿಗಳನ್ನು ಅತ್ಯಂತ ಪರಿಣಾಮಕಾರಿಯಾಗಿ ನಿಯಂತ್ರಿಸಲಾಗುವುದು. ಎನ್.ಎಚ್.ಇ.ಆರ್.ಸಿ. ವತಿಯಿಂದ ನಿರ್ವಹಿಸಲ್ಪಡುವ ಸಾರ್ವಜನಿಕ ಜಾಲತಾಣವೊಂದರಲ್ಲಿ ಹಾಗೂ ಆಯಾ ಸಂಸ್ಥೆಗಳ ಜಾಲತಾಣಗಳಲ್ಲಿ ಎಲ್ಲ ಉನ್ನತ ಶಿಕ್ಷಣ ಸಂಸ್ಥೆಗಳು ಈ ಮಾಹಿತಿಯನ್ನು ಲಭ್ಯವಾಗಿಸಬೇಕು, ಪರಿಷ್ಕರಿಸುತ್ತಿರಬೇಕು ಹಾಗೂ ಆ ಮಾಹಿತಿ ನಿಖರವಾಗಿರಬೇಕು. ಸಾರ್ವಜನಿಕ ಕಾರ್ಯಕ್ಷೇತ್ರದಲ್ಲಿ ಪ್ರಕಟಿಸಲಾದ ಮಾಹಿತಿಯನ್ನನುಸರಿಸಿ ಮಧ್ಯಸ್ಥಗಾರರು ಮತ್ತು ಇತರರಿಂದ ಹೊಮ್ಮುವ ಯಾವುದೇ ದೂರುಗಳು ಅಥವಾ ಬೇಗುದಿಗಳ ವಿಷಯದಲ್ಲಿ ಎನ್.ಎಚ್.ಇ.ಆರ್.ಸಿ. ನ್ಯಾಯನಿರ್ಣಯ ಮಾಡುತ್ತದೆ. ನಿಯತ ಕಾಲಾವಧಿಗಳಲ್ಲಿ ಮೌಲ್ಯಯುತ ಅಭಿಪ್ರಾಯದ ಒಳಹರಿವನ್ನು ಖಾತ್ರಿಪಡಿಸಿಕೊಳ್ಳಲು, ಹಿಮ್ಮಾಹಿತಿ ನೀಡುವಂತೆ ಪ್ರತಿಯೊಂದು ಉನ್ನತ ಶಿಕ್ಷಣ ಸಂಸ್ಥೆಯಲ್ಲಿರುವ ವಿಶೇಷ-ಚೇತನ ವಿದ್ಯಾರ್ಥಿಗಳೂ ಸೇರಿದಂತೆ, ಯಾದೃಚ್ಛಿಕವಾಗಿ ಆಯ್ಕೆಮಾಡಲಾದ ವಿದ್ಯಾರ್ಥಿಗಳನ್ನು ಆನ್‌ಲೈನ್ ಮೂಲಕ ಕೋರಲಾಗುವುದು.

18.4 ಅಧಿಕೃತ ಮನ್ನಣೆ ಅಥವಾ ಮಾನ್ಯತೆ ಅಥವಾ ದೃಢೀಕರಣ ನೀಡುವ ಪ್ರಕ್ರಿಯೆಯು ಇಂಥ ನಿಯಂತ್ರಣವನ್ನು ಅನುವುಗೊಳಿಸಲು ಇರುವ ಪ್ರಧಾನ ಕಾರ್ಯವಿಧಾನವಾಗಲಿದೆ. ಆದ್ದರಿಂದ, ಎಚ್.ಇ.ಸಿ..ಐ. ಆಶ್ರಯಸಂಸ್ಥೆಯ ಎರಡನೇ ಆಧಾರಸ್ತಂಭವು ರಾಷ್ಟ್ರೀಯ ಮಾನ್ಯತಾ ಮಂಡಳಿ (ಎನ್.ಎ.ಸಿ.) ಎಂದು ಕರೆಯಲಾಗುವ ಒಂದು 'ಅತ್ಯುನ್ನತ ಮಾನ್ಯತಾ ಘಟಕ'ವಾಗಿರುತ್ತದೆ. ಮೂಲಭೂತ ರೂಢಮಾದರಿಗಳು, ಸಾರ್ವಜನಿಕ ಸ್ವಯಂ-ಅನಾವರಣ, ಉತ್ತಮ ಆಡಳಿತ ಮತ್ತು ಫಲಿತಾಂಶಗಳನ್ನು ಪ್ರಮುಖವಾಗಿ ಆಧರಿಸಿ ಸಂಸ್ಥೆಗಳಿಗೆ ಮಾನ್ಯತೆಯನ್ನು ನೀಡಲಾಗುತ್ತದೆ. ಎನ್.ಎ.ಸಿ. ಮೇಲುಸ್ತುವಾರಿ ಹಾಗೂ ಪರಿಶೀಲನೆಗೆ ಒಳಪಟ್ಟಿರುವ ಮಾನ್ಯತಾ ಸಂಸ್ಥೆಗಳ ಒಂದು ಸ್ವತಂತ್ರ ವ್ಯವಸ್ಥೆಯೊಂದು ಇದನ್ನು ಕೈಗೊಳ್ಳುತ್ತದೆ. ಒಂದು ಅಂಗೀಕೃತ ಮಾನ್ಯತಾ ಸಂಸ್ಥೆಯಾಗಿ ಕೆಲಸ ಮಾಡುವ ಕಾರ್ಯಭಾರವನ್ನು ಸೂಕ್ತ ಸಂಖ್ಯೆಯ ಸಂಸ್ಥೆಗಳಿಗೆ ಎನ್.ಎ.ಸಿ. ಪ್ರದಾನಿಸುತ್ತದೆ. ಆ ಅಲ್ಪಾವಧಿಯಲ್ಲೇ, ಶ್ರೇಣೀಕೃತ ಮಾನ್ಯತೆಯ ಸದೃಢ ವ್ಯವಸ್ಥೆಯೊಂದನ್ನು ಸ್ಥಾಪಿಸಲಾಗುತ್ತದೆ. ಗುಣಮಟ್ಟ, ಸ್ವಯಮಾಡಳಿತ ಮತ್ತು ಸ್ವಾಯತ್ತತೆಯ ನಿಗದಿತ ಮಟ್ಟಗಳನ್ನು ಸಾಧಿಸಲು ಎಲ್ಲ ಉನ್ನತ ಶಿಕ್ಷಣ ಸಂಸ್ಥೆಗಳಿಗಾಗಿ ಹಂತಹಂತವಾಗಿಸಿದ ಮಾನದಂಡಗಳನ್ನು ಈ ವ್ಯವಸ್ಥೆಯು ನಿಗದಿಪಡಿಸುತ್ತದೆ. ಇದಕ್ಕೆ ಪ್ರತಿಯಾಗಿ, ಎಲ್ಲ ಉನ್ನತ ಶಿಕ್ಷಣ ಸಂಸ್ಥೆಗಳು ತಂತಮ್ಮ ಸಾಂಸ್ಥಿಕ ಅಭಿವೃದ್ಧಿ ಯೋಜನೆಗಳ (ಐ.ಡಿ.ಪಿ.ಗಳ) ಮೂಲಕ ಮುಂದಿನ 15 ವರ್ಷಗಳವರೆಗೆ ಮಾನ್ಯತೆಯ ಉನ್ನತ ಮಟ್ಟವನ್ನು ಮುಟ್ಟುವ ಗುರಿಯಿಟ್ಟುಕೊಳ್ಳುತ್ತವೆ ಮತ್ತು ತನ್ಮೂಲಕ ಸ್ವಯಮಾಡಳಿತದ ಪದವಿ ಪ್ರದಾನಿಸುವ ಸಂಸ್ಥೆಗಳು/ತಂಡಗಳಾಗಿ ಕಾರ್ಯನಿರ್ವಹಿಸುವ ಗುರಿಯಿಟ್ಟುಕೊಳ್ಳುತ್ತವೆ. ಅಂತಿಮವಾಗಿ, ಚಾಲ್ತಿಯಲ್ಲಿರುವ ಜಾಗತಿಕ ಪರಿಪಾಠದ ಅನುಸಾರ, ಮಾನ್ಯತೆ ನೀಡುವಿಕೆಯು ಒಂದು ಜೋಡಿಪ್ರಕ್ರಿಯೆ ಆಗುತ್ತದೆ.

18.5 ಉನ್ನತ ಶಿಕ್ಷಣ ಅನುದಾನ ಮಂಡಳಿ (ಎಚ್.ಇ.ಜಿ.ಸಿ.)ಯು ಎಚ್.ಇ.ಸಿ.ಐ.ನ ಮೂರನೇ ಆಧಾರಸ್ತಂಭವಾಗಿದ್ದು, ಸಂಸ್ಥೆಗಳು ಸಿದ್ಧಪಡಿಸಿದ ಸಾಂಸ್ಥಿಕ ಅಭಿವೃದ್ಧಿ ಯೋಜನೆಗಳು ಹಾಗೂ ಅವುಗಳ ಅನುಷ್ಠಾನದಿಂದಾದ ಪ್ರಗತಿಯನ್ನೊಳಗೊಂಡಂತೆ ಪಾರದರ್ಶಕ ಮಾನದಂಡವನ್ನು ಆಧರಿಸಿ ಉನ್ನತ ಶಿಕ್ಷಣಕ್ಕೆ ಧನಸಹಾಯ ಮಾಡುವ ಮತ್ತು ಅಗತ್ಯ ದ್ರವ್ಯ ಪೂರೈಸುವ ಚಟುವಟಿಕೆಯನ್ನು ನಿರ್ವಹಿಸುತ್ತದೆ. ಗಮನ ಕೇಂದ್ರೀಕರಿಸಬೇಕಿರುವ ಹೊಸ ಅಧ್ಯಯನ ವಿಭಾಗಗಳ ಆರಂಭಕ್ಕೆ ಹಾಗೂ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿನ ಎಲ್ಲ ವಿದ್ಯಾವಿಭಾಗಗಳು, ಕ್ಷೇತ್ರಗಳಲ್ಲಿ ಗುಣಮಟ್ಟದ ಕಾರ್ಯಕ್ರಮ ಕೊಡುಗೆಗಳ ವಿಸ್ತರಣೆಗೆ ವಿದ್ಯಾರ್ಥಿ ವೇತನಗಳು ಹಾಗೂ ಅಭಿವೃದ್ಧಿ ಸಂಬಂಧಿತ ಸಹಾಯಧನಗಳನ್ನು ವಿತರಿಸುವ ಕಾರ್ಯಭಾರವನ್ನು ಎಚ್.ಇ.ಜಿ.ಸಿ.ಗೆ ವಹಿಸಲಾಗುತ್ತದೆ.

18.6 ಸಾರ್ವತ್ರಿಕ ಶಿಕ್ಷಣ ಮಂಡಳಿ (ಜಿ.ಇ.ಸಿ)ಯು ಎಚ್.ಇ.ಸಿ.ಐ.ನ ನಾಲ್ಕನೇ ಆಧಾರಸ್ತಂಭವಾಗಿದ್ದು, 'ಪದವೀಧರ ವೈಶಿಷ್ಟ್ಯಗಳು' ಎಂದು ಉಲ್ಲೇಖಿಸಲಾಗುವ, ಉನ್ನತ ಶಿಕ್ಷಣ ಕಾರ್ಯಕ್ರಮಗಳ ನಿರೀಕ್ಷಿತ ಕಲಿಕಾ ಫಲಿತಾಂಶಗಳನ್ನು ರೂಪಿಸುತ್ತದೆ. ಜಿ.ಇ.ಸಿಯಿಂದ ಸೂತ್ರೀಕರಿಸಲ್ಪಡುವ ರಾಷ್ಟ್ರೀಯ ಉನ್ನತ ಶಿಕ್ಷಣ ಅರ್ಹತಾ ಚೌಕಟ್ಟು (ಎನ್.ಎಚ್.ಇ.ಕ್ಯೂ.ಎಫ್), ರಾಷ್ಟ್ರೀಯ ಕೌಶಲಗಳ ಅರ್ಹತಾ

ಚೌಕಟ್ಟಿನ (ಎನ್.ಎಸ್.ಕ್ಯೂ.ಎಫ್) ಜತೆಗೆ ಜೆನ್ನಾಗಿ ಹೊಂದಿಕೊಳ್ಳುವ ರೀತಿಯಲ್ಲಿರುತ್ತದೆ; ಉನ್ನತ ಶಿಕ್ಷಣದೊಳಗೆ ಔದ್ಯೋಗಿಕ ಶಿಕ್ಷಣವನ್ನು ಸಂಯೋಜಿಸುವ ಪ್ರಕ್ರಿಯೆಯನ್ನು ಸರಾಗವಾಗಿಸುವ ಉಪಕ್ರಮ ಇದಾಗಿದೆ. ಒಂದು ಪದವಿ/ಡಿಪ್ಲೊಮಾ/ಪ್ರಮಾಣಪತ್ರಕ್ಕೆ ದಾರಿಮಾಡಿಕೊಡುವ ಉನ್ನತ ಶಿಕ್ಷಣದ ಅರ್ಹತೆಗಳನ್ನು, ಇಂಥ ಕಲಿಕಾ ಫಲಿತಾಂಶಗಳ ಪರಿಭಾಷೆಯಲ್ಲಿ ಎನ್.ಎಚ್.ಇ.ಕ್ಯೂ.ಎಫ್ ವಿವರಿಸುತ್ತದೆ. ಇದರ ಜತೆಗೆ, ಹಣ ವರ್ಗಾವಣೆ, ಮೌಲ್ಯ ಸಮೀಕರಣ ಇತ್ಯಾದಿ ಬಾಬತ್ತುಗಳಿಗೆ ಸಂಬಂಧಿಸಿದಂತೆ ಕಾರ್ಯವನ್ನು ಸರಾಗವಾಗಿಸುವ ರೂಢಮಾದರಿಗಳನ್ನು ಎನ್.ಎಚ್.ಇ.ಕ್ಯೂ.ಎಫ್ ಮೂಲಕ ಜಿ.ಇ.ಸಿ. ನಿರೂಪಿಸುತ್ತದೆ. ವೈವಿಧ್ಯಮಯ ಸಾಮರ್ಥ್ಯವಿರುವ ಶಿಕ್ಷಣಾರ್ಥಿಗಳನ್ನು 21ನೇ ಶತಮಾನದ ಕೌಶಲಗಳೊಂದಿಗೆ ಸಜ್ಜುಗೊಳಿಸುವ ಗುರಿಯಿಟ್ಟುಕೊಂಡು, ವಿದ್ಯಾರ್ಥಿಗಳು ತಮ್ಮ ಶೈಕ್ಷಣಿಕ ಕಾರ್ಯಕ್ರಮಗಳ ಅವಧಿಯಲ್ಲಿ ದಕ್ಕಿಸಿಕೊಳ್ಳಬೇಕಾದ ನಿರ್ದಿಷ್ಟ ಕೌಶಲಗಳನ್ನು ಗುರುತಿಸಲು ಜಿ.ಇ.ಸಿ.ಗೆ ನಿರ್ದೇಶಿಸಲಾಗುತ್ತದೆ.

18.7 ಭಾರತೀಯ ಕೃಷಿ ಸಂಶೋಧನಾ ಮಂಡಳಿ (ಐ.ಸಿ.ಎ.ಆರ್), ಭಾರತೀಯ ಪಶುವೈದ್ಯ ಮಂಡಳಿ (ವಿ.ಸಿ.ಐ.), ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಮಂಡಳಿ (ಎನ್.ಸಿ.ಟಿ.ಇ.), ವಾಸ್ತುಶಿಲ್ಪ ಮಂಡಳಿ (ಸಿಒ.ಎ), ರಾಷ್ಟ್ರೀಯ ಔದ್ಯೋಗಿಕ ಶಿಕ್ಷಣ ಮತ್ತು ತರಬೇತಿ ಮಂಡಳಿ (ಎನ್.ಸಿ.ವಿ.ಇ.ಟಿ.) ಇವೇ ಮೊದಲಾದ ವೃತ್ತಿಪರ ಮಂಡಳಿಗಳು, ವೃತ್ತಿಪರ ಮಾನದಂಡವನ್ನು ನಿಗದಿಪಡಿಸುವ ಘಟಕಗಳಾಗಿ (ಪಿ.ಎಸ್.ಎಸ್.ಬಿ. ಗಳಾಗಿ) ಕಾರ್ಯನಿರ್ವಹಿಸುತ್ತವೆ. ಉನ್ನತ ಶಿಕ್ಷಣ ವ್ಯವಸ್ಥೆಯಲ್ಲಿ ಪ್ರಧಾನ ಪಾತ್ರ ವಹಿಸುವ ಈ ಘಟಕಗಳನ್ನು ಜಿ.ಇ.ಸಿ. ಯ ಸದಸ್ಯರಾಗುವಂತೆ ಆಹ್ವಾನಿಸಲಾಗುತ್ತದೆ. ಪಿ.ಎಸ್.ಎಸ್.ಬಿ. ಗಳಾಗಿ ಹೊಸದಾಗಿ ರೂಪಗೊಂಡ ನಂತರ ಈ ಘಟಕಗಳು ಪಠ್ಯಕ್ರಮಗಳನ್ನು ರಚಿಸುವ, ಶೈಕ್ಷಣಿಕ ಮಾನದಂಡಗಳನ್ನು ರೂಪಿಸುವ ಕಾರ್ಯಗಳನ್ನು ಮುಂದುವರಿಸುವುದರ ಜತೆಗೆ, ಜಿ.ಇ.ಸಿ. ಯ ಸದಸ್ಯರಾಗಿ ತಂತಮ್ಮ ಕಾರ್ಯಕ್ಷೇತ್ರ/ವಿದ್ಯಾವಿಭಾಗದ ಬೋಧನೆ, ಸಂಶೋಧನೆ ಮತ್ತು ವಿಸ್ತರಣಾ ಚಟುವಟಿಕೆಗಳ ನಡುವೆ ಅನ್ಯೋನ್ಯ ಸಂಬಂಧ ಕಲ್ಪಿಸುತ್ತವೆ. ಜಿ.ಇ.ಸಿ.ಯ ಸದಸ್ಯರಾಗಿ, ಈ ಘಟಕಗಳು ಪಠ್ಯಕ್ರಮದ ಚೌಕಟ್ಟನ್ನು ನಿರ್ದಿಷ್ಟಗೊಳಿಸುವಲ್ಲಿ ಅಥವಾ ಸ್ಪಷ್ಟವಾಗಿ ನಮೂದಿಸುವಲ್ಲಿ ನೆರವಾಗುತ್ತವೆ ಹಾಗೂ ಈ ಚೌಕಟ್ಟಿನ ವ್ಯಾಪ್ತಿಯೊಳಗೇ ಉನ್ನತ ಶಿಕ್ಷಣ ಸಂಸ್ಥೆಗಳು ತಮ್ಮದೇ ಆದ ಪಠ್ಯಕ್ರಮಗಳನ್ನು ಸಿದ್ಧಪಡಿಸಬಹುದಾಗಿರುತ್ತದೆ. ಈ ರೀತಿಯಾಗಿ, ಪಿ.ಎಸ್.ಎಸ್.ಬಿ.ಗಳು ತಾವು ಯಾವುದೇ ನಿಯಂತ್ರಕ ಪಾತ್ರವನ್ನು ಹೊಂದಿರದಿದ್ದರೂ, ಕಲಿಕೆ ಮತ್ತು ಅಭ್ಯಾಸದಂಥ ನಿರ್ದಿಷ್ಟ ಕ್ಷೇತ್ರಗಳಲ್ಲಿನ ಮಾನದಂಡಗಳು ಅಥವಾ ನಿರೀಕ್ಷೆಗಳನ್ನೂ ನಿಗದಿಪಡಿಸುತ್ತವೆ. ಇತರ ಪರಿಗಣನೆಗಳ ಪೈಕಿ, ಈ ಮಾನದಂಡಗಳಿಗೆ ತಂತಮ್ಮ ಶೈಕ್ಷಣಿಕ ಕಾರ್ಯಕ್ರಮಗಳು ಹೇಗೆ ಪ್ರತಿಸ್ಪಂದಿಸುತ್ತವೆ ಎಂಬುದನ್ನು ಎಲ್ಲಾ ಉನ್ನತ ಶಿಕ್ಷಣ ಸಂಸ್ಥೆಗಳು ನಿರ್ಧರಿಸುತ್ತವೆ ಮತ್ತು ಮಾನದಂಡವನ್ನು ನಿಗದಿಪಡಿಸುವ ಈ ಘಟಕಗಳು ಅಥವಾ ಪಿ.ಎಸ್.ಎಸ್.ಬಿ.ಗಳಿಂದ ಅಗತ್ಯಬಿದ್ದಲ್ಲಿ ಬೆಂಬಲಕ್ಕಾಗಿ ಕೈಚಾಚಲೂ ಅವು ಸಮರ್ಥವಾಗಿರುತ್ತವೆ.

18.8 ಇಂಥದೊಂದು ವ್ಯವಸ್ಥಾ ಸ್ವರೂಪವು, ವಿಭಿನ್ನ ಪಾತ್ರಗಳ ನಡುವಿನ ಹಿತಾಸಕ್ತಿಗಳ ತಿಕ್ಕಾಟಗಳನ್ನು ಕಿತ್ತೊಗೆಯುವ ಮೂಲಕ ಕ್ರಿಯಾತ್ಮಕ ಬೇರ್ಪಡಿಕೆ ಅಥವಾ ಕ್ರಿಯಾತ್ಮಕ ವಿಯೋಜನೆಯ ತತ್ತ್ವವನ್ನು ಖಾತ್ರಿಪಡಿಸುತ್ತದೆ. ಉನ್ನತ ಶಿಕ್ಷಣ ಸಂಸ್ಥೆಗಳ ಸಬಲೀಕರಣದ ಗುರಿ ಇಟ್ಟುಕೊಳ್ಳುವುದರ ಜತೆಜತೆಗೆ, ಕೆಲವೊಂದು ಪ್ರಮುಖ ಸಾರಭೂತ ವಿಷಯಗಳಿಗೆ ಸೂಕ್ತ ಗಮನ ನೀಡುವಂತಾಗುವುದನ್ನೂ ಅದು ಖಾತ್ರಿಪಡಿಸುತ್ತದೆ. ಹೊಣೆಗಾರಿಕೆ ಮತ್ತು ಉತ್ತರದಾಯಿತ್ವಗಳು ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಪರಂಪರಾಗತವಾಗಿ ಬರುತ್ತವೆ. ಇಂಥ ನಿರೀಕ್ಷೆಗಳ ವಿಷಯದಲ್ಲಿ ಸಾರ್ವಜನಿಕ ಮತ್ತು ಖಾಸಗಿ ವಲಯದ ಉನ್ನತ ಶಿಕ್ಷಣ ಸಂಸ್ಥೆಗಳ ನಡುವೆ ಯಾವುದೇ ಪ್ರತ್ಯೇಕತೆ ಅಥವಾ ವೈಲಕ್ಷಣ್ಯವನ್ನು ಮಾಡಲಾಗದು.

18.9 ಇಂಥದೊಂದು ರೂಪಾಂತರವಾಗಬೇಕೆಂದರೆ, ಅಸ್ತಿತ್ವದಲ್ಲಿರುವ ಸ್ವರೂಪಗಳು ಹಾಗೂ ಸಂಸ್ಥೆಗಳು ತಮ್ಮನ್ನು ಮರುರೂಪಣೆಗೆ ಒಡ್ಡಿಕೊಳ್ಳಬೇಕಾಗುತ್ತದೆ ಹಾಗೂ ಬಗೆಬಗೆಯ ವಿಕಸನಗಳಿಗೆ ಒಳಗಾಗಬೇಕಾಗುತ್ತದೆ. ಚಟುವಟಿಕೆಗಳ ಬೇರ್ಪಡಿಕೆ ಅಥವಾ ವಿಯೋಜನೆ ಎಂದರೆ, ಎಚ್.ಇ.ಸಿ.ಐ. ವ್ಯಾಪ್ತಿಯೊಳಗಿನ ಪ್ರತಿಯೊಂದು ಆಧಾರಸ್ತಂಭವೂ ಒಂದು ಹೊಸ, ಏಕಮಾತ್ರ ಪಾತ್ರವನ್ನು ವಹಿಸಿಕೊಳ್ಳುತ್ತದೆ ಎಂದರ್ಥ; ಹೊಸ ನಿಯಂತ್ರಕ ವ್ಯವಸ್ಥೆಯಲ್ಲಿ ಈ ಪಾತ್ರವು ಸುಸಂಬದ್ಧವೂ, ಅರ್ಥಪೂರ್ಣವೂ ಮತ್ತು ಪ್ರಮುಖವಾಗಿರುವಂಥದ್ದೂ ಆಗಿರುತ್ತದೆ.

18.10 ಎಲ್ಲ ಸ್ವತಂತ್ರ ಆಧಾರಸ್ತಂಭಗಳ ಕಾರ್ಯಚಟುವಟಿಕೆಗಳು, ಅಂದರೆ ನಿಯಂತ್ರಣ (ಎನ್.ಎಚ್.ಇ.ಆರ್.ಸಿ.), ಮಾನ್ಯತೆ ನೀಡುವಿಕೆ (ಎನ್.ಎ.ಸಿ.), ಧನಸಹಾಯ (ಎಚ್.ಇ.ಜಿ.ಸಿ.), ಶೈಕ್ಷಣಿಕ ಮಾನದಂಡವನ್ನು ನಿಗದಿಪಡಿಸುವಿಕೆ (ಜಿ.ಇ.ಸಿ.) ಮೊದಲಾದ ಚಟುವಟಿಕೆಗಳಿಗೆ ಹಾಗೂ ಸ್ವತಃ ಎಚ್.ಇ.ಸಿ.ಐ. ಯಂಥ ಸ್ವಯಮಾಧಿಕಾರದ ಆಶ್ರಯಸಂಸ್ಥೆಗೆ ಪಾರದರ್ಶಕವಾದ ಸಾರ್ವಜನಿಕ ಅನಾವರಣವೇ ತಳಹದಿಯಾಗಿದೆ, ಮತ್ತು ಈ ಘಟಕಗಳು ತಂತಮ್ಮ ಕಾರ್ಯದಲ್ಲಿ ದಕ್ಷತೆ ಮತ್ತು ಪಾರದರ್ಶಕತೆಯನ್ನು ಖಾತ್ರಿಪಡಿಸುವ ನಿಟ್ಟಿನಲ್ಲಿ ಮಾನವ ಮಧ್ಯಸ್ಥಿಕೆಯನ್ನು ತಗ್ಗಿಸಲೆಂದು ಅಥವಾ ಒಂದು ಸಂಪರ್ಕಸಾಧನವಾಗಿ ಮಾನವ ಬಳಕೆಯನ್ನು ತಗ್ಗಿಸಲೆಂದು ತಂತ್ರಜ್ಞಾನವನ್ನು ವ್ಯಾಪಕವಾಗಿ ಬಳಸುತ್ತವೆ. ಅಂದರೆ, ತಂತ್ರಜ್ಞಾನವನ್ನು ಬಳಸಿಕೊಂಡು ಒಂದು ಮುಖರಹಿತ ಹಾಗೂ ಪಾರದರ್ಶಕ ನಿಯಂತ್ರಕ ಮಧ್ಯಸ್ಥಿಕೆಯನ್ನು ಸಜ್ಜುಗೊಳಿಸುವುದು ಇಲ್ಲಿನ ಮೂಲಾಧಾರ ತತ್ತ್ವವಾಗಿದೆ. ಆದೇಶಿಸಲಾದ ಮಾಹಿತಿಯ ಬದಲಿಗೆ ತಪ್ಪುಮಾಹಿತಿಯನ್ನು

ಹೊರಗೆಡಹಿದ್ದಕ್ಕಾಗಿ ವಿಧಿಸಲಾಗುವ ಜುಲ್ಮಾನೆಗಳೂ ಸೇರಿದಂತೆ, ಬಿಗಿಯಾದ ಕ್ರಮದೊಂದಿಗಿನ ಕಟ್ಟುನಿಟ್ಟಾದ ಅನುಸರಣಾ ಕ್ರಮಗಳನ್ನು ಖಾತ್ರಿಪಡಿಸಲಾಗುವುದು; ಇದರಿಂದಾಗಿ ಉನ್ನತ ಶಿಕ್ಷಣ ಸಂಸ್ಥೆಗಳು ಮೂಲಭೂತ ಕನಿಷ್ಠ ರೂಢಮಾದರಿಗಳು ಹಾಗೂ ಮಾನದಂಡಗಳಿಗೆ ಅನುಗುಣವಾಗಿ ಇರುವಂತಾಗುತ್ತದೆ. ಈಗಾಗಲೇ ಉಲ್ಲೇಖಿಸಲಾಗಿರುವ ನಾಲ್ಕು ಆಧಾರಸ್ತಂಭಗಳ ನಡುವಿನ ತಕರಾರುಗಳನ್ನು, ಅವುಗಳ ಆಶ್ರಯಸಂಸ್ಥೆಯಾಗಿರುವ ಎಚ್.ಇ.ಸಿ.ಐ. ಸ್ವತಃ ಪರಿಹರಿಸುತ್ತದೆ. ವ್ಯಾಪ್ತಿಯೊಳಗಿನ ಪ್ರತಿಯೊಂದು ಆಧಾರಸ್ತಂಭವೂ ಒಂದು ಸ್ವತಂತ್ರ ಘಟಕವಾಗಿದ್ದು ನಾಲ್ವರು ಸದಸ್ಯರನ್ನು ಒಳಗೊಂಡಿರುತ್ತದೆ; ಈ ವ್ಯಕ್ತಿಗಳು ಸುಸಂಬದ್ಧ ಕ್ಷೇತ್ರಗಳಲ್ಲಿನ ಉನ್ನತ ಪರಿಣತಿಯ ಜತೆಗೆ, ಸಾರ್ವಜನಿಕ ಸೇವೆಯಲ್ಲಿ ಪ್ರಾಮಾಣಿಕತೆ, ಬದ್ಧತೆ ಹಾಗೂ ಪ್ರಮಾಣೀಕರಿಸಲ್ಪಟ್ಟ ಸಾಧನೆಯ ದಾಖಲೆಯನ್ನು ಹೊಂದಿರುತ್ತಾರೆ. ಸ್ವತಃ ಒಂದು ಪುಟ್ಟ, ಸ್ವತಂತ್ರ ಘಟಕವಾಗಿರುವ ಎಚ್.ಇ.ಸಿ.ಐ, ಉನ್ನತ ಶಿಕ್ಷಣದಲ್ಲಿನ ಶ್ರೇಷ್ಠ ಹಾಗೂ ಸಾರ್ವಜನಿಕ ಸೇವಾಮನೋಧರ್ಮದ ಪರಿಣತರನ್ನು ಒಳಗೊಂಡಿದ್ದು, ಎಚ್.ಇ.ಸಿ.ಐ.ನ ಋಜುತ್ವ/ಸಮಗ್ರತೆ ಹಾಗೂ ಪರಿಣಾಮಕಾರಿ ಕಾರ್ಯನಿರ್ವಹಣೆಯ ಮೇಲುಸ್ತುವಾರಿ ಮತ್ತು ಪರಿಶೀಲನೆಗೆ ಸಮರ್ಪಿಸಿಕೊಳ್ಳುತ್ತದೆ. ನ್ಯಾಯನಿರ್ಣಯ ಸೇರಿದಂತೆ ಎಚ್.ಇ.ಸಿ.ಐ.ನ ಎಲ್ಲ ಕಾರ್ಯಚಟುವಟಿಕೆಗಳನ್ನು ನಿರ್ವಹಿಸಲು ಅದರ ವ್ಯಾಪ್ತಿಯೊಳಗೆ ಯಥೋಚಿತ ಕಾರ್ಯವಿಧಾನಗಳನ್ನು ಸೃಷ್ಟಿಮಾಡಲಾಗುತ್ತದೆ.

18.11 ಉತ್ತಮ ಗುಣಮಟ್ಟದ ಹೊಸ ಉನ್ನತ ಶಿಕ್ಷಣ ಸಂಸ್ಥೆಗಳ ಸ್ಥಾಪನೆಯನ್ನು ಕೂಡಾ ನಿಯಂತ್ರಕ ಪ್ರಭುತ್ವವು ಹೆಚ್ಚು ಸರಾಗವಾಗಿಸುತ್ತದೆ. ಇಂಥ ಸಂಸ್ಥೆಗಳು ಸಾರ್ವಜನಿಕ ಸೇವೆಯ ಧೈರ್ಯೋತ್ಸಾಹದೊಂದಿಗೆ ಮತ್ತು ಸುದೀರ್ಘ ಅವಧಿಯವರೆಗಿನ ಸ್ಥಿರತೆ-ಸುಭದ್ರತೆಗಾಗಿ ಯಥೋಚಿತ ಆರ್ಥಿಕ ಬೆಂಬಲದೊಂದಿಗೆ ಸ್ಥಾಪನೆಗೊಳ್ಳುವಂತಾಗುವಂತಾಗುವುದನ್ನು ಕೂಡ ಈ ಸಂದರ್ಭದಲ್ಲಿ ಮಹತ್ತರ ಪರಿಣಾಮಕಾರಿತ್ವದೊಂದಿಗೆ ಖಾತ್ರಿಪಡಿಸಿಕೊಳ್ಳಲಾಗುತ್ತದೆ. ಅಸಾಧಾರಣವಾದ ರೀತಿಯಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಉನ್ನತ ಶಿಕ್ಷಣ ಸಂಸ್ಥೆಗಳು ತಮ್ಮ ಶಾಖೆಗಳನ್ನು ವಿಸ್ತರಿಸಿಕೊಳ್ಳುವಂತಾಗುವಲ್ಲಿ ಹಾಗೂ ತನ್ಮೂಲಕ ಹೆಚ್ಚೆಚ್ಚು ವಿದ್ಯಾವಿಭಾಗಗಳು, ಬೋಧನ ಕಾರ್ಯಕ್ರಮಗಳನ್ನು ಶುರುಮಾಡಿ ವಿದ್ಯಾರ್ಥಿಗಳು ಹಾಗೂ ಬೋಧಕವೃಂದದ ಸಂಖ್ಯೆಯನ್ನು ಮಹತ್ತರವಾಗಿ ಹೆಚ್ಚಿಸಿಕೊಳ್ಳುವಂತಾಗುವಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನೆರವಾಗುತ್ತವೆ. ಶ್ರೇಷ್ಠ ಗುಣಮಟ್ಟದ ಉನ್ನತ ಶಿಕ್ಷಣಕ್ಕಿರುವ ಪ್ರವೇಶಲಭ್ಯತೆಯನ್ನು ಮತ್ತಷ್ಟು ವಿಸ್ತರಿಸುವ ಗುರಿಯೊಂದಿಗೆ, ಉನ್ನತ ಶಿಕ್ಷಣ ಸಂಸ್ಥೆಗಳಿಗಾಗಿನ ಸಾರ್ವಜನಿಕ ಲೋಕೋಪಾರಿ ಸಹಭಾಗಿತ್ವದ ಮಾದರಿಗಳಿಗೆ ಮಾರ್ಗದರ್ಶಿಯಾಗಲು ಕೂಡ ಇಲ್ಲಿ ಸಾಧ್ಯವಿದೆ.

ಶಿಕ್ಷಣದ ವಾಣಿಜ್ಯೀಕರಣದ ನಿಗ್ರಹ

18.12 ಪರಿಮಿತಿಗಳು/ನಿರ್ಬಂಧಗಳೊಂದಿಗಿನ ಅನೇಕ ಕಾರ್ಯವಿಧಾನಗಳು ಉನ್ನತ ಶಿಕ್ಷಣದ ವಾಣಿಜ್ಯೀಕರಣದೊಂದಿಗೆ ಸೆಣಸುತ್ತವೆ ಮತ್ತು ಆ ಪರಿಪಾಠವನ್ನು ನಿಲ್ಲಿಸುತ್ತವೆ. ಇದು ನಿಯಂತ್ರಕ ವ್ಯವಸ್ಥೆಯ ಒಂದು ಪ್ರಮುಖ ಆದ್ಯತೆಯಾಗಿರುತ್ತದೆ. ಎಲ್ಲ ಶೈಕ್ಷಣಿಕ ಸಂಸ್ಥೆಗಳು ಲೆಕ್ಕಪರಿಶೋಧನೆಯ ಏಕರೂಪದ ಮಾನದಂಡಗಳನ್ನು ಪಾಲಿಸಬೇಕಾಗಿರುತ್ತದೆ ತಾನು 'ಲಾಭಗಳಿಕೆಯ ಉದ್ದೇಶವಿಲ್ಲದ' ಒಂದು ಅಸ್ತಿತ್ವ ಎಂಬ ಸಂಗತಿಯನ್ನು ಆ ಸಂಸ್ಥೆಗಳು ಹೊರಹಾಕಬೇಕಾಗುತ್ತದೆ. ಒಂದು ವೇಳೆ ಮಿಗುತಾಯಗಳೇನಾದರೂ ಕಂಡುಬಂದಲ್ಲಿ, ಶೈಕ್ಷಣಿಕ ವಲಯದಲ್ಲೇ ಅದನ್ನು ಮರುಹೂಡಿಕೆ ಮಾಡಲಾಗುತ್ತದೆ. ಹಣಕಾಸಿನ ನಿರ್ವಹಣೆಗೆ ಸಂಬಂಧಿಸಿದ ಈ ಎಲ್ಲ ವಿಷಯಗಳನ್ನು ಪಾರದರ್ಶಕ ರೀತಿಯಲ್ಲಿ ಸಾರ್ವಜನಿಕವಾಗಿ ಹೊರಹಾಕಲಾಗುತ್ತದೆ ಹಾಗೂ ಅಳಲುಗಳು/ಕುಂದು-ಕೊರತೆಗಳಿಗೆ ಕಿವಿಗೊಡುವ ಕಾರ್ಯವಿಧಾನಗಳ ನಿರ್ವಹಣೆಗೆ ಜನಸಾಮಾನ್ಯರ ನೆರವನ್ನು ಪಡೆಯಲಾಗುತ್ತದೆ. ಎನ್.ಎ.ಸಿ. ವತಿಯಿಂದ ಅಭಿವೃದ್ಧಿಪಡಿಸಲಾಗಿರುವ ಮಾನ್ಯತೆ ನೀಡುವಿಕೆಯ ವ್ಯವಸ್ಥೆಯು ಈ ಪದ್ಧತಿಯ ಮೇಲೆ ಪರಸ್ಪರ ಪೂರಕವಾಗಿರುವ ಒಂದು ಹತೋಟಿಯನ್ನು ಒದಗಿಸುತ್ತದೆ ಹಾಗೂ ಎನ್.ಎಚ್.ಇ.ಆರ್.ಸಿಯು ಇದನ್ನು ತನ್ನ ನಿಯಂತ್ರಕ ಧ್ಯೇಯೋದ್ದೇಶದ ಪ್ರಮುಖ ಆಯಾಮಗಳಲ್ಲಿ ಒಂದೆಂಬಂತೆ ಪರಿಗಣಿಸುತ್ತದೆ.

18.13 ಸಾರ್ವಜನಿಕ ಸಹಭಾಗಿತ್ವ ಮತ್ತು ಖಾಸಗಿ ಸಹಭಾಗಿತ್ವದ ಸಂಸ್ಥೆಗಳನ್ನೊಳಗೊಂಡಂತೆ ಎಲ್ಲ ಉನ್ನತ ಶಿಕ್ಷಣ ಸಂಸ್ಥೆಗಳನ್ನು ಈ ನಿಯಂತ್ರಕ ಪ್ರಭುತ್ವದ ವ್ಯಾಪ್ತಿಯೊಳಗೆ ಸರಿಸಮನಾಗಿ ಪರಿಗಣಿಸಲಾಗುತ್ತದೆ. ಶಿಕ್ಷಣ ವ್ಯವಸ್ಥೆಯಲ್ಲಿನ ಖಾಸಗಿ ಲೋಕೋಪಕಾರಿ ಪ್ರಯತ್ನಗಳನ್ನು ನಿಯಂತ್ರಕ ಪ್ರಭುತ್ವವು ಉತ್ತೇಜಿಸುತ್ತದೆ. ಎಲ್ಲ ವಿಧಾಯಕ ಕಾಯಿದೆಗಳಿಗೆ ಸಂಬಂಧಿಸಿದಂತೆ ಸಾಮಾನ್ಯ ರಾಷ್ಟ್ರೀಯ ಮಾರ್ಗದರ್ಶಿ ಸೂತ್ರಗಳಿದ್ದು ಅವು ಖಾಸಗಿ ಉನ್ನತ ಶಿಕ್ಷಣ ಸಂಸ್ಥೆಗಳನ್ನು ರೂಪಿಸುತ್ತವೆ. ಖಾಸಗಿ ಉನ್ನತ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುವಂತಾಗುವಲ್ಲಿ, ಈ ಸಾಮಾನ್ಯ ಕನಿಷ್ಠತಮ ಮಾರ್ಗದರ್ಶಿ ಸೂತ್ರಗಳು ಇಂಥ ಎಲ್ಲ ಕಾಯಿದೆಗಳಿಗೆ ಅನುವುಮಾಡಿಕೊಡುತ್ತವೆ, ತನ್ಮೂಲಕ ಖಾಸಗಿ ಮತ್ತು ಸಾರ್ವಜನಿಕ ಉನ್ನತ ಶಿಕ್ಷಣ ಸಂಸ್ಥೆಗಳಿಗಾಗಿರುವ ಸರ್ವಸಮಾನ ಮಾನದಂಡಗಳಿಗೆ ಅದು ಬಲ ತುಂಬುತ್ತದೆ. ಉತ್ತಮ ಆಡಳಿತ, ಹಣಕಾಸಿನ ಸ್ಥಿರತೆ ಮತ್ತು ಭದ್ರತೆ, ಶೈಕ್ಷಣಿಕ ಫಲಿತಾಂಶಗಳು, ಮತ್ತು ಹೊರಗೆಡಹಿದ ಮಾಹಿತಿಗಳ ಪಾರದರ್ಶಕತೆಯಂಥ ವಿಷಯಗಳು ಈ ಸಾಮಾನ್ಯ ಮಾರ್ಗದರ್ಶಿ ಸೂತ್ರಗಳ ವ್ಯಾಪ್ತಿಯಲ್ಲಿ ಬರುವುದಿಲ್ಲ.

18.14 ಲೋಕೋಪಕಾರದ ಮತ್ತು ಸಾರ್ವಜನಿಕ ಸೇವಾ ಮನೋಧರ್ಮದ ಆಶಯವನ್ನು ಹೊಂದಿರುವ ಖಾಸಗಿ ಉನ್ನತ ಶಿಕ್ಷಣ ಸಂಸ್ಥೆಗಳನ್ನು, ಶಿಕ್ಷಣಶುಲ್ಕಗಳ ನಿರ್ಣಯ ಕುರಿತಾದ ಅನೌಪಚಾರಿಕ ಪದ್ಧತಿಯೊಂದರ ಮೂಲಕ ಉತ್ತೇಜಿಸಲಾಗುವುದು. ವಿಭಿನ್ನ ಬಗೆಯ

ಶಿಕ್ಷಣಸಂಸ್ಥೆಗಳಿಗೆ ಅವುಗಳ ಮಾನ್ಯತಾ ವೈಶಿಷ್ಟ್ಯವನ್ನು ಅವಲಂಬಿಸಿ ಗರಿಷ್ಠ ಮಿತಿಯೊಂದಿಗಿನ ಶುಲ್ಕಗಳನ್ನು ನಿಗದಿಪಡಿಸುವುದಕ್ಕಾಗಿ ಪಾರದರ್ಶಕ ಕಾರ್ಯವಿಧಾನಗಳನ್ನು ಅಭಿವೃದ್ಧಿಪಡಿಸಲಾಗುವುದು. ಈ ಉಪಕ್ರಮದಿಂದಾಗಿ ಏಕೋದ್ದಿಷ್ಟ ಶಿಕ್ಷಣಸಂಸ್ಥೆಗಳ ಮೇಲೆ ಪ್ರತಿಕೂಲ ಪರಿಣಾಮವಾಗುವುದಿಲ್ಲ. ಖಾಸಗಿ ಉನ್ನತ ಶಿಕ್ಷಣ ಸಂಸ್ಥೆಗಳು, ವ್ಯವಸ್ಥಿತವಾಗಿ ರೂಪಿಸಲಾದ ರೂಢಮಾದರಿಗಳು ಮತ್ತು ವ್ಯಾಪಕವಾಗಿ ಅನ್ವಯವಾಗುವ ನಿಯಂತ್ರಕ ಕಾರ್ಯವಿಧಾನದ ವ್ಯಾಪ್ತಿಯೊಳಗೇ ತಂತಮ್ಮ ಶಿಕ್ಷಣ ಕಾರ್ಯಕ್ರಮಗಳಿಗೆ ಸ್ವತಂತ್ರವಾಗಿ ಶುಲ್ಕಗಳನ್ನು ನಿಗದಿಪಡಿಸಿಕೊಳ್ಳಲು ಈ ಉಪಕ್ರಮವು ಅನುವುಮಾಡಿಕೊಡುತ್ತದೆ. ತಮ್ಮ ವಿದ್ಯಾರ್ಥಿಗಳಿಗೆ ಗಣನೀಯ ಸಂಖ್ಯೆಯಲ್ಲಿ ವಿದ್ಯಾರ್ಥಿವೇತನಗಳು ಮತ್ತು ಉಚಿತಶಿಕ್ಷಣದ ಸೌಲಭ್ಯಗಳನ್ನು ನೀಡುವಂತಾಗಲು ಖಾಸಗಿ ಉನ್ನತ ಶಿಕ್ಷಣ ಸಂಸ್ಥೆಗಳನ್ನು ಉತ್ತೇಜಿಸಲಾಗುತ್ತದೆ. ಖಾಸಗಿ ಉನ್ನತ ಶಿಕ್ಷಣ ಸಂಸ್ಥೆಗಳು ನಿಗದಿಪಡಿಸಿರುವ ಎಲ್ಲ ಶಿಕ್ಷಣ ಶುಲ್ಕಗಳು ಹಾಗೂ ಖರ್ಚು-ವೆಚ್ಚಗಳನ್ನು ಪಾರದರ್ಶಕವಾಗಿ ಮತ್ತು ಸಂಪೂರ್ಣವಾಗಿ ಬಹಿರಂಗಪಡಿಸಲಾಗುತ್ತದೆ, ಮತ್ತು ಯಾವುದೇ ವಿದ್ಯಾರ್ಥಿಯ ದಾಖಲಾತಿಯ ಅವಧಿಯಲ್ಲಿ ಈ ಶುಲ್ಕಗಳು/ಖರ್ಚು-ವೆಚ್ಚಗಳಲ್ಲಿ ಯಾವುದೇ ಸ್ವೇಚ್ಛಾನುಸಾರಿ ಹೆಚ್ಚಳಗಳಿಗೆ ಅವಕಾಶವಿರುವುದಿಲ್ಲ. ಖರ್ಚು-ವೆಚ್ಚಗಳ ನ್ಯಾಯಸಮ್ಮತ ಮರುಗಳಿಕೆಯನ್ನು ಈ ಶುಲ್ಕನಿರ್ಣಯದ ಕಾರ್ಯವಿಧಾನವು ಖಾತ್ರಿಪಡಿಸುವುದರ ಜತೆಗೆ, ಆ ಉನ್ನತ ಶಿಕ್ಷಣ ಸಂಸ್ಥೆಗಳು ತಮ್ಮ ಸಾಮಾಜಿಕ ಹೊಣೆಗಾರಿಕೆಗಳನ್ನೂ ನೆರವೇರಿಸುವಂತೆ ನೋಡಿಕೊಳ್ಳುತ್ತದೆ.

19. ಉನ್ನತ ಶಿಕ್ಷಣ ಸಂಸ್ಥೆಗಳಿಗಾಗಿ ಪರಿಣಾಮಕಾರಿಯಾದ ಆಡಳಿತ ಮತ್ತು ನಾಯಕತ್ವ

19.1 ಪರಿಣಾಮಕಾರಿ ಆಡಳಿತ ಮತ್ತು ನಾಯಕತ್ವ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಶ್ರೇಷ್ಠತೆಯ ಸಂಸ್ಕೃತಿಯ ಸೃಷ್ಟಿಗೆ ಕಾರಣವಾಗುತ್ತದೆ. ಪ್ರಬಲವಾದ ಸ್ವ-ಆಡಳಿತದ ಅಸ್ತಿತ್ವ ಹಾಗೂ ಅತ್ಯುತ್ತಮ ಪ್ರತಿಭಾವಂತ ನಾಯಕರ ನೇಮಕ - ಇದು ಭಾರತ ಸೇರಿದಂತೆ ಜಾಗತಿಕ ಮಟ್ಟದ ಅತ್ಯುತ್ತಮ ಸಂಸ್ಥೆಗಳಲ್ಲಿರುವ ಮುಖ್ಯ ಲಕ್ಷಣವಾಗಿದೆ.

19.2 ಶ್ರೇಣೀಕೃತ ಮಾನ್ಯತೆ ಹಾಗೂ ಶ್ರೇಣಿಕೃತ ಸ್ವಾಯತ್ತತೆಯ ಸೂಕ್ತ ವ್ಯವಸ್ಥೆಯ ಮೂಲಕ, ಹಂತ ಹಂತವಾಗಿ ಮುಂದಿನ 15 ವರ್ಷಗಳಲ್ಲಿ, ಭಾರತದ ಎಲ್ಲ ಉನ್ನತ ಶಿಕ್ಷಣ ಕೇಂದ್ರಗಳು ಹೊಸತನ ಹಾಗೂ ಶ್ರೇಷ್ಠತೆಗೆ ಆದ್ಯತೆ ನೀಡುವ ಸ್ವತಂತ್ರ, ಸ್ವ-ಆಡಳಿತದ ಸಂಸ್ಥೆಗಳಾಗಲಿವೆ. ಅತ್ಯುತ್ತಮ ಗುಣಮಟ್ಟದ ನಾಯಕತ್ವವನ್ನು ಖಾತ್ರಿಗೊಳಿಸಲು ಹಾಗೂ ಸಾಂಸ್ಥಿಕ ಶ್ರೇಷ್ಠ ಸಂಸ್ಕೃತಿ ರೂಪಿಸಲು ಎಲ್ಲ ಉನ್ನತ ಶಿಕ್ಷಣ ಸಂಸ್ಥೆಗಳು ಅಗತ್ಯ ಕ್ರಮಗಳನ್ನು ಕೈಗೊಳ್ಳಲಿವೆ. ಸಂಸ್ಥೆಯು ಆಡಳಿತ ಮಂಡಳಿ ಸ್ಥಾಪಿಸಲು ಯೋಗ್ಯವಾಗಿದೆ ಎಂಬ ಸೂಕ್ತ ಶ್ರೇಣೀಕೃತ ಮಾನ್ಯತೆ ದೊರೆತ ಕೂಡಲೇ, ಉತ್ತಮ ವಿದ್ಯಾರ್ಹತೆ ಹೊಂದಿರುವ, ಸಮರ್ಥ, ಸಂಸ್ಥೆಗೆ ತಮ್ಮ ಬದ್ಧತೆ ಹಾಗೂ ಸಾಮರ್ಥ್ಯವನ್ನು ಈಗಾಗಲೇ ರುಜುವಾತುಪಡಿಸಿರುವಂಥ ಸಮರ್ಪಣಾ ಮನೋಭಾವದ ವ್ಯಕ್ತಿಗಳನ್ನು ಹೊಂದಿದ ಆಡಳಿತ ಮಂಡಳಿ ರಚಿತವಾಗಲಿದೆ. ಬಾಹ್ಯ ಹಸ್ತಕ್ಷೇಪ ಇಲ್ಲದೆ ಸಂಸ್ಥೆಯ ಆಡಳಿತ ನಡೆಸುವ, ಸಂಸ್ಥೆಯ ಮುಖ್ಯಸ್ಥರ ನೇಮಕ ಸೇರಿದಂತೆ ಆಡಳಿತ ಕುರಿತ ಎಲ್ಲ ವಿಷಯಗಳಲ್ಲಿ ನಿರ್ಧಾರ ಕೈಗೊಳ್ಳುವ ಅಧಿಕಾರವನ್ನು ಆಡಳಿತ ಮಂಡಳಿ ಹೊಂದಿದೆ. ಹಿಂದಿನ ಕಾನೂನುಗಳಲ್ಲಿರುವ ವಿರೋಧಾಭಾಸದ ವಿಧಿಗಳನ್ನು ರದ್ದುಗೊಳಿಸಿ, ಆಡಳಿತ ಮಂಡಳಿಯ ರಚನೆ, ಸದಸ್ಯರ ನೇಮಕ, ಅದರ ಕಾರ್ಯವಿಧಾನ, ನೀತಿ-ನಿಯಮಗಳು, ಆಡಳಿತ ಮಂಡಳಿಯ ಪಾತ್ರ ಹಾಗೂ ಜವಾಬ್ದಾರಿಗಳ ಬಗ್ಗೆ ಸ್ಪಷ್ಟವಾಗಿ ಉಲ್ಲೇಖಿಸುವ ವಿಸ್ತೃತ ಕಾನೂನು ಬರಲಿದೆ. ಮಂಡಳಿಯ ನೂತನ ಸದಸ್ಯರನ್ನು, ಮಂಡಳಿ ನೇಮಿಸಿದ ತಜ್ಞರ ಸಮಿತಿ ಗುರುತಿಸಲಿದೆ. ಕೆಲವು ಸದಸ್ಯರನ್ನು ಸ್ವತಃ ಮಂಡಳಿಯೇ ನೇಮಕ ಮಾಡಲಿದೆ. ನ್ಯಾಯಸಮ್ಮತ ರೀತಿಯಲ್ಲಿ ಸದಸ್ಯರನ್ನು ನೇಮಕ ಮಾಡಬೇಕಾಗಿದೆ. ಈ ಪ್ರಕ್ರಿಯೆಯ ಮೂಲಕ ಎಲ್ಲ ಸಂಸ್ಥೆಗಳಿಗೂ ಸೂಕ್ತ ಉತ್ತೇಜನ, ಬೆಂಬಲ ಹಾಗೂ ಮಾರ್ಗದರ್ಶನ ದೊರೆಯುವುದೆಂದು ಊಹಿಸಲಾಗಿದ್ದು, 2025ರ ವೇಳೆಗೆ ಎಲ್ಲ ಸಂಸ್ಥೆಗಳು ಸಕ್ರಿಯ ಆಡಳಿತ ಮಂಡಳಿ ಹೊಂದಿರುವ ಸ್ವಾಯತ್ತ ಸಂಸ್ಥೆಗಳಾಗುವುದೆಂದು ಆಶಿಸಲಾಗಿದೆ.

19.3 ಸಂಬಂಧಿತ ದಾಖಲೆಪತ್ರಗಳನ್ನು ಪಾರದರ್ಶಕ ರೀತಿಯಲ್ಲಿ ಹೂಡಿಕೆದಾರರ ಮುಂದೆ ಪ್ರಕಟಗೊಳಿಸುವ ಹೊಣೆ ಮಂಡಳಿಯದ್ದು. ರಾಷ್ಟ್ರೀಯ ಉನ್ನತ ಶಿಕ್ಷಣ ನಿಯಂತ್ರಣ ಮಂಡಳಿ ಮೂಲಕ ಭಾರತೀಯ ಉನ್ನತ ಶಿಕ್ಷಣ ಆಯೋಗ ಕಡ್ಡಾಯಗೊಳಿಸಿದ ನಿಯಂತ್ರಣಾ ಮಾರ್ಗಸೂಚಿಗಳನ್ನು ಪಾಲಿಸುವುದೂ ಇದರ ಜವಾಬ್ದಾರಿಯಾಗಿದೆ.

19.4 ಅತ್ಯುನ್ನತ ವಿದ್ಯಾರ್ಹತೆ, ಆಡಳಿತಾತ್ಮಕ ನೈಪುಣ್ಯತೆ, ನಾಯಕತ್ವ ಗುಣದ ಜೊತೆಗೆ ಸಂಕೀರ್ಣ ಪರಿಸ್ಥಿತಿಯನ್ನು ನಿಭಾಯಿಸುವಂಥ ಸಾಮರ್ಥ್ಯ ಹೊಂದಿರುವ ವ್ಯಕ್ತಿಗಳಿಗೆ ನಾಯಕತ್ವ ಸ್ಥಾನ ಹಾಗೂ ಸಂಸ್ಥೆಯ ಮುಖ್ಯಸ್ಥರ ಸ್ಥಾನವನ್ನು ನೀಡಲಾಗುವುದು. ಉನ್ನತ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರು ಸಂವಿಧಾನಾತ್ಮಕ ಮೌಲ್ಯಗಳಿಗೆ ಆದ್ಯತೆ ನೀಡುವವರಾಗಿರಬೇಕು. ಸಂಸ್ಥೆಯ ಬಗ್ಗೆ ಸಮಗ್ರ ಪರಿಕಲ್ಪನೆ ಹೊಂದಿರಬೇಕು. ಪ್ರಬಲ ಸಾಮಾಜಿಕ ಬದ್ಧತೆ, ತಂಡಕಾರ್ಯ (ಟೀಂ ವರ್ಕ್)ದಲ್ಲಿ ನಂಬಿಕೆ, ಬಹುತ್ವ, ವಿವಿಧ ರೀತಿಯ ಜನರ ಜೊತೆ ಕಾರ್ಯ ನಿರ್ವಹಿಸುವ ಸಾಮರ್ಥ್ಯ, ಧನಾತ್ಮಕ ನಿಲುವು ಮುಂತಾದ ಉತ್ತಮಗುಣಗಳನ್ನು ಹೊಂದಿರಬೇಕು. ಆಡಳಿತ ಮಂಡಳಿಯಿಂದ ನೇಮಕವಾದ ಶ್ರೇಷ್ಠ ತಜ್ಞರ ಸಮಿತಿ ನಿಯಮಬದ್ಧವಾಗಿ, ತಾರತಮ್ಯರಹಿತವಾಗಿ, ಅರ್ಹತೆ ಹಾಗೂ ಸಾಮರ್ಥ್ಯಗಳ ಆಧಾರದಲ್ಲಿ ನೇಮಕ ಮಾಡಬೇಕು. ಸೂಕ್ತ ಸಂಸ್ಕೃತಿಯ ಬೆಳವಣಿಗೆಗೆ ಅಧಿಕಾರಾವಧಿಯ ಸ್ಥಿರತೆ ಅತಿ ಅಗತ್ಯ. ಹಾಗಾಗಿ ಅಧಿಕಾರದ ಉತ್ತರದಾಯಿತ್ವವನ್ನು

ಸಂಸ್ಥೆಯ ಕಾರ್ಯವೈಖರಿಗೆ ಯಾವುದೇ ತೊಂದರೆಯಾಗದ ರೀತಿಯಲ್ಲಿ, ನಾಯಕತ್ವ ಬದಲಾವಣೆಯಿಂದ ಉತ್ತಮ ಪರಿಪಾಠಗಳಿಗೆ ಯಾವುದೇ ಧಕ್ಕೆಯಾಗದ ರೀತಿಯಲ್ಲಿ ಅತೀ ಜಾಗರೂಕತೆಯಿಂದ ಯೋಜಿಸಬೇಕು. ನಾಯಕತ್ವ ಬದಲಾವಣೆಯಿಂದ ಸಾಕಷ್ಟು ಬದಲಾವಣೆಗಳಾಗಬಹುದು, ಆದರೆ ಸಂಸ್ಥೆಯ ಸುಗಮ ಕಾರ್ಯನಿರ್ವಹಣೆಯ ದೃಷ್ಟಿಯಿಂದ ನಾಯಕತ್ವ ಸ್ಥಾನವನ್ನು ಖಾಲಿ ಬಿಡಬಾರದು. ಅಸಾಧಾರಣ ನಾಯಕರನ್ನು ಗುರುತಿಸಿ, ಅವರನ್ನು ನಾಯತಕತ್ವದ ವಿವಿಧ ಹಂತಗಳಲ್ಲಿ ತರಬೇತುಗೊಳಿಸುವ ಪ್ರಕ್ರಿಯೆ ನಿರಂತರವಾಗಿರಬೇಕು.

19.5 ಸಾಕಷ್ಟು ನಿಧಿ, ಕಾನೂನು ಬೆಂಬಲ ಹಾಗೂ ಸ್ವಾಯತ್ತತೆಯನ್ನು ಹಂತ ಹಂತವಾಗಿ ಪಡೆಯಲಿರುವ ಎಲ್ಲ ಉನ್ನತ ಶಿಕ್ಷಣ ಸಂಸ್ಥೆಗಳು ಸಾಂಸ್ಥಿಕ ಶ್ರೇಷ್ಠತೆಗೆ ಬದ್ಧವಾಗಿದ್ದು, ಸ್ಥಳೀಯ ಸಮುದಾಯದ ಜೊತೆ ಬಾಂಧವ್ಯ ಹಾಗೂ ಆರ್ಥಿಕವಾಗಿ ಪ್ರಾಮಾಣಿಕತೆ ಹಾಗೂ ವಿಶ್ವಾಸಾರ್ಹತೆ ಪ್ರದರ್ಶಿಸಲಿದೆ. ತನ್ನ ಅಭಿವೃದ್ಧಿಶೀಲ ಕ್ರಮಗಳು, ಪ್ರಗತಿಯ ಮೌಲ್ಯಮಾಪನ, ನಿಗದಿಪಡಿಸಿದ ಗುರಿಯನ್ನು ಸಾಧಿಸಿದ ರೀತಿ ಮುಂತಾದ ಅಂಶಗಳ ಆಧಾರದಲ್ಲಿ ಪ್ರತಿ ಸಂಸ್ಥೆಯು ತನ್ನದೇ ಆದ ಯೋಜನಾತ್ಮಕ ಸಾಂಸ್ಥಿಕ ಅಭಿವೃದ್ಧಿ ಯೋಜನೆಯನ್ನು ರೂಪಿಸಲಿದೆ. ಸಾರ್ವಜನಿಕ ನಿಧಿ ಸಂಗ್ರಹಿಸಲು ಈ ಯೋಜನೆಯೇ ಮುಖ್ಯ ಆಧಾರವಾಗಲಿದೆ. ಆಡಳಿತ ಮಂಡಳಿಯ ಸದಸ್ಯರು, ಸಂಸ್ಥೆಯ ಮುಖ್ಯಸ್ಥರು, ಬೋಧಕ ವರ್ಗ, ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿ ಸಹಭಾಗಿತ್ವದಲ್ಲಿ ಸಾಂಸ್ಥಿಕ ಅಭಿವೃದ್ಧಿ ಯೋಜನೆ ರೂಪುಗೊಳ್ಳಲಿದೆ.

ಭಾಗ III: ಆದ್ಯತೆ ನೀಡಬೇಕಾದ ಇತರ ಪ್ರಮುಖ ವಿಷಯಗಳು:

20. ವೃತ್ತಿಪರ ಶಿಕ್ಷಣ

20.1 ವೃತ್ತಿಪರರನ್ನು ಸೃಷ್ಟಿಸುವ ಪ್ರಕ್ರಿಯೆಯು ನೀತಿಶಿಕ್ಷಣ, ಸಾರ್ವಜನಿಕ ಉದ್ದೇಶದ ಪ್ರಾಮುಖ್ಯತೆ, ಶಿಸ್ತಿನಲ್ಲಿ ಶಿಕ್ಷಣ ಹಾಗೂ ಅಭ್ಯಾಸಕ್ಕಾಗಿ ಶಿಕ್ಷಣ ಎಂಬ ವಿಷಯಗಳನ್ನು ಒಳಗೊಂಡಿರಬೇಕು. ವಿಮರ್ಶಾತ್ಮಕ ಹಾಗೂ ಅಂತರ್‌ಶಾಸ್ತ್ರೀಯ ಚಿಂತನೆ, ಚರ್ಚೆ, ಸಂವಾದ, ಸಂಶೋಧನೆ ಹಾಗೂ ನೂತನ ಪ್ರಯೋಗಗಳಿಗೆ ಇಲ್ಲಿ ಮುಖ್ಯವಾಗಿ ಅವಕಾಶವಿರಬೇಕು. ಇದನ್ನು ಸಾಧಿಸಲು `ಒಂದೇ ವಿಷಯದಲ್ಲಿ ಪರಿಣತಿ' ಎಂಬ ಪ್ರತ್ಯೇಕ ವ್ಯವಸ್ಥೆಯಲ್ಲಿ ವೃತ್ತಿಪರ ಶಿಕ್ಷಣ ನಡೆಸಬಾರದು.

20.2 ಇದರಿಂದ ವೃತ್ತಿಪರ ಶಿಕ್ಷಣವು ಇಡೀ ಉನ್ನತ ಶಿಕ್ಷಣ ವ್ಯವಸ್ಥೆಯ ಅವಿಭಾಜ್ಯ ಅಂಗವಾಗಲಿದೆ. ಅತ್ಯುನ್ನತ ಕೃಷಿ ವಿಶ್ವವಿದ್ಯಾನಿಲಯಗಳು, ಕಾನೂನು ವಿಶ್ವವಿದ್ಯಾನಿಲಯಗಳು, ಆರೋಗ್ಯ ವಿಜ್ಞಾನ ವಿಶ್ವವಿದ್ಯಾನಿಲಯಗಳು, ತಾಂತ್ರಿಕ ವಿಶ್ವವಿದ್ಯಾನಿಲಯಗಳು, ಇನ್ನಿತರ ಕ್ಷೇತ್ರಗಳ ಅತ್ಯುನ್ನತ ವಿಶ್ವದ್ಯಾನಿಲಯಗಳು ಸಮಗ್ರ ಹಾಗೂ ಬಹುಕೌಶಲ್ಯಾಧಾರಿತ ಶಿಕ್ಷಣ ನೀಡಲು ಮುಂದಾಗಲಿವೆ. ವೃತ್ತಿಪರ ಶಿಕ್ಷಣ ನೀಡುವ ಸಂಸ್ಥೆ ಅಥವಾ ಸಾಮಾನ್ಯ ಶಿಕ್ಷಣ ನೀಡುವ ಸಂಸ್ಥೆ ಸೇರಿದಂತೆ ಎಲ್ಲ ಸಂಸ್ಥೆಗಳು ವ್ಯವಸ್ಥಿತವಾಗಿ ಬೆಳೆದು, ಸಂಯೋಜಿತ ರೀತಿಯಲ್ಲಿ ಎರಡೂ ರೀತಿಯ ಶಿಕ್ಷಣಗಳನ್ನು ನೀಡುವಂಥ ಒಂದು ಸಮುದಾಯ (ಕ್ಲಸ್ಟರ್)ವಾಗಿ 2030ರ ವೇಳೆಗೆ ರೂಪುಗೊಳ್ಳಲಿದೆ.

20.3 ಕೃಷಿ ಹಾಗೂ ಕೃಷಿ ಸಂಬಂಧಿತ ಶಿಕ್ಷಣವನ್ನು ಪುನಶ್ಚೇತನಗೊಳಿಸಲಾಗುವುದು. ದೇಶದಲ್ಲಿರುವ ವಿಶ್ವವಿದ್ಯಾನಿಲಯಗಳ ಪೈಕಿ ಶೇ. 9ರಷ್ಟು ಕೃಷಿ ವಿಶ್ವವಿದ್ಯಾನಿಯಗಳಿದ್ದರೂ, ಉನ್ನತ ಶಿಕ್ಷಣಕ್ಕಾಗಿ ಕೃಷಿ ಹಾಗೂ ಕೃಷಿ ಸಂಬಂಧಿತ ವಿಜ್ಞಾನ ವಿಷಯಗಳಿಗೆ ದಾಖಲಾತಿ ಮಾಡಿಕೊಳ್ಳುವ ವಿದ್ಯಾರ್ಥಿಗಳ ಸಂಖ್ಯೆ ಶೇ. 1ಕ್ಕಿಂತಲೂ ಕಡಿಮೆ ಇದೆ. ಕೃಷಿ ಉತ್ಪಾದಕತೆಯನ್ನು ಹೆಚ್ಚಿಸಲು, ಕೃಷಿ ಹಾಗೂ ಅದಕ್ಕೆ ಸಂಬಂಧಿಸಿದ ಚಟುವಟಿಕೆಗಳ ಗುಣಮಟ್ಟ ಹಾಗೂ ಸಾಮರ್ಥ್ಯ ಹೆಚ್ಚಿಸಬೇಕಿದೆ. ಪರಿಣತ ಪದವೀಧರರು ಹಾಗೂ ತಂತ್ರಜ್ಞರು, ವಿನೂತನ ಸಂಶೋಧನೆ, ಮಾರುಕಟ್ಟೆ ಆಧಾರಿತ ತಂತ್ರಜ್ಞಾನ ಹಾಗೂ ವಿಧಾನಗಳನ್ನು ಬಳಸಿ ಈ ಕಾರ್ಯ ಸಾಧಿಸಬೇಕಿದೆ. ಸಾಮಾನ್ಯ ಶಿಕ್ಷಣದ ಜೊತೆ ಸಂಘಟಿತವಾಗಿರುವ ಯೋಜನೆಗಳ ಮೂಲಕ, ಕೃಷಿ ಹಾಗೂ ಪಶುವಿಜ್ಞಾನ ವೃತ್ತಿಪರರ ತಯಾರಿಕಾ ಕಾರ್ಯ ವೇಗವಾಗಿ ಸಾಗಲಿದೆ. ಸಂಕೀರ್ಣ ವಿಷಯಗಳಾದ ಭೂ ಉತ್ಪಾದಕತೆ ಕುಸಿತ, ಹವಾಮಾನ ಬದಲಾವಣೆ, ಬೆಳೆಯುತ್ತಿರುವ ಜನಸಂಖ್ಯೆಗೆ ತಕ್ಕಷ್ಟು ಆಹಾರ ಉತ್ಪಾದನೆ ಮುಂತಾದ ವಿಷಯಗಳ ಬಗ್ಗೆ ಅರಿವುಳ್ಳ, ಸ್ಥಳೀಯ ಜ್ಞಾನ, ಸಂಪ್ರದಾಯಗಳ ಜ್ಞಾನ, ನೂತನ ತಂತ್ರಜ್ಞಾನಗಳನ್ನು ಅರ್ಥಮಾಡಿಕೊಂಡು, ಅವುಗಳನ್ನು ಬಳಸಿಕೊಳ್ಳುವ ಸಾಮರ್ಥ್ಯವಿರುವ ವೃತ್ತಿಪರರರನ್ನು ರೂಪಿಸುವ ಕಾರ್ಯಕ್ಕಾಗಿ ಕೃಷಿ ಶಿಕ್ಷಣದ ವಿನ್ಯಾಸವೇ ಬದಲಾಗಲಿದೆ. ಕೃಷಿ ಶಿಕ್ಷಣವನ್ನು ನೀಡುವ ಸಂಸ್ಥೆಗಳು ಸ್ಥಳಿಯ ಸಮುದಾಯಕ್ಕೆ ಉಪಯುಕ್ತವಾಗಿರಬೇಕು. ತಂತ್ರಜ್ಞಾನಗಳ ಬಳಕೆ, ಪ್ರಸಾರ ಹಾಗೂ ಸುಸ್ಥಿರ ವಿಧಾನಗಳ ಬಗ್ಗೆ ಅರಿವು ಮೂಡಿಸುವ ಕೃಷಿ ತಂತ್ರಜ್ಞಾನ ಪಾರ್ಕುಗಳ ಸ್ಥಾಪನೆ ಈ ನಿಟ್ಟಿನಲ್ಲಿ ಮಹತ್ವದ ಹೆಜ್ಜೆಯಾಗಲಿದೆ.

20.4 ಕಾನೂನು ಶಿಕ್ಷಣ ಜಾಗತಿಕವಾಗಿ ಸ್ಪರ್ಧಾತ್ಮಕವಾಗಬೇಕಿದೆ. ಸಕಾಲದಲ್ಲಿ ನ್ಯಾಯದಾನ ನೀಡಲು ನೆರವಾಗುವ ಅತ್ಯುತ್ತಮ ವಿಧಾನಗಳು ಹಾಗೂ ಆಧುನಿಕ ತಂತ್ರಜ್ಞಾನಗಳನ್ನು ಒಪ್ಪಿಕೊಂಡು ಬಳಸಬೇಕಿದೆ. ಇದೇ ವೇಳೆ, ಇದರ ಜೊತೆ ಸಾಮಾಜಿಕ, ಆರ್ಥಿಕ, ರಾಜಕೀಯ ಮೌಲ್ಯಗಳು ಸೇರಿದಂತೆ ನ್ಯಾಯದ ಸಂವಿಧಾನಾತ್ಮಕ ಮೌಲ್ಯಗಳು ಪ್ರಕಾಶಿಸಬೇಕಿದೆ. ಪ್ರಜಾಪ್ರಭುತ್ವದ ಮಾನದಂಡ, ಕಾನೂನು ಕ್ರಮ ಹಾಗೂ ಮಾನವ ಹಕ್ಕುಗಳ ಮೂಲಕ ರಾಷ್ಟ್ರದ ಪುನರ್‌ಸ್ಥಾಪನೆ ಕಾರ್ಯದತ್ತ ಕಾನೂನು ಶಿಕ್ಷಣ ಗಮನ ಹರಿಸಬೇಕಿದೆ. ಸಾಕ್ಷ್ಯಾಧಾರಿತ ವಿಧಾನ, ಕಾನೂನು ಚಿಂತನೆಯ ಇತಿಹಾಸ, ನ್ಯಾಯತತ್ವಗಳು, ನ್ಯಾಯಶಾಸ್ತ್ರ ಅಧ್ಯಯನ ಹಾಗೂ ಇತರ ವಿಷಯಗಳ ಜೊತೆ ಸಾಮಾಜಿಕ-ಸಾಂಸ್ಕೃತಿಕ ಸನ್ನಿವೇಶಗಳನ್ನು ಕಾನೂನು ಶಿಕ್ಷಣದ ಪಠ್ಯಕ್ರಮ ಪ್ರತಿಬಿಂಬಿಸಬೇಕಿದೆ. ಭವಿಷ್ಯದ ನ್ಯಾಯವಾದಿಗಳಿಗೆ ಹಾಗೂ ನ್ಯಾಯಾಧೀಶರಿಗೆ ಶಿಕ್ಷಣ ನೀಡುವಂಥ ರಾಜ್ಯಮಟ್ಟದ ಸಂಸ್ಥೆಗಳು ಇಂಗ್ಲಿಷ್ ಹಾಗೂ ಆ ರಾಜ್ಯದ ಭಾಷೆಯಲ್ಲಿ ಶಿಕ್ಷಣ ನೀಡಲು ದ್ವಿಭಾಷಾ ನೀತಿಯನ್ನು ಅನುಸರಿಸುವ ಕುರಿತು ಚಿಂತಿಸಬೇಕಾಗಿದೆ.

20.5 ಆರೋಗ್ಯ ಸಂರಕ್ಷಣೆ ಶಿಕ್ಷಣದ ಪರಿಕಲ್ಪನೆಯನ್ನು ಬದಲಾಯಿಸಬೇಕಾಗಿದೆ. ಆರೋಗ್ಯ ಪದವೀಧರರ ಆವಶ್ಯಕತೆಗೆ ಅನುಗುಣವಾಗಿ ಶೈಕ್ಷಣಿಕ ಯೋಜನೆಗಳ ಶಿಕ್ಷಣ ಅವಧಿ, ಅದರ ರಚನೆ, ವಿನ್ಯಾಸವನ್ನು ಪುನರ್ ರೂಪಿಸಬೇಕಾಗಿದೆ. ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ದ್ವಿತೀಯ ದರ್ಜೆಯ ಆಸ್ಪತ್ರೆಗಳಲ್ಲಿ ಕಾರ್ಯ ನಿರ್ವಹಿಸಲು ಅಗತ್ಯವಿರುವ, ನಿರ್ದಿಷ್ಟ ಮಾನದಂಡಗಳ ಮೂಲಕ ವಿದ್ಯಾರ್ಥಿಗಳನ್ನು ನಿಯಮಿತ ಅವಧಿಯಲ್ಲಿ ಮೌಲ್ಯಮಾಪನ ಮಾಡಲಾಗುವುದು. ಜನರು ಬೇರೆ ಬೇರೆ ರೀತಿಯ ಆರೋಗ್ಯ ಸಂರಕ್ಷಣಾ ವಿಧಾನಗಳನ್ನು ಅನುಸರಿಸುತ್ತಿರುವುದರಿಂದ ನಮ್ಮ ಆರೋಗ್ಯ ಶಿಕ್ಷಣ ವ್ಯವಸ್ಥೆ ಸಮಗ್ರವಾಗಿರಬೇಕು. ಅಂದರೆ ಆಲೋಪತಿ ವೈದ್ಯಕೀಯ ಶಿಕ್ಷಣದ ಎಲ್ಲ ವಿದ್ಯಾರ್ಥಿಗಳು, ಆಯುರ್ವೇದ, ಯೋಗ, ಪ್ರಕೃತಿ ಚಿಕಿತ್ಸೆ, ಯುನಾನಿ ಸಿದ್ಧ ಹಾಗೂ ಹೋಮಿಯೋಪಥಿ (ಆಯುಷ್)ಗಳ ಮೂಲ ಜ್ಞಾನ ಹೊಂದಿರಬೇಕು. ಅದೇ ರೀತಿ ಆಯುಷ್ ವಿದ್ಯಾರ್ಥಿಗಳು ಅಲೋಪತಿ ಜ್ಞಾನ ಹೊಂದಿರಬೇಕು. ಎಲ್ಲ ಮಾದರಿಯ ಆರೋಗ್ಯ ಸಂರಕ್ಷಣೆ ಶಿಕ್ಷಣದಲ್ಲಿ ರೋಗ ನಿರೋಧತೆ ಹಾಗೂ ದೇಸೀ ಔಷಧಿಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕು.

20.6 ಭಾರತದ ಸರ್ವತೋಮುಖ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರ ನಿರ್ವಹಿಸುವಂಥ ಇಂಜಿನಿಯರಿಂಗ್, ತಂತ್ರಜ್ಞಾನ, ನಿರ್ವಹಣೆ, ವಾಸ್ತುಶಾಸ್ತ್ರ, ನಗರ ಯೋಜನೆ, ಔಷಧಾಲಯ, ಹೋಟೆಲ್ ನಿರ್ವಹಣೆ, ಅಡುಗೆ ತಂತ್ರಜ್ಞಾನ ಮುಂತಾದ ವಿಷಯಗಳ ಪದವಿ ಹಾಗೂ ಡಿಪ್ಲೊಮಾ ಕೋರ್ಸುಗಳು ತಾಂತ್ರಿಕ ಶಿಕ್ಷಣದ ವ್ಯಾಪ್ತಿಗೆ ಒಳಪಡುತ್ತವೆ. ಈ ಕ್ಷೇತ್ರದಲ್ಲಿ ಉತ್ತಮ ವಿದ್ಯಾರ್ಹತೆ ಹೊಂದಿದ ನುರಿತ ತಜ್ಞರಿಗೆ ಬೇಡಿಕೆ ಇದ್ದರೂ ಈ ಉದ್ಯಮ ಹಾಗೂ ಈ ವಿಷಯದಲ್ಲಿ ವಿನೂತನ ಪ್ರಯೋಗ ಹಾಗೂ ಸಂಶೋಧನೆಗಳನ್ನು ಮಾಡುವಂಥ ಉನ್ನತ ಶಿಕ್ಷಣ ಸಂಸ್ಥೆಗಳ ನಡುವೆ ಸಹಯೋಗದ ಆವಶ್ಯಕತೆ ಇದೆ. ಮಾನವ ಪ್ರಯತ್ನದ ಮೇಲೆ ತಂತ್ರಜ್ಞಾನದ ಪ್ರಭಾವವು, ತಾಂತ್ರಿಕ ಶಿಕ್ಷಣ ಹಾಗೂ ಇತರ ಶಿಕ್ಷಣಗಳ ನಡುವಿನ ಕಂದಕವನ್ನು ಅಳಿಸಿಹಾಕಲಿದೆ ಎಂದು ಆಶಿಸಲಾಗಿದೆ. ಹೀಗಾಗಿ ಎಲ್ಲ ಬಹುಕೌಶಲ್ಯ ಶಿಕ್ಷಣ ಸಂಸ್ಥೆಗಳಲ್ಲಿ ತಾಂತ್ರಿಕ ಶಿಕ್ಷಣಕ್ಕೂ ಆದ್ಯತೆ ನೀಡಬೇಕಾಗಿದೆ. ಇತರ ವಿಷಯಗಳ ಜೊತೆ ತಾಂತ್ರಿಕ ಶಿಕ್ಷಣದಲ್ಲೂ ಇರುವ ಅವಕಾಶಗಳ ಮೇಲೆ ಬೆಳಕು ಚೆಲ್ಲಬೇಕಾಗಿದೆ. ಆರೋಗ್ಯ, ಪರಿಸರ ಹಾಗೂ ಸುಸ್ಥಿರ ಜೀವನಕ್ಕೆ ಅನ್ವಯವಾಗುವಂತಹ ಜೆನೋಮಿಕ್ ಶಿಕ್ಷಣ, ಜೈವಿಕ ಶಿಕ್ಷಣ, ನ್ಯಾನೋ ತಂತ್ರಜ್ಞಾನ, ನರವಿಜ್ಞಾನಗಳ ಜೊತೆಗೆ ಶೀಘ್ರವಾಗಿ ಪ್ರಾಮುಖ್ಯತೆ ಗಳಿಸುವಂಥ ಕ್ಷೇತ್ರಗಳಾದ ಕೃತಕ ಬುದ್ಧಿಮತ್ತೆ, ಡಾಟಾ ವಿಶ್ಲೇಷಣೆ, ಯಂತ್ರಕಲಿಕೆ ಮುಂತಾದ ವಿಷಯಗಳಲ್ಲಿ ವೃತ್ತಿಪರರನ್ನು ಸೃಷ್ಟಿಸುವ ಕಾರ್ಯದ ನೇತೃತ್ವವನ್ನು ಭಾರತ ವಹಿಸಬೇಕಾಗಿದೆ.

21. ವಯಸ್ಕ ಶಿಕ್ಷಣ ಹಾಗೂ ಜೀವಾವಧಿ ಕಲಿಕೆ:

21.1 ತಳಮಟ್ಟದ ಸಾಕ್ಷರತೆ ಸಾಧಿಸುವುದು, ಶಿಕ್ಷಣ ಗಳಿಸುವುದು ಹಾಗೂ ಅದರ ಮೂಲಕ ಜೀವನೋಪಾಯ ಕಲ್ಪಿಸುವುದು ಪ್ರತಿ ನಾಗರಿಕನ ಮೂಲಭೂತ ಹಕ್ಕು ಎಂದು ಪರಿಗಣಿಸಬೇಕು. ಸಾಕ್ಷರತೆ ಹಾಗೂ ಶಿಕ್ಷಣಗಳಿಂದ ವೈಯಕ್ತಿಕ, ನಾಗರಿಕ, ಆರ್ಥಿಕ, ಹಾಗೂ ಜೀವಾವಧಿ ಕಲಿಕೆಗಳ ನೂತನ ಜಗತ್ತು ತೆರೆಯಲಿದ್ದು, ವೈಯಕ್ತಿಕವಾಗಿ ಹಾಗೂ ವೃತ್ತಿಪರವಾಗಿ ಬೆಳೆಯಲು ಸಾಕಷ್ಟು ಅವಕಾಶಗಳು ದೊರೆಯಲಿವೆ. ಸಾಕ್ಷರತೆ ಹಾಗೂ ಮೂಲಭೂತ ಶಿಕ್ಷಣಗಳು, ಸಮಾಜ ಹಾಗೂ ರಾಷ್ಟ್ರ ಮಟ್ಟದಲ್ಲಿ ಅಭಿವೃದ್ಧಿ ಪ್ರಕ್ರಿಯೆಯ ಯಶಸ್ಸಿನ ವೇಗವನ್ನು ದ್ವಿಗುಣಗೊಳಿಸುವ ಪ್ರಮುಖ ಅಂಶಗಳಾಗಿವೆ. ಸಾಕ್ಷರತೆ ಪ್ರಮಾಣ ಹಾಗೂ ಸಮಗ್ರ ದೇಶೀಯ ಉತ್ಪನ್ನ (ಜಿ.ಡಿ.ಪಿ.)ಪ್ರಮಾಣಗಳ ನಡುವೆ ಪರಸ್ಪರ ಸಂಬಂಧವಿರುವುದು ಜಗತ್ತಿನ ವಿವಿಧ ರಾಷ್ಟ್ರಗಳ ದಾಖಲೆಗಳಿಂದ ಕಂಡುಬಂದಿದೆ.

21.2 ಅನಕ್ಷರಸ್ಥರಾಗಿರುವುದರಿಂದ ಹಲವು ರೀತಿಯ ತೊಂದರೆಗಳಿವೆ. ಅನಕ್ಷರಸ್ಥರಿಗೆ ಮೂಲ ಆರ್ಥಿಕ ವ್ಯವಹಾರವನ್ನು ನಡೆಸುವುದು ಕಷ್ಟವಾಗುತ್ತದೆ. ಬೆಲೆಗೆ ಅನುಗುಣವಾಗಿ ವಸ್ತುಗಳ ಗುಣಮಟ್ಟ, ಪ್ರಮಾಣಗಳನ್ನು ಪರಿಶೀಲಿಸುವಲ್ಲಿ ತೊಂದರೆಯಾಗುತ್ತದೆ. ಉದ್ಯೋಗ, ಸಾಲ, ಸೇವೆ ಮುಂತಾದವುಗಳಿಗೆ ಅರ್ಜಿಗಳನ್ನು ಭರ್ತಿ ಮಾಡಲು ಕಷ್ಟವಾಗುತ್ತದೆ. ಸಾರ್ವಜನಿಕ ಪ್ರಕಟಣೆಗಳು, ಪತ್ರಿಕೆಗಳಲ್ಲಿ ಬರುವ ಲೇಖನಗಳನ್ನು ಅರ್ಥಮಾಡಿಕೊಳ್ಳಲು, ಕಾಗದಪತ್ರ ಅಥವಾ ಈಮೇಲ್ ವ್ಯವಹಾರ ನಡೆಸಲು ಕಷ್ಟವಾಗುತ್ತದೆ. ಜೀವನ ಹಾಗೂ ಉದ್ಯೋಗಮಟ್ಟವನ್ನು ಸುಧಾರಿಸುವಲ್ಲಿ ನೆರವಾಗುವ ಇಂಟರ್‌ನೆಟ್ ಹಾಗೂ ಇತರ ತಂತ್ರಜ್ಞಾನಗಳನ್ನು ಬಳಸಿಕೊಳ್ಳಲು ಅನಕ್ಷರಸ್ಥರು ವಿಫಲರಾಗುತ್ತಾರೆ. ರಸ್ತೆ ನಿಯಮಗಳನ್ನು, ಸುರಕ್ಷತಾ ಕ್ರಮಗಳನ್ನು ವೈದ್ಯಕೀಯ ಸೂಚನೆಗಳನ್ನು ಅರ್ಥಮಾಡಿಕೊಳ್ಳಲು ಅವರಿಗೆ

ಕಷ್ಟವಾಗುತ್ತದೆ. ಮಕ್ಕಳ ಶಿಕ್ಷಣಕ್ಕೆ ನೆರವಾಗಲು, ಭಾರತದ ನಾಗರಿಕರಾಗಿ ತಮ್ಮ ಹಕ್ಕು ಹಾಗೂ ಕರ್ತವ್ಯಗಳ ಬಗ್ಗೆ ತಿಳಿಯಲು, ಸಾಹಿತ್ಯಕ್ಷೇತ್ರದಲ್ಲಿನ ಕಾರ್ಯಗಳನ್ನು ಪ್ರಶಂಸಿಸಲು ಸಾಧ್ಯವಾಗುವುದಿಲ್ಲ. ಸಾಕ್ಷರತೆ ಅಗತ್ಯವಾಗಿರುವ, ಉತ್ಪಾದಕತೆ ಹೆಚ್ಚಿರುವ ವಲಯಗಳಲ್ಲಿ ಉದ್ಯೋಗ ಪಡೆಯಲು ಸಾಧ್ಯವಾಗುವುದಿಲ್ಲ. ವಯಸ್ಕರ ಶಿಕ್ಷಣದಲ್ಲಿ ವಿನೂತನ ಕ್ರಮಗಳನ್ನು ಜಾರಿಗೊಳಿಸುವ ಮೂಲಕ ಮೇಲೆ ವಿವರಿಸಿದ ಸಮಸ್ಯೆಗಳನ್ನು ಪರಿಹರಿಸಬಹುದು.

ಭಾರತ ಮತ್ತು ಜಗತ್ತಿನ ವಿವಿಧ ರಾಷ್ಟ್ರಗಳಲ್ಲಿ ನಡೆಸಿದ ವಿಸ್ತೃತ ಅಧ್ಯಯನ ಹಾಗೂ ವಿಶ್ಲೇಷಣೆಗಳ ಪ್ರಕಾರ, ವಯಸ್ಕರ ಶಿಕ್ಷಣ ಕಾರ್ಯಕ್ರಮ ಯಶಸ್ವಿಯಾಗಲು, ಸ್ವ-ಇಚ್ಛೆ , ಸಮುದಾಯದ ಪಾಲ್ಗೊಳ್ಳುವಿಕೆ ಹಾಗೂ ಸಿದ್ಧತೆ ಅತೀ ಅಗತ್ಯ ಎಂದು ತಿಳಿದು ಬಂದಿದೆ. ಜೊತೆಗೆ ರಾಜಕೀಯ ಇಚ್ಛಾಶಕ್ತಿ, ಸಾಂಸ್ಥಿಕ ರಚನೆ, ಸೂಕ್ತ ಯೋಜನೆ, ಸಾಕಷ್ಟು ಆರ್ಥಿಕ ಬೆಂಬಲ ಹಾಗೂ ಉನ್ನತ ಗುಣಮಟ್ಟ ಹಾಗೂ ಸಾಮರ್ಥ್ಯವನ್ನು ಬೆಳೆಸುವಂತಹ ಶಿಕ್ಷಕರೂ ಹಾಗೂ ಸ್ವಯಂ ಸೇವಕರ ಅಗತ್ಯವೂ ಇದೆ. ಯಶಸ್ವೀ ಸಾಕ್ಷರತೆ ಯೋಜನೆಗಳಿಂದ ವಯಸ್ಕರ ಶಿಕ್ಷಣ ಪ್ರಮಾಣದಲ್ಲಿ ಹೆಚ್ಚಳ ಕಂಡುಬರುವುದರ ಜೊತೆಗೆ ಮಕ್ಕಳ ಶಿಕ್ಷಣಕ್ಕೂ ಬೇಡಿಕೆ ಹೆಚ್ಚಾಗಲಿದೆ. ಸಕಾರಾತ್ಮಕ ಸಾಮಾಜಿಕ ಬದಲಾವಣೆಗೂ ಈ ಕಾರ್ಯಕ್ರಮ ಕೊಡುಗೆ ನೀಡಲಿದೆ. ಜನರ ಸ್ವಯಂಪ್ರೇರಿತ ಪಾಲ್ಗೊಳ್ಳುವಿಕೆ ಹಾಗೂ ಬೆಂಬಲಗಳೇ, 1988ರಲ್ಲಿ ಅನುಷ್ಠಾನಗೊಂಡ ರಾಷ್ಟ್ರೀಯ ಸಾಕ್ಷರತಾ ಆಂದೋಲನದ ಮೂಲ ಆಧಾರಗಳಾಗಿದ್ದವು. ಈ ಆಂದೋಲನದಿಂದಾಗಿ 1991-2011ರ ಅವಧಿಯಲ್ಲಿ ರಾಷ್ಟ್ರೀಯ ಸಾಕ್ಷರತೆಯ ಪ್ರಮಾಣದಲ್ಲಿ ಗಣನೀಯ ಏರಿಕೆ ಕಂಡುಬಂತು. ಈ ಆಂದೋಲನವು ಮಹಿಳೆಯ ದಿನನಿತ್ಯದ ಮಾತುಕತೆಯ ಪ್ರಮುಖ ಭಾಗವಾಗಿತ್ತು.

21.4 ಸರ್ಕಾರ ಕೈಗೊಳ್ಳುವ ಪ್ರಬಲ ಹಾಗೂ ಆಧುನಿಕ ಕ್ರಮಗಳು-ಅದರಲ್ಲೂ ಮುಖ್ಯವಾಗಿ ಸಮುದಾಯ ಪಾಲ್ಗೊಳ್ಳುವಿಕೆ ಹಾಗೂ ಉಪಯುಕ್ತ ತಂತ್ರಜ್ಞಾನದ ಏಕೀಕರಣಕ್ಕೆ (ಬಳಕೆ?) ಸರ್ಕಾರ ಕೈಗೊಳ್ಳುವ ಕ್ರಮಗಳು, ಶೇ. 100ರಷ್ಟು ಸಾಕ್ಷರತೆ ಸಾಧಿಸುವ ಪ್ರಕ್ರಿಯೆಯನ್ನು ಮತ್ತಷ್ಟು ತ್ವರಿತಗೊಳಿಸುತ್ತವೆ.

21.5 ಈ ನಿಟ್ಟಿನಲ್ಲಿ ಮೊದಲ ಹೆಜ್ಜೆಯಾಗಿ, ವಯಸ್ಕರ ಶಿಕ್ಷಣಕ್ಕೆಂದೇ ನಿಯೋಜಿಸಲಾಗಿರುವ ಎನ್.ಸಿ.ಇ.ಆರ್.ಟಿಯ ನೂತನ ಹಾಗೂ ಬೆಂಬಲಿತ ಸಂಸ್ಥೆ ಪಠ್ಯಕ್ರಮಗಳ ರೂಪು ರೇಷೆಗಳನ್ನು ಸಿದ್ಧಪಡಿಸಲಿದೆ. ಎನ್.ಸಿ.ಇ.ಆರ್.ಟಿಯ ತಜ್ಞರೊಡನೆ ಸೇರಿ ಸಾಕ್ಷರತೆ, ಸಂಖ್ಯಾಶಾಸ್ತ್ರ, ಮೂಲ ಶಿಕ್ಷಣ, ವೃತ್ತಿಪರ ಸಾಮರ್ಥ್ಯ ಮತ್ತಿತರ ವಿಷಯಗಳನ್ನೊಳಗೊಂಡ ಅತ್ಯುತ್ತಮ ಗುಣಮಟ್ಟದ ಪಠ್ಯಕ್ರಮ ರೂಪಿಸಲಿದೆ. ವಯಸ್ಕರ ಶಿಕ್ಷಣದ ಪಠ್ಯಕ್ರಮ ವಿನ್ಯಾಸ ರೂಪಿಸುವ ಕಾರ್ಯವು ಸ್ಪಷ್ಟ ಫಲಿತಾಂಶಗಳನ್ನು ಹೊಂದಿರುವ ಐದು ರೀತಿಯ ಕಾರ್ಯಕ್ರಮಗಳನ್ನು ಹೊಂದಿದೆ. ಅವುಗಳೆಂದರೆ

(ಎ) ತಳಮಟ್ಟದ ಸಾಕ್ಷರತೆ ಹಾಗೂ ಸಂಖ್ಯಾಶಾಸ್ತ್ರ

(ಬಿ) ಸಂಕೀರ್ಣ ಜೀವನ ಕೌಶಲ್ಯಗಳು (ಇದು ಆರ್ಥಿಕ ಸಾಕ್ಷರತೆ, ಡಿಜಿಟಲ್ ಸಾಕ್ಷರತೆ, ವಾಣಿಜ್ಯ ಸಾಕ್ಷರತೆ, ಆರೋಗ್ಯ ಸಂರಕ್ಷಣೆ ಹಾಗೂ ಜಾಗೃತಿ, ಮಕ್ಕಳ ಸಂರಕ್ಷಣೆ ಹಾಗೂ ಕುಟುಂಬ ಕಲ್ಯಾಣಗಳನ್ನು ಒಳಗೊಂಡಿದೆ.)

(ಸಿ) ವೃತ್ತಿಪರ ಕೌಶಲ್ಯ ವೃದ್ಧಿ (ಸ್ಥಳೀಯವಾಗಿ ಉದ್ಯೋಗ ಪಡೆಯುವ ಗುರಿ ಹೊಂದಿದೆ)

(ಡಿ) ಮೂಲಶಿಕ್ಷಣ (ಸಿದ್ಧತಾ, ಮಧ್ಯಮ ಹಾಗೂ ದ್ವಿತೀಯ ಹಂತಕ್ಕೆ ಸಮಾನವಾದ ಶಿಕ್ಷಣವನ್ನು ಒಳಗೊಂಡಿದೆ) ಮತ್ತು

(ಇ) ನಿರಂತರ ಶಿಕ್ಷಣ (ಕಲೆ, ವಿಜ್ಞಾನ, ತಂತ್ರಜ್ಞಾನ, ಸಂಸ್ಕೃತಿ, ಕ್ರೀಡೆ ಹಾಗೂ ಮನರಂಜನೆ ಜೊತೆಗೆ ಇತರ ಸಂಕೀರ್ಣ ಜೀವನ ಕೌಶಲ್ಯ ಸಾಧನಗಳನ್ನು ಬಳಕೆ ಮುಂತಾದ ಆಸಕ್ತಿಕರ ವಿಷಯಗಳಲ್ಲಿ ವಯಸ್ಕರ ಶಿಕ್ಷಣ ಜಾರಿಗೊಳಿಸುವುದು). ವಯಸ್ಕರ ಶಿಕ್ಷಣದ ಬೋಧನಾ ವಿಧಾನಗಳು ಹಾಗೂ ಕಲಿಕಾ ಸಾಮಗ್ರಿಗಳು, ಮಕ್ಕಳ ಬೋಧನಾ ವಿಧಾನ ಹಾಗೂ ಕಲಿಕಾ ಸಾಮಗ್ರಿಗಳಿಗಿಂತ ಭಿನ್ನವಾಗಿರಬೇಕು ಎಂಬುದನ್ನು ಪಠ್ಯಕ್ರಮ ರೂಪಿಸುವ ತಜ್ಞರು ನೆನಪಿನಲ್ಲಿಟ್ಟುಕೊಳ್ಳಬೇಕು.

21.6 ಎರಡನೆಯದಾಗಿ, ಶಿಕ್ಷಣ ಹಾಗೂ ನಿರಂತರ ಕಲಿಕೆ ಬಗ್ಗೆ ಆಸಕ್ತಿಯುಳ್ಳ ವಯಸ್ಕರು ಶಿಕ್ಷಣ ಪಡೆಯಲು ನೆರವಾಗುವ ಸೂಕ್ತ ಮೂಲಭೂತ ವ್ಯವಸ್ಥೆ ಇರುವಂತೆ ನೋಡಿಕೊಳ್ಳಬೇಕು. ಈ ನಿಟ್ಟಿನಲ್ಲಿ ಶಾಲಾ ಅವಧಿಯ ನಂತರ ಅಥವಾ ವಾರಾಂತ್ಯಗಳಲ್ಲಿ ಶಾಲೆಗಳು ಅಥವಾ ಶಾಲಾ ಆವರಣವನ್ನು ಬಳಸಿಕೊಳ್ಳಬಹುದು. ಸಾರ್ವಜನಿಕ ಗ್ರಂಥಾಲಯಗಳ ಆವರಣವನ್ನೂ ಉಪಯೋಗಿಸಿಕೊಳ್ಳಬಹುದು. ಮೂಲಭೂತ ಸೌಕರ್ಯಗಳನ್ನು ಶಾಲೆಗಳಿಗೆ, ಉನ್ನತ ಶಿಕ್ಷಣಕ್ಕೆ, ವಯಸ್ಕರ ಶಿಕ್ಷಣಕ್ಕೆ, ವೃತ್ತಿಪರ ಶಿಕ್ಷಣಕ್ಕೆ, ಇತರ ಚಟುವಟಿಕೆಗಳಿಗೆ ಎಂದು ಹಂಚಿಕೊಳ್ಳುವುದು ಕಷ್ಟ. ಹಾಗಾಗಿ ಇತರ ಸರ್ಕಾರಿ ಸಂಸ್ಥೆಗಳಾದ ಉನ್ನತ ಶಿಕ್ಷಣ ಸಂಸ್ಥೆ, ವೃತ್ತಿಪರ ಶಿಕ್ಷಣ ತರಬೇತಿ ಕೇಂದ್ರಗಳ ಆವರಣದಲ್ಲೇ ವಯಸ್ಕರ ಶಿಕ್ಷಣ ಕೇಂದ್ರ, ಅದರ ಭಾಗವೇ ಎಂಬಂತೆ ಶಾಶ್ವತವಾಗಿ ಕಾರ್ಯನಿರ್ವಹಿಸುವಂತೆ ಮಾಡಬಹುದು.

21.7 ವಯಸ್ಕ ಶಿಕ್ಷಣ ಪಠ್ಯಕ್ರಮ ರಚನೆ ರೂಪು ರೇಷೆಗಳಲ್ಲಿ ವಿವರಿಸಿದಂತೆ, ಶಿಕ್ಷಣ ತಜ್ಞರು ಎಲ್ಲ ಐದು ರೀತಿಯ ವಯಸ್ಕರ ಶಿಕ್ಷಣದ ಪಠ್ಯಪುಸ್ತಕಗಳನ್ನು ರೂಪಿಸಲಿದ್ದಾರೆ. ಈ ತಜ್ಞರು ವಯಸ್ಕ ಶಿಕ್ಷಣ ಕೇಂದ್ರಗಳನ್ನು ನಡೆಸಲು, ಸ್ವಯಂಸೇವಕ ಮಾರ್ಗದರ್ಶಿಗಳ ಜೊತೆ ಹೊಂದಾಣಿಕೆ ಮಾಡಿಕೊಳ್ಳಲು, ರಾಷ್ಟ್ರೀಯ, ರಾಜ್ಯ ಹಾಗೂ ಜಿಲ್ಲಾಮಟ್ಟದ ಸಂಪನ್ಮೂಲ ಬೆಂಬಲಿತ ಸಂಸ್ಥೆಗಳಲ್ಲಿ ತರಬೇತಿ

ಪಡೆಯಲಿದ್ದಾರೆ. ಉನ್ನತ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿ ಸೇರಿದಂತೆ ಉತ್ತಮ ವಿದ್ಯಾರ್ಹತೆ ಉಳ್ಳ ಜನರನ್ನು ಈ ಕಾರ್ಯದಲ್ಲಿ ಕೈಜೋಡಿಸಲು ಉತ್ತೇಜಿಸಲಾಗುವುದು. ಸ್ವಯಂಸೇವಕರಾಗಲು, ವಯಸ್ಕ ಶಿಕ್ಷಣ ಬೋಧಕರಾಗಲು ಅಲ್ಪಾವಧಿಯ ತರಬೇತಿ ಪಡೆಯುವಂತೆ, ಸ್ವಯಂಸೇವಕ- ಬೋಧಕರಾಗಲು ಉತ್ತೇಜಿಸಲಾಗುವುದು. ರಾಷ್ಟ್ರಕ್ಕಾಗಿ ಇವರು ಸಲ್ಲಿಸುವ ಸೇವೆಯನ್ನು ಗುರುತಿಸಲಾಗುವುದು. ಸಾಕ್ಷರತೆ ಹಾಗೂ ವಯಸ್ಕರ ಶಿಕ್ಷಣಗಳ ಯೋಜನೆಗಳ ಅನುಷ್ಠಾನದಲ್ಲಿ ರಾಜ್ಯ ಸರ್ಕಾರಗಳು ಸರ್ಕಾರೇತರ ಸಂಸ್ಥೆ(ಎನ್.ಜಿ.ಒ) ಮತ್ತು ಇತರ ಸಮುದಾಯ ಸಂಸ್ಥೆಗಳ ಜೊತೆ ಸೇರಿ ಕಾರ್ಯನಿರ್ವಹಿಸಲಿವೆ.

21.8 ನಾಲ್ಕನೆಯದಾಗಿ, ವಯಸ್ಕರ ಶಿಕ್ಷಣ ಕಾರ್ಯದಲ್ಲಿ ಸಮುದಾಯದ ಸದ್ಯಸ್ಯರು ಪಾಲ್ಗೊಳ್ಳುವಂತೆ ಮಾಡಲು ಎಲ್ಲ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುವುದು. ಕಾಲೇಜಿಗೆ ಪ್ರವೇಶ ಪಡೆಯದ ವಿದ್ಯಾರ್ಥಿಗಳು, ಅನುತ್ತೀರ್ಣರಾಗಿ ಶಿಕ್ಷಣದಿಂದ ದೂರ ಉಳಿದವರು ಮುಂತಾದವರ ವಿವರಗಳನ್ನು ಈ ಕಾರ್ಯಕ್ಕೆಂದೇ ನಿಯೋಜಿತರಾಗಿರುವ ಸಾಮಾಜಿಕ ಕಾರ್ಯಕರ್ತರು ಅಥವಾ ಆಪ್ತಸಮಾಲೋಚಕರು ಸಂಗ್ರಹಿಸಿ, ವಯಸ್ಕರ ಶಿಕ್ಷಣ ಕಾರ್ಯದಲ್ಲಿ ಪಾಲ್ಗೊಳ್ಳುವಂತೆ ಅವರ ಮನವೊಲಿಸಲಿದ್ದಾರೆ. ಶಿಕ್ಷಣ ಕಲಿಯಲು ಅಥವಾ ಕಲಿಸಲು ಉತ್ಸುಕರಾಗಿರುವ ಪೋಷಕರು, ಯುವಕ-ಯುವತಿಯರ ಮಾಹಿತಿ ಪಡೆದು, ಅವರನ್ನು ಸ್ಥಳೀಯ ವಯಸ್ಕ ಶಿಕ್ಷಣ ಕೇಂದ್ರದ ಸಂಪರ್ಕಕ್ಕೆ ತರಲಿದ್ದಾರೆ. ಜಾಹೀರಾತುಗಳ ಮೂಲಕ, ಸರ್ಕಾರೇತರ ಸಂಸ್ಥೆಗಳು, ಸ್ಥಳೀಯ ಸಂಸ್ಥೆಗಳು ನಡೆಸುವ ಸಮಾರಂಭಗಳಲ್ಲಿ ಪ್ರಕಟಣೆಗಳ ಮೂಲಕ ವಯಸ್ಕ ಶಿಕ್ಷಣದ ಅವಕಾಶಗಳನ್ನು ಸಾರ್ವಜನಿಕರಿಗೆ ತಿಳಿಸಲಾಗುವುದು.

21.9 ಐದನೆಯದಾಗಿ, ಸಮಾಜದಲ್ಲಿ ಹಾಗೂ ಶಿಕ್ಷಣ ಸಂಸ್ಥೆಗಳಲ್ಲಿ ಓದುವ ಹವ್ಯಾಸ ಬೆಳೆಸಲು ಪುಸ್ತಕಗಳನ್ನು ಸುಲಭವಾಗಿ ದೊರೆಯುವಂತೆ ನೋಡಿಕೊಳ್ಳುವುದು. ವಿಶೇಷ ಚೇತನರು ಸೇರಿದಂತೆ ಎಲ್ಲ ವಿದ್ಯಾರ್ಥಿಗಳಿಗೆ ಅಗತ್ಯವಾಗಿರುವ ಪುಸ್ತಕಗಳು ಸುಲಭವಾಗಿ ಕೈಗೆಟಕುವಂತೆ ಮಾಡಲು ಎಲ್ಲಾ ಶಾಲಾ-ಕಾಲೇಜುಗಳನ್ನು, ವಿಶ್ವವಿದ್ಯಾನಿಲಯಗಳನ್ನು, ಗ್ರಂಥಾಲಯಗಳನ್ನು ಸುಸಜ್ಜಿತಗೊಳಿತಗೊಳಿಸಬೇಕು ಎಂದು ಶಿಕ್ಷಣ ಕಾಯಿದೆ ಶಿಫಾರಸು ಮಾಡಿದೆ. ಗ್ರಾಮೀಣ ಪ್ರದೇಶ, ದೂರದ ಗ್ರಾಮ, ಸಾಮಾಜಿಕ-ಆರ್ಥಿಕವಾಗಿ ಹಿಂದುಳಿದ ಪ್ರದೇಶದಲ್ಲಿರುವ ವಿದ್ಯಾರ್ಥಿಗಳೂ ಸೇರಿದಂತೆ ದೇಶದಾದ್ಯಂತ ಇರುವ ವಿದ್ಯಾರ್ಥಿಗಳಿಗೆ ಪುಸ್ತಕಗಳು ಸುಲಭವಾಗಿ ದೊರೆಯುವಂತೆ ಮಾಡಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಅಗತ್ಯ ಕ್ರಮ ಕೈಗೊಳ್ಳಲಿವೆ. ಭಾರತೀಯ ಭಾಷೆಗಳಲ್ಲಿ ಪ್ರಕಟವಾಗುವ ಪುಸ್ತಕಗಳ ಗುಣಮಟ್ಟ ಹಾಗೂ ಆಕರ್ಷಣೆ ಹೆಚ್ಚಿಸಲು ಸರ್ಕಾರಿ ಹಾಗೂ ಖಾಸಗಿ ಸಂಸ್ಥೆಗಳು ಯೋಜನೆ ರೂಪಿಸಲಿವೆ. ಜೊತೆಗೆ ಆನ್‌ಲೈನ್ ಮೂಲಕ ಪುಸ್ತಕ ಪಡೆಯುವ ಸೌಲಭ್ಯ ಹಾಗೂ ಡಿಜಿಟಲ್ ಲೈಬ್ರರಿ ಸೌಲಭ್ಯವನ್ನು ಕಲ್ಪಿಸಲು ಕ್ರಮ ಕೈಗೊಳ್ಳಲಾಗುವುದು. ಹೆಚ್ಚು ಹೆಚ್ಚು ಗ್ರಂಥಾಲಯ ಸಿಬ್ಬಂದಿಗಳ ನೇಮಕ, ಅವರಿಗೆ ಸೂಕ್ತ ಉತ್ತೇಜನ, ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ಗ್ರಂಥಾಲಯಗಳನ್ನು ಇನ್ನಷ್ಟು ಸುಸಜ್ಜಿತಗೊಳಿಸುವುದು, ಗ್ರಾಮೀಣ ಪ್ರದೇಶಗಳಲ್ಲಿ ಗ್ರಂಥಾಲಯ, ಕುಗ್ರಾಮಗಳಲ್ಲಿ ವಾಚನಾ ಕೊಠಡಿಗಳ ಸ್ಥಾಪನೆ, ಭಾರತೀಯ ಭಾಷೆಗಳ ಸಾಕಷ್ಟು ವಾಚನಾ ಸಾಮಗ್ರಿ/ಪುಸ್ತಕಗಳ ಪೂರೈಕೆ, ಮಕ್ಕಳ ಗ್ರಂಥಾಲಯ, ಸಂಚಾರಿ ಗ್ರಂಥಾಲಯ, ದೇಶದಾದ್ಯಂತ ಸಾಮಾಜಿಕ ಪುಸ್ತಕ ಕ್ಲಬ್‌ಗಳ ಸ್ಥಾಪನೆ ಮುಂತಾದ ಕ್ರಮಗಳನ್ನು ಉನ್ನತ ಶಿಕ್ಷಣ ಸಂಸ್ಥೆಗಳು ಹಾಗೂ ಗ್ರಂಥಾಲಯಗಳ ಸಹಭಾಗಿತ್ವದಿಂದ ಕೈಗೊಳ್ಳಲಾಗುವುದು.

21.10 ಮೇಲ್ಕಂಡ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಸೂಕ್ತ ತಂತ್ರಜ್ಞಾನವನ್ನು ಬಳಸಲಾಗುವುದು. ಆ್ಯಪ್‌ಗಳು, ಆನ್‌ಲೈನ್ ಶಿಕ್ಷಣ/ವಿಧಾನಗಳು, ಉಪಗ್ರಹ ಆಧಾರಿತ ಟಿವಿ ವಾಹಿನಿಗಳು, ಆನ್‌ಲೈನ್ ಪುಸ್ತಕಗಳು ಮೊದಲಾದ ತಂತ್ರಜ್ಞಾನ ಆಧಾರಿತ ಆಯ್ಕೆಗಳ ಮೂಲಕ ವಯಸ್ಕ ಶಿಕ್ಷಣವನ್ನು ಉತ್ತೇಜಿಸಲಾಗುವುದು. ಮಾಹಿತಿ ಮತ್ತು ಸಂಪರ್ಕ ತಂತ್ರಜ್ಞಾನ (ಐ.ಸಿ.ಟಿ) ವ್ಯವಸ್ಥೆಯುಳ್ಳ ಗ್ರಂಥಾಲಯಗಳು ಹಾಗೂ ವಯಸ್ಕ ಶಿಕ್ಷಣ ಕೇಂದ್ರಗಳನ್ನು ಇನ್ನಷ್ಟು ಅಭಿವೃದ್ಧಿಪಡಿಸಲಾಗುವುದು. ಆನ್‌ಲೈನ್ ಅಥವಾ ಮಿಶ್ರ ಮಾದರಿ (ಆನ್‌ಲೈನ್ ಹಾಗೂ ನೇರ ಶಿಕ್ಷಣ) ಮೂಲಕ ಉತ್ತಮ ಗುಣಮಟ್ಟದ ವಯಸ್ಕರ ಶಿಕ್ಷಣ ನೀಡಬಹುದು ಎನ್ನಲಾಗಿದೆ.

22. ಭಾರತೀಯ ಭಾಷೆಗಳು, ಕಲೆ ಮತ್ತು ಸಂಸ್ಕೃತಿ

22.1 ಭಾರತ ಸಂಸ್ಕೃತಿಯ ಗುಪ್ತನಿಧಿಯಾಗಿದೆ. ಸಾವಿರಾರು ವರ್ಷಗಳಿಂದ ಅಭಿವೃದ್ಧಿಪಡಿಸಿದ ಬೃಹತ್ ಭಂಡಾರ ಇದಾಗಿದೆ. ಕಲೆ, ಸಾಹಿತ್ಯ ಕೃತಿಗಳು ಸಂಪ್ರದಾಯಗಳು, ಭಾಷಾ ಅಭಿವ್ಯಕ್ತಿಗಳು, ಕರಕುಶಲಗಳು, ಪರಂಪರಾ ತಾಣಗಳು ಮತ್ತು ಇನ್ನೂ ಅನೇಕ ರೂಪದಲ್ಲಿ ಇದು ರುಜುವಾತಾಗಿದೆ. ಪ್ರವಾಸೋದ್ಯಮಕ್ಕಾಗಿ ಭಾರತಕ್ಕೆ ಭೇಟಿ ನೀಡುವ ಸಲುವಾಗಿ, ಭಾರತದ ಆತಿಥ್ಯವನ್ನು ಅನುಭವಿಸುವ ಮೂಲಕ, ಕರಕುಶಲಕಲೆಗಳು ಮತ್ತು ನೇಕಾರಿಕೆಯಿಂದ ಮಾಡಲಾದ ಬಟ್ಟೆಗಳನ್ನು ಖರೀದಿಸುವ ಮೂಲಕ, ಶ್ರೇಷ್ಠ ಸಾಹಿತ್ಯವನ್ನು ಓದುವ ಮೂಲಕ, ಯೋಗ ಮತ್ತು ಧ್ಯಾನವನ್ನು ಅಭ್ಯಾಸ ಮಾಡುವ ಮೂಲಕ ವ, ತತ್ವಶಾಸ್ತ್ರದಿಂದ ಸ್ಫೂರ್ತಿಗೆ ಒಳಗಾಗುವ ಮೂಲಕ, ವಿಶಿಷ್ಟ ಹಬ್ಬಗಳಲ್ಲಿ ಭಾಗಿಯಾಗುವ ಮೂಲಕ, ವೈವಿಧ್ಯಮಯ ಸಂಗೀತ ಮತ್ತು ಕಲೆಯನ್ನು ಪ್ರಶಂಸಿಸುವ ಮೂಲಕ, ಮತ್ತು ಚಲನಚಿತ್ರಗಳನ್ನು ವೀಕ್ಷಿಸುವುದು ಸೇರಿದಂತೆ ಇನ್ನೂ ಹಲವಾರು ವಿಷಯಗಳ ರೂಪದಲ್ಲಿ ವಿಶ್ವದಾದ್ಯಂತದಿಂದ ಬರುವ ಕೋಟ್ಯಂತರ ಜನರು ಈ ಸಾಂಸ್ಕೃತಿಕ ಸಂಪತ್ತನ್ನು ಪ್ರತಿದಿನವೂ ಆಸ್ವಾದಿಸುತ್ತಾ ಅದರಲ್ಲಿ ಭಾಗಿಯಾಗಿ, ಸಂತೋಷಪಟ್ಟು ಅದರ ಲಾಭ

ಪಡೆದುಯುತ್ತಾರೆ. ಭಾರತದ ಪ್ರವಾಸೋದ್ಯಮದ ಘೋಷಣೆಯ ಪ್ರಕಾರ ಈ ಸಂಸ್ಕೃತಿ ಮತ್ತು ನೈಸರ್ಗಿಕ ಸಂಪತ್ತುಗಳೇ ಈ ದೇಶವನ್ನು 'ಅಸಾಧಾರಣ ಭಾರತ'ವಾಗಿ ಮಾಡಿದೆ. ಭಾರತದ ಸಾಂಸ್ಕೃತಿಕ ಸಂಪತ್ತಿನ ಸಂರಕ್ಷಣೆ ಮತ್ತು ಪ್ರೋತ್ಸಾಹವನ್ನು ರಾಷ್ಟ್ರದ ಅತ್ಯಂತ ಆದ್ಯತೆ ಎಂದು ಪರಿಗಣಿಸಬೇಕು, ಏಕೆಂದರೆ ಇದು ದೇಶದ ಅಸ್ತಿತ್ವದ ಜೊತೆಗೆ ಅದರ ಆರ್ಥಿಕತೆಯ ದೃಷ್ಟಿಯಿಂದ ಮಹತ್ವದ್ದಾಗಿದೆ.

22.2 ಭಾರತದ ಕಲೆ ಮತ್ತು ಸಂಸ್ಕೃತಿಯ ಉತ್ತೇಜನ ಕೇವಲ ರಾಷ್ಟ್ರಕ್ಕಾಗಿ ಮಾತ್ರವಲ್ಲದೆ ವೈಯಕ್ತಿಕವಾಗಿ ಮಹತ್ವದ್ದಾಗಿದೆ. ಇತರ ಸಂಸ್ಕೃತಿ ಮತ್ತು ಅನನ್ಯತೆಯನ್ನು ಪ್ರಶಂಸಿಸುವುದರ ಜೊತೆಗೆ ನಮ್ಮ ಮಕ್ಕಳಲ್ಲಿ ನಮ್ಮದೇ ಅಸ್ತಿತ್ವ, ಸಂಬಂಧದ ಬಗೆಗೆ ಪ್ರಜ್ಞೆಯನ್ನು ಬೆಳೆಸುವ ನಿಟ್ಟಿನಲ್ಲಿ ಸಾಂಸ್ಕೃತಿಕ ಅರಿವು ಮತ್ತು ಅಭಿವ್ಯಕ್ತಿಯನ್ನು ಪ್ರಮುಖ ಸಾಮರ್ಥ್ಯ ಎಂದು ಪರಿಗಣಿಸಲಾಗುತ್ತದೆ. ತಮ್ಮದೇ ಸಾಂಸ್ಕೃತಿಕ ಇತಿಹಾಸ, ಕಲೆ, ಭಾಷೆ ಮತ್ತು ಸಂಪ್ರದಾಯಗಳ ಬಗ್ಗೆ ದೃಢವಾದ ಪ್ರಜ್ಞೆ ಮತ್ತು ಜ್ಞಾನವನ್ನು ಬೆಳೆಸಿಕೊಳ್ಳುವುದರ ಮೂಲಕ ಮಕ್ಕಳಲ್ಲಿ ಧನಾತ್ಮಕ ಸಾಂಸ್ಕೃತಿಕ, ಅಸ್ತಿತ್ವ ಮತ್ತು ಆತ್ಮಗೌರವವನ್ನು ಬೆಳೆಸಬಹುದಾಗಿದೆ. ಹಾಗಾಗಿ ಸಾಂಸ್ಕೃತಿಕ ಜಾಗೃತಿ ಮತ್ತು ಅಭಿವ್ಯಕ್ತಿಯು ವೈಯಕ್ತಿಕವಾಗಿ ಹಾಗೂ ಸಾಮಾಜಿಕ ಯೋಗ-ಕ್ಷೇಮದ ದೃಷ್ಟಿಯಿಂದಲೂ ಅತ್ಯಂತ ಮಹತ್ವದ ಕೊಡುಗೆಗಳಾಗಿವೆ.

22.3 ಸಂಸ್ಕೃತಿಯನ್ನು ಪ್ರಸ್ತುತಪಡಿಸುವುದರಲ್ಲಿ ಕಲೆಗಳು ಪ್ರಮುಖ ಮಾಧ್ಯಮವಾಗಿವೆ. ಕಲೆಗಳು ಸಾಂಸ್ಕೃತಿಕ ಅಸ್ತಿತ್ವವನ್ನು ಗಟ್ಟಿಗೊಳಿಸಿ, ಜಾಗೃತಿ ಹುಟ್ಟಿಸಿ ಮತ್ತು ಸಮಾಜವನ್ನು ಉದ್ಧರಿಸುವುದು ಮಾತ್ರವಲ್ಲದೆ, ವ್ಯಕ್ತಿಗಳಲ್ಲಿ ಜ್ಞಾನಗ್ರಹಣವನ್ನು ಹಾಗೂ ಕ್ರಿಯಾಶೀಲತೆಯನ್ನು ಹೆಚ್ಚಿಸಿ ಹಾಗೂ ವೈಯಕ್ತಿಕ ಸಂತೋಷವನ್ನು ವೃದ್ಧಿಗೊಳಿಸುವುದರಲ್ಲಿ ಅಗ್ರಗಣ್ಯ ಸ್ಥಾನ ಪಡೆದಿದೆ. . ವ್ಯಕ್ತಿಯ ಸಂತೋಷ, ಯೋಗಕ್ಷೇಮ, ಜ್ಞಾನಗ್ರಹಣದ ಬೆಳವಣಿಗೆ ಮತ್ತು ಸಾಂಸ್ಕೃತಿಕ ಅಸ್ತಿತ್ವದ ಕಾರಣದಿಂದಾಗಿ ಎಲ್ಲಾ ರೀತಿಯ ಭಾರತೀಯ ಕಲೆಗಳು ಮಕ್ಕಳ ಲಾಲನೆ-ಪಾಲನೆ ಮತ್ತು ಆರಂಭಿಕ ಶಿಕ್ಷಣದಿಂದ ಆರಂಭವಾಗಿ ಶಿಕ್ಷಣದ ಎಲ್ಲಾ ಹಂತಗಳಲ್ಲಿ ವಿದ್ಯಾರ್ಥಿಗಳಿಗೆ ಸಿಗುವಂತಾಗಬೇಕು.

22.4 ಕಲೆ ಮತ್ತು ಸಂಸ್ಕೃತಿಯ ಜೊತೆಗೆ ಭಾಷೆಯದ್ದು ನಿಸ್ಸಂದೇಹವಾಗಿ ಬಿಡಿಸಲಾರದ ನಂಟು. ನಾನಾ ಭಾಷೆಗಳು ಜಗತ್ತನ್ನು ಭಿನ್ನ ರೀತಿಯಲ್ಲಿ ನೋಡುತ್ತವೆ. ಹಾಗಾಗಿ ಒಂದು ಭಾಷೆಯ ಸ್ವರೂಪ ಅದನ್ನು ಮಾತನಾಡುವ ಸ್ಥಳೀಯರ ಅನುಭವದ ಗ್ರಹಿಕೆಯನ್ನು ನಿರ್ಧರಿಸುತ್ತದೆ. ನಿರ್ದಿಷ್ಟವಾಗಿ ಹೇಳಬೇಕೆಂದರೆ, ಆಯಾ ಸಂಸ್ಕೃತಿಗೆ ಸೇರಿದ ಜನರು ತಮ್ಮ ಕುಟುಂಬ ಸದಸ್ಯರು, ಅಧಿಕಾರಿಗಳು, ತಜ್ಞರು ಮತ್ತು ಅಪರಿಚಿತರು ಸೇರಿದಂತೆ ಇತರರೊಂದಿಗೆ ಮಾತನಾಡುವ ರೀತಿಯ ಮೇಲೆ ಭಾಷೆಗಳು ಪ್ರಭಾವ ಬೀರುತ್ತವೆ ಮತ್ತು ಮಾತಿನ ದಾಟಿಯ ಮೇಲೆ ಪ್ರಭಾವ ಬೀರುತ್ತವೆ. ಸಮಾನ ಭಾಷೆಯನ್ನು ಮಾತನಾಡುವ ಭಾಷಿಗರ ಸಂಭಾಷಣೆಯಲ್ಲಿ ಅಂತರ್ಗತವಾಗಿರುವ ಮಾತಿನ ದಾಟಿ, ಅನುಭವದ ಗ್ರಹಿಕೆ ಮತ್ತು ಅನ್ಯೋನ್ಯತೆ ಒಂದು ಸಂಸ್ಕೃತಿಯ ಪ್ರತಿಬಿಂಬ ಅಥವಾ ದಾಖಲೆಯಾಗಿರುತ್ತದೆ. ಹಾಗಾಗಿ ಸಂಸ್ಕೃತಿಯು ನಮ್ಮ ಭಾಷೆಗಳಲ್ಲಿ ಆವರಿಸಿಕೊಂಡಿರುತ್ತದೆ. ಸಾಹಿತ್ಯ, ನಾಟಕ, ಸಂಗೀತ, ಚಲನಚಿತ್ರ ಇತ್ಯಾದಿ ರೂಪದಲ್ಲಿರುವ ಕಲೆಯನ್ನು ಭಾಷೆಯ ನಂಟು ಇಲ್ಲದೆ ಪೂರ್ಣವಾಗಿ ಪ್ರಶಂಸಿಸಲು ಸಾಧ್ಯವಿಲ್ಲ. ಸಂಸ್ಕೃತಿಯನ್ನು ಸಂರಕ್ಷಿಸಲು ಮತ್ತು ಪ್ರೋತ್ಸಾಹಿಸಲು ಒಂದು ಸಂಸ್ಕೃತಿಯ ಭಾಷೆಗಳನ್ನು ಕೂಡ ಸಂರಕ್ಷಿಸಬೇಕು ಮತ್ತು ಪ್ರೋತ್ಸಾಹಿಸಬೇಕು.

22.5 ದುರಾದೃಷ್ಟದ ಸಂಗತಿ ಏನೆಂದರೆ ಭಾರತೀಯ ಭಾಷೆಗಳಿಗೆ ನಿಜಕ್ಕೂ ಸಿಗಬೇಕಾದ ಮಾನ್ಯತೆ ಮತ್ತು ಕಾಳಜಿ ಸಿಕ್ಕಿಲ್ಲದೇ ಇರುವುದರಿಂದ ಕಳೆದ ಐವತ್ತು ವರ್ಷಗಳಲ್ಲಿ ರಾಷ್ಟ್ರ 220ಕ್ಕೂ ಹೆಚ್ಚು ಭಾಷೆಗಳನ್ನು ಕಳೆದುಕೊಂಡಿದೆ. ಭಾರತದ 197 ಭಾಷೆಗಳು ಅಳಿವಿನ ಅಂಚಿನಲ್ಲಿವೆ ಎಂದು ಯುನೆಸ್ಕೋ ಘೋಷಿಸಿದೆ. ವಿಶೇಷವಾಗಿ ಲಿಪಿರಹಿತ ಅನೇಕ ಭಾಷೆಗಳು ವಿನಾಶದ ಅಂಚಿನಲ್ಲಿವೆ. ಇಂತಹ ಭಾಷೆಗಳನ್ನು ಮಾತನಾಡುವ ಒಂದು ಬುಡಕಟ್ಟಿನ ಅಥವಾ ಸಮುದಾಯದ ಹಿರಿಯರೊಬ್ಬರು ಮೃತಪಟ್ಟರೆ ಈ ಭಾಷೆಗಳು ಅವರೊಂದಿಗೇ ಮರೆಯಾಗುತ್ತವೆ; ಇಂತಹ ಶ್ರೀಮಂತ ಭಾಷೆಗಳು/ಸಂಸ್ಕೃತಿಯ ಅಭಿವ್ಯಕ್ತಿಗಳನ್ನು ಸಂರಕ್ಷಿಸುವ ಅಥವಾ ದಾಖಲಿಸುವ ಯೋಜಿತ ಕ್ರಮಗಳನ್ನು.ಕೈಗೊಂಡಿಲ್ಲ.

22.6 ಇದೆಲ್ಲಕ್ಕಿಂತ ಹೆಚ್ಚಾಗಿ, ಇಂತಹ ಅಪಾಯದ ಪಟ್ಟಿಯಲ್ಲಿ ಅಧಿಕೃತವಾಗಿ ಇಲ್ಲದೇ ಇರುವ, ಉದಾಹರಣೆಗೆ ಭಾರತದ ಸಂವಿಧಾನದ ಎಂಟನೇ ಶೆಡ್ಯೂಲ್ (ಪರಿಚ್ಛೇದ)ನಲ್ಲಿ ಇರುವ 22 ಭಾಷೆಗಳು ಕೂಡ ಅನೇಕ ಆಯಾಮಗಳಿಂದ ಗಂಭೀರ ಸಮಸ್ಯೆಗಳನ್ನು ಎದುರಿಸುತ್ತಿವೆ. ಶಾಲೆ ಮತ್ತು ಉನ್ನತ ಶಿಕ್ಷಣದ ಪ್ರತಿಯೊಂದು ಹಂತದಲ್ಲಿಯೂ ಭಾರತೀಯ ಭಾಷೆಗಳ ಬೋಧನೆ ಮತ್ತು ಕಲಿಕೆಯನ್ನು ಇನ್ನಷ್ಟು ಗಟ್ಟಿಗೊಳಿಸಬೇಕಾದ ಅಗತ್ಯವಿದೆ. ಈ ಭಾಷೆಗಳು ಪ್ರಸ್ತುತ ಹಾಗೂ ಚಲನಶೀಲವಾಗಿ ಇರುವಂತೆ ಮಾಡಲು, ಪಠ್ಯಪುಸ್ತಕಗಳು, ವರ್ಕ್-ಬುಕ್ಗಳು, ವಿಡಿಯೋಗಳು, ನಾಟಕಗಳು, ಕವಿತೆಗಳು, ಕಾದಂಬರಿ, ನಿಯತಕಾಲಿಕಗಳು ಸೇರಿದಂತೆ ಈ ಭಾಷೆಗಳಲ್ಲಿರುವ ಉನ್ನತ ಗುಣಮಟ್ಟದ ಕಲಿಕಾ ಮತ್ತು ಮುದ್ರಣ ಸಾಮಗ್ರಿಗಳು ನಿರಂತರವಾಗಿ ಪ್ರಸಾರವಾಗುತ್ತಿರುವಂತೆ ಮಾಡಬೇಕು. ಪದಪಟ್ಟಿ ಮತ್ತು ಶಬ್ದಕೋಶಗಳಲ್ಲಿ ಭಾಷೆಗಳು ಅಧಿಕೃತವಾಗಿ ನಿರಂತರ ಪರಿಷ್ಕೃತಗೊಳ್ಳುತ್ತಲೇ ಇರಬೇಕು ಮತ್ತು ಇದನ್ನು ವ್ಯಾಪಕವಾಗಿ ಪ್ರಸಾರ ಮಾಡುತ್ತಿರಬೇಕು. ಹಾಗೆ ಮಾಡುವುದರಿಂದ ಇತ್ತೀಚಿನ ವಿಷಯಗಳು ಮತ್ತು ಪರಿಕಲ್ಪನೆಗಳನ್ನು ಈ ಭಾಷೆಗಳಲ್ಲಿ ಪರಿಣಾಮಕಾರಿಯಾಗಿ ಚರ್ಚೆ ಮಾಡಬಹುದು. ಇಂತಹ ಕಲಿಕಾ ಸಾಮಗ್ರಿಗಳು, ಮುದ್ರಣ ಸಾಮಗ್ರಿಗಳು ಸಾಧ್ಯವಾಗುವಂತೆ ಮಾಡುವುದು ಮತ್ತು ವಿಶ್ವದ

ಭಾಷೆಗಳಿಂದ ಪ್ರಮುಖ ಸಾಮಗ್ರಿಗಳನ್ನು ಅನುವಾದ ಮಾಡುವುದು ಹಾಗೂ ನಿರಂತರವಾಗಿ ಪದಪಟ್ಟಿಗಳನ್ನು ಪರಿಷ್ಕರಿಸುವುದು ಮುಂತಾದ ಕೆಲಸಗಳನ್ನು ಇಂಗ್ಲಿಷ್, ಫ್ರೆಂಚ್, ಜರ್ಮನ್, ಹೀಬ್ರೂ, ಕೊರಿಯನ್ ಮತ್ತು ಜಪಾನಿ ಭಾಷೆಗಳು ಸೇರಿದಂತೆ ವಿಶ್ವದ ಅನೇಕ ರಾಷ್ಟ್ರಗಳು ಮಾಡುತ್ತಲೇ ಬಂದಿವೆ. ಆದರೆ, ತನ್ನ ಭಾಷೆಗಳು ಸಂಪೂರ್ಣವಾಗಿ ಚಲನಶೀಲ ಹಾಗೂ ಸಮಗ್ರವಾಗಿರಲು ಸಹಾಯವಾಗಬಲ್ಲ ಇಂತಹ ಕಲಿಕಾ ಮತ್ತು ಮುದ್ರಣ ಸಾಮಗ್ರಿಗಳು ಹಾಗೂ ಶಬ್ದಕೋಶಗಳನ್ನು ಸಿದ್ಧಪಡಿಸುವ ಪ್ರಕ್ರಿಯೆಯಲ್ಲಿ ಭಾರತವು ಸಾಕಷ್ಟು ಹಿಂದಿದೆ.

22.7 ಇವೆಲ್ಲದರ ಜೊತೆಗೆ, ಅನೇಕ ಕ್ರಮಗಳನ್ನು ಕೈಗೊಂಡ ಹೊರತಾಗಿಯೂ ಭಾರತದಲ್ಲಿ ಪರಿಣತ ಭಾಷಾ ಶಿಕ್ಷಕರ ತೀವ್ರ ಕೊರತೆ ಇದೆ. ಅಷ್ಟು ಮಾತ್ರವಲ್ಲದೆ ಭಾಷಾ-ಬೋಧನೆಯಲ್ಲೂ ಸುಧಾರಣೆ ಕಾಣಬೇಕಾಗಿದೆ. ಅದು ಹೆಚ್ಚು ಅನುಭವಾತ್ಮಕವಾಗಿರಬೇಕು ಮತ್ತು ಆ ಭಾಷೆಯಲ್ಲಿ ಸಂಭಾಷಿಸುವ ಮತ್ತು ಸಂವಹನ ನಡೆಸುವ ಸಾಮರ್ಥ್ಯದ ಮೇಲೆ ಹೆಚ್ಚು ಗಮನ ಕೇಂದ್ರೀಕರಿಸಬೇಕು. ಕೇವಲ ಆ ಭಾಷೆಯ ಸಾಹಿತ್ಯ, ಪದಪಟ್ಟಿ ಹಾಗೂ ವ್ಯಾಕರಣವನ್ನು ಪರಿಷ್ಕರಣೆ ಮಾಡಿದರೆ ಸಾಲದು. ಸಂಭಾಷಣೆ ಮತ್ತು ಬೋಧನೆ-ಕಲಿಕೆಗಾಗಿ ಭಾಷೆಯನ್ನು ಹೆಚ್ಚು ಹೆಚ್ಚಾಗಿ ಬಳಸಬೇಕು.

22.8 ಶಾಲಾ ಮಕ್ಕಳಲ್ಲಿ ಭಾಷೆ, ಕಲೆ ಮತ್ತು ಸಂಸ್ಕೃತಿಯನ್ನು ಪೋಷಿಸುವುದಕ್ಕೆ ಸಂಬಂಧಿಸಿದ ಅನೇಕ ಉಪಕ್ರಮಗಳನ್ನು ನಾಲ್ಕನೇ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಇವುಗಳಲ್ಲಿ, ಶಾಲಾ ಶಿಕ್ಷಣದ ಎಲ್ಲಾ ಹಂತಗಳಲ್ಲಿ ಸಂಗೀತ, ಕಲೆ ಮತ್ತು ಕರಕುಶಲಕಲೆಗಳಿಗೆ ಹೆಚ್ಚಿನ ಒತ್ತು; ಬಹುಭಾಷೆಯನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ತ್ರಿಭಾಷಾ ಸೂತ್ರದ ಶೀಘ್ರ ಅನುಷ್ಠಾನ; ಸಾಧ್ಯವಿರುವಲ್ಲೆಲ್ಲ ಸ್ಥಳೀಯ ಭಾಷೆಯಲ್ಲಿ ಬೋಧನೆ; ಹೆಚ್ಚು ಹೆಚ್ಚು ಅನುಭವಾತ್ಮಕದ ರೂಪದಲ್ಲಿ ಭಾಷಾ ಕಲಿಕೆಗೆ ಒತ್ತು; ಪ್ರತಿಭಾನ್ವಿತ ಸ್ಥಳೀಯ ಕಲಾವಿದರು; ಲೇಖಕರು, ಕುಶಲಕರ್ಮಿಗಳು ಮತ್ತು ಸ್ಥಳೀಯವಾಗಿ ಅನೇಕ ವಿಚಾರಗಳಲ್ಲಿ ಅನುಭವಗಳನ್ನು ಹೊಂದಿರುವ ಇತರ ತಜ್ಞರನ್ನು ಪ್ರಮುಖ ಬೋಧಕರಾಗಿ ನೇಮಕ ಮಾಡುವುದು; ಮಾನವಿಕ, ವಿಜ್ಞಾನ, ಕಲೆ, ಕುಶಲಕಲೆ ಮತ್ತು ಕ್ರೀಡೆ ಸೇರಿದಂತೆ ಪಠ್ಯಕ್ರಮದಲ್ಲಿ ಅಗತ್ಯವಿರುವಲ್ಲೆಲ್ಲ ಬುಡಕಟ್ಟು ಮತ್ತು ಇತರ ಸ್ಥಳೀಯ ಜ್ಞಾನ ಸೇರಿದಂತೆ ಸಾಂಪ್ರದಾಯಿಕ ಭಾರತೀಯ ಜ್ಞಾನವನ್ನು ಕರಾರುವಕ್ಕಾಗಿ ಸೇರ್ಪಡೆ ಮಾಡುವುದು; ವಿದ್ಯಾರ್ಥಿಗಳು ತಮ್ಮದೇ ಆದ ಸೃಜನಾತ್ಮಕ, ಕಲಾತ್ಮಕ, ಸಂಸ್ಕೃತಿ ಮತ್ತು ಶೈಕ್ಷಣಿಕ ಮಾರ್ಗಗಳನ್ನು ಅಭಿವೃದ್ಧಿಪಡಿಸಿಕೊಳ್ಳುವ ದೃಷ್ಟಿಯಿಂದ ಕೋರ್ಸ್‌ಗಳ ನಡುವೆ ಸೂಕ್ತ ಸಮತೋಲನವನ್ನು ಆಯ್ಕೆ ಮಾಡಿಕೊಳ್ಳಲು ಸಾಧ್ಯವಾಗುವಂತೆ ಮಾಧ್ಯಮಿಕ ಮತ್ತು ಉನ್ನತ ಶಿಕ್ಷಣದ ಪಠ್ಯಕ್ರಮದಲ್ಲಿ ಹೆಚ್ಚಿನ ಸ್ವಾತಂತ್ರ್ಯ ಸೇರಿವೆ.

22.9 ಇತ್ತೀಚಿನ ಹಂತದಲ್ಲಿ ಕೈಗೊಂಡ ಪ್ರಮುಖ ಉಪಕ್ರಮಗಳನ್ನು ಸಾಧ್ಯವಾಗಿಸಲು, ಇದರ ಜೊತೆ ಜೊತೆಯಲ್ಲಿಯೇ ಉನ್ನತ ಶಿಕ್ಷಣದ ಹಂತ ಮತ್ತು ಅದರಾಚೆಗೆ ಇನ್ನಷ್ಟು ಕ್ರಮಗಳನ್ನು ಕೈಗೊಳ್ಳಲಾಗುವುದು. ಮೊಟ್ಟ ಮೊದಲನೆಯದಾಗಿ ಮೇಲೆ ಪ್ರಸ್ತಾಪಮಾಡಿದ ಬಹುತೇಕ ಕೋರ್ಸುಗಳನ್ನು ಅಭಿವೃದ್ಧಿಪಡಿಸಲು ಹಾಗೂ ಬೋಧಿಸಲು ಶಿಕ್ಷಕರು ಮತ್ತು ಬೋಧಕರ ತಂಡವನ್ನು ಕಟ್ಟಲಾಗುವುದು. ಭಾರತೀಯ ಭಾಷೆಗಳು, ತುಲನಾತ್ಮಕ ಸಾಹಿತ್ಯ, ಸೃಜನಾತ್ಮಕ ಬರವಣಿಗೆ, ಕಲೆ, ಸಂಗೀತ, ಸಿದ್ಧಾಂತ ಇತ್ಯಾದಿ ವಿಷಯಗಳಲ್ಲಿ ಬಲವಾದ ವಿಭಾಗಗಳು ಮತ್ತು ಕಾರ್ಯಕ್ರಮಗಳನ್ನು ದೇಶದಾದ್ಯಂತ ಆರಂಭಿಸಿ ಅಭಿವೃದ್ಧಿಪಡಿಸಲಾಗುವುದು ಮತ್ತು ನಾಲ್ಕು ವರ್ಷಗಳ ಬಿ.ಎಡ್. ಉಭಯ ಪದವಿಗಳು ಸೇರಿದಂತೆ ಈ ವಿಷಯಗಳಲ್ಲಿ ಪದವಿ ಕೋರ್ಸ್‌ಗಳನ್ನು ಅಭಿವೃದ್ಧಿಪಡಿಸಲಾಗುವುದು.. ಈ ವಿಭಾಗಗಳು ಮತ್ತು ಕಾರ್ಯಕ್ರಮಗಳು ಅತ್ಯುನ್ನತ ದರ್ಜೆಯ ಭಾಷಾ ಶಿಕ್ಷಕರ ಬೃಹತ್ ಕೇಡರ್ ಹಾಗೂ ಕಲೆ, ಸಂಗೀತ, ತತ್ವಶಾಸ್ತ್ರ ಮತ್ತು ಬರವಣಿಗೆಯನ್ನು ಕಲಿಸುವ ಶಿಕ್ಷಕರನ್ನು ಅಭಿವೃದ್ಧಿಪಡಿಸಲು ಸಹಕಾರಿಯಾಗಲಿವೆ. ಈ ಶಿಕ್ಷಕರು ದೇಶದಾದ್ಯಂತ ಈ ನೀತಿಯನ್ನು ಜಾರಿಗೆ ತರಲು ನೆರವಿಗೆ ಬರಲಿದ್ದಾರೆ. ಈ ಎಲ್ಲಾ ಕ್ಷೇತ್ರಗಳಲ್ಲಿನ ಗುಣಮಟ್ಟದ ಸಂಶೋಧನೆಗೆ ಎನ್.ಆರ್.ಎಫ್. ನಿಧಿಯನ್ನು ಒದಗಿಸಲಿದೆ. ಸ್ಥಳೀಯ ಸಂಗೀತ, ಕಲೆ, ಭಾಷೆ ಮತ್ತು ಕರಕುಶಲಕಲೆಯನ್ನು ಪ್ರೋತ್ಸಾಹಿಸಲು ಸ್ಥಳೀಯ ಪ್ರತಿಭಾವಂತ ಕಲಾವಿದರು ಮತ್ತು ಕುಶಲಕರ್ಮಿಗಳನ್ನು ನೇಮಕ ಮಾಡಿಕೊಳ್ಳಲಾಗುವುದು. ಇದರಿಂದ ವಿದ್ಯಾರ್ಥಿಗಳು ತಾವು ಅಧ್ಯಯನ ಮಾಡುತ್ತಿರುವ ಪ್ರದೇಶದ ಸಂಸ್ಕೃತಿ ಮತ್ತು ಸ್ಥಳೀಯ ಜ್ಞಾನದ ಬಗ್ಗೆ ಅರಿಯಲು ಸಾಧ್ಯವಾಗುತ್ತದೆ. ವಿದ್ಯಾರ್ಥಿಗಳು ಕಲೆ, ಕ್ರಿಯಾಶೀಲತೆ ಮತ್ತು ಪ್ರದೇಶ/ರಾಷ್ಟ್ರದ ಶ್ರೀಮಂತ ಸಂಪತ್ತಿಗೆ ತೆರೆದುಕೊಳ್ಳುವಂತೆ ಮಾಡಲು, ಪ್ರತಿಯೊಂದು ಉನ್ನತ ಶಿಕ್ಷಣ ಸಂಸ್ಥೆ ಮತ್ತು ಪ್ರತಿ ಶಾಲೆ ಅಥವಾ ಶಾಲಾ ಸಂಕೀರ್ಣ ಸ್ಥಾನಿಕ-ಕಲಾವಿದರನ್ನು ನೇಮಕ ಮಾಡುವ ಗುರಿಯನ್ನು ಹೊಂದಲಿವೆ.

22.10 ಪ್ರವೇಶಾವಕಾಶ ಹಾಗೂ ಜಿ.ಇ.ಆರ್. ಹೆಚ್ಚಿಸಲು ಮತ್ತು ಎಲ್ಲಾ ಭಾರತೀಯ ಭಾಷೆಗಳ ಸಾಮರ್ಥ್ಯ ಬಳಕೆ ಮತ್ತು ಚಲನಶೀಲತೆಯನ್ನು ಪ್ರೋತ್ಸಾಹಿಸಲು ಹೆಚ್ಚು ಹೆಚ್ಚು ಉನ್ನತ ಶಿಕ್ಷಣ ಸಂಸ್ಥೆಗಳು ಮತ್ತು ಉನ್ನತ ಶಿಕ್ಷಣದಲ್ಲಿನ ಹೆಚ್ಚು ಕಾರ್ಯಕ್ರಮಗಳು ಮಾತೃಭಾಷೆ/ಸ್ಥಳೀಯ ಭಾಷೆಯನ್ನು ಕಲಿಕಾ ಮಾಧ್ಯಮವಾಗಿ ಬಳಸಲಿದೆ ಮತ್ತು ದ್ವಿಭಾಷಾ ಕಾರ್ಯಕ್ರಮಗಳನ್ನು ಕಲ್ಪಿಸಲಿವೆ. ಭಾರತೀಯ ಭಾಷೆಗಳನ್ನು ಬೋಧನಾ ಮಾಧ್ಯಮವಾಗಿ ಬಳಸಿಕೊಳ್ಳಲು ಹಾಗೂ ದ್ವಿಭಾಷಾ ಕಾರ್ಯಕ್ರಮಗಳನ್ನು ಕಲ್ಪಿಸಲು ಖಾಸಗಿ ಉನ್ನತ ಶಿಕ್ಷಣ ಸಂಸ್ಥೆಗಳಿಗೂ ಉತ್ತೇಜನ ನೀಡಿ ಪ್ರೋತ್ಸಾಹಧನ ಒದಗಿಸಲಾಗುತ್ತದೆ. ರಾಷ್ಟ್ರದಾದ್ಯಂತ ಶಾಲೆಗಳಲ್ಲಿ ವಿಜ್ಞಾನವನ್ನು

ದ್ವಿಭಾಷೆಯಲ್ಲಿ ಬೋಧನೆ ಮಾಡಲು ವಿಜ್ಞಾನ ಹಾಗೂ ಗಣಿತಶಾಸ್ತ್ರದ ಶಿಕ್ಷಕರಿಗೆ ತರಬೇತಿ ನೀಡುವುದರಿಂದ ದ್ವಿಭಾಷೆಯಲ್ಲಿ ನೀಡಲಾಗುವ ನಾಲ್ಕು ವರ್ಷಗಳ ಬಿ.ಎಡ್ ಉಭಯ ಡಿಗ್ರಿ ಕಾರ್ಯಕ್ರಮಗಳು ಕೂಡ ಸಹಾಯಕ್ಕೆ ಬರಲಿವೆ.

22.11 ಉನ್ನತ ಶಿಕ್ಷಣ ವ್ಯವಸ್ಥೆಯ ವ್ಯಾಪ್ತಿಯಲ್ಲಿಯೇ ಅನುವಾದ ಮತ್ತು ವ್ಯಾಖ್ಯಾನ, ಕಲೆ ಮತ್ತು ಮ್ಯೂಸಿಯಂ ಆಡಳಿತ, ಪ್ರಾಕ್ತನಶಾಸ್ತ್ರ, ಹಸ್ತಕೃತಿ ಸಂರಕ್ಷಣೆ, ಗ್ರಾಫಿಕ್ ಡಿಸೈನ್ ಮತ್ತು ವೆಬ್ ಡಿಸೈನ್ನಲ್ಲಿ ಉತ್ತಮ ಗುಣಮಟ್ಟದ ಕಾರ್ಯಕ್ರಮಗಳನ್ನು ಮತ್ತು ಪದವಿಗಳನ್ನು ಕೂಡ ಸೃಷ್ಟಿಸಲಾಗುವುದು. ಕಲೆ ಮತ್ತು ಸಂಸ್ಕೃತಿಯನ್ನು ಸಂರಕ್ಷಿಸಿ ಪ್ರೋತ್ಸಾಹಿಸಲು ಹಲವಾರು ಭಾರತೀಯ ಭಾಷೆಗಳಲ್ಲಿ ಉನ್ನತ ಗುಣಮಟ್ಟದ ವಿಷಯಗಳನ್ನು ಅಭಿವೃದ್ಧಿಪಡಿಸಲು, ಹಸ್ತಕೃತಿಗಳನ್ನು ಸಂರಕ್ಷಿಸಲು, ಮ್ಯೂಸಿಯಂಗಳು ಅಥವಾ ಪ್ರವಾಸಿ ತಾಣಗಳ ಮೇಲ್ವಿಚಾರಣೆ ನಡೆಸಿ ನಿರ್ವಹಣೆ ಮಾಡಲು ಅರ್ಹ ವ್ಯಕ್ತಿಗಳನ್ನು ಬೆಳೆಸುವ ಮೂಲಕ ಪ್ರವಾಸೋದ್ಯಮವನ್ನು ಇನ್ನಷ್ಟು ಬಲಪಡಿಸಲು ಸಾಧ್ಯವಾಗುತ್ತದೆ.

22.12 ಭಾರತದ ಶ್ರೀಮಂತ ವೈವಿಧ್ಯತೆಯ ಜ್ಞಾನವನ್ನು ಕಲಿಕಾರ್ಥಿಗಳು ಖುದ್ದಾಗಿ ಮೈಗೂಡಿಸಿಕೊಳ್ಳಬೇಕು ಎಂಬುದು ಈ ನೀತಿಯ ಉದ್ದೇಶವಾಗಿದೆ. ರಾಷ್ಟ್ರದ ನಾನಾ ಭಾಗಗಳಿಗೆ ವಿದ್ಯಾರ್ಥಿಗಳು ಪ್ರವಾಸ ಕೈಗೊಳ್ಳುವಂತಹ ಸರಳ ಚಟುವಟಿಕೆಗಳು ಇದರಲ್ಲಿ ಒಳಗೊಂಡಿರುತ್ತದೆ. ಇದರಿಂದ ಪ್ರವಾಸೋದ್ಯಮಕ್ಕೆ ಉತ್ತೇಜನ ಸಿಗುವುದು ಮಾತ್ರವಲ್ಲದೆ, ಭಾರತದ ನಾನಾ ಭಾಗಗಳ ವೈವಿಧ್ಯತೆ, ಸಂಸ್ಕೃತಿ, ಸಂಪ್ರದಾಯಗಳು ಮತ್ತು ಜ್ಞಾನವನ್ನು ಅರ್ಥ ಮಾಡಿಕೊಳ್ಳುವುದಕ್ಕೆ ದಾರಿ ಮಾಡಿಕೊಟ್ಟಂತಾಗುತ್ತದೆ. *'ಏಕ್ ಭಾರತ್ ಶ್ರೇಷ್ಠ ಭಾರತ್'* ಎಂಬ ಯೋಜನೆಯ ಅಡಿಯಲ್ಲಿ ದೇಶದಲ್ಲಿ 100 ಪ್ರವಾಸಿ ತಾಣಗಳನ್ನು ಗುರುತಿಸಲಾಗುವುದು. ಇಂತಹ ಪ್ರವಾಸಿ ತಾಣಗಳ ಬಗೆಗೆ ಅಧ್ಯಯನ ನಡೆಸುವ ಉದ್ದೇಶದಿಂದ ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿಗಳನ್ನು ಕಳಿಸಿಕೊಡಲಿವೆ. ಈ ಪ್ರವಾಸಿ ತಾಣದ ಇತಿಹಾಸ, ವೈಜ್ಞಾನಿಕ ಕೊಡುಗೆಗಳು, ಸಂಪ್ರದಾಯಗಳು, ದೇಶೀಯ ಸಾಹಿತ್ಯ ಮತ್ತು ಜ್ಞಾನ ಇತ್ಯಾದಿಗಳನ್ನು ಅಧ್ಯಯನ ಮಾಡುವ ಮೂಲಕ ವಿದ್ಯಾರ್ಥಿಗಳು ಈ ಪ್ರದೇಶಗಳ ಬಗೆಗಿನ ತಮ್ಮ ಜ್ಞಾನವನ್ನು ಹೆಚ್ಚಿಸಿಕೊಳ್ಳಬಹುದು..

22.13 ಕಲೆ, ಭಾಷೆ ಮತ್ತು ಮಾನವಿಕದಂತಹ ಉನ್ನತ ಶಿಕ್ಷಣದಲ್ಲಿ ಇಂತಹ ಕಾರ್ಯಕ್ರಮಗಳು ಮತ್ತು ಡಿಗ್ರಿಗಳನ್ನು ಸೃಷ್ಟಿಸುವುದರಿಂದ ಉದ್ಯೋಗ ನೇಮಕಾತಿಗಳಲ್ಲಿ ಉನ್ನತ ಗುಣಮಟ್ಟದ ಅವಕಾಶಗಳು ವಿಸ್ತಾರಗೊಳ್ಳುತ್ತವೆ. ಇಂತಹ ಅರ್ಹತೆಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ಸಾಧ್ಯವಾಗುತ್ತದೆ. ಈಗಾಗಲೇ ಸಾಕಷ್ಟು ಸಂಖ್ಯೆಯ ಅಕಾಡೆಮಿಗಳು, ಮ್ಯೂಸಿಯಂಗಳು, ಕಲಾ ಗ್ಯಾಲರಿಗಳು ಮತ್ತು ಪರಂಪರಾ ತಾಣಗಳ ಪರಿಣಾಮಕಾರಿ ಕಾರ್ಯನಿರ್ವಹಣೆಗೆ ಅರ್ಹ ವ್ಯಕ್ತಿಗಳ ಅಗತ್ಯ ಹೆಚ್ಚಾಗಿದೆ. ಇಂತಹ ಹುದ್ದೆಗಳಿಗೆ ಸೂಕ್ತ ಅರ್ಹರಾದ ಅಭ್ಯರ್ಥಿಗಳನ್ನು ಭರ್ತಿ ಮಾಡಬೇಕು. ಹಸ್ತಕೃತಿಗಳನ್ನು ಸಂಗ್ರಹಿಸಿ ಸಂರಕ್ಷಿಸಿ,, ವರ್ಚುವಲ್ ಮ್ಯುಸಿಯಂಗಳು/ಇ-ಮ್ಯುಸಿಯಂಗಳು ಸೇರಿದಂತೆ ಹೆಚ್ಚುವರಿ ಮ್ಯುಸಿಯಂಗಳು, ಗ್ಯಾಲರಿಗಳು ಮತ್ತು ಪರಂಪರಾ ತಾಣಗಳುನ್ನು ಸಂರಕ್ಷಿಸಿದರೆ ಭಾರತದ ಪ್ರವಾಸೋದ್ಯಮಕ್ಕೂ ಕೊಡುಗೆ ನೀಡಿದಂತಾಗುವುದು.

22.14 ಅನೇಕ ಭಾರತೀಯ ಹಾಗೂ ವಿದೇಶಿ ಭಾಷೆಗಳಲ್ಲಿ ಇರುವ ಅತ್ಯುತ್ತಮ ಗುಣಮಟ್ಟದ ಕಲಿಕಾ ಸಾಮಗ್ರಿಗಳು ಮತ್ತು ಇತರ ಮಹತ್ವದ ಲಿಖಿತ ಹಾಗೂ ಭಾಷಣದ ಸಾಮಗ್ರಿಗಳು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಲು ಭಾರತವು ತುರ್ತಾಗಿ ಅನುವಾದ ಮತ್ತು ವ್ಯಾಖ್ಯಾನ ಕ್ಷೇತ್ರವನ್ನು ವಿಸ್ತರಿಸಲಿದೆ. ಇದಕ್ಕಾಗಿ ಭಾರತೀಯ ಅನುವಾದ ಹಾಗೂ ವ್ಯಾಖ್ಯಾನ ಸಂಸ್ಥೆ (Institute of Translation and Interpretation-IITI) ಯನ್ನು ಸ್ಥಾಪಿಸಲಾಗುವುದು. ಇಂತಹಒಂದು ಸಂಸ್ಥೆ ದೇಶಕ್ಕೆ ನಿಜಕ್ಕೂ ಮಹತ್ವದ ಸೇವೆಯನ್ನು ನೀಡಲಿದೆ. ಇದರಿಂದಾಗಿ ಅನೇಕ ಬಹುಭಾಷಾ ಮತ್ತು ವಿಷಯ ತಜ್ಞರು ಹಾಗೂ ಅನುವಾದ ಮತ್ತು ವ್ಯಾಖ್ಯಾನದ ತಜ್ಞರನ್ನು ನೇಮಕ ಮಾಡಲು ಸಾಧ್ಯವಾಗುತ್ತದೆ. ಇಂತಹ ಕ್ರಮದಿಂದ ಎಲ್ಲಾ ಭಾಷೆಗಳನ್ನು ಪ್ರೋತ್ಸಾಹಿಸಲು ಸಹಾಯವಾಗುತ್ತದೆ. ಅನುವಾದ ಮತ್ತು ವ್ಯಾಖ್ಯಾನದ ಪ್ರಯತ್ನಗಳಲ್ಲಿ ನೆರವಾಗಲು ಐ.ಐ.ಟಿ.ಐ ತಂತ್ರಜ್ಞಾನವನ್ನು ಸಂಪೂರ್ಣವಾಗಿ ಬಳಸಿಕೊಳ್ಳಲಿದೆ. ಕಾಲಕ್ರಮೇಣ ಐ.ಐ.ಟಿ.ಐ ಸ್ವಾಭಾವಿಕವಾಗಿ ಬೆಳೆಯಬಹುದು ಮತ್ತು ಬೇಡಿಕೆ ಹಾಗೂ ಅರ್ಹ ಅಭ್ಯರ್ಥಿಗಳ ಸಂಖ್ಯೆ ಬೆಳೆದಾಗ ಇತರ ಸಂಶೋಧನಾ ವಿಭಾಗಗಳ ಜೊತೆ ಸಮನ್ವಯವನ್ನು ಸಾಧಿಸಲು ಎಚ್.ಇ.ಐಗಳು ಸೇರಿದಂತೆ ನಾನಾ ತಾಣಗಳಲ್ಲಿ ಶಾಖೆಗಳನ್ನು ತೆರೆಯಬಹುದು.

22.15 ಸಂಸ್ಕೃತವು ಎಲ್ಲಾ ಪ್ರಕಾರಗಳ ಸಾಹಿತ್ಯಕ್ಕೆ ವ್ಯಾಪಕವಾದ ಮತ್ತು ಮಹತ್ವದ ಕೊಡುಗೆಗಳನ್ನು ನೀಡಿರುವುದರಿಂದ, ಅದರ ಸಾಂಸ್ಕೃತಿಕ ಮಹತ್ವ ಹಾಗೂ ವೈಜ್ಞಾನಿಕ ಸ್ವರೂಪದಿಂದಾಗಿ ಕೇವಲ ಅದನ್ನು ಏಕಮುಖ ಸಂಸ್ಕೃತ ಪಾಠಶಾಲಾ ಮತ್ತು ವಿಶ್ವವಿದ್ಯಾಲಯಗಳಿಗೆ ನಿರ್ಬಂಧಿಸುವುದಕ್ಕೆ ಬದಲಾಗಿ ಮುಖ್ಯವಾಹಿನಿಗೆ ತರಲಾಗುವುದು. ತ್ರಿಭಾಷಾ ಸೂತ್ರದಲ್ಲಿ ಸಂಸ್ಕೃತವನ್ನೂ ಭಾಷಾ ಆಯ್ಕೆಗಳಲ್ಲಿ ಒಂದನ್ನಾಗಿ ಹಾಗೂ ಉನ್ನತ ಶಿಕ್ಷಣದಲ್ಲಿಯೂ ಸೇರಿಸಲಾಗುವುದು. ಸಂಸ್ಕೃತವನ್ನು ಪ್ರತ್ಯೇಕವಾಗಿಟ್ಟು ಕಲಿಸಲಾಗುವುದಿಲ್ಲ ಬದಲಾಗಿ, ಅದನ್ನು ಆಸಕ್ತಿದಾಯಕ ಹಾಗೂ ವಿನೂತನ ರೀತಿಯಲ್ಲಿ ಕಲಿಸಲಾಗುತ್ತದೆ ಮತ್ತು ಗಣಿತಶಾಸ್ತ್ರ, ಖಗೋಳಶಾಸ್ತ್ರ, ತತ್ವಶಾಸ್ತ್ರ, ಭಾಷಾಧ್ಯಯನ, ರಂಗಕಲೆ, ಯೋಗ ಇತ್ಯಾದಿ ಸಮಕಾಲೀನ ಹಾಗೂ ಪ್ರಸಕ್ತ ವಿಷಯಗಳಿಗೆ ಸಮಾನವಾಗಿ ಪರಿಗಣಿಸಲಾಗುವುದು. ಇದರೊಂದಿಗೆ ಈ ನೀತಿಯ ಇತರ ಅಂಶಗಳಿಗೆ ಪೂರಕವಾಗಿ ಸಂಸ್ಕೃತ ವಿಶ್ವವಿದ್ಯಾಲಯಗಳು ಕೂಡ ಉನ್ನತ

ಕಲಿಕೆಯ ಬೃಹತ್ ಬಹುಶಿಸ್ತೀಯ ಸಂಸ್ಥೆಗಳಾಗುವಲ್ಲಿ ಮುನ್ನಡೆಯಲಿವೆ. ಎಲ್ಲಾ ಹೊಸ ಬಹುಶಿಸ್ತೀಯ ಶಿಕ್ಷಣ ವ್ಯವಸ್ಥೆಗಳಲ್ಲಿ ಸಂಸ್ಕೃತ ಮತ್ತು ಸಂಸ್ಕೃತ ಜ್ಞಾನ ಶಾಖೆಗಳಿಗೆ ಸಂಬಂಧಿಸಿ ಬೋಧನೆ ಮತ್ತು ಗಮನಾರ್ಹವಾದ ಬಹುಶಿಸ್ತೀಯ ಸಂಶೋಧನೆಗಳನ್ನು ಕೈಗೊಳ್ಳಲು ಸಂಸ್ಕೃತ ವಿಭಾಗಗಳನ್ನು ಸ್ಥಾಪಿಸಿ ಅವುಗಳನ್ನು ಬಲಪಡಿಸಲಾಗುವುದು. ವಿದ್ಯಾರ್ಥಿಯೊಬ್ಬ ಆಯ್ಕೆ ಮಾಡಿಕೊಂಡರೆ ಸಮಗ್ರ ಬಹುಶಿಸ್ತೀಯ ಉನ್ನತ ಶಿಕ್ಷಣದಲ್ಲಿ ಸಂಸ್ಕೃತವು ಸಹಜವಾಗಿ ಒಂದು ಭಾಗವಾಗಲಿದೆ. ಶಿಕ್ಷಣ ಮತ್ತು ಸಂಸ್ಕೃತದಲ್ಲಿ ನಾಲ್ಕು ವರ್ಷಗಳ ಸಮಗ್ರ ಬಹುಶಿಸ್ತೀಯ ಬಿ.ಎಡ್ ಉಭಯ ಡಿಗ್ರಿಗಳಿಗೆ ಅವಕಾಶ ಮಾಡಿಕೊಡುವ ಮೂಲಕ ದೇಶದಾದ್ಯಂತ ಅಭಿಯಾನದ ರೂಪದಲ್ಲಿ ಬೃಹತ್ ಸಂಖ್ಯೆಯ ಸಂಸ್ಕೃತ ಶಿಕ್ಷಕರನ್ನು ವೃತ್ತಿಪರರನ್ನಾಗಿ ಮಾಡಲಾಗುವುದು.

22.16 ಅದೇ ರೀತಿಯಲ್ಲಿ ಭಾರತವು, ಎಲ್ಲಾ ಶಾಸ್ತ್ರೀಯ ಭಾಷೆಗಳು ಮತ್ತು ಸಾಹಿತ್ಯವನ್ನು ಅಧ್ಯಯನ ಮಾಡುವ ಸಂಸ್ಥೆಗಳು ಮತ್ತು ವಿಶ್ವವಿದ್ಯಾಲಯಗಳನ್ನು ವಿಸ್ತರಿಸಲಿದೆ. ಹೆಚ್ಚಿನ ಆದ್ಯತೆ ಪಡೆಯದೇ ಸಾವಿರಾರು ಸಂಖ್ಯೆಯಲ್ಲಿರುವ ಹಸ್ತಪ್ರತಿಗಳ ಸಂಗ್ರಹ, ಸಂರಕ್ಷಣೆ ಅನುವಾದ ಮಾಡಲು ಸಾಧ್ಯವಾಗುವ ಎಲ್ಲಾ ಪ್ರಯತ್ನಗಳನ್ನು ಮಾಡಲಾಗುವುದು. ದೇಶದಾದ್ಯಂತ ಇರುವ ಸಂಸ್ಕೃತ ಮತ್ತು ಎಲ್ಲ ಭಾರತೀಯ ಭಾಷಾ ಸಂಸ್ಥೆಗಳು ಮತ್ತು ವಿಭಾಗಗಳನ್ನು ಗಮನಾರ್ಹವಾದ ರೀತಿಯಲ್ಲಿ ಬಲಪಡಿಸಲಾಗುವುದು. ಈ ನಿಟ್ಟಿನಲ್ಲಿ ಅಧ್ಯಯನ ನಡೆಸಲು, ಅದರಲ್ಲೂ ಮುಖ್ಯವಾಗಿ ಬೃಹತ್ ಸಂಖ್ಯೆಯಲ್ಲಿರುವ ಹಸ್ತಪ್ರತಿಗಳು ಮತ್ತು ಇತರ ವಿಷಯಗಳೊಂದಿಗೆ ಅವುಗಳ ಅನ್ಯೋನ್ಯ ಸಂಬಂಧಗಳ ಬಗ್ಗೆ ಅಧ್ಯಯನ ಕೈಗೊಳ್ಳಲು ಬೃಹತ್ ಸಂಖ್ಯೆಯ ಹೊಸ ಬ್ಯಾಚ್ನ ವಿದ್ಯಾರ್ಥಿಗಳಿಗೆ ಸೂಕ್ತ ತರಬೇತಿಯನ್ನು ನೀಡಲಾಗುವುದು. ಶಾಸ್ತ್ರೀಯ ಭಾಷಾ ಸಂಸ್ಥೆಗಳ ಸ್ವಾಯತ್ತತೆಯನ್ನು ಕಾಯ್ದುಕೊಂಡು ಅವುಗಳನ್ನು ವಿಶ್ವವಿದ್ಯಾಲಯಗಳೊಂದಿಗೆ ವಿಲೀನಗೊಳಿಸುವ ಗುರಿ ಹೊಂದಲಾಗಿದೆ; ಇದರಿಂದ ಬೋಧಕವರ್ಗವೂ ಕೆಲಸ ಮಾಡುವುದರ ಜೊತೆಗೆ, ಸದೃಢ ಮತ್ತು ಕಠಿಣ ಬಹುಶಿಸ್ತೀಯ ಕಾರ್ಯಕ್ರಮಗಳ ಭಾಗವಾಗಿ ವಿದ್ಯಾರ್ಥಿಗಳಿಗೂ ತರಬೇತಿ ನೀಡಿದಂತಾಗುತ್ತದೆ. ಇನ್ನೊಂದು ಕಡೆಯಿಂದ, ಭಾಷೆಗಳಿಗೆ ವಿಶೇಷವಾಗಿ ನಿಗದಿಯಾಗಿರುವ ವಿಶ್ವವಿದ್ಯಾಲಯಗಳು ಬಹುಶಿಸ್ತೀಯ ಸಂಸ್ಥೆಗಳಾಗಿ ಬದಲಾಗಲಿವೆ, ಇದರಿಂದಾಗಿ ಅವು ಭಾಷಾ ವಿಷಯದಲ್ಲಿ ತಜ್ಞ ಶಿಕ್ಷಕರನ್ನು ತಯಾರು ಮಾಡಲು ಶಿಕ್ಷಣದಲ್ಲಿ ಹಾಗೂ ಒಂದು ಭಾಷೆಯಲ್ಲಿ ಬಿ.ಎಡ್ ಉಭಯ ಡಿಗ್ರಿ (B.Ed. dual degrees)ಗಳನ್ನು ನೀಡಬಹುದು. ಇಷ್ಟು ಮಾತ್ರವಲ್ಲದೆ ಭಾಷೆಗಳಿಗಾಗಿಯೇ ಹೊಸ ಸಂಸ್ಥೆಯನ್ನು ಸ್ಥಾಪಿಸುವ ಪ್ರಸ್ತಾಪ ಕೂಡ ಇದೆ. ವಿಶ್ವವಿದ್ಯಾಲಯದ ಕ್ಯಾಂಪಸ್ ವ್ಯಾಪ್ತಿಯಲ್ಲಿಯೇ ಪಾಲಿ, ಪರ್ಸಿಯನ್ ಮತ್ತು ಪ್ರಾಕೃತ ರಾಷ್ಟ್ರೀಯ ಸಂಸ್ಥೆ (ಅಥವಾ ಸಂಸ್ಥೆಗಳು)ಯನ್ನು ಸ್ಥಾಪಿಸಲಾಗುವುದು. ಭಾರತೀಯ ಕಲೆ, ಕಲಾ ಇತಿಹಾಸ ಮತ್ತು ಭಾರತಾಧ್ಯಯನವನ್ನು ಅಧ್ಯಯನ ಮಾಡುವ ಸಂಸ್ಥೆಗಳು ಮತ್ತು ವಿಶ್ವವಿದ್ಯಾಲಯಗಳಿಗೂ ಇದೇ ರೀತಿಯ ಉಪಕ್ರಮಗಳನ್ನು ಕೈಗೊಳ್ಳಲಾಗುತ್ತದೆ. ಈ ಎಲ್ಲಾ ಕ್ಷೇತ್ರಗಳಲ್ಲಿನ ಅಭೂತಪೂರ್ವ ಸಂಶೋಧನಾ ಕಾರ್ಯಕ್ಕೆ ಎನ್.ಆರ್.ಎಫ್. ಬೆಂಬಲ ನೀಡಲಿದೆ.

12.17 ಶಾಸ್ತ್ರೀಯ, ಬುಡಕಟ್ಟು ಮತ್ತು ಅಳಿವಿನ ಅಂಚಿನಲ್ಲಿರುವ ಭಾಷೆಗಳು ಸೇರಿದಂತೆ ಎಲ್ಲಾ ಭಾರತೀಯ ಭಾಷೆಗಳ ಸಂರಕ್ಷಣೆ ಮತ್ತು ಪ್ರೋತ್ಸಾಹಕ್ಕೆ ಇನ್ನಷ್ಟು ಹೊಸ ಉತ್ಸಾಹದೊಂದಿಗೆ ಕ್ರಮ ಕೈಗೊಳ್ಳಲಾಗುವುದು. ಇಂತಹ ಪ್ರಯತ್ನಗಳಲ್ಲಿ ಜನರ ವ್ಯಾಪಕ ಭಾಗವಹಿಸುವಿಕೆಯೊಂದಿಗೆ ತಂತ್ರಜ್ಞಾನ ಮತ್ತು ಸಮೂಹ ಸಂಪನ್ಮೂಲವು ನಿರ್ಣಾಯಕ ಪಾತ್ರವನ್ನು ವಹಿಸಲಿದೆ.

22.18 ಭಾರತದ ಸಂವಿಧಾನದ ಎಂಟನೇ ಪರಿಚ್ಛೇದದಲ್ಲಿ ಪ್ರಸ್ತಾಪ ಮಾಡಲಾಗಿರುವ ಪ್ರತಿಯೊಂದು ಭಾಷೆಗೂ ಅಕಾಡೆಮಿಯನ್ನು ಸ್ಥಾಪನೆ ಮಾಡಲಾಗುವುದು. ಇತ್ತೀಚಿನ ಪರಿಕಲ್ಪನೆಗಳಿಗೆ ಸರಳವಾಗಿ ಅಷ್ಟೇ ಕರಾರುವಕ್ಕಾಗಿದ ಪದಪಟ್ಟಿಯನ್ನು ನಿರ್ಧಾರ ಮಾಡಲು ಮತ್ತು ನಿಯಮಿತವಾಗಿ ಇತ್ತೀಚಿನ ಶಬ್ಧಕೋಶಗಳನ್ನು (ವಿಶ್ವದಾದ್ಯಂತ ಇರುವ ಇತರ ಅನೇಕ ಭಾಷೆಗಳಿಗೆ ಸದೃಶವಾದುದನ್ನು ಕಂಡುಕೊಳ್ಳುವ ಯಶಸ್ವಿ ಪ್ರಯತ್ನ) ಬಿಡುಗಡೆ ಮಾಡಲು ಕೆಲವು ಶ್ರೇಷ್ಠ ವಿದ್ವಾಂಸರನ್ನು ಮತ್ತು ಆ ಭಾಷೆ ಮಾತನಾಡುವ ಸ್ಥಳೀಯರನ್ನು ಈ ಅಕಾಡೆಮಿಗಳಿಗೆ ನೇಮಕ ಮಾಡುಲಾಗುತ್ತದೆ. ಸಾಧ್ಯವಿರುವಲ್ಲೆಲ್ಲಾ ಸಮಾನಾರ್ಥ ಪದಗಳನ್ನು ಬಳಸುವ ಮೂಲಕ ಈ ಶಬ್ಧಕೋಶಗಳನ್ನು ರಚಿಸುವ ಕ್ರಮದಲ್ಲಿ ಅಕಾಡೆಮಿಗಳು ಪರಸ್ಪರ ಸಂಪರ್ಕವನ್ನು ನಡೆಸಲಿವೆ ಮತ್ತು ಇನ್ನು ಕೆಲವು ಪ್ರಕರಣಗಳಲ್ಲಿ ಸಾರ್ವಜನಿಕರಿಂದ ಉತ್ತಮ ಸಲಹೆಗಳನ್ನು ಪಡೆಯಲಿವೆದೆ. ಈ ಶಬ್ಧಕೋಶಗಳು ಶಿಕ್ಷಣ, ಪತ್ರಿಕೋದ್ಯಮ, ಬರೆವಣಿಗೆ, ಭಾಷಣ ಮಾಡುವ ಸಂದರ್ಭದಗಳಲ್ಲಿ ಬಳಕೆ ಮಾಡಲು ಅವುಗಳನ್ನು ಹೆಚ್ಚು ಹೆಚ್ಚಾಗಿ ಹಂಚುವುದು ಮಾತ್ರವಲ್ಲದೆ ಪುಸ್ತಕ ರೂಪದಲ್ಲಿ, ವೆಬ್ ತಾಣದಲ್ಲಿಯೂ ಲಭ್ಯವಾಗುವಂತೆ ಮಾಡಲಾಗುವುದು. ರಾಜ್ಯ ಸರ್ಕಾರವನ್ನು ಸಂಪರ್ಕಿಸಿ ಅಥವಾ ಅದರೊಂದಿಗೆ ಸೇರಿಕೊಂಡು ಕೇಂದ್ರ ಸರ್ಕಾರವು ಎಂಟನೇ ಪರಿಚ್ಛೇದದಲ್ಲಿ ಇರುವ ಭಾಷೆಗಳಿಗೆ ಅಕಾಡೆಮಿಯನ್ನು ಸ್ಥಾಪನೆ ಮಾಡಲಿದೆ. ಇದೇ ರೀತಿ ಹೆಚ್ಚು ಮಾತನಾಡುವ ಇತರ ಇನ್ನೂ ಕೆಲವು ಭಾರತೀಯ ಭಾಷೆಗಳಿಗೂ ಕೂಡ ಕೇಂದ್ರ ಅಥವಾ ರಾಜ್ಯ ಸರ್ಕಾರಗಳು ಅಕಾಡೆಮಿಯನ್ನು ಸ್ಥಾಪನೆ ಮಾಡಬಹುದಾಗಿದೆ.

22.19 ಅಳಿವಿನ ಅಂಚಿನಲ್ಲಿರುವ ಎಲ್ಲಾ ಭಾರತೀಯ ಭಾಷೆಗಳು ಮತ್ತು ಅವುಗಳು ಸಂಬಂಧ ಹೊಂದಿರುವ ಸ್ಥಳೀಯ ಶ್ರೀಮಂತ ಕಲೆಗಳು ಮತ್ತು ಸಂಸ್ಕೃತಿಯನ್ನು ಸಂರಕ್ಷಿಸುವ ಪ್ರಯತ್ನವಾಗಿ ವೆಬ್-ಆಧಾರಿತ ವೇದಿಕೆ/ಪೋರ್ಟಲ್/ವಿಕಿಯ ಮೂಲಕ ಭಾರತದ ಎಲ್ಲಾ ಭಾಷೆಗಳು ಮತ್ತು ಅವುಗಳು ನಂಟು ಹೊಂದಿರುವ ಕಲೆ ಮತ್ತು ಸಂಸ್ಕೃತಿಗಳನ್ನು ದಾಖಲಿಸಲಾಗುವುದು. ಇದರಲ್ಲಿ ವಿಡಿಯೋಗಳು, ಶಬ್ಧಕೋಶಗಳು, ಧ್ವನಿಮುದ್ರಕಗಳು ಒಳಗೊಂಡಿರುತ್ತವೆ. ಈ ಭಾಷೆ ಮಾತನಾಡುವ ಜನರ (ವಿಶೇಷವಾಗಿ ಹಿರಿಯರ) ಮಾತುಗಳು, ಕಥೆಗಳು, ಕವನ

ವಾಚನ, ನಾಟಕಗಳು, ಜಾನಪದ ಗೀತೆಗಳು, ನೃತ್ಯ ಮತ್ತು ಇನ್ನೂ ಇತರ ಪ್ರಕಾರಗಳನ್ನು ವಿಡಿಯೋ, ಧ್ವನಿಮುದ್ರಿಕೆಗಳು ಒಳಗೊಂಡಿರುತ್ತವೆ. ಈ ವೇದಿಕೆ/ಪೋರ್ಟಲ್/ವಿಕಿಗಳಿಗೆ ಪ್ರಸಕ್ತವಾದ ವಿಷಯಗಳನ್ನು ಸೇರಿಸುವ ಪ್ರಯತ್ನವಾಗಿ ದೇಶಾದ್ಯಂತ ಇರುವ ಜನರನ್ನು ಕೊಡುಗೆ ನೀಡುವಂತೆ ಆಹ್ವಾನಿಸಲಾಗುವುದು. ಇಂತಹ ದಾಖಲೆಗಳು ಸಮೃದ್ಧವಾಗುವಂತೆ ಮಾಡಲು ವಿಶ್ವವಿದ್ಯಾಲಯಗಳು ಮತ್ತು ಅವುಗಳ ಸಂಶೋಧನಾ ತಂಡಗಳು ಜೊತೆ ಸೇರಿ ಕೆಲಸ ಮಾಡಬೇಕಾಗುತ್ತದೆ. ಇತಿಹಾಸ, ಪ್ರಾಕ್ತನಶಾಸ್ತ್ರ, ಭಾಷಾಶಾಸ್ತ್ರದಲ್ಲಿ ಸಂಶೋಧನೆ ಮಾಡುವ ಯೋಜನೆಗಳನ್ನು ಒಳಗೊಂಡ ಸಂರಕ್ಷಣಾ ಪ್ರಯತ್ನಗಳಿಗೆ ಎನ್.ಆರ್.ಎಫ್. ಧನ ಸಹಾಯ ಒದಗಿಸಲಿದೆ.

22.20 ಸ್ಥಳೀಯ ಮಾಸ್ಟರ್ ಮತ್ತು ಉನ್ನತ ಶಿಕ್ಷಣ ವ್ಯವಸ್ಥೆಯ ಒಳಗೆ ಭಾರತೀಯ ಭಾಷೆಗಳು, ಕಲೆ ಮತ್ತು ಸಂಸ್ಕೃತಿಯನ್ನು ಅಧ್ಯಯನ ಮಾಡಲು ಎಲ್ಲಾ ವಯೋಮಾನದ ಜನರಿಗೆ ವಿದ್ಯಾರ್ಥಿ ವೇತನವನ್ನು ನೀಡಲಾಗುವುದು. ಭಾರತೀಯ ಭಾಷೆಗಳನ್ನು ನಿರಂತರವಾಗಿ ಬಳಸಿದರೆ ಮತ್ತು ಅವುಗಳನ್ನು ಬೋಧನೆ ಹಾಗೂ ಕಲಿಕೆಯಲ್ಲಿ ಅಳವಡಿಸಿದಾಗ ಮಾತ್ರ ಅವುಗಳು ಗೆ ಪ್ರಚಾರ ಪಡೆಯಲು ಸಾಧ್ಯವಾಗುತ್ತದೆ. ಎಲ್ಲಾ ಭಾರತೀಯ ಭಾಷೆಗಳಲ್ಲಿ ಇರುವ ಚಲನಶೀಲ ಕವಿತೆ, ಕಾದಂಬರಿ, ಕಥಾಪ್ರಕಾರವಲ್ಲದ ಪುಸ್ತಕಗಳು, ಪಠ್ಯಪುಸ್ತಕಗಳು, ಪತ್ರಿಕೋದ್ಯಮ ಮತ್ತು ಇತರ ಪ್ರಕಾರಗಳಿಗೆ ಉತ್ತೇಜನ ನೀಡಲು ಎಲ್ಲಾ ಪ್ರಕಾರಗಳ ಭಾರತೀಯ ಭಾಷೆಗಳಲ್ಲಿನ ಅಪೂರ್ವವಾದ ಕವಿತೆ ಮತ್ತು ಗದ್ಯಗಳಿಗೆ ನಗದು ಬಹುಮಾನಗಳನ್ನು ನೀಡಲಾಗುವುದು. ಉದ್ಯೋಗದ ಅವಕಾಶಗಳಿಗೂ ಭಾರತೀಯ ಭಾಷೆಗಳಲ್ಲಿ ತಜ್ಞರಾಗಿರುವುದನ್ನೂ ಒಂದು ಅರ್ಹತೆಯಾಗಿ ಪರಿಗಣಿಸಲಾಗುತ್ತದೆ.

23. ತಂತ್ರಜ್ಞಾನ ಬಳಕೆ ಮತ್ತು ಸಂಯೋಜನೆ

23.1 ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದಲ್ಲಿ ಹಾಗೂ ಬಾಹ್ಯಾಕಾಶದಂತಹ ಇತರ ಅತ್ಯಾಧುನಿಕ ಕ್ಷೇತ್ರಗಳಲ್ಲಿ ಭಾರತವು ಜಗತ್ತಿಗೇ ನಾಯಕ. ಇಡೀ ದೇಶವನ್ನು ಡಿಜಿಟಲ್ ಕ್ಷೇತ್ರದಲ್ಲಿ ಸಬಲೀಕರಣಗೊಂಡ ಸಮಾಜವನ್ನಾಗಿ ಪರಿವರ್ತಿಸಲು ಮತ್ತು ಜ್ಞಾನಾಧಾರಿತ ಆರ್ಥಿಕತೆಯನ್ನಾಗಿ ರೂಪಿಸುವ ನಿಟ್ಟಿನಲ್ಲಿ ಡಿಜಿಟಲ್ ಇಂಡಿಯಾ ಅಭಿಯಾನವು ಸಹಕಾರಿಯಾಗಿದೆ. ಈ ಪರಿವರ್ತನೆಯಲ್ಲಿ ಶಿಕ್ಷಣವು ನಿರ್ಣಾಯಕ ಪಾತ್ರ ವಹಿಸುವ ಸಂದರ್ಭದಲ್ಲಿ, ಅತ್ತ ಶೈಕ್ಷಣಿಕ ಪ್ರಕ್ರಿಯೆಗಳು ಮತ್ತು ಫಲಿತಾಂಶಗಳನ್ನು ಉತ್ತಮ ಪಡಿಸುವಲ್ಲಿ ತಂತ್ರಜ್ಞಾನವು ಪ್ರಮುಖ ಪಾತ್ರ ವಹಿಸುತ್ತದೆ; ಹೀಗೆ ತಂತ್ರಜ್ಞಾನ ಮತ್ತು ಶಿಕ್ಷಣದ ನಡುವಿನ ಸಂಬಂಧವು ಎಲ್ಲಾ ಹಂತಗಳಲ್ಲಿಯೂ ದ್ವಿಮುಖ ರೀತಿಯದ್ದಾಗಿರುತ್ತದೆ.

23.2 'ಟೆಕ್ ಸ್ಯಾವಿ' (tech savvy) ಶಿಕ್ಷಕರ ಸಂಪೂರ್ಣ ಸೃಜನಶೀಲತೆ ಮತ್ತು ವಿದ್ಯಾರ್ಥಿ ಉದ್ಯಮಿಗಳು ಹಾಗೂ ಇತರ ಉದ್ಯಮಿಗಳ ಮೈತ್ರಿಯ ಜೊತೆ ಜೊತೆಗೆ, ತಂತ್ರಜ್ಞಾನ ಅಭಿವೃದ್ಧಿಯ ಸ್ಫೋಟಕ ವೇಗವು ಸೇರಿಕೊಂಡಿರುವಾಗ, ಶಿಕ್ಷಣದ ಮೇಲೆ ತಂತ್ರಜ್ಞಾನವು ಬಹುವಿಧದಲ್ಲಿ ಪರಿಣಾಮ ಬೀರುತ್ತದೆ ಎನ್ನುವುದು ಸತ್ಯ. ಪ್ರಸ್ತುತ ಸಂದರ್ಭದಲ್ಲಿ ನಾವು ಕೆಲವು ವಿಚಾರಗಳ ಮುನ್ಸೂಚನೆಯನ್ನಷ್ಟೇ ಕಾಣಬಹುದಾಗಿದೆ. ಕೃತಕ ಬುದ್ಧಿಮತ್ತೆ, ಯಂತ್ರ ಕಲಿಕೆ, ಬ್ಲಾಕ್ ಚೈನ್, ಸ್ಮಾರ್ಟ್ ಬೋರ್ಡ್ಗಳು, ಕೈಯಲ್ಲೇ ನಿರ್ವಹಿಸುವ ಕಂಪ್ಯೂಟರ್ ಉಪಕರಣಗಳು, ವಿದ್ಯಾರ್ಥಿಗಳ ಅಭಿವೃದ್ಧಿಗಾಗಿ ಹೊಂದಾಣಿಕೆಯ ಕಂಪ್ಯೂಟರ್ ಪರೀಕ್ಷೆ ಮತ್ತು ಇತರ ಮಾದರಿಗಳ ಶೈಕ್ಷಣಿಕ ಸಾಫ್ಟ್ವೇರ್ ಮತ್ತು ಹಾರ್ಡ್ವೇರ್ ಮುಂತಾದ ಹೊಸ ತಂತ್ರಜ್ಞಾನಗಳು ವಿದ್ಯಾರ್ಥಿಗಳು ತರಗತಿಯಲ್ಲಿ ಏನು ಕಲಿಯುತ್ತಾರೆ ಎಂಬುದನ್ನು ಮಾತ್ರ ಬದಲಾಯಿಸುವುದಲ್ಲ, ಅವರು ಹೇಗೆ ಕಲಿಯುತ್ತಾರೆ ಎಂಬುದರಲ್ಲಿಯೂ ಬದಲಾವಣೆ ತರುತ್ತವೆ. ಹೀಗೆ ಈ ಕ್ಷೇತ್ರ ಮಾತ್ರವಲ್ಲದೆ, ಇತರ ಕ್ಷೇತ್ರಗಳು ಸೇರಿದಂತೆ, ಶೈಕ್ಷಣಿಕ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ವ್ಯಾಪಕ ಸಂಶೋಧನೆಯ ಅಗತ್ಯವಿದೆ.

23.3 ಶಿಕ್ಷಣದ ಬಹು ಆಯಾಮಗಳನ್ನು ಬೆಂಬಲಿಸುವ ದೃಷ್ಟಿಯಿಂದ, ತಂತ್ರಜ್ಞಾನದ ಬಳಕೆ ಮತ್ತು ಸಂಯೋಜನೆಯನ್ನು ಬೆಂಬಲಿಸಿ, ಅವುಗಳನ್ನು ಸೂಕ್ತವಾಗಿ ಅಳವಡಿಸಿಕೊಳ್ಳಲಾಗುವುದು. ಆದರೆ ಹೀಗೆ ಅಳವಡಿಸಿಕೊಳ್ಳುವ ಮುನ್ನ ಸೂಕ್ತ ಸಂದರ್ಭಗಳಲ್ಲಿ ಅವುಗಳ ಕಠಿಣ ಮತ್ತು ಪಾರದರ್ಶಕ ಮೌಲ್ಯಮಾಪನ ಮಾಡಬೇಕಾಗುವುದು. ಅದಕ್ಕಾಗಿ, ರಾಷ್ಟ್ರೀಯ ಶೈಕ್ಷಣಿಕ ತಂತ್ರಜ್ಞಾನ ವೇದಿಕೆ (NETF) ಎಂಬ ಸ್ವಾಯತ್ತ ಸಂಸ್ಥೆಯನ್ನು ರಚಿಸಿ, ಶಾಲೆ ಮತ್ತು ಉನ್ನತ ಶಿಕ್ಷಣ ಕ್ಷೇತ್ರಗಳೆರಡರಲ್ಲೂ, ಮೌಲ್ಯಮಾಪನ, ಯೋಜನೆ, ಆಡಳಿತ ಮತ್ತಿತರ ವಿಚಾರಗಳ ಕಲಿಕೆಯನ್ನು ಪ್ರೋತ್ಸಾಹಿಸುವ ತಂತ್ರಜ್ಞಾನ ಬಳಕೆಯ ಕುರಿತು ಆಲೋಚನೆಗಳ ಮುಕ್ತ ವಿನಿಮಯಕ್ಕಾಗಿ, ವೇದಿಕೆ ಕಲ್ಪಿಸಲಾಗುವುದು.

ಶೈಕ್ಷಣಿಕ ಸಂಸ್ಥೆಗಳ ನಾಯಕತ್ವಕ್ಕೆ, ರಾಜ್ಯ ಮತ್ತು ಕೇಂದ್ರ ಸರ್ಕಾರ, ಇತರ ಪಾಲುದಾರರು ಹಾಗೂ ಇತ್ತೀಚಿನ ಜ್ಞಾನ ಮತ್ತು ಸಂಶೋಧನೆ ಅಂತೆಯೇ ಸಮಾಲೋಚನೆಯ ಅವಕಾಶಗಳಲ್ಲಿ ಅತ್ಯುತ್ತಮ ಅಭ್ಯಾಸಗಳನ್ನು ಹಂಚಿಕೊಳ್ಳುವ ಮೂಲಕ, ತಂತ್ರಜ್ಞಾನದ ಪ್ರವೇಶ, ನಿಯೋಜನೆ ಮತ್ತು ಬಳಕೆಯಲ್ಲಿ ನಿರ್ಣಯ ತೆಗೆದುಕೊಳ್ಳಲು ನೆರವಾಗುವುದು ಎನ್.ಇ.ಟಿ.ಎಫ್ ಉದ್ದೇಶವಾಗಿದೆ.

ಎನ್‌ಇಟಿಎಫ್ ಈ ಕೆಳಗಿನ ಕೆಲಸಗಳನ್ನು ಮಾಡಲಿದೆ:

ಎ) ತಂತ್ರಜ್ಞಾನ ಆಧರಿಸಿದ ಕ್ರಮಗಳನ್ನು ಅಳವಡಿಸಿಕೊಳ್ಳುವ ಕುರಿತು ಕೇಂದ್ರ ಮತ್ತು ರಾಜ್ಯ ಸರ್ಕಾರದ ಏಜೆನ್ಸಿಗಳಿಗೆ ಆಧಾರ ಸಹಿತವಾದ ಸ್ವತಂತ್ರ ಸಲಹೆಗಳನ್ನು ಒದಗಿಸುವುದು.

ಬಿ) ಶೈಕ್ಷಣಿಕ ತಂತ್ರಜ್ಞಾನದಲ್ಲಿ ಬೌದ್ಧಿಕ ಮತ್ತು ಸಾಂಸ್ಥಿಕ ಸಾಮರ್ಥ್ಯಗಳನ್ನು ನಿರ್ಮಾಣ ಮಾಡುವುದು.

ಸಿ) ಈ ವಿಭಾಗದಲ್ಲಿ ತಂತ್ರಗಾರಿಕೆ ಒತ್ತಡವಿರುವ ಭವಿಷ್ಯದ ಸಾಧ್ಯತೆಗಳನ್ನು ಗುರುತಿಸುವುದು ಮತ್ತು

ಡಿ) ಆವಿಷ್ಕಾರ ಮತ್ತು ಸಂಶೋಧನೆಗೆ ಹೊಸ ನಿರ್ದೇಶನಗಳನ್ನು ರೂಪಿಸುವುದು

23.4 ವೇಗವಾಗಿ ಬದಲಾಗುತ್ತಿರುವ ಶೈಕ್ಷಣಿಕ ತಂತ್ರಜ್ಞಾನ ಕ್ಷೇತ್ರದಲ್ಲಿ ಪ್ರಸ್ತುತವಾಗಿ ಉಳಿಯಲು, ಶೈಕ್ಷಣಿಕ ತಂತ್ರಜ್ಞಾನ ಆವಿಷ್ಕಾರಗಳು ಮತ್ತು ಅಭ್ಯಾಸಗಳು ಸೇರಿದಂತೆ ಬಹುಮೂಲಗಳಿಂದ ದೊರೆಯುವ ಅಧಿಕೃತ ದತ್ತಾಂಶಗಳ ಒಳಹರಿವನ್ನು ಎನ್.ಇ.ಟಿ.ಎಫ್ ಕಾಯ್ದುಕೊಳ್ಳುತ್ತದೆ ಹಾಗೂ ದತ್ತಾಂಶದ ವಿಶ್ಲೇಷಣೆಗಾಗಿ ವಿವಿಧ ಸಂಶೋಧಕರೊಂದಿಗೆ ತೊಡಗಿಸಿಕೊಳ್ಳಲಿದೆ. ಜ್ಞಾನದ ಚಲನಶೀಲ ಸಂಸ್ಥೆಯೊಂದರ ಹಾಗೂ ಅಭ್ಯಾಸಗಳ ಅಭಿವೃದ್ಧಿಗೆ ಬೆಂಬಲ ನೀಡಲು ಎನ್.ಇ.ಟಿ.ಎಫ್ ಹಲವಾರು ಪ್ರಾದೇಶಿಕ ಮತ್ತು ರಾಷ್ಟ್ರೀಯ ಸಮ್ಮೇಳನ, ಕಾರ್ಯಾಗಾರ ಮುಂತಾದವುಗಳನ್ನು ಆಯೋಜಿಸಲಿದೆ. ಈ ಮೂಲಕ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ತಂತ್ರಜ್ಞಾನ ಸಂಶೋಧನೆಗಳು, ಉದ್ಯಮಿಗಳು ಮತ್ತು ಸಾಧಕರಿಂದ ಮಾಹಿತಿಯನ್ನು ಪಡೆಯಲಿದೆ.

23.5. ಬೋಧನೆ ಮತ್ತು ಕಲಿಕೆ ಹಾಗೂ ಮೌಲ್ಯಮಾಪನ ಪ್ರಕ್ರಿಯೆಯ ಸುಧಾರಣೆ, ಶಿಕ್ಷಕರ ಪೂರ್ವತಯಾರಿಗೆ ಬೆಂಬಲ, ಅವರ ವೃತ್ತಿಪರ ಅಭಿವೃದ್ಧಿಯನ್ನು ಬೆಂಬಲಿಸುವುದು, ಶೈಕ್ಷಣಿಕ ಲಭ್ಯತೆಯನ್ನು ಇನ್ನಷ್ಟು ವೃದ್ಧಿಸುವುದು ಮತ್ತು ಶೈಕ್ಷಣಿಕ ಯೋಜನೆ-ವ್ಯವಸ್ಥಾಪನೆಯನ್ನು ಸುವ್ಯವಸ್ಥಿತಗೊಳಿಸುವುದು, ಪ್ರವೇಶಾತಿ, ಹಾಜರಾತಿ, ಮೌಲ್ಯಮಾಪನ ಪ್ರಕ್ರಿಯೆಗಳಿಗೆ ಸಂಬಂಧಿಸಿದ ವಿಚಾರಗಳು ಸೇರಿದಂತೆ ಆಡಳಿತಾತ್ಮಕ ಉದ್ದೇಶಗಳಿಗಾಗಿ ತಂತ್ರಜ್ಞಾನ ಅಳವಡಿಕೆಗಳ ಒತ್ತಡವಿರುತ್ತದೆ.

23.6 ಈ ಮೇಲಿನ ಎಲ್ಲ ಉದ್ದೇಶಗಳಿಗೆ ಸಾಕಷ್ಟು ವೈವಿಧ್ಯಮಯ ಶೈಕ್ಷಣಿಕ ಸಾಫ್ಟ್ವೇರ್‌ಗಳನ್ನು ಅಭಿವೃದ್ಧಿಪಡಿಸಿ ವಿದ್ಯಾರ್ಥಿ ಮತ್ತು ಶಿಕ್ಷಕರಿಗೆ ಎಲ್ಲಾ ಹಂತಗಳಲ್ಲಿ ದೊರೆಯುವಂತೆ ಮಾಡಲಾಗುವುದು. ಭಾರತದ ಎಲ್ಲಾ ಪ್ರಮುಖ ಭಾಷೆಗಳಲ್ಲಿ ಅಂತಹ ಸಾಫ್ಟ್ವೇರ್ ಲಭ್ಯ ಇರಲಿದೆ. ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು, ದಿವ್ಯಾಂಗ ವಿದ್ಯಾರ್ಥಿಗಳು ಸೇರಿದಂತೆ ಎಲ್ಲ ವಲಯದ ಬಳಕೆದಾರರಿಗೆ ಇದು ಲಭ್ಯವಾಗಲಿದೆ. ಇ-ಕಂಟೆಂಟ್ **(e-content)** ನ ಬೋಧನೆ ಮತ್ತು ಕಲಿಕೆಯನ್ನು ಎಲ್ಲಾ ರಾಜ್ಯಗಳು ಪ್ರಾದೇಶಿಕ ಭಾಷೆಗಳಲ್ಲಿ ಅಭಿವೃದ್ಧಿಪಡಿಸುವ ಕಾರ್ಯ ಮುಂದುವರೆಯಲಿದೆ. ಅದೇ ರೀತಿ ಎನ್.ಇ.ಟಿ.ಎಫ್, ಸಿ.ಐ.ಇ.ಟಿ, ಸಿ.ಬಿ.ಎಸ್.ಇ, ಎನ್.ಐ.ಒ.ಎಸ್ ಮತ್ತು ಇತರ ಸಂಸ್ಥೆಗಳು ಈ ಕಾರ್ಯ ನಡೆಸಲಿವೆ. ಇವುಗಳನ್ನು ದೀಕ್ಷಾ (DIKSHA) ವೇದಿಕೆಯಲ್ಲಿ ಅಪ್ಲೋಡ್ ಮಾಡಲಾಗುವುದು. ಇ-ಕಂಟೆಂಟ್ಗಳನ್ನು ಗಮನಿಸುವ ಮೂಲಕ ಶಿಕ್ಷಕರು ಕೂಡ ಈ ವೇದಿಕೆಯನ್ನು ತಮ್ಮ ವೃತ್ತಿಪರ ಬೆಳವಣಿಗೆಗೆ ಬಳಸಿಕೊಳ್ಳಬಹುದು. ದೀಕ್ಷಾ ಹಾಗೂ ಇತರ ಶೈಕ್ಷಣಿಕ ತಂತ್ರಜ್ಞಾನ ಸಂಸ್ಥೆಗಳನ್ನು ವಿಸ್ತರಿಸಲು ಮತ್ತು ಅದಕ್ಕೆ ಪ್ರೋತ್ಸಾಹ ನೀಡುವ ದೃಷ್ಟಿಯಿಂದ ಸಿ.ಐ.ಇ.ಟಿಯನ್ನು ಬಲಪಡಿಸಲಾಗುವುದು. ಶಿಕ್ಷಕರಿಗೆ 'ಇ ಕಂಟೆಂಟ್'ಗಳನ್ನು ಬೋಧನಾ-ಕಲಿಕಾ ಪ್ರಕ್ರಿಯೆಗಳಲ್ಲಿ ಸಂಯೋಜಿಸಿಕೊಳ್ಳಲು ಅನುವಾಗುವಂತೆ ಶಾಲೆಗಳಲ್ಲಿ ಸೂಕ್ತ ಉಪಕರಣಗಳು ಲಭ್ಯವಾಗುವಂತೆ ಮಾಡಲಾಗುವುದು. ದೀಕ್ಷಾ/ಸ್ವಯಂನಂತಹ ತಂತ್ರಜ್ಞಾನ ಆಧಾರಿತ ವೇದಿಕೆಗಳನ್ನು ಶಾಲೆ ಮತ್ತು ಉನ್ನತ ಶಿಕ್ಷಣದಲ್ಲಿ ಅತ್ಯುತ್ತಮವಾಗಿ ಸಂಯೋಜಿಸಲಾಗುವುದು ಹಾಗೂ ಇದನ್ನು ಬಳಕೆದಾರರು ಪ್ರಮಾಣೀಕರಿಸುವ (rating)/ ವಿಮರ್ಶಿಸುವ ಅವಕಾಶವನ್ನು ಕಲ್ಪಿಸಿಕೊಡಲಾಗುವುದು. ಹಾಗಾದಾಗ, ವಿಷಯಗಳನ್ನು ಅಭಿವೃದ್ಧಿಪಡಿಸುವವರು ಬಳಕೆದಾರ ಸ್ನೇಹಿ ಮತ್ತು ಗುಣಮಟ್ಟದ ವಿಷಯಗಳ ರಚನೆ ಮಾಡಲು ಅನುಕೂಲವಾಗುತ್ತದೆ.

23.7 ಶೈಕ್ಷಣಿಕ ವ್ಯವಸ್ಥೆಯನ್ನು ಪರಿವರ್ತಿಸಬಲ್ಲ ತಂತ್ರಜ್ಞಾನದ ಜೊತೆಗೆ ತೊಡಕುಂಟು ಮಾಡಬಲ್ಲ ತಂತ್ರಜ್ಞಾನ (disruptive technology) ವೂ ಹೊರಹೊಮ್ಮುತ್ತಿದ್ದು, ಅವುಗಳ ಕುರಿತು ನಿರ್ದಿಷ್ಟವಾಗಿ ಗಮನ ಹರಿಸುವುದು ಅಗತ್ಯವಾಗಿದೆ. 1986/1992ರಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ ರೂಪಿಸುವಾಗ, ಅಂತರ್ಜಾಲದಿಂದಾಗುವ ತೊಡಕು, ಪರಿಣಾಮಗಳ ಕುರಿತು ಊಹಿಸುವುದು ಕಷ್ಟವಾಗಿತ್ತು. ಜಗತ್ತು ಹೆಚ್ಚು ಸ್ಪರ್ಧಾತ್ಮಕವಾಗುತ್ತಿರುವ ಸಂದರ್ಭದಲ್ಲಿ ತಂತ್ರಜ್ಞಾನದ ಇಂತಹ ಕ್ಷಿಪ್ರ ಮತ್ತು ಆತಂಕಕಾರಿ ಬದಲಾವಣೆಗಳನ್ನು ನಿಭಾಯಿಸುವಲ್ಲಿ ಪ್ರಸ್ತುತ ಶಿಕ್ಷಣ ವ್ಯವಸ್ಥೆ ಅಸಮರ್ಥವಾಗಿದ್ದು, ಈ ಅಸಮರ್ಥತೆಯು ನಮ್ಮನ್ನು ವೈಯಕ್ತಿಕವಾಗಿ ಮತ್ತು ರಾಷ್ಟ್ರೀಯವಾಗಿ, ಅವಕಾಶ ವಂಚಿತ ಹಂತದಲ್ಲಿಯೇ ಉಳಿಯುವಂತೆ ಮಾಡುತ್ತಿದೆ. ಉದಾಹರಣೆಗೆ, ವಾಸ್ತವಾಂಶ ಮತ್ತು ದಾಖಲೆ ವಿಧಾನಗಳಿಗೆ ಸಂಬಂಧಿಸಿದ ಜ್ಞಾನ ಕ್ಷೇತ್ರದಲ್ಲಿ ಕಂಪ್ಯೂಟರ್ಗಳು, ಮನುಷ್ಯರನ್ನು ಸಾಕಷ್ಟು ಮೀರಿಸಿಬಿಟ್ಟಿವೆ. ಆದರೆ ನಮ್ಮ ಶಿಕ್ಷಣ ವ್ಯವಸ್ಥೆಯು ಎಲ್ಲಾ ಹಂತಗಳಲ್ಲಿಯೂ ಇಂತಹ ಜ್ಞಾನ ಕಲಿಕೆಗೆ ವಿದ್ಯಾರ್ಥಿಗಳ ಮೇಲೆ ವಿಪರೀತ ಹೊರೆ ಹಾಕುತ್ತಿದೆ. ಅದಕ್ಕೆ ಬದಲಾಗಿ ಅವರು, ಉನ್ನತ ಮಟ್ಟದ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಿಕೊಳ್ಳಬಹುದು.

23.8 ಪ್ರಶ್ನಾತೀತವಾಗಿ ತೊಡಕುಂಟು ಮಾಡಬಲ್ಲ ತಂತ್ರಜ್ಞಾನ- ಕೃತಕ ಬುದ್ಧಿಮತ್ತೆ (AI) 3D/7D ಎಂಬ ವರ್ಚುವಲ್ ರಿಯಾಲಿಟಿ

ಹೊರಹೊಮ್ಮುತ್ತಿರುವ ಈ ಸಂದರ್ಭದಲ್ಲಿ ಈ ನೀತಿಯು ರೂಪುಗೊಂಡಿದೆ. ಕೃತಕ ಬುದ್ಧಿಮತ್ತೆ ಆಧರಿಸಿ ಉಹೆಗಳನ್ನು ಮಾಡುವ ವೆಚ್ಚವು ಕಡಿಮೆಯಾಗುತ್ತಿದ್ದಂತೆಯೇ, ಈ ಎಐ ಎಂಬುದು, ಉಹಾತ್ಮಕ ಕೆಲಸಗಳಲ್ಲಿ ವೈದ್ಯರಂತಹ ಕೌಶಲಯುತ ವೃತ್ತಿಪರರಿಗೆ ಸಮಾನವಾಗಿ ಅಥವಾ ಅವರಿಗಿಂತ ಚೆನ್ನಾಗಿ ಕೆಲಸ ಮಾಡಿ, ಅವರಿಗೆ ನೆರವಾಗಬಹುದು. ವೃತ್ತಿಕ್ಷೇತ್ರದಲ್ಲಿ ಎಐಯ ತೊಡಕುಂಟು ಮಾಡಬಲ್ಲ ಸಾಮರ್ಥ್ಯ ಸ್ಪಷ್ಟವಾಗಿದೆ ಮತ್ತು ಇದಕ್ಕೆ ಕ್ಷಿಪ್ರವಾಗಿ ಪ್ರತಿಕ್ರಿಯಿಸಲು ಪೂರಕವಾಗಿ ಶಿಕ್ಷಣ ವ್ಯವಸ್ಥೆಯನ್ನು ಸಜ್ಜುಗೊಳಿಸಬೇಕಾಗಿದೆ. ಆದ್ದರಿಂದ ಎನ್.ಇ.ಟಿ.ಎಫ್.ನ ಶಾಶ್ವತ ಕೆಲಸಗಳಲ್ಲಿ ಹೊರಹೊಮ್ಮುತ್ತಿರುವ ಅಂತಹ ತಂತ್ರಜ್ಞಾನಗಳ ಸಾಮರ್ಥ್ಯ ಮತ್ತು ಅವು ಅಪಾಯ ಉಂಟುಮಾಡಲು ತೆಗೆದುಕೊಳ್ಳುವ ಅವಧಿಯನ್ನು ಆಧರಿಸಿ, ಅವುಗಳ ವರ್ಗೀಕರಣ ಮಾಡುವುದು ಮತ್ತು ಇಂತಹ ವಿಶ್ಲೇಷಣೆಯನ್ನು ನಿಯಮಿತವಾಗಿ ಎಂ.ಎಚ್.ಆರ್.ಡಿಗೆ ಸಲ್ಲಿಸುವುದು. ಈ ಮಾಹಿತಿಯನ್ನು ಆಧರಿಸಿ, ಅಂತಹ ಯಾವೆಲ್ಲಾ ತಂತ್ರಜ್ಞಾನಗಳಿಗೆ ಶಿಕ್ಷಣ ಕ್ಷೇತ್ರದ ಪ್ರತಿಕ್ರಿಯೆ ಅಗತ್ಯವಾಗಿದೆ ಎಂಬುದನ್ನು ಎಂ.ಎಚ್.ಆರ್.ಡಿಯು ಅಧಿಕೃತವಾಗಿ ಗುರುತಿಸುತ್ತದೆ.

23.9 ಹೀಗೆ ಎಂ.ಎಚ್.ಆರ್.ಡಿ ಅಧಿಕೃತವಾಗಿ ಗುರುತಿಸಿದ, ತೊಡಕುಂಟು ಮಾಡಬಲ್ಲ ತಂತ್ರಜ್ಞಾನಗಳಿಗೆ ಸಂಬಂಧಿಸಿ, ರಾಷ್ಟ್ರೀಯ ಸಂಶೋಧನಾ ಪ್ರತಿಷ್ಠಾನವು ಈ ತಂತ್ರಜ್ಞಾನಕ್ಕೆ ಸಂಬಂಧಿಸಿದ ಸಂಶೋಧನಾ ಪ್ರಯತ್ನಗಳನ್ನು ಆರಂಭಿಸುತ್ತದೆ ಅಥವಾ ಅದಾಗಲೇ ಸಂಶೋಧನೆ ನಡೆಯುತ್ತಿದ್ದರೆ ಅದನ್ನು ವಿಸ್ತರಿಸುತ್ತದೆ. ಎಐಗೆ ಸಂಬಂಧಿಸಿದಂತೆ ಎನ್.ಆರ್.ಎಫ್ ಮೂರು ರೀತಿಯ ಕಾರ್ಯವಿಧಾನಗಳನ್ನು ಅನುಸರಿಸಬಹುದು: ಎ) ಮೂಲ ಕೃತಕ ಬುದ್ಧಿಮತ್ತೆಯ ಸಂಶೋಧನೆಯನ್ನು ಇನ್ನಷ್ಟು ಮುಂದುವರೆಸುವುದು, ಬಿ) ಆನ್ವಯಿಕ ಸಂಶೋಧನೆಯನ್ನು ಅಭಿವೃದ್ಧಿಪಡಿಸಿ ಅಳವಡಿಸಿಕೊಳ್ಳುವುದು ಸಿ) ಎಐ ಬಳಸಿಕೊಂಡು, ಆರೋಗ್ಯ, ಕೃಷಿ ಮತ್ತು ಹವಾಮಾನ ಬದಲಾವಣೆ ಮುಂತಾದ ಜಾಗತಿಕ ಸವಾಲುಗಳ ಕ್ಷೇತ್ರದಲ್ಲಿ ಅಂತರರಾಷ್ಟ್ರೀಯ ಸಂಶೋಧನಾ ಪ್ರಯತ್ನಗಳನ್ನು ಮುಂದುವರೆಸುವುದು.

23.10 ಉನ್ನತ ಶಿಕ್ಷಣ ಸಂಸ್ಥೆಗಳು ಈ ತೊಡಕುಂಟು ಮಾಡಬಲ್ಲ ತಂತ್ರಜ್ಞಾನದ ಬಗ್ಗೆ ಸಂಶೋಧನೆ ನಡೆಸುವುದರಲ್ಲಷ್ಟೇ, ಪ್ರಮುಖ ಪಾತ್ರವಹಿಸುವುದಲ್ಲ. ಬೋಧನಾ ಸಾಮಗ್ರಿಗಳ ಆರಂಭಿಕ ಆವೃತ್ತಿಗಳನ್ನು ಮತ್ತು ಕೋರ್ಸುಗಳನ್ನು ರೂಪಿಸುತ್ತವೆ. ಅತ್ಯಾಧುನಿಕ ಕ್ಷೇತ್ರದ ಆನ್‌ಲೈನ್ ಕೋರ್ಸುಗಳು ಮತ್ತು ವೃತ್ತಿಪರ ಶಿಕ್ಷಣ ಕ್ಷೇತ್ರದಂತಹ, ನಿರ್ದಿಷ್ಟ ಕ್ಷೇತ್ರಗಳ ಮೇಲೆ ಅವುಗಳ ಪರಿಣಾಮಗಳನ್ನು, ಮೌಲ್ಯಮಾಪನವನ್ನೂ ಮಾಡುತ್ತವೆ. ತಂತ್ರಜ್ಞಾನವು ಪಕ್ವಗೊಂಡ ನಂತರ ಬೋಧನೆ ಮತ್ತು ಕೌಶಲ ಕಲಿಕೆಯ ಪ್ರಯತ್ನಗಳನ್ನು ಪರಿಶೀಲಿಸಲು ಸಾವಿರಾರು ವಿದ್ಯಾರ್ಥಿಗಳನ್ನೊಳಗೊಂಡ ಉನ್ನತ ಶಿಕ್ಷಣ ಸಂಸ್ಥೆಗಳನ್ನು ಬಳಸಿಕೊಳ್ಳಲಾಗುವುದು. ಇದು ನಿರ್ದಿಷ್ಟ ಉದ್ಯೋಗಕ್ಕಾಗಿ ವಿದ್ಯಾರ್ಥಿಗಳನ್ನು ಸಿದ್ಧಪಡಿಸುವ ತರಬೇತಿಯನ್ನೂ ಒಳಗೊಂಡಿರುತ್ತದೆ. ವಿನಾಶಕಾರಿ ತಂತ್ರಜ್ಞಾನಗಳು ಕೆಲವು ವೃತ್ತಿಗಳನ್ನು ಅನಗತ್ಯವಾಗಿಸಿಬಿಡುತ್ತವೆ. ಹಾಗಾಗಿ, ಉದ್ಯೋಗವನ್ನು ಸೃಷ್ಟಿಸಲು ಮತ್ತು ಉಳಿಸಿಕೊಳ್ಳಲು, ಸಮರ್ಥವಾದ ಮತ್ತು ಗುಣಮಟ್ಟ ಖಾತ್ರಿಪಡಿಸುವ ಕೆಲವು ಕೌಶಲ ಕಲಿಯುವುದು ಮತ್ತು ಕೆಲವು ಕೌಶಲಗಳ ಕೈಬಿಡುವುದು- ಈ ಎರಡೂ ಪ್ರಕ್ರಿಯೆಗಳಿಗೆ ಹೆಚ್ಚಿನ ಮಹತ್ವ ದೊರೆಯಲಿದೆ. ಕೌಶಲ ಮತ್ತು ಉನ್ನತ ಶಿಕ್ಷಣ ಚೌಕಟ್ಟನ್ನು ಹೊಂದಿಸಿಕೊಳ್ಳುವುದಕ್ಕಾಗಿ ಇಂತಹ ತರಬೇತಿ ನೀಡಲು ಬೇಕಾದ ಸಾಂಸ್ಥಿಕ ಮತ್ತು ಅಸಾಂಸ್ಥಿಕವಾದ ಪಾಲುದಾರರನ್ನು ಹೊಂದಲು ಸಂಸ್ಥೆಗಳಿಗೆ ಸ್ವಾಯತ್ತತೆ ದೊರೆಯಲಿದೆ.

23.11 ಮೆಷಿನ್ ಲರ್ನಿಂಗ್ (ಯಂತ್ರ ಕಲಿಕೆ), ಅಂತೆಯೇ ಬಹುಶಿಸ್ತೀಯ ಕ್ಷೇತ್ರಗಳಾದ 'ಎಐ+ಎಕ್ಸ್' ಮತ್ತು ವೃತ್ತಿಪರ ಕ್ಷೇತ್ರಗಳಾದ ಆರೋಗ್ಯ, ಕೃಷಿ ಮತ್ತು ಕಾನೂನು ಮುಂತಾದ ಮೂಲ ಕ್ಷೇತ್ರಗಳಲ್ಲಿ ವಿಶ್ವವಿದ್ಯಾಲಯಗಳು ಸ್ನಾತಕೋತ್ತರ ಪದವಿ ಮತ್ತು ಪಿ.ಎಚ್.ಡಿ ಪದವಿ ನೀಡುವ ಉದ್ದೇಶ ಹೊಂದಿವೆ. ಅವುಗಳು 'ಸ್ವಯಂ'ನಂತಹ ವೇದಿಕೆಗಳ ಮೂಲಕವೂ ಇಂತಹ ವಿಷಯಗಳಲ್ಲಿ ಕೋರ್ಸುಗಳನ್ನು ಅಭಿವೃದ್ಧಿಪಡಿಸಿ ಪ್ರಸರಣ ಮಾಡಬಹುದು. ಕ್ಷಿಪ್ರವಾದ ಅಳವಡಿಕೆಗೆ ಪೂರಕವಾಗಿ ಉನ್ನತ ಶಿಕ್ಷಣ ಸಂಸ್ಥೆಗಳು ಈ ಆನ್‌ಲೈನ್ ಕೋರ್ಸುಗಳನ್ನು ಪದವಿ ಕಲಿಕೆ ಮತ್ತು ವೃತ್ತಿಪರ ಕಲಿಕಾ ಯೋಜನೆಗಳಲ್ಲಿ ಸಾಂಪ್ರದಾಯಿಕ ಬೋಧನೆಯ ಜೊತೆಗೆ ಸೇರಿಸಿಕೊಳ್ಳಬಹುದು. ಕೃತಕಬುದ್ಧಿಮತ್ತೆಯ ಮೌಲ್ಯ ಸರಪಳಿಯನ್ನು ಬೆಂಬಲಿಸಲು ಮಾಹಿತಿ ಟಿಪ್ಪಣಿ (data annotation), ಚಿತ್ರಗಳ ವರ್ಗೀಕರಣ (image classification) ಮತ್ತು ಮಾತುಗಳನ್ನು ಬರೆಹವಾಗಿಸುವ ಕೌಶಲ (speech transcription) ದಂತಹ ಕಡಿಮೆ ತಜ್ಞತೆ ಬಯಸುವ ಕೆಲಸಗಳ ತರಬೇತಿಯನ್ನೂ ಈ ಉನ್ನತ ಶಿಕ್ಷಣ ಸಂಸ್ಥೆಗಳು ನೀಡಬಹುದು. ಶಾಲಾ ವಿದ್ಯಾರ್ಥಿಗಳಿಗೆ ಭಾಷೆಗಳನ್ನು ಕಲಿಸುವ ಪ್ರಯತ್ನವು ಭಾರತದ ವೈವಿಧ್ಯಮ ಭಾಷೆಗಳಿಗಾಗಿ ಸಹಜ ಭಾಷಾ ಸಂಸ್ಕರಣೆಯನ್ನು ವೃದ್ಧಿಸುವ ಆಶಯಕ್ಕೆ ಪೂರಕವಾಗಿದೆ.

23.12 ತೊಡಕುಂಟು ಮಾಡಬಲ್ಲ ತಂತ್ರಜ್ಞಾನವು ಹೊರಹೊಮ್ಮುತ್ತಿರುವಂತೆಯೇ, ಅತ್ತ ಶಾಲೆ ಮತ್ತು ಇತರ ನಿರಂತರ ಶಿಕ್ಷಣ ಪ್ರಕ್ರಿಯೆಗಳ ಮೂಲಕ ಸಾಮಾನ್ಯ ಜನರಿಗೆ ಇಂತಹ ತಂತ್ರಜ್ಞಾನಗಳಿಗೆ ಇರುವ ವಿನಾಶದ ಸಾಮರ್ಥ್ಯ ಮತ್ತು ಅವುಗಳು ಉಂಟುಮಾಡಬಹುದಾದ ಪರಿಣಾಮ ಮತ್ತು ಸಂಬಂಧಿಸಿದ ಸಮಸ್ಯೆಗಳ ಕುರಿತು ಜಾಗೃತಿ ಮೂಡಿಸಲು ಪ್ರಯತ್ನಗಳು ನಡೆಯಲಿವೆ. ಇಂತಹ ತಂತ್ರಜ್ಞಾನಗಳಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಅರಿವುಳ್ಳ ಸಾರ್ವಜನಿಕರಿಂದ ಸಮ್ಮತಿಗಳನ್ನು ಪಡೆಯುವ ದೃಷ್ಟಿಯಿಂದ ಈ ಜಾಗೃತಿಯು ಅತ್ಯಗತ್ಯವಾಗಿದೆ. ಶಾಲೆಗಳಲ್ಲಿ ಸಮಕಾಲೀನ ವಿಷಯಗಳ ಅಧ್ಯಯನ ಮತ್ತು ನೈತಿಕತೆಯ ವಿಷಯಗಳ ಚರ್ಚೆಗಳಿಗೆ ನೀಡುವ ವಿಷಯಗಳಲ್ಲಿ, ಎನ್.ಇ.ಟಿ.ಎಫ್ /ಎಂ.ಎಚ್.ಆರ್.ಡಿ ಗುರುತಿಸಿದ ಪಟ್ಟಿಯಲ್ಲಿ ಇರುವ ತೊಡಕುಂಟು ಮಾಡುವ ತಂತ್ರಜ್ಞಾನಗಳ ವಿಷಯಗಳನ್ನೂ ಸೇರಿಸಿಕೊಳ್ಳಲಾಗುವುದು. ಈ ಕುರಿತ ನಿರಂತರ ಶಿಕ್ಷಣಕ್ಕಾಗಿ ಸರಿಯಾದ ಬೋಧನಾ ಮತ್ತು ಸಂವಾದಕ್ಕೆ ಬೇಕಾದ

ಸಾಮಗ್ರಿಗಳನ್ನು ಕೂಡ ರಚಿಸಲಾಗುವುದು.

23.13 ಕೃತಕ ಬುದ್ಧಿಮತ್ತೆ ಆಧರಿಸಿದ ತಂತ್ರಜ್ಞಾನಕ್ಕೆ ದತ್ತಾಂಶವೇ ಪ್ರಮುಖ ಇಂಧನ. ಆದ್ದರಿಂದ ಖಾಸಗಿತನ, ಕಾನೂನು, ದತ್ತಾಂಶ ನಿರ್ವಹಣೆ ಮತ್ತು ದತ್ತಾಂಶ ಸಂರಕ್ಷಣೆಯಲ್ಲಿ ಅನುಸರಿಸಬೇಕಾದ ಮಾನದಂಡಗಳು ಮುಂತಾದ ವಿಚಾರಗಳಿಗೆ ಸಂಬಂಧಿಸಿದಂತೆ ಜಾಗೃತಿ ಮೂಡಿಸುವುದು ಅತ್ಯಂತ ಅಗತ್ಯವಾದುದಾಗಿದೆ.

ಕೃತಕ ಬುದ್ಧಿಮತ್ತೆ ಆಧರಿಸಿದ ತಂತ್ರಜ್ಞಾನದ ಅಭಿವೃದ್ಧಿ ಮತ್ತು ಅಳವಡಿಸಿಕೊಳ್ಳುವಿಕೆಯ ಸಂದರ್ಭದಲ್ಲಿ ನೈತಿಕತೆಯ ವಿಷಯವನ್ನು ಪ್ರಧಾನವಾಗಿ ಪರಿಗಣಿಸುವುದು ಮುಖ್ಯ. ಈ ಜಾಗೃತಿ ಮೂಡಿಸುವ ಪ್ರಯತ್ನದಲ್ಲಿ ಶಿಕ್ಷಣವು ಪ್ರಧಾನ ಪಾತ್ರ ವಹಿಸುತ್ತದೆ. ಇನ್ನೂ ಹಲವು ರೀತಿಯ 'ತೊಡಕುಂಟು ಮಾಡಬಲ್ಲ ತಂತ್ರಜ್ಞಾನ'ಗಳು ನಮ್ಮ ಜೀವನಶೈಲಿಯನ್ನು ಬದಲಾಯಿಸುವ ನಿರೀಕ್ಷೆ ಹೊಂದಿದ್ದು, ಅವುಗಳ ಬಗ್ಗೆಯೂ ನಾವು ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡಬೇಕಾಗಿದೆ. ಸ್ವಚ್ಛ ಮತ್ತು ನವೀಕರಿಸಬಹುದಾದ ಇಂಧನ, ನೀರಿನ ಸಂರಕ್ಷಣೆ, ಸುಸ್ಥಿರ ಕೃಷಿ, ಪರಿಸರ ಸಂರಕ್ಷಣೆ ಮತ್ತು ಇತರ ಪರಿಸರ ಸಂಬಂಧಿ ಉಪಕ್ರಮಗಳ ಕುರಿತೂ ಶಿಕ್ಷಣದಲ್ಲಿ ಆದ್ಯತೆಯ ಮೇರೆಗೆ ಗಮನ ಹರಿಸಬೇಕಾಗಿದೆ.

24. ಆನ್‌ಲೈನ್ ಮತ್ತು ಡಿಜಿಟಲ್ ಶಿಕ್ಷಣ: ತಂತ್ರಜ್ಞಾನದ ಸಮಾನ ಬಳಕೆಯ ಭರವಸೆ

24.1 ಹೊಸ ವಿದ್ಯಮಾನಗಳು ಮತ್ತು ವಾಸ್ತವಗಳಿಗೆ ಹೊಸ ಉಪಕ್ರಮಗಳು ಬೇಕಾಗುತ್ತವೆ. ಇತ್ತೀಚಿನ ಸಾಂಕ್ರಾಮಿಕ ರೋಗಗಳು ಮತ್ತು ವ್ಯಾದಿಗಳಲ್ಲಿನ ಏರುಗತಿ, ಎಲ್ಲೆಲ್ಲಿ ಮತ್ತು ಯಾವಾಗೆಲ್ಲ ಸಾಂಪ್ರದಾಯಿಕ ಹಾಗೂ ಮುಖಾಮುಖಿ ಸ್ವರೂಪದ ಶಿಕ್ಷಣ ಸಾಧ್ಯವಿಲ್ಲವೋ ಅಲ್ಲಿ ಉನ್ನತ ಶಿಕ್ಷಣದ ಪರ್ಯಾಯ ಸ್ವರೂಪದೊಂದಿಗೆ ನಾವು ಸಿದ್ಧವಾಗಿರಬೇಕಾದ ಅಗತ್ಯತೆಯನ್ನು ತಿಳಿಸಿದೆ. ಈ ಹಿನ್ನೆಲೆಯಲ್ಲಿ ತಂತ್ರಜ್ಞಾನದ ಅಪಾಯಗಳ ಸಾಧ್ಯತೆಗಳನ್ನು ಅರಿತುಕೊಂಡೇ ಅದರ ಪ್ರಯೋಜನಗಳನ್ನು ಗುರುತಿಸುವ ಕೆಲಸವನ್ನು ರಾಷ್ಟ್ರೀಯ ಶಿಕ್ಷಣ ನೀತಿ-2020 ಮಾಡಿದೆ. ಈ ಕಾರಣಕ್ಕೆ, ಆನ್‌ಲೈನ್/ಡಿಜಿಟಲ್ ಶಿಕ್ಷಣದ ಪರಿಣಾಮಗಳನ್ನು ನಿಭಾಯಿಸುತ್ತಲೇ ಅಥವಾ ತಗ್ಗಿಸುತ್ತಲೇ ಅದರ ಫಲವನ್ನು ಹೇಗೆ ಪಡೆದುಕೊಳ್ಳಬಹುದು ಎಂಬುದನ್ನು ನಿರ್ಧರಿಸಲು ಅತ್ಯಂತ ಎಚ್ಚರಿಕೆಯಿಂದ ವಿನ್ಯಾಸಗೊಳಿಸಿದ ಮತ್ತು ಸೂಕ್ತವಾಗಿ ಅಂದಾಜು ಮಾಡಲಾದ ಮಾರ್ಗದರ್ಶಕ ಅಧ್ಯಯನಗಳನ್ನು ನಡೆಸಬೇಕು ಎಂಬುದು ಇದರ ಆಶಯವಾಗಿದೆ. ಈ ಮಧ್ಯೆ, ಸರ್ವರಿಗೂ ಉತ್ತಮ ಗುಣಮಟ್ಟದ ಶಿಕ್ಷಣವನ್ನು ಕಲ್ಪಿಸುವಲ್ಲಿ ಈಗಿರುವ ಮತ್ತು ಭವಿಷ್ಯದಲ್ಲಿ ಬರಬಹುದಾದ ಸವಾಲುಗಳನ್ನು ಎದುರಿಸಲು ಈಗಿರುವ ಡಿಜಿಟಲ್ ವೇದಿಕೆಗಳು ಮತ್ತು ಚಾಲ್ತಿಯಲ್ಲಿರುವ ಐ.ಸಿ.ಟಿ. ಆಧಾರಿತ ಶೈಕ್ಷಣಿಕ ಉಪಕ್ರಮಗಳನ್ನು ಇನ್ನಷ್ಟು ಉತ್ತಮಗೊಳಿಸಲು ಮತ್ತು ವಿಸ್ತರಿಸಲು ಪ್ರಯತ್ನ ಮಾಡಬೇಕಾಗಿದೆ.

24.2 ಆದರೆ, ಡಿಜಿಟಲ್ ಭಾರತ ಅಭಿಯಾನ ಮತ್ತು ಕೈಗೆಟುಕಬಲ್ಲ ಕಂಪ್ಯೂಟರ್ ಸಾಧನಗಳ ಲಭ್ಯತೆಯಂತಹ ಯೋಜಿತ ಪ್ರಯತ್ನಗಳ ಮೂಲಕ ಡಿಜಿಟಲ್ ವಿಭಜನೆಯನ್ನು ತೆಗೆದುಹಾಕದೆ ಆನ್‌ಲೈನ್/ಡಿಜಿಟಲ್ ಶಿಕ್ಷಣದ ಪ್ರಯೋಜನಗಳನ್ನು ವಿಸ್ತರಿಸಬಾರದು. ಆನ್‌ಲೈನ್ ಮತ್ತು ಡಿಜಿಟಲ್ ಶಿಕ್ಷಣಕ್ಕೆ ತಂತ್ರಜ್ಞಾನವನ್ನು ಬಳಕೆ ಮಾಡುವುದರಿಂದ ಸಮಾನತೆಯ ಕಳಕಳಿಗಳನ್ನು ಸಮರ್ಪಕವಾಗಿ ನಿಭಾಯಿಸಬೇಕು ಎಂಬುದು ಮಹತ್ವದ ಅಂಶವಾಗಿದೆ.

24.3 ಆನ್‌ಲೈನ್ ಶಿಕ್ಷಣವನ್ನು ಪರಿಣಾಮಕಾರಿಯಾಗಿ ನೀಡಲು ಶಿಕ್ಷಕರಿಗೆ ಸೂಕ್ತ ರೀತಿಯ ತರಬೇತಿ ಮತ್ತು ಅಭಿವೃದ್ಧಿಯ ಅಗತ್ಯವಿದೆ. ಸಾಂಪ್ರದಾಯಿಕ ತರಗತಿಗಳಲ್ಲಿ ಉತ್ತಮ ಬೋಧಕರಾಗಿರುವವರು ಸ್ವಾಭಾವಿಕವಾಗಿ ಆನ್‌ಲೈನ್ ಕ್ಲಾಸ್-ರೂಮಿನಲ್ಲೂ ಉತ್ತಮ ಶಿಕ್ಷಕರಾಗಿರುತ್ತಾರೆ ಎಂದು ಊಹಿಬೇಕಾಗಿಲ್ಲ. ಅಧ್ಯಾಪನ ವಿಧಾನದಲ್ಲಿ ಬದಲಾವಣೆ ಮಾಡಿಕೊಳ್ಳಬೇಕು ಎಂಬುದನ್ನು ಹೊರತುಪಡಿಸಿದರೆ, ಆನ್‌ಲೈನ್ ಮೌಲ್ಯಮಾಪನಕ್ಕೆ ವಿಭಿನ್ನವಾದ ವಿಧಾನ ಬೇಕಾಗುತ್ತದೆ. ಆನ್‌ಲೈನ್ ವಾತಾವರಣದಲ್ಲಿ ಕೇಳಬಹುದಾದ ಪ್ರಶ್ನೆಗಳ ಮಾದರಿಗಳು ಸೀಮಿತವಾಗಿರುವುದು, ನೆಟ್‌ವರ್ಕ್ ಮತ್ತು ವಿದ್ಯುತ್ ವ್ಯತ್ಯಯದಂತಹ ಸಮಸ್ಯೆಗಳನ್ನು ನಿಭಾಯಿಸುವುದು ಮತ್ತು ಅನೈತಿಕವಾದ ಅಭ್ಯಾಸಗಳನ್ನು ತಡೆಯುವುದು ಸೇರಿದಂತೆ ಏಕಪ್ರಮಾಣದಲ್ಲಿ ಆನ್‌ಲೈನ್ ಪರೀಕ್ಷೆಗಳನ್ನು ನಡೆಸಲು ಅನೇಕ ಸವಾಲುಗಳನ್ನು ಎದುರಿಸಬೇಕಾಗುತ್ತದೆ. ಪ್ರದರ್ಶನ ಕಲೆಗಳು ಮತ್ತು ವಿಜ್ಞಾನದ ಪ್ರಯೋಗಗಳಂತಹ ಕೆಲವು ವಿಧದ ಕೋರ್ಸ್/ವಿಷಯಗಳಿಗೆ ಆನ್‌ಲೈನ್/ಡಿಜಿಟಲ್ ಶಿಕ್ಷಣ ವಿಭಾಗದಲ್ಲಿ ಕೆಲವು ಮಿತಿಗಳಿವೆ. ಕೆಲವು ವಿನೂತನ ಕ್ರಮಗಳ ಮೂಲಕ ಇವುಗಳನ್ನು ಭಾಗಶಃ ನಿಭಾಯಿಸಬಹುದು. ಇದರ ಜೊತೆಗೆ ಆನ್‌ಲೈನ್ ಶಿಕ್ಷಣವನ್ನು ಪ್ರಯೋಗಾತ್ಮಕ ಮತ್ತು ಚಟುವಟಿಕೆ-ಆಧಾರಿತ ಕಲಿಕೆಯಾಗಿ ಹದವಾಗಿ ಮಿಶ್ರಣ ಮಾಡದೇ ಹೋದರೆ ಅದು ಬರಿಯ ಕಂಪ್ಯೂಟರ್ ಪರದೆಯನ್ನು ಆಧರಿಸಿದ ಶಿಕ್ಷಣವಾಗಿ ಮಾತ್ರ ರೂಪುಗೊಳ್ಳುತ್ತದೆ; ಕಲಿಕೆಯ ಸಾಮಾಜಿಕ, ಭಾವಾತ್ಮಕ ಮತ್ತು ಮಾನಸಿಕ ಚಲನೆಯ ಆಯಾಮಗಳ ಮೇಲೆ ಅದರ ಗಮನ ಸೀಮಿತವಾಗಿರುತ್ತದೆ.

24.4 ಡಿಜಿಟಲ್ ತಂತ್ರಜ್ಞಾನ ಒಡ್ಡಿರುವ ತುರ್ತು ಅಗತ್ಯ ಮತ್ತು ಶಾಲಾ ಶಿಕ್ಷಣದಿಂದ ಉನ್ನತ ಶಿಕ್ಷಣದ ವರೆಗಿನ ಎಲ್ಲ ಹಂತಗಳಲ್ಲಿ ಬೋಧನೆ-ಕಲಿಕೆಗೆ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವ ತುರ್ತು ಅಗತ್ಯವನ್ನು ಮನಗಂಡು ಈ ಶಿಕ್ಷಣ ನೀತಿಯು ಈ ಕೆಳಗಿನ ಪ್ರಮುಖ

ಉಪಕ್ರಮಗಳನ್ನು ಶಿಫಾರಸು ಮಾಡಲಿದೆ:

(ಎ) ಆನ್‌ಲೈನ್ ಶಿಕ್ಷಣಕ್ಕೆ ಮಾರ್ಗದರ್ಶಿ ಅಧ್ಯಯನ: ಸರಣಿ ಮಾರ್ಗದರ್ಶಿ ಅಧ್ಯಯನ (Pilot study) ಗಳನ್ನು ನಡೆಸಲು ಎನ್.ಇ.ಟಿ.ಎಫ್., ಸಿ.ಐ.ಇ.ಟಿ., ಎನ್.ಐ.ಓ.ಎಸ್., ಐ.ಜಿ.ಎನ್.ಓ.ಯು., ಐ.ಐ.ಟಿ.ಗಳು, ಎನ್.ಐ.ಟಿ.ಗಳು ಇತ್ಯಾದಿ ಸೂಕ್ತ ಸಂಸ್ಥೆಗಳನ್ನು ಗುರುತಿಸಲಾಗುತ್ತದೆ. ಇದಕ್ಕೆ ಸಮಾನಾಂತರವಾಗಿ, ಪರಿಣಾಮಗಳನ್ನು ಮಿತಗೊಳಿಸಿ ಆನ್‌ಲೈನ್ ಶಿಕ್ಷಣದ ಜೊತೆಗೆ ಶಿಕ್ಷಣವನ್ನು ಸಂಯೋಜಿಸುವುದರಿಂದ ಆಗುವ ಲಾಭಗಳನ್ನು ಮೌಲ್ಯಮಾಪನ ಮಾಡುವುದು ಮತ್ತು ವಿದ್ಯಾರ್ಥಿಗಳು ಎಲೆಕ್ಟ್ರಾನಿಕ್ ಸಾಧನದ ವ್ಯಸನವನ್ನು ಬೆಳೆಸಿಕೊಳ್ಳುವುದು, ಆನ್‌ಲೈನ್ ಸ್ವರೂಪಗಳನ್ನೇ ಆದ್ಯತೆಯನ್ನಾಗಿ ಮಾಡಿಕೊಳ್ಳುವುದು, ಇತ್ಯಾದಿ ವಿಷಯಗಳ ಬಗ್ಗೆ ಅಧ್ಯಯನ ಮಾಡುವುದು ಕೂಡ ಇದರಲ್ಲಿ ಸೇರಿದೆ. ಈ ಮಾರ್ಗದರ್ಶಿ ಅಧ್ಯಯನಗಳ ಫಲಿತಾಂಶವನ್ನು ಸಾರ್ವಜನಿಕವಾಗಿ ಪ್ರಕಟಿಸಲಾಗುತ್ತದೆ ಮತ್ತು ನಿರಂತರ ಸುಧಾರಣೆಗಾಗಿ ಅದನ್ನು ಬಳಸಲಾಗುತ್ತದೆ.

(ಬಿ) ಡಿಜಿಟಲ್ ಮೂಲಸೌಕರ್ಯಗಳು: ಶಿಕ್ಷಣ ಕ್ಷೇತ್ರದಲ್ಲಿ ಮುಕ್ತ, ಪರಸ್ಪರ-ನಿರ್ವಹಣೆ ಮಾಡಬಲ್ಲ, ವಿಕಸನಗೊಳ್ಳಬಲ್ಲ ಸಾರ್ವಜನಿಕ ಡಿಜಿಟಲ್ ಮೂಲಸೌಕರ್ಯಗಳನ್ನು ಸೃಷ್ಟಿಸಲು ಹೂಡಿಕೆ ಮಾಡಬೇಕಾದ ಅಗತ್ಯವಿದೆ; ಭಾರತದ ಪರಿಮಾಣ, ವೈವಿಧ್ಯತೆ, ಸಂಕೀರ್ಣತೆ ಮತ್ತು ಸಾಧನದ ಪ್ರವೇಶಿಕೆಯಂತಹ ಸಮಸ್ಯೆಗಳನ್ನು ಪರಿಹರಿಸಲು, ಬಹುನಿರ್ವಾಹಕರು ಇದನ್ನು ಬಳಸಿಕೊಳ್ಳಬಹುದಾಗಿದೆ. ಇದರಿಂದ ತಂತ್ರಜ್ಞಾನದಲ್ಲಿ ಕ್ಷಿಪ್ರಗತಿಯ ಬದಲಾವಣೆಗಳು ಆಗುತ್ತಿರುವ ಹೊತ್ತಿನಲ್ಲಿ ತಂತ್ರಜ್ಞಾನ-ಆಧಾರಿತ ಪರಿಹಾರಗಳು ಹಳತಾಗದಂತೆ ನೋಡಿಕೊಳ್ಳಬಹುದು.

(ಸಿ) ಆನ್‌ಲೈನ್ ಬೋಧನಾ ವೇದಿಕೆ ಮತ್ತು ಸಾಧನಗಳು: ಈಗ ಅಸ್ತಿತ್ವದಲ್ಲಿರುವ **ಸ್ವಯಂ, ದೀಕ್ಷಾ**ದಂತಹ ಇ-ಕಲಿಕಾ ವೇದಿಕೆಗಳನ್ನು ಶಿಕ್ಷಕರಿಗೆ ರಚನಾತ್ಮಕ, ಬಳಕೆದಾರ-ಸ್ನೇಹಿ, ಕಲಿಕಾರ್ಥಿಗಳ ಪ್ರಗತಿಯ ಮೇಲ್ವಿಚಾರಣೆಗೆ ಪರಿಪೂರ್ಣವಾದ ಸಹಾಯಕ ಸಾಧನಗಳನ್ನು ಬಳಸಿಕೊಳ್ಳಲು ವಿಸ್ತರಿಸಲಾಗುವುದು. ಪ್ರಸ್ತುತ ಎದ್ದಿರುವ ವ್ಯಾದಿಯು ತೋರಿಸಿದಂತೆ ಆನ್‌ಲೈನ್ ಕ್ಲಾಸ್‌ಗಳನ್ನು ನಡೆಸಲು ದ್ವಿಮುಖ ದೃಶ್ಯ (two-way video) ಮತ್ತು ದ್ವಿಮುಖ ಧ್ವನಿ (twoway-audio)ಯಂತಹ ಸಂಪರ್ಕ ಸಾಧನಗಳು ನಿಜಕ್ಕೂ ಅತ್ಯಗತ್ಯವಾಗಿವೆ.

(ಡಿ) ವಿಷಯ ಸೃಷ್ಟಿ, ಡಿಜಿಟಲ್ ಭಂಡಾರ ಮತ್ತು ಪ್ರಸರಣ: ಕೋರ್ಸಿಗೆ ಸಂಬಂಧಿಸಿದ ವಿಷಯಗಳು, ಆಟಗಳ ಕಲಿಕೆ ಮತ್ತು ಅನುಕರಣ, ವರ್ಧಿತ ವಾಸ್ತವತೆ ಮತ್ತು ಕಾರ್ಯತಃ ವಾಸ್ತವತೆಗೆ ತಕ್ಕಂತೆ ವಿಷಯಗಳ ಡಿಜಿಟಲ್ ಭಂಡಾರವನ್ನು ಅಭಿವೃದ್ಧಿಪಡಿಸಲಾಗುತ್ತದೆ. ಅದರ ಪರಿಣಾಮಕಾರಿತ್ವ ಮತ್ತು ಗುಣಮಟ್ಟದ ಕುರಿತಂತೆ ಗ್ರಾಹಕರಿಂದ ಕ್ರಮಾಂಕಗಳನ್ನು ನೀಡಲು ಸ್ಪಷ್ಟವಾದ ಸಾರ್ವಜನಿಕ ವ್ಯವಸ್ಥೆಯನ್ನು ಮಾಡಲಾಗುತ್ತದೆ. ವಿನೋದವನ್ನು ಆಧರಿಸಿದ ಕಲಿಕೆಗಾಗಿ ವಿದ್ಯಾರ್ಥಿ-ಸಮರ್ಪಕವಾದ ಸಾಧನಗಳಾದ ಆ್ಯಪ್‌ಗಳು, ಭಾರತೀಯ ಕಲೆ ಮತ್ತು ಸಂಸ್ಕೃತಿಯನ್ನು ಬಹುಭಾಷೆಗಳಲ್ಲಿ ಸ್ಪಷ್ಟವಾದ ನಿರ್ವಹಣಾ ಸೂಚನೆಗಳೊಂದಿಗೆ ಆಟಕ್ಕೆ ಅಳವಡಿಸುವುದು ಮುಂತಾದ ಕ್ರಮಗಳನ್ನು ಕೂಡ ಸೃಷ್ಟಿಸಲಾಗುವುದು. ವಿದ್ಯಾರ್ಥಿಗಳಿಗೆ ಡಿಜಿಟಲ್ ಸಂಬಂಧಿ ವಿಷಯಗಳನ್ನು ಪ್ರಸರಣಗೊಳ್ಳುವಂತೆ ಮಾಡಲು ವಿಶ್ವಾಸಾರ್ಹ ರೀತಿಯ ಬ್ಯಾಕ್‌ಅಪ್ ವ್ಯವಸ್ಥೆಯನ್ನು ಕೂಡ ಒದಗಿಸಲಾಗುವುದು.

(ಇ) **ಡಿಜಿಟಲ್ ವಿಭಜನೆಯನ್ನು ನಿಭಾಯಿಸುವುದು**: ಈಗಲೂ ಸಾಕಷ್ಟು ಸಂಖ್ಯೆಯ ಜನರಿಗೆ ಡಿಜಿಟಲ್ ಲಭ್ಯತೆಯು ಅತ್ಯಂತ ಸೀಮಿತವಾಗಿರುವುದರಿಂದ ಈಗಿರುವ ಸಮೂಹ ಮಾಧ್ಯಮವಾದ ಟೀವಿ, ರೇಡಿಯೋ ಮತ್ತು ಸಮುದಾಯ ರೇಡಿಯೋವನ್ನು ಪ್ರಸಾರ ಮತ್ತು ಪ್ರಸರಣ ಮಾಡಲು ವ್ಯಾಪಕವಾಗಿ ಬಳಸಲಾಗುವುದು. ವಿದ್ಯಾರ್ಥಿ ಸಮುದಾಯದ ಅಗತ್ಯಗಳನ್ನು ಪೂರೈಸಲು ಇಂತಹ ಶೈಕ್ಷಣಿಕ ಕಾರ್ಯಕ್ರಮಗಳು ನಾನಾ ಭಾಷೆಗಳಲ್ಲಿ ದಿನದ 24 ಗಂಟೆಯೂ ಲಭ್ಯವಾಗುವಂತೆ ಮಾಡಲಾಗುವುದು. ಎಲ್ಲ ಭಾರತೀಯ ಭಾಷೆಗಳಲ್ಲಿ ವಿಷಯಗಳು ಲಭ್ಯವಾಗುವಂತೆ ಮಾಡಲು ವಿಶೇಷ ಗಮನವನ್ನು ನೀಡಲಾಗುವುದು; ಡಿಜಿಟಲ್ ವಿಷಯಗಳು ಸಾಧ್ಯವಿದ್ದಷ್ಟು ಶಿಕ್ಷಕರು ಮತ್ತು ವಿದ್ಯಾರ್ಥಿಗಳ ಬೋಧನೆ ಮತ್ತು ಕಲಿಕಾ ಮಾಧ್ಯಮಗಳಲ್ಲಿಯೇ ದೊರೆಯುವಂತೆ ಮಾಡಲಾಗುತ್ತದೆ.

(ಎಫ್) ವರ್ಚುವಲ್ ಲ್ಯಾಬ್‌ಗಳು: ಈಗ ಅಸ್ತಿತ್ವದಲ್ಲಿರುವ **ದೀಕ್ಷಾ, ಸ್ವಯಂ** ಮತ್ತು **ಸ್ವಯಂಪ್ರಭಾ** ಇ-ಕಲಿಕಾ ವೇದಿಕೆಗಳನ್ನು ವರ್ಚುವಲ್ ಲ್ಯಾಬ್‌ಗಳ ಸೃಷ್ಟಿಗೂ ಬಳಕೆ ಮಾಡಿಕೊಳ್ಳಲಾಗುವುದು. ಇದರಿಂದ ಎಲ್ಲ ವಿದ್ಯಾರ್ಥಿಗಳಿಗೂ ಸಮಾನವಾಗಿ ಗುಣಮಟ್ಟದ ಪ್ರಾಕ್ಟಿಕಲ್ ಮತ್ತು ಕೈಯಾಸರೆಯಾದ ಪ್ರಯೋಗಾಧಾರಿತ ಕಲಿಕಾ ಅನುಭವಗಳನ್ನು ಪಡೆಯಲು ಅವಕಾಶ ಲಭ್ಯವಾಗುತ್ತದೆ. ಮೊದಲೇ ಭರ್ತಿ ಮಾಡಲಾದ ವಿಷಯಗಳನ್ನು ಒಳಗೊಂಡ ಟ್ಯಾಬ್ಲೆಟ್‌ನಂತಹ ಸೂಕ್ತ ಡಿಜಿಟಲ್ ಸಾಧನಗಳ ಮೂಲಕ ಎಸ್.ಇ.ಡಿ.ಜಿ. ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗೆ ಹೆಚ್ಚಿನ ಸಂಖ್ಯೆಯಲ್ಲಿ ದೊರೆಯುವಂತೆ ಮಾಡುವ ಬಗ್ಗೆ ಪರಿಶೀಲನೆ ನಡೆಸಲಾಗುತ್ತದೆ.

(ಜಿ) ಶಿಕ್ಷಕರಿಗೆ ತರಬೇತಿ ಮತ್ತು ಪ್ರೋತ್ಸಾಹಧನ: ಆನ್‌ಲೈನ್ ಬೋಧನಾ ವೇದಿಕೆಗಳು ಮತ್ತು ಸಾಧನಗಳನ್ನು ಬಳಸಿಕೊಂಡು ಹೇಗೆ ತಾವೇ ಉತ್ತಮ ಗುಣಮಟ್ಟದ ಆನ್‌ಲೈನ್ ವಿಷಯಗಳನ್ನು ಸೃಷ್ಟಿಸಬಹುದು ಎನ್ನುವ ಬಗ್ಗೆ ಕಲಿಕಾ-ಕೇಂದ್ರಿತ ಅಧ್ಯಾಪನಶಾಸ್ತ್ರದ ಮೂಲಕ ಶಿಕ್ಷಕರು ಕಠಿಣ ತರಬೇತಿಯನ್ನು ಪಡೆದುಕೊಳ್ಳಲಿದ್ದಾರೆ. ಡಿಜಿಟಲ್ ವಿಷಯಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿಗಳು ಸಕ್ರಿಯವಾಗಿ ತೊಡಗಿಕೊಳ್ಳುವಂತೆ ಮಾಡುವಲ್ಲಿ ಶಿಕ್ಷಕರ ಪಾತ್ರವನ್ನು ಬೆಂಬಲಿಸಲಾಗುವುದು.

(ಎಚ್) ಆನ್‌ಲೈನ್ ಮೌಲ್ಯಮಾಪನ ಮತ್ತು ಪರೀಕ್ಷೆಗಳು: ಪ್ರಸ್ತಾಪಿತ ರಾಷ್ಟ್ರೀಯ ಮೌಲ್ಯಮಾಪನ ಕೇಂದ್ರ ಅಥವಾ ಪರಖ್, ಶಾಲಾ ಮಂಡಳಿಗಳು, ಎನ್.ಟಿ.ಎ. ಮತ್ತು ಇತರ ಗುರುತಿಸಲಾದ ಸಂಸ್ಥೆಗಳು ಮೌಲ್ಯಮಾಪನ ಚೌಕಟ್ಟನ್ನು ವಿನ್ಯಾಸಗೊಳಿಸಿ ಅನುಷ್ಠಾನಕ್ಕೆ ತರಲಿವೆ. ಈ ಮೌಲ್ಯಮಾಪನ ಚೌಕಟ್ಟಿನಲ್ಲಿ ಸಾಮರ್ಥ್ಯಗಳು, ರುಬ್ರಿಕ್‌ಗಳು, ಪ್ರಮಾಣೀಕೃತ ಮೌಲ್ಯಮಾಪನ ಮತ್ತು ಮೌಲ್ಯಮಾಪನದ ವಿಶ್ಲೇಷಣಾಶಾಸ್ತ್ರವನ್ನು ಅಳವಡಿಸಲಾಗುತ್ತದೆ. ಇದರ ಜೊತೆಗೆ 21ನೇ ಶತಮಾನದ ಕೌಶಲ್ಯಗಳಿಗೆ ಆದ್ಯತೆ ನೀಡಲು ಶೈಕ್ಷಣಿಕ ತಂತ್ರಜ್ಞಾನಗಳನ್ನು ಬಳಸಿಕೊಂಡು ಹೊಸ ರೀತಿಯ ಮೌಲ್ಯಮಾಪನಕ್ಕೆ ಮಾರ್ಗದರ್ಶನ ಮಾಡಲು ಅಧ್ಯಯನಗಳನ್ನು ಕೈಗೊಳ್ಳಲಾಗುವುದು.

(ಐ) ಕಲಿಕಾ ಮಾದರಿಗಳ ಮಿಶ್ರಣ: ಡಿಜಿಟಲ್ ಕಲಿಕೆ ಮತ್ತು ಶಿಕ್ಷಣವನ್ನು ಪ್ರೋತ್ಸಾಹಿಸುವಾಗ ಮುಖಾಮುಖಿ ಕಲಿಕೆಯನ್ನು ಸಂಪೂರ್ಣವಾಗಿ ಮಾನ್ಯಮಾಡಲಾಗುವುದು. ಇದರ ಪ್ರಕಾರ, ನಾನಾ ವಿಷಯಗಳಿಗೆ ಸೂಕ್ತ ಪ್ರತಿರೂಪಣವನ್ನು ಮಾಡಲು ಮಿಶ್ರಿತ ಕಲಿಕೆಯ ವಿಭಿನ್ನ ಪರಿಣಾಮಕಾರಿ ಮಾದರಿಗಳನ್ನು ಗುರುತಿಸಲಾಗುತ್ತದೆ.

(ಜೆ) ಮಾನದಂಡಗಳನ್ನು ರೂಪಿಸುವುದು: ಆನ್‌ಲೈನ್/ಡಿಜಿಟಲ್ ಶಿಕ್ಷಣದ ಮೇಲಿನ ಸಂಶೋಧನೆ ಕೈಗೊಂಡ ಬಳಿಕ ಎನ್.ಇ.ಟಿ.ಎಫ್. ಮತ್ತು ಇತರ ಸಂಬಂಧಪಟ್ಟ ಸಂಸ್ಥೆಗಳು ಆನ್‌ಲೈನ್/ಡಿಜಿಟಲ್ ಬೋಧನೆ-ಕಲಿಕೆಗೆ ವಿಷಯ, ತಂತ್ರಜ್ಞಾನ ಮತ್ತು ಬೋಧನಾಶಾಸ್ತ್ರದ ಮಾನದಂಡಗಳನ್ನು ನಿಗದಿಪಡಿಸುತ್ತವೆ. ಈ ಮಾನದಂಡಗಳು ಸರ್ಕಾರಗಳು, ಮಂಡಳಿಗಳು, ಶಾಲೆಗಳು ಮತ್ತು ಶಾಲಾ ಸಂಕೀರ್ಣಗಳು, ಎಚ್.ಇ.ಐ. ಇತ್ಯಾದಿಗಳು ಇ-ಕಲಿಕೆಗೆ ಮಾರ್ಗಸೂಚಿಗಳನ್ನು ರೂಪಿಸಲು ಸಹಾಯವಾಗಲಿದೆ.

24.5 ವಿಶ್ವದರ್ಜೆಯ ಡಿಜಿಟಲ್ ಮೂಲಸೌಕರ್ಯ, ಶೈಕ್ಷಣಿಕ ಡಿಜಿಟಲ್ ವಿಷಯ ಮತ್ತು ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಲಿಕ್ಕೆಂದೇ ಮೀಸಲಾದ ಘಟಕದ ರಚನೆ:

ಶಿಕ್ಷಣದಲ್ಲಿನ ತಂತ್ರಜ್ಞಾನ ಮುಗಿಯದ ನಿರಂತರ ಪಯಣ. ನೀತಿಯ ಉದ್ದೇಶಗಳನ್ನು ಜಾರಿಗೆ ತರುವ ಕೆಲಸದಲ್ಲಿ ಅನೇಕ ಪೂರಕ ನಿರ್ವಾಹಕರು ಸಂಯೋಜನೆಯನ್ನು ನಡೆಸಲು ಸಾಮರ್ಥ್ಯದ ಅಗತ್ಯವಿರುತ್ತದೆ. ಶಾಲೆ ಮತ್ತು ಉನ್ನತ ಶಿಕ್ಷಣದ ಇ-ಶಿಕ್ಷಣದ ಅಗತ್ಯಗಳ ಮೇಲ್ವಚಾರಣೆ ನಡೆಸಲು ಡಿಜಿಟಲ್ ಮೂಲಸೌಕರ್ಯ, ಡಿಜಿಟಲ್ ವಿಷಯಸೂಚಿ ಮತ್ತು ಸಾಮರ್ಥ್ಯವೃದ್ಧಿಯ ಸಂಯೋಜನೆಯ ಉದ್ದೇಶಕ್ಕಾಗಿ ಸಚಿವಾಲಯದಲ್ಲಿ ಇದಕ್ಕಾಗಿಯೇ ಮೀಸಲಾದ ಘಟಕವನ್ನು ರಚಿಸಲಾಗುವುದು. ತಂತ್ರಜ್ಞಾನವು ಕ್ಷಿಪ್ರಗತಿಯಲ್ಲಿ ರೂಪುಗೊಳ್ಳುತ್ತಿರುವುದರಿಂದ ಮತ್ತು ಉನ್ನತ ಗುಣಮಟ್ಟದ ಇ-ಕಲಿಕೆಯನ್ನು ನಿರ್ವಹಿಸಲು ವಿಶೇಷ ತಜ್ಞರ ಅಗತ್ಯವಿರುವುದರಿಂದ, ಅತ್ಯಂತ ಚಲನಶೀಲವಾದ ಪರಿಸರ ವ್ಯವಸ್ಥೆಯನ್ನು ಸೃಷ್ಟಿಸಬೇಕಾದ ಅಗತ್ಯವಿದೆ. ಇದು ಪರಿಮಾಣ, ವೈವಿಧ್ಯತೆ, ನ್ಯಾಯದಂತಹ ಭಾರತದ ಸವಾಲುಗಳನ್ನು ಪರಿಹರಿಸುವುದು ಮಾತ್ರವಲ್ಲದೆ, ತಂತ್ರಜ್ಞಾನದಲ್ಲಿ ಆಗುತ್ತಿರುವ ಕ್ಷಿಪ್ರಗತಿಯ ಬದಲಾವಣೆಯೊಂದಿಗೆ ವಿಕಸನ ಹೊಂದಲು ನೆರವಾಗುತ್ತದೆ. ಹಾಗಾಗಿ ಕೇಂದ್ರವು ಆಡಳಿತ, ಶಿಕ್ಷಣ, ಶೈಕ್ಷಣಿಕ ತಂತ್ರಜ್ಞಾನ, ಡಿಜಿಟಲ್ ಬೋಧನಾಶಾಸ್ತ್ರ ಮತ್ತು ಮೌಲ್ಯಮಾಪನ, ಇ-ಆಡಳಿತ ಇತ್ಯಾದಿ ಕ್ಷೇತ್ರಗಳಿಂದ ಆಯ್ಕೆ ಮಾಡಿದ ಪರಿಣಿತರನ್ನು ಒಳಗೊಂಡಿರಬೇಕಾಗುತ್ತದೆ.

ಭಾಗ- IV ಇದನ್ನು ಸಾಧ್ಯವಾಗಿಸುವುದು

25. ಕೇಂದ್ರೀಯ ಶಿಕ್ಷಣ ಸಲಹಾ ಮಂಡಳಿಯನ್ನು ಬಲಪಡಿಸುವುದು

25.1 ಈ ನೀತಿಯನ್ನು ಯಶಸ್ವಿಯಾಗಿ ಅನುಷ್ಠಾನಕ್ಕೆ ತರಲು ಸುದೀರ್ಘಾವಧಿಯ ದೃಷ್ಟಿಕೋನ, ಸುಸ್ಥಿರವಾದ ರೀತಿಯಲ್ಲಿ ತಜ್ಞರ ಲಭ್ಯತೆ ಮತ್ತು ರಾಷ್ಟ್ರೀಯ, ರಾಜ್ಯ, ಸಾಂಸ್ಥಿಕ ಮತ್ತು ವೈಯಕ್ತಿಕ ಮಟ್ಟಗಳು ಒಳಗೊಂಡಂತೆ ಸಂಬಂಧಪಟ್ಟ ಎಲ್ಲ ವಿಭಾಗಗಳಿಂದ ಯೋಜಿತ ಕ್ರಮದ ಅಗತ್ಯವಿರುತ್ತದೆ. ಈ ಹಿನ್ನೆಲೆಯಲ್ಲಿ ಕೇಂದ್ರೀಯ ಶಿಕ್ಷಣ ಸಲಹಾ ಮಂಡಳಿ (CABE)ಯನ್ನು ಇನ್ನಷ್ಟು ಬಲಪಡಿಸಿ ಅದಕ್ಕೆ ಅಧಿಕಾರವನ್ನು ನೀಡಬೇಕು ಎಂದು ನೀತಿಯು ಶಿಫಾರಸು ಮಾಡುತ್ತದೆ. ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿಗೆ ಸಂಬಂಧಿಸಿದ ವಿಷಯಗಳ ವ್ಯಾಪಕ ಸಮಾಲೋಚನೆ ಮತ್ತು ಪರಿಶೀಲನೆಗೆ ಅದು ವೇದಿಕೆಯಾಗಿರುವುದು ಮಾತ್ರವಲ್ಲದೆ ಇನ್ನೂ ಮಹತ್ತರವಾದ ಜವಾಬ್ದಾರಿಯನ್ನು ಅದು ನಿಭಾಯಿಸಬೇಕಾಗಿದೆ. ಮರುವಿನ್ಯಾಸಗೊಳಿಸಲಾದ ಮತ್ತು ಪುನರುಜ್ಜೀವನಗೊಳಿಸಲಾದ CABE, ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ (MHRD) ಮತ್ತು ರಾಜ್ಯಗಳ ಸಂಬಂಧಪಟ್ಟ ಉನ್ನತ ಸಂಸ್ಥೆಗಳ ಜೊತೆ ನಿಕಟ ಸಮನ್ವಯದ ಮೂಲಕ ನಿರಂತರವಾಗಿ ರಾಷ್ಟ್ರದ ಶಿಕ್ಷಣದ ದೃಷ್ಟಿಕೋನವನ್ನು ರೂಪಿಸುವುದು, ಕಾರ್ಯರೂಪಕ್ಕೆ ತರುವುದು, ವಿಕಸನಗೊಳಿಸುವುದು ಮತ್ತು ಪರಿಷ್ಕರಣೆ ನಡೆಸುವ ಜವಾಬ್ದಾರಿಯನ್ನು ಕೂಡ ಹೊಂದಿರುತ್ತದೆ. ಇಷ್ಟು ಮಾತ್ರವಲ್ಲದೆ ಈ ದೃಷ್ಟಿಕೋನವನ್ನು ಪಡೆಯಲು ಸಹಾಯವಾಗುವಂತಹ ಸಾಂಸ್ಥಿಕ ಚೌಕಟ್ಟನ್ನು ರೂಪಿಸುವುದು ಮತ್ತು ನಿರಂತರವಾಗಿ ಪರಾಮರ್ಶೆ ನಡೆಸುವ ಕೆಲಸವನ್ನು ಕೂಡ ಅದು ಮಾಡಬೇಕಾಗುತ್ತದೆ.

25.2 ಶಿಕ್ಷಣ ಮತ್ತು ಕಲಿಕೆಯ ಮೇಲೆ ಮತ್ತೆ ಗಮನವನ್ನು ಕೇಂದ್ರೀಕರಿಸಲು, ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ (MHRD)ವನ್ನು ಶಿಕ್ಷಣ ಸಚಿವಾಲಯ (MoE) ಎಂದು ಮರುನಾಮಕರಣ ಮಾಡುವುದು ಅಪೇಕ್ಷಣೀಯವಾಗಿದೆ.

26. ಹಣಕಾಸು: ಸರ್ವರಿಗೂ ಕೈಗೆಟುಕಬಲ್ಲ ಮತ್ತು ಗುಣಮಟ್ಟದ ಶಿಕ್ಷಣ

26.1 ಶಿಕ್ಷಣಕ್ಕೆ ಸಂಬಂಧಿಸಿದ ಹೂಡಿಕೆಯನ್ನು ಗಣನೀಯವಾಗಿ ಹೆಚ್ಚಿಸಬೇಕು ಎಂಬುದು ಸಮಿತಿಯ ಬದ್ಧತೆಯಾಗಿದೆ. ಯಾಕೆಂದರೆ ಸಮಾಜದ ಭವಿಷ್ಯವನ್ನು ರೂಪಿಸುವ ನಮ್ಮ ಯುವಜನತೆಯ ಉನ್ನತ ಗುಣಮಟ್ಟದ ಶಿಕ್ಷಣಕ್ಕಿಂತ ಉತ್ತಮ ಹೂಡಿಕೆಯೂ ಬೇರಾವುದೂ ಇಲ್ಲ. ದುರಾದೃಷ್ಟದ ಸಂಗತಿ ಏನೆಂದರೆ 1968ರ ನೀತಿಯಲ್ಲಿ ಸೂಚಿಸಿದಂತೆ ಭಾರತದಲ್ಲಿ ಶಿಕ್ಷಣದ ಮೇಲಿನ ಸಾರ್ವಜನಿಕ ವೆಚ್ಚವು ಶಿಫಾರಸು ಮಾಡಿದ ಜಿಡಿಪಿಯ ಶೇ.6ರ ಮಟ್ಟದ ಹತ್ತಿರಕ್ಕೂ ಸುಳಿದಿಲ್ಲ, 1986ರ ನೀತಿಯಲ್ಲಿ ಇದನ್ನು ಪುನರುಚ್ಚರಿಸಲಾಯಿತು ಮತ್ತು 1992ರಲ್ಲಿ ನೀತಿಯ ಪರಿಶೀಲನೆಯಲ್ಲಿ ಮತ್ತೆ ಗಮನಕ್ಕೆ ತರಲಾಯಿತು. ಪ್ರಸ್ತುತ ಭಾರತದಲ್ಲಿ ಶಿಕ್ಷಣದ ಮೇಲಿನ ಸಾರ್ವಜನಿಕ (ಕೇಂದ್ರ ಮತ್ತು ರಾಜ್ಯ ಸರ್ಕಾರ) ವೆಚ್ಚವು ಜಿಡಿಪಿಯ ಶೇ.4.43ರಷ್ಟಿದೆ (2017-18ರ ಬಜೆಟ್ ವೆಚ್ಚದ ವಿಶ್ಲೇಷಣೆ) ಮತ್ತು ಶಿಕ್ಷಣದ ಮೇಲಿನ ಸರ್ಕಾರದ ಒಟ್ಟು ವೆಚ್ಚವು ಸುಮಾರು ಶೇ.10ರಷ್ಟು ಮಾತ್ರ (ಆರ್ಥಿಕ ಸಮೀಕ್ಷೆ 2017-18). ಈ ಸಂಖ್ಯೆಯು ಅಭಿವೃದ್ಧಿ ಹೊಂದಿದ ಮತ್ತು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಿಗೆ ಹೋಲಿಸಿದರೆ ಅತ್ಯಂತ ಚಿಕ್ಕದು.

26.2 ಶ್ರೇಷ್ಠತೆಯೊಂದಿಗೆ ಶಿಕ್ಷಣದ ಗುರಿಯನ್ನು ಸಾಧಿಸುವ ನಿಟ್ಟಿನಲ್ಲಿ ಮತ್ತು ಅದರ ಬಹುದೊಡ್ಡ ಪ್ರಯೋಜನಗಳನ್ನು ಈ ದೇಶ ಮತ್ತು ಅದರ ಆರ್ಥಿಕತೆಗೆ ದೊರೆಯುವಂತೆ ಮಾಡಲು, ಕೇಂದ್ರ ಮತ್ತು ಎಲ್ಲ ರಾಜ್ಯ ಸರ್ಕಾರಗಳೆರಡೂ ಶಿಕ್ಷಣದಲ್ಲಿ ಸಾರ್ವಜನಿಕ ಹೂಡಿಕೆಯನ್ನು ಗಣನೀಯ ಪ್ರಮಾಣದಲ್ಲಿ ಹೆಚ್ಚಿಸಬೇಕು ಎಂದು ಈ ನೀತಿಯು ಸ್ಪಷ್ಟ ಮಾತುಗಳಲ್ಲಿ ಅನುಮೋದಿಸುತ್ತದೆ. ಶಿಕ್ಷಣ ಕ್ಷೇತ್ರದಲ್ಲಿನ ಸಾರ್ವಜನಿಕ ಹೂಡಿಕೆಯನ್ನು ಸಾಧ್ಯವಾದಷ್ಟು ಬೇಗ ಜಿಡಿಪಿಯ ಶೇ.6ಕ್ಕೆ ಹೆಚ್ಚಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಒಟ್ಟಾಗಿ ಕೆಲಸ ಮಾಡಲಿವೆ. ಉನ್ನತ ಗುಣಮಟ್ಟದ ಮತ್ತು ಅಸಾಧಾರಣವಾದ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನು ಸಾಧಿಸಲು ಅತ್ಯಂತ ನಿರ್ಣಾಯಕ ಎಂದು ಪರಿಗಣಿಸಲಾಗಿರುವ ಇದು ಭಾರತದ ಭವಿಷ್ಯದ ಆರ್ಥಿಕತೆ, ಸಾಮಾಜಿಕ, ಸಾಂಸ್ಕೃತಿಕ, ಬೌದ್ಧಿಕ ಮತ್ತು ತಂತ್ರಜ್ಞಾನದ ಪ್ರಗತಿ ಮತ್ತು ಅಭಿವೃದ್ಧಿ ನಿಜಕ್ಕೂ ಅತ್ಯಗತ್ಯವಾಗಿದೆ.

26.3 ವಿಶೇಷವಾಗಿ, ಶಿಕ್ಷಣದ ಅನೇಕ ನಿರ್ಣಾಯಕ ವಿಷಯಗಳು ಮತ್ತು ಭಾಗಗಳಿಗೆ ಹಣಕಾಸು ಬೆಂಬಲವನ್ನು ನೀಡಲಾಗುತ್ತದೆ. ಅವುಗಳೆಂದರೆ; ಸಾರ್ವತ್ರಿಕ ಲಭ್ಯತೆಯನ್ನು ಖಾತರಿಪಡಿಸುವುದು, ಕಲಿಕಾ ಸಂಪನ್ಮೂಲಗಳು, ಪೌಷ್ಟಿಕಾಂಶದ ಬೆಂಬಲ, ವಿದ್ಯಾರ್ಥಿ ಸುರಕ್ಷತೆ ಮತ್ತು ಯೋಗಕ್ಷೇಮದ ಅಂಶಗಳು, ಸಾಕಷ್ಟು ಸಂಖ್ಯೆಯ ಶಿಕ್ಷಕರು ಮತ್ತು ಸಿಬ್ಬಂದಿ, ಶಿಕ್ಷಕರ ಅಭಿವೃದ್ಧಿ ಮತ್ತು ದುರ್ಬಲ ವರ್ಗಗಳು ಹಾಗೂ ಸಾಮಾಜಿಕ-ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ನಿಷ್ಪಕ್ಷಪಾತವಾದ ಉನ್ನತ ಗುಣಮಟ್ಟದ ಶಿಕ್ಷಣವನ್ನು ನೀಡುವ ನಿಟ್ಟಿನಲ್ಲಿ ಎಲ್ಲ ಪ್ರಮುಖ ಉಪಕ್ರಮಗಳಿಗೆ ಬೆಂಬಲವನ್ನು ಖಾತರಿಪಡಿಸುವುದು ಸೇರಿದೆ.

26.4 ಏಕಕಾಲದ ವೆಚ್ಚಗಳಿಗೆ ಹೆಚ್ಚುವರಿಯಾಗಿ, ಪ್ರಾಥಮಿಕವಾಗಿ ಮೂಲಸೌಕರ್ಯಗಳು ಮತ್ತು ಸಂಪನ್ಮೂಲಗಳಿಗೆ ಸಂಬಂಧಿಸಿ, ಒಂದು ಶಿಕ್ಷಣ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲು ಹಣಕಾಸು ಸೌಲಭ್ಯ ಕಲ್ಪಿಸಬೇಕಾದ ಈ ಕೆಳಗಿನ ಸುದೀರ್ಘಾವಧಿಯ ಪ್ರಮುಖ ಅಂಶಗಳನ್ನು ಈ ನೀತಿಯು ಗುರುತಿಸಿದೆ: (ಎ) ಗುಣಮಟ್ಟದ ಬಾಲ್ಯಪೂರ್ವ ಶಿಕ್ಷಣಕ್ಕೆ ಸಾರ್ವತ್ರಿಕವಾದ ಅವಕಾಶ ಕಲ್ಪಿಸುವುದು; (ಬಿ) ಸ್ಥಾಪಿತ ಸಾಕ್ಷರತೆ ಮತ್ತು ಗಣಿತಜ್ಞತೆಯನ್ನು ಖಾತರಿಪಡಿಸುವುದು; (ಸಿ) ಶಾಲಾ ಸಂಕೀರ್ಣಗಳು/ಸಮೂಹಗಳಿಗೆ ಸಾಕಷ್ಟು ಹಾಗೂ ಸಮಪರ್ಕವಾದ ಸಂಪನ್ಮೂಲವನ್ನು ಕಲ್ಪಿಸುವುದು; (ಡಿ) ಆಹಾರ ಮತ್ತು ಪೌಷ್ಟಿಕಾಂಶ (ಉಪಹಾರ ಮತ್ತು ಮಧ್ಯಾಹ್ನದ ಊಟ)ವನ್ನು ಒದಗಿಸುವುದು; (ಇ) ಶಿಕ್ಷಕರ ಶಿಕ್ಷಣ ಮತ್ತು ಶಿಕ್ಷಕರ ಸತತ ವೃತ್ತಿಪರ ಅಭಿವೃದ್ಧಿಯಲ್ಲಿ ಹೂಡಿಕೆ ಮಾಡುವುದು; (ಎಫ್) ಶ್ರೇಷ್ಠತೆಯನ್ನು ಸಾಧಿಸಲು ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳನ್ನು ಪುನರುಜ್ಜೀವನಗೊಳಿಸುವುದು; (ಜಿ) ಸಂಶೋಧನೆಯನ್ನು ಪೋಷಿಸುವುದು; ಮತ್ತು (ಎಚ್) ತಂತ್ರಜ್ಞಾನ ಮತ್ತು ಆನ್‌ಲೈನ್ ಶಿಕ್ಷಣವನ್ನು ವ್ಯಾಪಕವಾಗಿ ಬಳಸುವುದು.

26.5 ಭಾರತದಲ್ಲಿ ಶಿಕ್ಷಣದ ಮೇಲಿನ ಕಡಿಮೆ ಪ್ರಮಾಣದ ಹಣಕಾಸು ಸೌಲಭ್ಯದ ಹೊರತಾಗಿಯೂ, ಜಿಲ್ಲಾ ಮತ್ತು ಸಾಂಸ್ಥಿಕ ಮಟ್ಟದಲ್ಲಿ ಸಕಾಲದಲ್ಲಿ ಹಣಕಾಸು ಸೌಲಭ್ಯ ನೀಡದೇ ಇರುವುದು ಅಂತ ನಿಧಿಯಿಂದ ಸಾಧಿಸಬೇಕಾದ ಗುರಿಯ ಮೇಲೆ ಪರಿಣಾಮ ಬೀರುವಂತಾಗಿದೆ. ಹಾಗಾಗಿ ನೀತಿಯಲ್ಲಿ ಸೂಕ್ತ ಬದಲಾವಣೆಗಳನ್ನು ಮಾಡಿಕೊಳ್ಳುವ ಮೂಲಕ ಲಭ್ಯವಿರುವ ಬಜೆಟ್ ಬಳಸಿಕೊಳ್ಳುವಲ್ಲಿ ದಕ್ಷತೆಯನ್ನು ಹೆಚ್ಚಿಸಿಕೊಳ್ಳಬೇಕಾದ ಅಗತ್ಯವಿದೆ. ಸುಗಮ, ಸಕಾಲ ಮತ್ತು ಸಮರ್ಪಕ ರೀತಿಯಲ್ಲಿ ನಿಧಿಗಳು ದೊರೆಯುವ ಹಾಗೆ ಮತ್ತು ಪ್ರಾಮಾಣಿಕತೆಯಿಂದ ಅವುಗಳ ಬಳಕೆಗೆ ಹಣಕಾಸು ಆಡಳಿತ ಮತ್ತು ನಿರ್ವಹಣೆ ವಿಭಾಗವು ಹೆಚ್ಚಿನ ಗಮನ ಹರಿಸಲಿದೆ; ಅದೇ ರೀತಿ ಖರ್ಚು ಮಾಡದೇ ಇರುವ ಹಣವೇ ಭಾರೀ ಪ್ರಮಾಣದಲ್ಲಿ ಬಾಕಿ ಉಳಿಯಲು ಹಣಕಾಸಿನ ವಿತರಣೆ ವ್ಯವಸ್ಥೆ ಕಾರಣವಾಗದಂತೆ ಆಡಳಿತಾತ್ಮಕ ಪ್ರಕ್ರಿಯೆಯನ್ನು ಸೂಕ್ತ ರೀತಿಯಲ್ಲಿ ತಿದ್ದುಪಡಿ ಮಾಡಿ ಸುಗಮಗೊಳಿಸಲಾಗುವುದು. ಸರ್ಕಾರದ ಸಂಪನ್ಮೂಲಗಳನ್ನು

ಪರಿಣಾಮಕಾರಿಯಾಗಿ ಬಳಸಿಕೊಂಡು ಈ ನಿಧಿಗಳು ನಿರುಪಯುಕ್ತವಾಗಿ ಉಳಿಯದಂತೆ ನೋಡಿಕೊಳ್ಳಲು ಜಿ.ಎಫ್.ಆರ್., ಪಿ.ಎಫ್.ಎಂ.ಎಸ್. ಅವಕಾಶಗಳನ್ನು ಬಳಸಿಕೊಳ್ಳಲಾಗುವುದು ಮತ್ತು ಅನುಷ್ಠಾನ ಸಂಸ್ಥೆಗಳಿಗೆ ಸಕಾಲದಲ್ಲಿ ಬಿಡುಗಡೆ ಮಾಡುವಂತೆ ಗಮನಹರಿಸಲಾಗುವುದು. ರಾಜ್ಯಗಳು ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳಿಗೆ ನಿರ್ವಹಣೆ ಆಧಾರದಲ್ಲಿ ಹಣಕಾಸು ಒದಗಿಸುವುದನ್ನು ರೂಪಿಸಬಹುದು. ಅದೇ ರೀತಿ, ಎಸ್ಇಡಿಜಿಗಳಿಗೆ ನಿಗದಿಪಡಿಸಲಾದ ನಿಧಿಗಳ ಗರಿಷ್ಠ ಪ್ರಮಾಣದ ಮಂಜೂರು ಮತ್ತು ಅದರ ಬಳಕೆಗೆ ಪರಿಣಾಮಕಾರಿಯಾದ ವ್ಯವಸ್ಥೆಯನ್ನು ಖಾತರಿಪಡಿಸಲಾಗುವುದು. ಪಾತ್ರಗಳನ್ನು ಸ್ಪಷ್ಟವಾಗಿ ಪ್ರತ್ಯೇಕಗೊಳಿಸಿ ಮತ್ತು ಪಾರದರ್ಶಕ ಸ್ವಯಂ-ಘೋಷಣೆ, ಸಂಸ್ಥೆಗಳಿಗೆ ಅಧಿಕಾರ ಮತ್ತು ಸ್ವಾಯತ್ತತೆಗೆ ಹೊಸದಾಗಿ ಸಲಹೆ ಮಾಡಲಾದ ನಿಯಂತ್ರಣ ವ್ಯವಸ್ಥೆ ಮತ್ತು ನಾಯಕತ್ವದ ಸ್ಥಾನಗಳಿಗೆ ಪ್ರತಿಭಾವಂತ ಹಾಗೂ ಅರ್ಹ ತಜ್ಞರನ್ನು ನೇಮಕ ಮಾಡುವುದರಿಂದ ನಿಧಿಗಳು ಸುಗಮ, ಕ್ಷಿಪ್ರ ಮತ್ತು ಹೆಚ್ಚು ಪಾರದರ್ಶಕವಾದ ರೀತಿಯಲ್ಲಿ ಹರಿಯಲು ನೆರವಾಗುತ್ತದೆ.

26.6 ಶಿಕ್ಷಣ ಕ್ಷೇತ್ರದಲ್ಲಿ ಖಾಸಗಿ ದೇಣಿಗೆ ಚಟುವಟಿಕೆಯನ್ನು ಪುನರುಜ್ಜೀವನಗೊಳಿಸುವುದು, ಸಕ್ರಿಯ ಉತ್ತೇಜನ ಮತ್ತು ಬೆಂಬಲಕ್ಕೆ ನೀತಿಯು ಕರೆ ನೀಡುತ್ತದೆ. ನಿರ್ದಿಷ್ಟವಾಗಿ, ಸರ್ಕಾರಿ ಹಣಕಾಸು ಬೆಂಬಲದ ಹೊರತಾಗಿಯೂ ಶೈಕ್ಷಣಿಕ ಅನುಭವಗಳನ್ನು ಹೆಚ್ಚಿಸಲು ಖಾಸಗಿ ದಾನದ ನಿಧಿಗಳನ್ನು ಪಡೆಯಲು ಯಾವುದೇ ಖಾಸಗಿ ಸಂಸ್ಥೆಗಳು ಮುಂದಾಗಬಹುದಾಗಿದೆ.

26.7 ಶಿಕ್ಷಣದ ವಾಣಿಜ್ಯೀಕರಣದ ಸಂಗತಿಯನ್ನು ಕೂಡ ಅನೇಕ ವಿಧಗಳ ಮೂಲಕ ನೀತಿಯು ನಿಭಾಯಿಸಿದ್ದು ಅವುಗಳು ಹೀಗಿವೆ; ಹಣಕಾಸು, ಕಾರ್ಯವಿಧಾನಗಳು, ಕೋರ್ಸ್ ಮತ್ತು ನೀಡುವ ಕಾರ್ಯಕ್ರಮಗಳು ಹಾಗೂ ಶೈಕ್ಷಣಿಕ ಫಲಿತಾಂಶಗಳ ಸಂಪೂರ್ಣ ಸ್ವಯಂ ಸಾರ್ವಜನಿಕ ಘೋಷಣೆಯನ್ನು ಕಡ್ಡಾಯ ಮಾಡಿರುವ 'ಸರಳ ಆದರೆ ಬಿಗಿಯಾದ' ನಿಯಂತ್ರಣ ವಿಧಾನ; ಸಾರ್ವಜನಿಕ ಶಿಕ್ಷಣದಲ್ಲಿ ಗಣನೀಯ ಪ್ರಮಾಣದ ಹೂಡಿಕೆ; ಸರ್ಕಾರಿ ಮತ್ತು ಖಾಸಗಿ ಸೇರಿ ಎಲ್ಲ ಸಂಸ್ಥೆಗಳ ಉತ್ತಮ ಆಡಳಿತಕ್ಕೆ ವ್ಯವಸ್ಥೆ. ಅದೇ ರೀತಿ, ಅಗತ್ಯ ಅಥವಾ ಅರ್ಹತೆ ಇರುವ ವಿಭಾಗಗಳ ಮೇಲೆ ಯಾವುದೇ ಪರಿಣಾಮ ಉಂಟಾಗದಂತೆ ಅಧಿಕ ಖರ್ಚಿನ ವಸೂಲಾತಿಗೆ ಅವಕಾಶಗಳನ್ನು ಕೂಡ ಕಂಡುಕೊಳ್ಳಲಾಗುವುದು.

27. ಅನುಷ್ಠಾನ

27.1 ಯಾವುದೇ ನೀತಿ ಪರಿಣಾಮಕಾರಿಯಾಗುವುದು ಅದರ ಅನುಷ್ಠಾನದಲ್ಲಿ. ಇಂತಹ ಅನುಷ್ಠಾನಕ್ಕೆ ಅನೇಕ ಉಪಕ್ರಮಗಳು ಮತ್ತು ಕ್ರಮಗಳ ಅಗತ್ಯವಿರುತ್ತದೆ. ಇದಕ್ಕೆ ಅನೇಕ ಸಂಸ್ಥೆಗಳು ಏಕಕಾಲದಲ್ಲಿ ಮತ್ತು ವ್ಯವಸ್ಥಿತವಾದ ರೀತಿಯಲ್ಲಿ ಕಾರ್ಯನಿರ್ವಹಿಸಬೇಕಾಗುತ್ತದೆ. ಹಾಗಾಗಿ ಈ ನೀತಿಯ ಅನುಷ್ಠಾನವನ್ನು ಎಂ.ಎಚ್.ಆರ್.ಡಿ., ಸಿ.ಎ.ಬಿ.ಇ., ಕೇಂದ್ರ ಮತ್ತು ರಾಜ್ಯ ಸರ್ಕಾರಗಳು, ಶಿಕ್ಷಣಕ್ಕೆ ಸಂಬಂಧಿಸಿದ ಸಚಿವಾಲಯಗಳು, ರಾಜ್ಯಗಳ ಶಿಕ್ಷಣ ಇಲಾಖೆಗಳು, ಮಂಡಳಿಗಳು, ಎನ್.ಟಿ.ಎ., ಶಾಲೆ ಮತ್ತು ಉನ್ನತ ಶಿಕ್ಷಣದ ನಿಯಂತ್ರಣ ಮಂಡಳಿಗಳು, ಎನ್.ಸಿ.ಇ.ಆರ್.ಟಿ., ಎಸ್.ಸಿ.ಇ.ಆರ್.ಟಿ.ಗಳು, ಶಾಲೆಗಳು ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳು ಸೇರಿದಂತೆ ನಾನಾ ಸಂಸ್ಥೆಗಳು ಕಾಲಮಿತಿ ಮತ್ತು ಪರಾಮರ್ಶನ ಯೋಜನೆಯೊಂದಿಗೆ ಕೈಗೊಳ್ಳಲಿವೆ. ಶಿಕ್ಷಣದಲ್ಲಿ ತೊಡಗಿಸಿಕೊಂಡಿರುವ ಈ ಎಲ್ಲ ಸಂಸ್ಥೆಗಳೊಂದಿಗೆ ಏಕಕಾಲದಲ್ಲಿ ಯೋಜನೆ ರೂಪಿಸುವ ಮೂಲಕ ನೀತಿಯ ಆಂತರ್ಯ ಮತ್ತು ಸದಾಶಯವನ್ನು ಅಕ್ಷರಶಃ ಜಾರಿಗೆ ತರುವ ಉದ್ದೇಶದಿಂದ ಈ ಕ್ರಮಗಳನ್ನು ಕೈಗೊಳ್ಳಲಾಗಿದೆ.

27.2 ಈ ಕೆಳಗಿನ ಸಿದ್ಧಾಂತಗಳಿಗೆ ತಕ್ಕಂತೆ ನೀತಿಯ ಅನುಷ್ಠಾನ ಕೆಲಸವನ್ನು ಕೈಗೊಳ್ಳಲಾಗುತ್ತದೆ. ಮೊದಲನೆಯದಾಗಿ, ನೀತಿಯ ಆಂತರ್ಯ ಮತ್ತು ಸದಾಶಯವನ್ನು ಜಾರಿಗೆ ತರುವುದು ಅತ್ಯಂತ ನಿರ್ಣಾಯಕ ಅಂಶವಾಗಿದೆ. ಎರಡನೆಯದಾಗಿ, ನೀತಿಯ ಉಪಕ್ರಮಗಳನ್ನು ಹಂತ ಹಂತವಾಗಿ ಜಾರಿಗೆ ತರುವುದು ಮುಖ್ಯವಾಗಿದೆ; ಯಾಕೆಂದರೆ ನೀತಿಯ ಪ್ರತಿಯೊಂದು ಅಂಶವೂ ಅನೇಕ ಕ್ರಮಗಳನ್ನು ಒಳಗೊಂಡಿದೆ, ಪ್ರತಿಯೊಂದಕ್ಕೂ ಹಿಂದಿನ ಹಂತವು ಯಶಸ್ವಿಯಾಗಿ ಅನುಷ್ಠಾನಕ್ಕೆ ಬರುವುದು ಅತ್ಯಗತ್ಯವಾಗಿರುತ್ತದೆ. ಮೂರನೆಯದಾಗಿ, ನೀತಿಯ ಅಂಶಗಳನ್ನು ಸಂಪೂರ್ಣವಾಗಿ ಕ್ರಮಾನುಗತಿಯಲ್ಲಿ ಇರುವಂತೆ ಮಾಡಲು ಆದ್ಯತೆ ನೀಡುವುದು ಮುಖ್ಯವಾಗಲಿದೆ, ಅಂದರೆ ಅತ್ಯಂತ ನಿರ್ಣಾಯಕ ಮತ್ತು ತುರ್ತು ಕ್ರಮಗಳನ್ನು ಮೊದಲು ಕೈಗೊಳ್ಳುವ ಮೂಲಕ ಬಲಿಷ್ಠವಾದ ತಳಪಾಯ ಹಾಕಬೇಕಾಗುತ್ತದೆ. ನಾಲ್ಕನೆಯದಾಗಿ, ಅನುಷ್ಠಾನದಲ್ಲಿ ಸಮಗ್ರತೆಯನ್ನು ಸಾಧಿಸುವುದು ಮುಖ್ಯವಾಗಲಿದೆ; ಯಾಕೆಂದರೆ ಈ ನೀತಿಯು ಒಂದಕ್ಕೊಂದು ಪರಸ್ಪರ ಸಂಬಂಧವನ್ನು ಹೊಂದಿದ್ದು ಸಮಗ್ರವಾಗಿದೆ, ಇದನ್ನು ಭಾಗಶಃ ಜಾರಿಗೆ ತರಲು ಸಾಧ್ಯವಿಲ್ಲ, ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಕ್ಕೆ ತಂದರೆ ಮಾತ್ರ ಅಪೇಕ್ಷಿತ ಉದ್ದೇಶಗಳನ್ನು ಸಾಧಿಸಲು ಸಾಧ್ಯವಾಗುತ್ತದೆ. ಐದನೆಯದಾಗಿ, ಶಿಕ್ಷಣವು ಸಹಯೋಗದ ವಿಷಯವಾದ ಕಾರಣ, ಇದಕ್ಕೆ ಎಚ್ಚರಿಕೆಯ ಯೋಜನೆ, ಜಂಟಿ ಮೇಲ್ವಿಚಾರಣೆ ಮತ್ತು ಕೇಂದ್ರ ಹಾಗೂ ರಾಜ್ಯಗಳ ಸಹಯೋಗದ ಅನುಷ್ಠಾನದ ಅಗತ್ಯವಿರುತ್ತದೆ. ಆರನೆಯದಾಗಿ, ನೀತಿಯನ್ನು ತೃಪ್ತಿಕರವಾಗಿ ಕಾರ್ಯರೂಪಕ್ಕೆ ತರಲು ಕೇಂದ್ರ ಮತ್ತು ರಾಜ್ಯ ಮಟ್ಟಗಳಲ್ಲಿ ಮಾನವ ಸಂಪನ್ಮೂಲ, ಮೂಲಸೌಕರ್ಯ ಮತ್ತು ಹಣಕಾಸು ಸಂಬಂಧಿ ಅಗತ್ಯ ಸಂಪನ್ಮೂಲಗಳನ್ನು ಸಕಾಲದಲ್ಲಿ ಹರಿಯುವಂತೆ ಮಾಡುವುದು ನಿರ್ಣಾಯಕ. ಅಂತಿಮವಾಗಿ, ಎಲ್ಲ ಉಪಕ್ರಮಗಳನ್ನು ಪರಿಣಾಮಕಾರಿಯಾಗಿ, ಅಚ್ಚುಕಟ್ಟಾಗಿ ಒಂದಕ್ಕೊಂದು

ಜೋಡಿಸುವುದನ್ನು ಖಾತರಿಪಡಿಸುವ ಹಿನ್ನೆಲೆಯಲ್ಲಿ ಸಮಾನಾಂತರವಾಗಿ ಜಾರಿಗೆ ಬರುವ ಬಹುಹಂತಗಳ ನಡುವಿನ ಸಂಬಂಧವನ್ನು ಎಚ್ಚರಿಕೆಯಿಂದ ವಿಶ್ಲೇಷಣೆ ಮತ್ತು ಪರಾಮರ್ಶೆ ನಡೆಸಬೇಕಾಗುತ್ತದೆ. ಇದರಲ್ಲಿ ಕೆಲವು ನಿರ್ದಿಷ್ಟ ಕ್ರಮಗಳಲ್ಲಿ (ಉದಾಹರಣೆಗೆ ಬಾಲ್ಯ ಪೂರ್ವ ನಿಗಾ ಮತ್ತು ಶಿಕ್ಷಣ ಸೌಕರ್ಯಗಳನ್ನು ಜಾರಿಗೆ ತರುವುದು) ಶೀಘ್ರ ಹೂಡಿಕೆ ಮಾಡುವುದು ಕೂಡ ಸೇರಿರುತ್ತದೆ. ಮುಂದಿನ ಎಲ್ಲ ಕಾರ್ಯಕ್ರಮಗಳು ಮತ್ತು ಕ್ರಮಗಳ ಸುಗಮ ಪ್ರಗತಿಗೆ ಬಲವಾದ ಅಡಿಪಾಯವನ್ನು ಖಾತರಿಪಡಿಸಲು ಇದು ಅನಿವಾರ್ಯವಾಗಿದೆ.

27.3 ಸ್ಪಷ್ಟ ಮತ್ತು ಹಂತ ಹಂತವಾಗಿ ನೀತಿಯ ಗುರಿಗಳನ್ನು ಸಾಧಿಸಲು ಮೇಲಿನ ಸಿದ್ಧಾಂತಗಳಿಗೆ ಅನುಗುಣವಾಗಿ ನೀತಿಯ ಪ್ರತಿಯೊಂದು ಅಂಶದ ವಿಸ್ತೃತ ಅನುಷ್ಠಾನ ಯೋಜನೆಗಳನ್ನು ಅಭಿವೃದ್ಧಿಪಡಿಸಲು ಕೇಂದ್ರ ಮತ್ತು ರಾಜ್ಯ ಮಟ್ಟಗಳೆರಡರಲ್ಲೂ ಇತರ ಸಂಬಂಧಪಟ್ಟ ಸಚಿವಾಲಯಗಳೊಂದಿಗಿನ ಸಹಕಾರ ಮತ್ತು ಸಮಾಲೋಚನೆಯೊಂದಿಗೆ ವಿಷಯವಾರು ತಜ್ಞರ ಅನುಷ್ಠಾನ ಸಮಿತಿಗಳನ್ನು ರಚಿಸಲಾಗುವುದು. ಪ್ರತಿಯೊಂದು ಕ್ರಮಕ್ಕೂ ನಿಗದಿಪಡಿಸಲಾದ ಗುರಿಗಳಿಗೆ ತಕ್ಕಂತೆ ನೀತಿಯ ಅನುಷ್ಠಾನದ ಪ್ರಗತಿಯನ್ನು ಪ್ರತಿವರ್ಷ ಜಂಟಿ ಮರುಪರಿಶೀಲನೆಯನ್ನು, ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ ಮತ್ತು ರಾಜ್ಯಗಳು ರಚಿಸಿದ ನಿಯೋಜಿತ ತಂಡಗಳು ಕೈಗೊಳ್ಳುತ್ತವೆ. ಈ ಪರಾಮರ್ಶೆಯನ್ನು ಸಿಎಬಿಇ ಜೊತೆ ಹಂಚಿಕೊಳ್ಳಲಾಗುತ್ತದೆ. 2030ರ ದಶಕದಲ್ಲಿ ಇಡೀ ನೀತಿಯು ಕಾರ್ಯಾಚರಣೆಯ ಸ್ವರೂಪದಲ್ಲಿ ಇರಲಿದೆ. ಇದಾದ ಬಳಿಕ ಇನ್ನೊಂದು ಸಮಗ್ರ ಪುನರಾವಲೋಕನವನ್ನು ಕೈಗೊಳ್ಳಲಾಗುವುದು.

ಸಂಕ್ಷೇಪಣಾರ್ಥಗಳು

ಎ.ಬಿ.ಸಿ. (ABC)	ಶೈಕ್ಷಣಿಕ ಅಂಕ ಭಂಡಾರ
ಎ.ಐ. (AI)	ಕೃತಕ ಬುದ್ಧಿಮತ್ತೆ
ಎ.ಸಿ. (AC)	ಸ್ವಾಯತ್ತ ಪದವಿ ಪ್ರದಾನ ಕಾಲೇಜು
ಎ.ಇ.ಸಿ. (AEC)	ವಯಸ್ಕರ ಶಿಕ್ಷಣ ಕೇಂದ್ರ
ಎ.ಪಿ.ಐ. (API)	ಅಪ್ಲಿಕೇಶನ್ ಪ್ರೋಗ್ರಾಮಿಂಗ್ ಇಂಟರ್-ಫೇಸ್
ಆಯುಷ್ ಬಿ.ಇಡಿ (BEd)	ಆಯುರ್ವೇದ, ಯೋಗ, ಮತ್ತು ನಿಸರ್ಗ ಚಿಕಿತ್ಸೆ, ಯುನಾನಿ, ಸಿದ್ಧ ಮತ್ತು ಹೊಮಿಯೋಪಥಿ ಶಿಕ್ಷಕ ಶಿಕ್ಷಣ ಪದವಿ (Bachelor of Education)
ಬಿ.ಇ.ಓ (BEO)	ಕ್ಷೇತ್ರ ಶಿಕ್ಷಣಾಧಿಕಾರಿ
ಬಿ.ಐ.ಟಿ.ಇ. (BITE)	ಕ್ಷೇತ್ರ ಶಿಕ್ಷಕ ಶಿಕ್ಷಣ ಸಂಸ್ಥೆ
ಬಿ.ಓ.ಎ. (BoA)	ಮೌಲ್ಯಮಾಪನ ಮಂಡಳಿ
ಬಿ.ಓ.ಜಿ. (BoG)	ಆಡಳಿ ಮಂಡಳಿ
ಬಿ.ಆರ್.ಸಿ. (BRC)	ಕ್ಷೇತ್ರ ಸಂಪನ್ಮೂಲ ಕೇಂದ್ರ
ಬಿ.ವಿ.ಓ.ಸಿ. (B.Voc)	ಔದ್ಯೋಗಿಕ ಶಿಕ್ಷಣ ಪದವಿ
ಸಿ.ಎ.ಬಿ.ಇ. (CABE)	ಕೇಂದ್ರೀಯ ಶಿಕ್ಷಣ ಸಲಹಾ ಮಂಡಳಿ
ಸಿ.ಬಿ.ಸಿ.ಎಸ್. (CBCS)	ಆಯ್ಕೆ ಆಧಾರಿತ ಅಂಕ ಪದ್ಧತಿ
ಸಿ.ಬಿ.ಎಸ್.ಇ. (CBSE)	ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿ
ಸಿ.ಐ.ಇ.ಟಿ. (CIET)	ಕೇಂದ್ರೀಯ ಶೈಕ್ಷಣಿಕ ತಂತ್ರಜ್ಞಾನ ಸಂಸ್ಥೆ
ಸಿ.ಎಂ.ಪಿ. (CMP)	ಉದ್ಯೋಗ ನಿರ್ವಹಣೆ ಮತ್ತು ಪ್ರಗತಿ
ಸಿ.ಓ.ಎ. (CoA)	ವಾಸ್ತುಶಿಲ್ಪ ಮಂಡಳಿ
ಸಿ.ಪಿ.ಡಿ. (CPD)	ನಿರಂತರ ವೃತ್ತಿಪರ ಅಭಿವೃದ್ಧಿ
ಸಿ.ಆರ್.ಸಿ (CRC)	ಸಮೂಹ ಸಂಪನ್ಮೂಲ ಕೇಂದ್ರ
ಸಿ.ಡಬ್ಲ್ಯು.ಎಸ್. ಎನ್. (CWSN)	ವಿಶೇಷ ಅಗತ್ಯಗಳ ಮಕ್ಕಳು
ಡಿ.ಎ.ಇ. (DAE)	ಪರಮಾಣು ಇಂಧನ ಇಲಾಖೆ
ಡಿ.ಬಿ.ಟಿ. (DBT)	ಜೈವಿಕ ತಂತ್ರಜ್ಞಾನ ಇಲಾಖೆ
ಡಿ.ಇ.ಓ. (DEO)	ಜಿಲ್ಲಾ ಶಿಕ್ಷಣಾಧಿಕಾರಿ
ಡಿ.ಐ.ಇ.ಟಿ. (DIET)	ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ
ದೀಕ್ಷಾ (DIKSHA)	ಜ್ಞಾನ ಹಂಚಿಕೆಯ ಡಿಜಿಟಲ್ ಮೂಲಸೌಕರ್ಯ
ಡಿ.ಎಸ್.ಇ. (DSE)	ಶಾಲಾ ಶಿಕ್ಷಣ ನಿರ್ದೇಶನಾಲಯ
ಡಿ.ಎಸ್.ಟಿ. (DST)	ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ
ಇ.ಸಿ.ಸಿ.ಇ. (ECCE)	ಬಾಲ್ಯ ಪೂರ್ವ ನಿಗಾ ಮತ್ತು ಶಿಕ್ಷಣ
ಇ.ಇ.ಸಿ. (EEC)	ಉನ್ನತ ತಜ್ಞರ ಸಮಿತಿ
ಜಿ.ಸಿ.ಇ.ಡಿ. (GCED)	ಜಾಗತಿಕ ಪೌರತ್ವ ಶಿಕ್ಷಣ
ಜಿ.ಡಿ.ಪಿ. (GDP)	ಒಟ್ಟು ದೇಶೀಯ ಉತ್ಪನ್ನ
ಜಿ.ಇ.ಸಿ. (GEC)	ಸಾಮಾನ್ಯ ಶಿಕ್ಷಣ ಮಂಡಳಿ
ಜಿ.ಇ.ಆರ್. (GER)	ಒಟ್ಟು ನೋಂದಣಿ ಅನುಪಾತ
ಜಿ.ಎಫ್.ಆರ್. (GFR)	ಸಾಮಾನ್ಯ ಹಣಕಾಸು ನಿಯಮ
ಎಚ್.ಇ.ಸಿ.ಐ. (HECI)	ಭಾರತೀಯ ಉನ್ನತ ಶಿಕ್ಷಣ ಆಯೋಗ
ಎಚ್.ಇ.ಜಿ.ಸಿ. (HEGC)	ಉನ್ನತ ಶಿಕ್ಷಣ ಅನುದಾನ ಮಂಡಳಿ

ಎಚ್.ಇ.ಐ. (HEI)	ಉನ್ನತ ಶಿಕ್ಷಣ ಸಂಸ್ಥೆ
ಐ.ಸಿ.ಎ.ಆರ್. (ICAR)	ಭಾರತೀಯ ಕೃಷಿ ಸಂಶೋಧನಾ ಮಂಡಳಿ
ಐ.ಸಿ.ಎಚ್.ಆರ್. (ICHR)	ಭಾರತೀಯ ತೋಟಗಾರಿಕೆ ಸಂಶೋಧನಾ ಮಂಡಳಿ
ಐ.ಸಿ.ಎಂ.ಆರ್. (ICMR)	ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ
ಐ.ಸಿ.ಟಿ. (ICT)	ಮಾಹಿತಿ ಮತ್ತು ಸಂಪರ್ಕ ತಂತ್ರಜ್ಞಾನ
ಐ.ಡಿ.ಪಿ. (IDP)	ಸಾಂಸ್ಥಿಕ ಅಭಿವೃದ್ಧಿ ಯೋಜನೆ
ಐ.ಜಿ.ಎನ್.ಓ.ಯು. (IGNOU)	ಇಂದಿರಾ ಗಾಂಧಿ ರಾಷ್ಟ್ರೀಯ ಮುಕ್ತ ವಿವಿ
ಐ.ಐ.ಎಂ. (IIM)	ಭಾರತೀಯ ಆಡಳಿತ ನಿರ್ವಹಣಾ ಸಂಸ್ಥೆ
ಐ.ಐ.ಟಿ. (IIT)	ಭಾರತೀಯ ತಂತ್ರಜ್ಞಾನ ಸಂಸ್ಥೆ
ಐ.ಐ.ಟಿ.ಐ. (IITI)	ಭಾರತೀಯ ಅನುವಾದ ಮತ್ತು ವ್ಯಾಖ್ಯಾನ ಸಂಸ್ಥೆ
ಐ.ಎಸ್.ಎಲ್. (ISL)	ಭಾರತೀಯ ಸಂಕೇತ ಭಾಷೆ
ಐ.ಟಿ.ಐ. (ITI)	ಕೈಗಾರಿಕಾ ತರಬೇತಿ ಸಂಸ್ಥೆ
ಎಂ.ಇಡಿ. (M.Ed).	ಸ್ನಾತಕೋತ್ತರ ಶಿಕ್ಷಕ ಪದವಿ
ಎಂ.ಬಿ.ಬಿ.ಎಸ್. (MBBS)	ವೈದ್ಯಕೀಯ ಸ್ನಾತಕ ಶಿಕ್ಷಣ
ಎಂ.ಇ.ಆರ್.ಯು. (MERU)	ಬಹುಶಿಸ್ತೀಯ ಶಿಕ್ಷಣ ಮತ್ತು ಸಂಶೋಧನಾ ವಿಶ್ವವಿದ್ಯಾಲಯ
ಎಂ.ಎಚ್.ಎಫ್.ಡಬ್ಲ್ಯು. (MHFW)	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ
ಎಂ.ಎಚ್.ಆರ್.ಡಿ. (MHRD)	ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ
ಎಂ.ಒ.ಇ. (MoE)	ಶಿಕ್ಷಣ ಸಚಿವಾಲಯ
ಎಂ.ಓ.ಓ.ಸಿ. (MOOC)	ಬೃಹತ್ ಮುಕ್ತ ಆನ್‌ಲೈನ್ ಕೋರ್ಸ್
ಎಂ.ಓ.ಯು. (MOU)	ಒಡಂಬಡಿಕೆ ಪತ್ರ
ಎಂ.ಫಿಲ್. (M.Phil)	ಮಾಸ್ಟರ್ ಆಫ್ ಫಿಲಾಸಫಿ
ಎಂ.ಡಬ್ಲ್ಯು.ಸಿ.ಡಿ. (MWCD)	ಮಹಿಳಾ ಮತ್ತ ಮಕ್ಕಳ ಕಲ್ಯಾಣ ಸಚಿವಾಲಯ
ಎನ್.ಎ.ಸಿ. (NAC)	ರಾಷ್ಟ್ರೀಯ ಮಾನ್ಯತಾ ಮಂಡಳಿ
ಎನ್.ಎ.ಎಸ್. (NAS)	ರಾಷ್ಟ್ರೀಯ ಸಾಧನಾ ಸಮೀಕ್ಷೆ
ಎನ್.ಸಿ.ಸಿ. (NCC)	ನ್ಯಾಷನಲ್ ಕೆಡೆಟ್ ಕೋರ್
ಎನ್.ಸಿ.ಇ.ಆರ್.ಟಿ. (NCERT)	ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಮಂಡಳಿ
ಎನ್.ಸಿ.ಎಫ್. (NCF)	ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು
ಎನ್.ಸಿ.ಎಫ್.ಎಸ್.ಇ. (NCFSE)	ರಾಷ್ಟ್ರೀಯ ಶಾಲಾ ಶಿಕ್ಷಣ ಪಠ್ಯಕ್ರಮ ಚೌಕಟ್ಟು
ಎನ್.ಸಿ.ಎಫ್.ಟಿ.ಇ. NCFTE	ರಾಷ್ಟ್ರೀಯ ಶಿಕ್ಷಕ ಶಿಕ್ಷಣ ಪಠ್ಯಕ್ರಮ ಚೌಕಟ್ಟು
ಎನ್.ಸಿ.ಐ.ವಿ.ಇ. (NCIVE)	ಔದ್ಯೋಗಿಕ ಶಿಕ್ಷಣದ ಸಮಗ್ರತೆಗಾಗಿರುವ ರಾಷ್ಟ್ರೀಯ ಸಮಿತಿ
ಎನ್.ಸಿ.ಪಿ.ಎಫ್.ಇ.ಸಿ.ಸಿ.ಇ. (NCPFECCE)	ಬಾಲ್ಯ ಪೂರ್ವ ನಿಗಾ ಶಿಕ್ಷಣಕ್ಕಾಗಿರುವ ರಾಷ್ಟ್ರೀಯ ಪಠ್ಯಕ್ರಮ ಮತ್ತು ಅಧ್ಯಾಪನಶಾಸ್ತ್ರ ಚೌಕಟ್ಟು
ಎನ್.ಸಿ.ಟಿ.ಇ. (NCTE)	ರಾಷ್ಟ್ರೀಯ ಶಿಕ್ಷಕ ಶಿಕ್ಷಣ ಮಂಡಳಿ
ಎನ್.ಸಿ.ವಿ.ಇ.ಟಿ. (NCVET)	ರಾಷ್ಟ್ರೀಯ ಔದ್ಯೋಗಿಕ ಶಿಕ್ಷಣ ಮತ್ತು ತರಬೇತಿ ಮಂಡಳಿ
ಎನ್.ಇ.ಟಿ.ಎಫ್. (NETF)	ರಾಷ್ಟ್ರೀಯ ಶೈಕ್ಷಣಿಕ ತಂತ್ರಜ್ಞಾನ ವೇದಿಕೆ
ಎನ್.ಜಿ.ಓ. (NGO)	ಸರ್ಕಾರೇತರ ಸಂಸ್ಥೆ
ಎನ್.ಎಚ್.ಇ.ಕ್ಯೂ.ಎಫ್. (NHEQF)	ರಾಷ್ಟ್ರೀಯ ಉನ್ನತ ಶಿಕ್ಷಣ ಅರ್ಹತಾ ಚೌಕಟ್ಟು
ಎನ್.ಎಚ್.ಇ.ಆರ್.ಸಿ. (NHERC)	ರಾಷ್ಟ್ರೀಯ ಉನ್ನತ ಶಿಕ್ಷಣ ನಿಯಂತ್ರಣ ಮಂಡಳಿ
ಎನ್.ಐ.ಓ.ಎಸ್. (NIOS)	ರಾಷ್ಟ್ರೀಯ ಮುಕ್ತ ಶಿಕ್ಷಣ ಸಂಸ್ಥೆ
ಎನ್.ಐ.ಟಿ. (NIT)	ರಾಷ್ಟ್ರೀಯ ತಂತ್ರಜ್ಞಾನ ಸಂಸ್ಥೆ
ಎನ್.ಐ.ಟಿ.ಐ. (NITI)	ರಾಷ್ಟ್ರೀಯ ಭಾರತ ಪರಿವರ್ತನಾ ಸಂಸ್ಥೆ

ಎನ್.ಪಿ.ಇ. (NPE)	ರಾಷ್ಟ್ರೀಯ ಶಿಕ್ಷಣ ನೀತಿ
ಎನ್.ಪಿ.ಎಸ್.ಟಿ. (NPST)	ಶಿಕ್ಷಕರ ರಾಷ್ಟ್ರೀಯ ವೃತ್ತಿಪರ ಮಾನದಂಡಗಳು
ಎನ್.ಆರ್.ಎಫ್. (NRF)	ರಾಷ್ಟ್ರೀಯ ಸಂಶೋಧನಾ ಪ್ರತಿಷ್ಠಾನ
ಎನ್.ಎಸ್.ಕ್ಯೂ.ಎಫ್. (NSQF)	ರಾಷ್ಟ್ರೀಯ ಕುಶಲ ಅರ್ಹತಾ ಚೌಕಟ್ಟು
ಎನ್.ಎಸ್.ಎಸ್.ಓ. (NSSO)	ರಾಷ್ಟ್ರೀಯ ಮಾದರಿ ಸರ್ವೇ ಕಚೇರಿ
ಎನ್.ಟಿ.ಎ. (NTA)	ರಾಷ್ಟ್ರೀಯ ಪರೀಕ್ಷಾ ಸಂಸ್ಥೆ
ಓ.ಬಿ.ಸಿ. (OBC)	ಇತರ ಹಿಂದುಳಿದ ವರ್ಗಗಳು
ಓ.ಡಿ.ಎಲ್. (ODL)	ಮುಕ್ತ ಮತ್ತು ದೂರ ಕಲಿಕೆ
ಪರಖ್ (PARAKH)	ಸಮಗ್ರ ಅಭಿವೃದ್ಧಿಗೆ ಜ್ಞಾನದ ನಿರ್ವಹಣಾ ಮೌಲ್ಯಮಾಪನ, ಪರಾಮರ್ಶೆ ಮತ್ತು ವಿಶ್ಲೇಷಣೆ
ಪಿ.ಸಿ.ಐ. (PCI)	ಭಾರತೀಯ ಔಷಧಿ ಮಂಡಳಿ
ಪಿ.ಎಫ್.ಎಂ.ಎಸ್. (PFMS)	ಸಾರ್ವಜನಿಕ ಹಣಕಾಸು ನಿರ್ವಹಣಾ ವ್ಯವಸ್ಥೆ
ಪಿ.ಎಚ್.ಡಿ. (Ph.D)	ಡಾಕ್ಟರ್ ಆಫ್ ಫಿಲಾಸಫಿ
ಪಿ.ಎಸ್.ಎಸ್.ಬಿ (PSSB)	ವೃತ್ತಿಪರ ಮಾನದಂಡ ರಚನಾ ಮಂಡಳಿ
ಪಿ.ಟಿ.ಆರ್. (PTR)	ವಿದ್ಯಾರ್ಥಿ ಶಿಕ್ಷಕ ಅನುಪಾತ
ಆರ್ & ಐ. (R&I)	ಸಂಶೋಧನೆ ಮತ್ತು ಆವಿಷ್ಕಾರ
ಆರ್.ಸಿ.ಐ (RCI)	ಭಾರತೀಯ ಪುನರ್ವಸತಿ ಮಂಡಳಿ
ಆರ್.ಪಿ.ಡಬ್ಲ್ಯು.ಡಿ. (RPWD)	ವಿಕಲಾಂಗ ವ್ಯಕ್ತಿಗಳ ಹಕ್ಕುಗಳು
ಎಸ್.ಎ.ಎಸ್. (SAS)	ರಾಜ್ಯ ಸಾಧನಾ ಸಮೀಕ್ಷೆ
ಎಸ್.ಸಿ. (SC)	ಪರಿಶಿಷ್ಟ ಜಾತಿ
ಎಸ್.ಸಿ.ಡಿ.ಪಿ. (SCDP)	ಶಾಲಾ ಸಂಕೀರ್ಣ/ಸಮೂಹ ಅಭಿವೃದ್ಧಿ ಯೋಜನೆ
ಎಸ್.ಸಿ.ಇ.ಆರ್.ಟಿ. (SCERT)	ರಾಜ್ಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಮಂಡಳಿ
ಎಸ್.ಸಿ.ಎಫ್. (SCF)	ರಾಜ್ಯ ಪಠ್ಯಕ್ರಮ ಚೌಕಟ್ಟು
ಎಸ್.ಸಿ.ಎಂ.ಸಿ. (SCMC)	ಶಾಲಾ ಸಂಕೀರ್ಣ ನಿರ್ವಹಣಾ ಸಮಿತಿ
ಎಸ್.ಡಿ.ಜಿ. (SDG)	ಸುಸ್ಥಿರ ಅಭಿವೃದ್ಧಿ ಗುರಿ
ಎಸ್.ಡಿ.ಪಿ. (SDP)	ಶಾಲಾ ಅಭಿವೃದ್ಧಿ ಯೋಜನೆ
ಎಸ್.ಇ.ಡಿ.ಜಿ. (SEDG)	ಸಮಾಜೋ-ಆರ್ಥಿಕ ವಂಚಿತ ಗುಂಪು
ಎಸ್.ಇ.ಝಡ್. (SEZ)	ವಿಶೇಷ ಶಿಕ್ಷಣ ವಲಯ
ಎಸ್.ಐ.ಓ.ಎಸ್. (SIOS)	ರಾಜ್ಯ ಮುಕ್ತ ಶಿಕ್ಷಣಾ ಸಂಸ್ಥೆ
ಎಸ್.ಎಂ.ಸಿ. (SMC)	ಶಾಲಾ ಆಡಳಿತ ನಿರ್ವಹಣಾ ಸಮಿತಿ
ಎಸ್.ಕ್ಯೂ.ಎ.ಎ.ಎಫ್. (SQAAF)	ಶಾಲಾ ಗುಣಮಟ್ಟ ಮೌಲ್ಯಮಾಪನ ಮತ್ತು ಮಾನ್ಯತಾ ಚೌಕಟ್ಟು
ಎಸ್.ಎಸ್.ಎ. (SSA)	ಸರ್ವ ಶಿಕ್ಷಾ ಅಭಿಯಾನ
ಎಸ್.ಎಸ್.ಎಸ್. (SSS)	ಸರಳ ಗುಣಮಟ್ಟದ ಸಂಸ್ಕೃತ
ಎಸ್.ಎಸ್.ಎಸ್.ಎ. (SSSA)	ರಾಜ್ಯ ಶಾಲಾ ಗುಣಮಟ್ಟ ಪ್ರಾಧಿಕಾರ
ಎಸ್.ಟಿ. (S.T.)	ಪರಿಶಿಷ್ಟ ಪಂಗಡ
ಎಸ್.ಟಿ.ಇ.ಎಂ.(STEM)	ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರೀಂಗ್ ಮತ್ತು ಗಣಿತಶಾಸ್ತ್ರ
ಎಸ್.ಟಿ.ಎಸ್. (STS)	ಸಂಸ್ಕೃತದಿಂದ ಸಂಸ್ಕೃತ
ಸ್ವಯಂ (SWAYAM)	ಯುವ ಮಹತ್ವಾಕಾಂಕ್ಷಿ ಮನಸ್ಸುಗಳ ಸಕ್ರಿಯ ಕಲಿಕೆಯ ಅಧ್ಯಯನ ಜಾಲ
ಟಿ.ಇ.ಐ. (TEI)	ಶಿಕ್ಷಕ ಶಿಕ್ಷಣ ಸಂಸ್ಥೆ
ಟಿ.ಇ.ಟಿ. (TET)	ಶಿಕ್ಷಕ ಅರ್ಹತಾ ಪರೀಕ್ಷೆ
ಯು-ಡೈಸ್. (U-DISE)	ಶಿಕ್ಷಣದ ಏಕೀಕೃತ ಜಿಲ್ಲಾ ಮಾಹಿತಿ ವ್ಯವಸ್ಥೆ

ಯು.ಜಿ.ಸಿ. UGC	ವಿಶ್ವವಿದ್ಯಾಲಯ ಅನುದಾನ ಆಯೋಗ
ಯುನೆಸ್ಕೋ (UNESCO)	ವಿಶ್ವಸಂಸ್ಥೆಯ ಶೈಕ್ಷಣಿಕ, ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಸಂಘಟನೆ
ಯು.ಟಿ. (UT)	ಕೇಂದ್ರಾಡಳಿತ ಪ್ರದೇಶ
ವಿ.ಸಿ.ಐ. (VCI)	ಭಾರತೀಯ ಪಶುಸಂಗೋಪನಾ ಮಂಡಳಿ

*****